


ಪ್ರಬುದ್ಧ ಕರ್ನಾಟಕ

ವಿಕ್ರಮ ಸಂವತ್ಸರ] —೮೪— [ದೀಪಾವಳಿಯ ಸಂಚಿಕೆ



ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೪೦

ಸಂಪುಟ ೨೨] [ಸಂಚಿಕೆ ೨

ವಿಷಯ ಸೂಚಿಕೆ

---

೧. ತನ್ನ ಕಾವ್ಯಕೆ ತಾನೆ ಮಣಿಯುವಂತೆ—ಶ್ರೀಮಾನ್ ಕೆ. ವಿ. ಪುಟ್ಟಪ್ಪ, ಎಂ.ಎ. ೧

೨. ದಖ್ಖನ್ನಿನ ಶಿಲಾಪದರಗಳು:—ಡಾ|| ಎಚ್. ಸೀತಾರಾಮರಾವ್, ಡಿ.ಎಸ್‌ಸಿ. ೫

೩. ಆ ನೋಟದ ಹೇಳಿಕೆ—ಶ್ರೀಮಾನ್ ಎ. ಸಿ. ಶಂಕರಭಾರತಿ ೨೦

೪. "ವೀರಶೈವ ವಾಙ್ಮಯಾವತಾರ"ವನ್ನು ಕುರಿತು—ಶ್ರೀಮಾನ್ ಚಿದರೆ ಮಠದ ವೀರಭದ್ರಶಾಸ್ತ್ರಿ, ವೇದಕಾವ್ಯ ಸ್ಮೃತಿತೀರ್ಥ ಇತ್ಯಾದಿ ೨೧

೫. ಎಕ್ಸ್ ರೇ ಅಥವಾ ರಾಂಟ್‌ಜನ್ ಕಿರಣಗಳು—ಶ್ರೀಮಾನ್ ಜಿ. ಆರ್. ರಂಗಸ್ವಾಮಿ, ಎಂ.ಎ. ೩೯

೬. ಉಪಾಧ್ಯಾಯ ಪಂಡಿತರು: ಅವರ ಸ್ಥಾನ, ಅವರ ಕರ್ತವ್ಯ, ಅವರ ಪುರೋದೃಷ್ಟಿ—ಶ್ರೀಮಾನ್ ಡಿ. ವಿ. ಗುಂಡಪ್ಪ ೫೯

೭. ವಕ್ರೋಕ್ತಿ—ಶ್ರೀಮಾನ್ ಎಸ್. ವಿ. ಶ್ರೀನಿವಾಸ ರಾಘವಾಚಾರ್, ಎಂ.ಎ. ೮೫

೮. "ಅರವಿಂದ"—ಶ್ರೀಮತಿ "ವಾಣಿ" ೧೦೧

[illegible] ಶ್ರೀಮಾನ್ ಕೆ. ವೆಂಕಟರಾಮಪ್ಪ, ಎಂ.ಎ. ೧೧೨

[illegible] ೧೧೯


[illegible] ೧೨೮

[illegible] ೧೩೯

[illegible] ೧೫೬



ತನ್ನ ಕಾವ್ಯಕೆ ತಾನೆ ಮಣಿಯುವಂತೆ



ವಿಕ್ರಮ ಸಂವತ್ಸರ — ೮೪ — ದೀಪಾವಳಿಯ ಸಂಚಿಕೆ

ತನ್ನ ಕಾವ್ಯಕೆ ತಾನೆ ಮಣಿಯುವಂತೆ

ಕೆಲದಿನಕೆ
ಮಿಥಿಲೆಯಿಂ ಯಾತ್ರೆಬಂದುದು ಮುನಿಗಳಾಶ್ರಮಕೆ
ಧರಣಿಪತಿ ಜನಕನ ಮಹಾಕ್ರತು ಸುಕೃತವಾರ್ತೆ.
ಪೊರಮಟ್ಟನಾಯೆಡೆಗೆ ಮುನಿಪುಂಗವಂ ರಾಮ
ಲಕ್ಷ್ಮಣರೊಡನೆ, ವಿಧಿನಿಯಂತ್ರದಿಂ. ಹಾದಿಯೊಳ್
ಹೇಳ್ದನಾ ಜನಕರಾಜಗೆ ದಿವಿಜಕೃಪೆಯಿಂದೆ
ದೊರಕಿದಾ ಶಿವಧನುಸ್ಸಿನ ಕಥಾಚಿತ್ರಮಂ,
ಕೇಳ್ದ ರಾಮಂಗೆ ಮೆಯ್ ರೋಮಾಂಚನಂಗೊಳ್ಳೆ
ಮನದಲಂಪಿಂದೆ; ಮೇಣ್ ಶಿವಶಕ್ತಿ ಸಂಚರಿಸೆ
ಕಾಯದಂಗೋಪಾಂಗಮಂ, ಧಮನಿಧಮನಿಯಂ.
ಕಣಿವೆಗಳನಿಳಿದದ್ರಿಗಳನಡರಿ ಬರುತಲಿರೆ,
ಜಟಿಲಕಾನನ ಕುಟಿಲಪಥದಲಿ, ಹಠಾತ್ತಿನಿಂ
ಭ್ರಷ್ಟಮಾದುದು ಮಾರ್ಗಮತಿಕಷ್ಟದಸ್ಪಷ್ಟ

ಕ್ಲಿಷ್ಟಸರಣಿಯಲಿ. ತಪ್ಪಿದುದೆ ಚೋದ್ಯಮೆಸುತ್ತೆ
ಪರಿಚಿತಾಧ್ವಂ, ಸೋಜಿಗಂಗೊಂಡು, ಕೌಶಿಕಂ
ಪೆರ್ಮರನ ತುದಿಗೇರ್ದು, ತಾರಾಗಣಂಗಳಂ
ಸಂವೀಕ್ಷಣಂಗೆಯ್ದು, ದಿಕ್ಕರಿತು, ಕಳ್ತಲೊಳೆ
ನಡೆದನತಿಸಾಹಸದ ಕಣ್ಣೂಹೆಯಿಂ. ರಾತ್ರಿ
ಪೂರೈಸುತುಷೆ ಮೂಡಿಬರಲ್ಕಾ ಪಾಂಥರಿಗೆ
ಗೋಚರಿಸಿತೊಂದು ಋಷಿವನ ಸದೃಶ ಕಾನನಂ
ಪೊಕ್ಕರದನೇಸೆಂಬೆನಾ ಮಹಾಮೌನಮಂ,
ಶಕುನ ಸಂಪೂರ್ಣತೆಯುಮಂ : ಹಾಡದಿವೆ ಹಕ್ಕಿ;
ನಲಿದಾಡದಿವೆ ಮಿಗಂ; ತೀಡದಿದೆ ತಂಬೆಲರ್
ಮರಗೋಡಿನೊಳ್; ಮಲರ್ ತನಿಗಂಪನೀಯದಿವೆ;
ಚಲಿಸದಿವೆ ಪರ್ಣಾಳಿ; ದುಃಖದ ನಿರೀಕ್ಷಣೆಯ
ಅನಂತ ತಪಭಾರದಿಂ ಬಾಗಿ, ಯೋಗಿನಿಯಂತೆ
ಮೂಗುವಟ್ಟಿರ್ದ ಬನಮೆಸೆದುದಾ ಪಥಿಕರಿಗೆ
ಬರೆದಂತೆ ನೀರವಂ, ಕೊರೆದಂತೆ ನಿಶ್ಚಲಂ,
ಮತ್ತೆ ನಿಶ್ಶಬ್ದತೆಯ ಕುಂಭಕಸ್ಥಿತಿಯಂತೆವೋಲ್!

ರಾಮಾಯಣದೊಳತಿಮನೋಹರದ ಸಂಘಟನೆ
ಸಂಭವಿಸಲಿರ್ಪ ತಾಣಮ್ ಅದೆಂದರಿಯರಲಾ :
ಗೌತಮ ಮಹಾಮುನಿಯ ಶಾಪದಿನಹಲ್ಯೆ, ಸತಿ,
ವರ್ಷ ಶತಮಾನಂಗಳಿಂದೆ ಜಡವೇಷದಿಂ
ನಿಷ್ಠುರ ಶಿಲಾತಪಸ್ವಿನಿಯಾಗಿ, ಕನಿಕರದ
ಕಣ್ಗೆ ಬಾಹಿರೆಯಾಗಿ, ಜಗದ ನಿರ್ದಾಕ್ಷಿಣ್ಯ
ವಿಸ್ಮೃತಿಗೆ ತುತ್ತಾಗಿ, ವಜ್ರಮೌನದ ಶಿಲಾ
ನಿದ್ರೆಯಿಂದೆಳ್ಚರುವ ಬಯಕೆಯಿಂದೊರಗಿರ್ದ
ಕ್ಷೇತ್ರಮೆಂದರಿಯದಿರ್ಪರೆ ಘಳಿಗೆಯೊಂದರೊಳೆ?
ಕರಗಿದುದು ರಾಮನೆರ್ದೆ ಅನಿಮಿತ್ತ ಮರುಕದಿಂ;
ನೀರು ಹರಿದುದು ಕಂಗಳಿಂ; ತಾಯಿ, ಕೌಸಲ್ಯೆ,
ರಾಮ ರಾಮೆಂದು ಪೆಸರಂ ಪಿಡಿದು ಕರೆವವೋಲ್
ದನಿಗೇಳಿದಂತಾಯ್ತುಲಾ ರಾಮನೊರ್ವನಿಗೆ.


ಕುಳಿರ್ಗಾಳಿ ಬೀಸಲ್ಕೆ ತಳಿರ ತುದಿಯೊಳಗಿರ್ಪ
ಪೊಳೆಯುವಿರ್ಪನಿ ಥರಥರನೆ ಕಂಪಿಸಂದದಿಂ
ಸ್ಪಂದಿಸಿತ್ತವನ ತನು, ಮೈಮೇಲೆ ಬಂದವೋಲ್ :
ಪಿಡಿದ ಬಿಲ್ ನಡುಗಿದುದು ಕೈಯಲ್ಲಿ ; ಬೆನ್ನ ಮೇಲ್
ಬತ್ತಳಿಕೆ ಕುಣಿದತ್ತು ; ಕಾಕಪಕ್ಷದ ಕುರುಳ್
ತಲೆಯ ಮೇಲಾಡಿದುದು, ಗಾಳಿಗೊಲೆಯುವ ಬಳ್ಳಿ
ಜೋಲ್ವಂತೆ ; ವಕ್ಷಮೇರಿತ್ತು ನಿಡುಸುಯ್ಲಿನಿಂ ;
ಚೆಲ್ಲಿದುದು ತೇಜಂ ವದನದಿಂದೆ !

ನೋಡುತಿರೆ,
ಬಾಹ್ಯ ಸಂಜ್ಞಾಶೂನ್ಯನಾಗಿ ರಘುನಂದನಂ
ತೊಡಗಿದನು ಕುಣಿಯಲ್ಕೆ, ಭಾವದ ಸಮಾಧಿಯಿಂ
ಮಧುಮತ್ತನಂತೆ. ಪೇಳೇನೆಂಬೆನದ್ಭುತಂ :
ಸ್ತಬ್ಧ ಗಿರಿವನಧರಣಿ ಸಪ್ರಾಣಿಸಿತು ಕೂಡೆ
ಚೈತ್ರ ಲಕ್ಷ್ಮೀ ಸ್ಪರ್ಶಮಾದಂತೆ. ಬೀಸಿದನು
ಪುಣ್ಯಪವನಂ, ತರುಹೃದಯನಾಳದೊಳ್ ಶಕ್ತಿ
ಸಂಚಾರಗೈದು ; ತುಂಬಿತು ಕೊಂಬೆಕೊಂಬೆಯಂ
ಫುಲ್ಲಪಲ್ಲವ ರಾಶಿರಾಶಿ ; ಪರಿಮಳಮಯಂ
ನವರುಚಿರ ಕುಸುಮತತಿ, ಪೊಣ್ಮೆ ತೊ ಪವಾಡಮೆನೆ,
ಮೆರೆದತ್ತು, ಸೊಬಗಿನೋಲಗಸಾಲೆ ಸಮೆದಂತೆ.
ಕಾಜಾಣಮುಲಿದತ್ತು ; ನಲಿದುದು ನವಿಲ್ ; ಪಿಕಂ
ಪಾಡಿದುದು ; ಗಾನಗೈದತ್ತೆನಿತೊ ಖಗಕುಲಂ ;
ಸುಳಿದುವೈ ಚಿನ್ನಚುಕ್ಕಿಯ ಚಿಗರೆ ಚೆಲ್ವಾಗಿ.
ಪ್ರಾಣಮಯಮಾದನ್ನಮಯ ಜಗಂ, ಭೋಂಕನೆ
ಮನೋಮಯತೆವೆತ್ತು, ವಿಜ್ಞಾನಮಯವನ್ನಡರಿ,
ಧುಮುಕಿತಾನಂದಮಯದೊಳ್, ಕೋಶಕೋಶಮಂ
ಮಿಾಂಟಿ ನೆಗೆನೆಗೆದುತ್ತರಿಸಿ ದಾಂಟಿ : ತಗುಳ್ದುದೈ
ನೋಳ್ಪರೆಲ್ಲರ್ಗಮಾ ಅನುಭೂತಿ ! ನೋಡುತಿರೆ,
ಕುಣಿಯುತಂ ಮುಂದುಮುಂದಕೆ ಚರಿಸಿ ನಡೆದನಾ
ರಾಮ. ಹಿಂಬಾಲಿಸಿದರುಳಿದವರ್, ಮಂತ್ರದಿಂ

ಮುಗ್ಧರಾದಂತೆ. ತುಂಬಿತು ಚೈತ್ರರಮ್ಯತೆಗೆ
ವಾಯುಮಂಡಲದಲ್ಲಿ ಗಂಧರ್ವಗಾಯನಂ,
ತನುರಹಿತ ಲಕ್ಷವೀಣಾ ತಂತ್ರಿಯುಂ ಮಿಡಿದು
ಮೇಳಗೈದಂತೆ.
ತೋರ್ದುದು ಮುಂದೆ ಪಳುವಿನೊಳ್,
ವನಭಿತ್ತಿಗೆದುರಾಗಿ, ಸುತ್ತಣೊರಲೆಯ ಹುತ್ತು
ಮುತ್ತಿರ್ದ ಕಲ್ಬಂಡೆ, ಹಸುರು ಹಾವಸೆ ಹಬ್ಬಿ,
ಬಿದಿರ ಮೆಳೆಯೆಡೆ, ಸರಳಸಾಮಾನ್ಯ ಶೈಲಿಯಲಿ.
ಆ ಶಿಲೆಯ ತಲೆಯಮೇಲೊರಗಿ, ಕಿಚ್ಚುಗಣ್ಣಿಂ
ನಿಚ್ಚಮುಂ ಕಾಪಿರ್ದ ಕರಿಹಳದಿ ಪಟ್ಟೆಯಾ
ಪೆಬ್ಬುಲಿಯದೊಂದು ಬರ್ಪವರ ಕಾಣಲೊಡಮಾ
ತಾಣದಿಂದೆದ್ದು ಮಿಂಚಿತು ಕಣ್ಗೆ ಮರೆಯಾಗಿ
ಮಿಂಚೋಟದಿಂ. ರಾಮನೇರಿದನು ಬಂಡೆಯಂ,
ತಾಂಡವಂ ತೊಡಗಿ: ಒಯ್ಯನೆ, ಚರಣಚುಂಬನಕೆ,
ಕಲ್ಲೆ ಮಿದುವಾದುದೋ ಎನೆ, ಕಂಪಿಸಿತು ಬಂಡೆ;
ಸ್ವಾಮಿಯ ಸಮೀಪದಿಂ, ಸಾನ್ನಿಧ್ಯದಿಂ, ಮತ್ತೆ
ಸಂಸರ್ಗದಿಂ ತಲ್ಲಣಿಪ ವಕ್ಷದಬಲೆಯುಂ
ಪೋಲ್ದು. ನೆರೆದವರೆಲ್ಲಮಿಕ್ಷಿಸಿರೆ ಬಾಯ್ದೆರೆದು,
ಬೆಂಗದಿರನುರಿಗೆ ಕರ್ಪೂರಶಿಲೆಯಂತೆವೋಲ್
ಕರಗಿದುದು ಕಬ್ಬಂಡೆ: ದಿವ್ಯಮಾಯಾಶಿಲ್ಪಿ
ಮಿಂಚುಜವದಿಂ ಮಂತ್ರಬಲದಿಂದರೆಯ ಕೊರೆದು
ತನ್ನಿಷ್ಟದೇವಿಯಂ, ಬಿಡಿಸಿ ಕಲ್ಸೆರೆಯಿಂದೆ,
ಚಿತ್ರಿಸಿದನೆನೆ, ರಘುತನೂಜನಡಿದಾವರೆಗೆ
ಹಣೆಮಣಿದು ನಿಂದುದೊರ್ವ ತಪಸ್ವಿನಿಯ ಮೂರ್ತಿ,
ಪಾಲ್ಬೆಳ್ಳನೆಯ ನಾರುಡೆಯ ಕರಿಯ ಸೋರ್ಮುಡಿಯ
ಪೊಳೆವ ಸೋಂಪಿಯ ಮೊಗದ ಪುಂಜುಮಾಂಗಲ್ಯದಿಂ;
ನಮಿಸಿದನೊ ರಘುಜನುಂ ಗೌತಮಸತಿಯ ಪದಕೆ
ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ! *

ಕೆ. ವಿ. ಪುಟ್ಟಪ್ಪ.

* ರಾಮಾಯಣ ಮಹಾಕಾವ್ಯದ ಒಂದು ಭಾಗ.



ಪ್ರೊಫೆಸರ್ ಬಿ. ಸಾನಿ, ಎಂ.ಎ., ಎಸ್‌ಸಿ.ಡಿ., ಡಿ.ಎಸ್‌ಸಿ.,
ಎಫ್.ಆರ್.ಎಸ್.

ದಖ್ಖನಿನ ಶಿಲಾಪದರಗಳು:
ತೃತೀಯ ಜೀವಯುಗದ ಒಂದು ಅಂಕ*

[ಈ ಸಲ ಮದರಾಸಿನಲ್ಲಿ ನಡೆದ ಇಂಡಿಯನ್ ಸೈನ್ಸ್ ಕಾಂಗ್ರೆಸಿನ ಅಧ್ಯಕ್ಷರಾದ ಪ್ರೊಫೆಸರ್ ಬೀರಬಲ್ ಸಾನಿ, ಎಂ.ಎ., ಡಿ.ಎಸ್‌ಸಿ., ಎಸ್‌ಸಿ.ಡಿ., ಎಫ್.ಆರ್.ಎಸ್. ಅವರ ಅಧ್ಯಕ್ಷಭಾಷಣದ ಸಾರಾಂಶ.]

ಛಿದ್ರಪ್ರಪಂಚ

ವೈಜ್ಞಾನಿಕನ ಪ್ರಪಂಚವು ಛಿದ್ರವಾದುದು. ಪ್ರಕೃತಿಯಲ್ಲಿ ನಮಗೆ ಗೋಚರವಾಗುವ ಅಸಂಖ್ಯಾತವಸ್ತುಗಳು ನಮ್ಮ ಅಲ್ಪವಾದ ದೃಷ್ಟಿಗೆ ಪೂರ್ಣಚಿತ್ರದಂತೆ ಕಾಣುವುದಿಲ್ಲ. ಸೃಷ್ಟಿಕಲಾ ಕರ್ತನು ಒಂದೇಸಲ ತನ್ನ ಕಲಾರಚನೆಯನ್ನೆಲ್ಲ ತೋರುವುದಿಲ್ಲ. ಹರಿದು ಚೂರಾದ ಕಾಗದವನ್ನು ಪುನಃ ಜೋಡಿಸುವಂತೆ ನಾವು ಆ ಚಿತ್ರವನ್ನು ಜೋಡಿಸಲು ಯತ್ನಿಸುತ್ತೇವೆ.

ಮಗುವಿನ ಮನೋರೀತಿಯಂತೆ ವೈಜ್ಞಾನಿಕನಿಗೂ ಹಲವು ಮನೋಭಾವಗಳಿರುವುವು. ನಾವು ಒಂದುಸಲ ಬ್ರಹ್ಮಾಂಡದ ಅಂಚಿನಲ್ಲಿರುವ ವೈವಿಧ್ಯಗಳ ಕಡೆ ನೋಡುತ್ತೇವೆ; ಇನ್ನೊಂದುಸಲ ಪರಮಾಣುಗಳ ಕಡೆ ಲಕ್ಷ್ಯವಿಡುತ್ತೇವೆ. ಇವು ಅನಂತವೂ ಗಭೀರವೂ ಆದವು. ನಾವು ದೃಷ್ಟಿಸಿ ಗಮನಿಸಿದಷ್ಟೂ ಬ್ರಹ್ಮಾಂಡದೊಳಗೆ ಬ್ರಹ್ಮಾಂಡಗಳು ನಮ್ಮ ಕಣ್ಣೆದುರಿಗೆ ತೆರೆತೆಗೆದು ವಿಭಜಿಸಿ ಕಾಣುವುವು. ಮತ್ತೊಂದು ಸಲ ಇದಕ್ಕೆ ವ್ಯತಿರಿಕ್ತಮಾರ್ಗದಲ್ಲಿ ನಡೆಯುತ್ತೇವೆ: ಸಣ್ಣಸಣ್ಣ ಛಿದ್ರಾಂಶಗಳಿಂದ ಸರ್ವವನ್ನೂ ಒಳಗೊಂಡ ಪೂರ್ಣಚಿತ್ರವನ್ನು ಜೋಡಿಸಲು ಯತ್ನಿಸುತ್ತೇವೆ. ಇವೆಲ್ಲದರಿಂದ ಪರಮಸತ್ಯಸ್ವರೂಪವನ್ನು ಕಾಣುತ್ತೇವೆಂದಾಗಲಿ ಅಥವಾ ಎಂದೋ ಕಾಣುವೆವೆಂದಾಗಲಿ ಅಲ್ಲ. ಏಕೆಂದರೆ ನಮಗಾರಿಗೂ ಆ ಪೂರ್ಣಚಿತ್ರದ ಅಂಶಗಳೆಲ್ಲವೂ ದೊರಕುವಂತಿಲ್ಲ. ಅಲ್ಲದೆ ಪ್ರತಿ ವೈಜ್ಞಾನಿಕನಿಗೂ ತನಗೆ ತಿಳಿದಿರುವ ಅಂಶಗಳಿಂದ ಸೃಷ್ಟಿಚಿತ್ರವನ್ನು ರಚಿಸಲು ತನ್ನದೇ ಆದ ಒಂದು ರೀತಿಯಿರುತ್ತದೆ.

---

* ಈ ಉಪನ್ಯಾಸವನ್ನು ಕನ್ನಡದಲ್ಲಿ ಪ್ರಕಟಿಸಲು ಅನುಮತಿಕೊಟ್ಟದ್ದಕ್ಕಾಗಿ ಪ್ರೊಫೆಸರ್ ಸಾನಿಯವರಿಗೂ ಚಿತ್ರಗಳ ಪಡಿಯಚ್ಚುಗಳನ್ನು ಕೊಟ್ಟು ಅನುವಾದಕ್ಕೆ ಒಪ್ಪಿಗೆ ಕೊಟ್ಟದ್ದಕ್ಕಾಗಿ ಕಲ್ಕತ್ತದ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ ಅಧಿಕಾರಿಗಳಿಗೂ ನಾನು ಕೃತಜ್ಞನಾಗಿದ್ದೇನೆ.—

ಎಚ್. ಸೀತಾರಾಮರಾವ್.

ನಮ್ಮ ಈ ಅಲ್ಪಪ್ರಯತ್ನಗಳು ವಿಶ್ವರೂಪದ ದರ್ಶನವುಳ್ಳವನಿಗೆ ಅಯ್ಯೋ ಪಾಪ ಎನ್ನುವಂತಿರಬಹುದು. ಏಕೆಂದರೆ ಸತ್ಯಕ್ಕೆ ಒಂದೇ ಅಖಂಡ ರೂಪವಿರಬೇಕು. ನಮ್ಮಲ್ಲಿ ಕೆಲವರು ತಮಗೆ ಆ ಸತ್ಯದ ದರ್ಶನವಾಗಿದೆಯೆಂದು ಕೊಚ್ಚಿಕೊಳ್ಳಬಹುದು. ಅದೆಲ್ಲ ಭ್ರಮೆ. ಆದರೂ ನಮ್ಮ ಕುತೂಹಲವು ನಮ್ಮನ್ನು ಮುಂದೊಯ್ಯುವುದು. ಏಕೆಂದರೆ ಈ ಛಿದ್ರಾಂಶಗಳನ್ನರಿಯುವ ದಾರಿಯೇ ವಿಜ್ಞಾನ; ಅದರಂತೆ ಮನವನ್ನಾಕರ್ಷಿಸುವುದು ಮತ್ತೊಂದಿಲ್ಲ.

ಒಂದೊಂದುಸಲ ಸತ್ಯಶೋಧನೆಯಲ್ಲಿ ಪ್ರಾಪಂಚಿಕ ವ್ಯವಹಾರಕ್ಕೆ ಉಪಯುಕ್ತವಾದ ವಸ್ತುಗಳು ಸಿಕ್ಕಬಹುದು; ಅವುಗಳಲ್ಲಿ ಕೆಲವನ್ನು ಒಳ್ಳೆಯದಕ್ಕಾಗಲಿ ಕೆಟ್ಟದಕ್ಕಾಗಲಿ ಉಪಯೋಗಿಸಬಹುದು. ಆದರೆ ನಾವು ಸತ್ಯಾನ್ವೇಷಣೆಯಲ್ಲೇ ನಿರತರಾಗಿರುವೆವಾದರೆ ಅದನ್ನು ಲೌಕಿಕವಾದ ಉಪಯೋಗಗಳಿಗೆ ತಿರುಗಿಸುವುದಕ್ಕೆ ಬೇರೆಯವರಿಗೆ ಬಿಡುವೆವು. ಸ್ವಾರ್ಥರಹಿತವಾದ ಈ ಮಾರ್ಗದಿಂದ ಒಳ್ಳೆಯದಾದ, ಹಿರಿದಾದ, ಸುಂದರವಾದ ಪರಿಣಾಮಗಳಾಗುವುವು. ಆದರೆ ಕೆಲವುಸಲ ದುರಾಶೆಯು ಸತ್ಯಕ್ಕೆ ಅಡಚಣೆಮಾಡಿ, ಹೇಯವಾದ ಉದ್ದೇಶಗಳಿಗೆ ವಿಜ್ಞಾನವನ್ನು ಅಡಿಯಾಳು ಮಾಡುವುದು. ವಿಜ್ಞಾನವು ಮನುಷ್ಯನನ್ನು ಎಷ್ಟೇ ನಾಗರಿಕನನ್ನಾಗಿ ಮಾಡಿದ್ದರೂ ಅವನಿನ್ನೂ ಕೆಲವುವೇಳೆ ದುಷ್ಟಮೃಗದಂತೆಯೇ ಇರುವನೆಂದು ಕಾಣುತ್ತದೆ. ಇತ್ತೀಚೆಗೆ ಪ್ರಪಂಚದಲ್ಲಿ ನಡೆಯುತ್ತಿರುವುದನ್ನು ನೋಡಿದರೆ ನಾವು ಯಾವುದನ್ನು ನಾಗರಿಕತೆಯೆನ್ನುವೆವೋ ಅದು ನಿಜವಾಗಿಯೂ ಸಂಸ್ಕೃತಿಯಲ್ಲವೆಂದು ಕಂಡುಬರುವುದು.


ಇದು ವಿಷಾದಕರವಾದ ಅಂಶ; ಇದರ ವಿಷಯ ಇಲ್ಲಿ ಹೆಚ್ಚು ಹೇಳಬಯಸಿಲ್ಲ. ಇಲ್ಲಿನ ಉದ್ದೇಶವು ಪ್ರಕೃತಿಯ ಧ್ಯಾನದಲ್ಲಿ ಸ್ವಲ್ಪಕಾಲವನ್ನು ಕಳೆಯಬೇಕೆಂಬುದು ಮಾತ್ರ.

ತೃತೀಯ ಜೀವಯುಗದ ಆದಿ

ತೃತೀಯ ಜೀವಯುಗವು ಪ್ರಾರಂಭವಾಗಿ ಆರು ಅಥವಾ ಏಳು ಕೋಟಿ ವರ್ಷಗಳಾದುವೆಂದು ವೈಜ್ಞಾನಿಕರಲ್ಲಿ ಬಹುಮತವಾದ ಅಭಿಪ್ರಾಯವಿದೆ. ಈ ಯುಗದ ಆದಿಯಲ್ಲಿ ಅತ್ಯದ್ಭುತವಾದ ಭೂಗರ್ಭದೊಳಗಿನ ಶಕ್ತಿಯು ಉಬ್ಬಿ ಭೂಮಿಯ ಮೇಲ್ಮೈಯಲ್ಲಿ ಅನೇಕ ಬಿರುಕುಗಳಾದವು. ಅವೇ ಸಾಗರಗಳು. ಸಣ್ಣಸಣ್ಣ ಬಿರುಕುಗಳಿಂದ ಕರಗಿದ ಶಿಲೆಯು ಉಕ್ಕಿ ಹರಿದು ಕೋಟ್ಯಂತರ ಚದರಮೈಲಿಗಳಷ್ಟು ಭೂಭಾಗಗಳನ್ನು ಮುಚ್ಚಿತು. ಜ್ವಾಲಾಮುಖಿಗಳು ಎರಚಿದ ಬೂದಿಯಿಂದ ಅನೇಕ ಭಾಗಗಳು ಮರುಭೂಮಿಗಳಾದವು. ಉಕ್ಕಿ ಹರಿದ ಶಿಲೆಯು ಉನ್ನತವಾದ

ಪ್ರಸ್ಥಭೂಮಿಗಳಾಯಿತು. ಭೂಮುಖದ ಮೇಲೆ ಬದಲಾವಣೆಗಳು ಕಂಡುಬಂದುವು. ಹೊಸ ಸಸ್ಯಜಾತಿಗಳೂ ಪ್ರಾಣಿವರ್ಗಗಳೂ ಜನಿಸಿದುವು; ಇವು ಹೆಚ್ಚುಕಡಮೆ ಈಗಿರುವಂಥವು. ಆದರೆ ಇನ್ನೂ ಮನುಷ್ಯನ ಸುಳಿವಿಲ್ಲ. ಅವನು ಬರುವುದಕ್ಕೆ ರಂಗ ಸ್ಥಳವೆಲ್ಲ ಸಿದ್ಧವಾಗಿದೆ. ಭೂಗರ್ಭದಿಂದ ಉಬ್ಬಿ ಮೇಲೆದ್ದು ಅತ್ಯುನ್ನತವಾದ ಪರ್ವತಶ್ರೇಣಿಗಳು ಉದ್ಭವಿಸುವಿವೆ. ಇಂಡಿಯಾದೇಶದ ಉತ್ತರದಲ್ಲೆಲ್ಲೋ ಒಂದೆಡೆ ಮನುಷ್ಯನ ಜನನವಾಗಬೇಕು.

ಇದೇ ನವೀನಜೀವಿಗಳ ಆದಿಯ ಅಂಕ.



1. ಕಲ್ಲಿದ್ದಲಿನ ಕಾಲದ ಕೊನೆಯಲ್ಲಿದ್ದ "ಪ್ಯಾಂಜಿಯ" ಎಂಬ ಹೆಸರಿಟ್ಟಿರುವ ಅಖಂಡ ಭೂಖಂಡ.
2. ತೃತೀಯಜೀವಯುಗದ ಆದಿಭಾಗದಲ್ಲಿದ್ದ ಭೂವಿಭಾಗಗಳು.
3. ಈಗಿರುವ ಭೂಖಂಡಗಳು.

ದಖ್ಖನ್ನಿನ ಮೂಲ

ತೃತೀಯ ಜೀವಯುಗದ ಪ್ರಾರಂಭದಲ್ಲಿ ಇಂಡಿಯಾ ದೇಶದ ದೃಶ್ಯವೊಂದು ಹೇಗಿದ್ದಿತೆನ್ನುವ ಮೊದಲು ಅದಕ್ಕೂ ಹಿಂದಿನ ಕಾಲವು ಹೇಗಿತ್ತೆಂದು ಸ್ವಲ್ಪ ನೋಡೋಣ. ಆ ಕಾಲವೆಂದರೆ ಮೂವತ್ತುಕೋಟಿ ವರ್ಷಗಳ ಹಿಂದಕ್ಕೆ ಹೋಗಬೇಕು. ಆಗ ಅಟ್ಲಾಂಟಿಕ್ ಸಾಗರವಾಗಲಿ ಹಿಂದೂಸಾಗರವಾಗಲಿ ಹುಟ್ಟಿರಲಿಲ್ಲ.

ತೃತೀಯ ಜೀವಯುಗದ ಮೊದಲು ಭೂ-ಸಾಗರ ಭಾಗಗಳು ಹೇಗಿದ್ದವೆಂಬ ವಿಚಾರವಾಗಿ ಸರ್ವಾನುಮತವಾದ ಅಭಿಪ್ರಾಯವಿಲ್ಲ. ಆದರೆ ಪ್ರೊಫೆಸರ್ ವೆಗನರ್ ಎಂಬ ವೈಜ್ಞಾನಿಕನ ಪ್ರಸಿದ್ಧವಾದದಂತೆ ಹಿಂದೊಂದು ಸಲ ಭೂಮಿಯ ಮೇಲಿನ ಭೂಭಾಗವೆಲ್ಲ ಒಂದೇಕಡೆ ಇದ್ದಿತು. ಆಗಿದ್ದುದು ಒಂದೇ ಅಖಂಡ ಭೂಖಂಡ. ಆಗ ಉತ್ತರ ದಕ್ಷಿಣ ಅಮೆರಿಕಗಳು ಯೂರೋಪ್ ಆಫ್ರಿಕಗಳಿಗೆ ಅಂಟಿಕೊಂಡಿದ್ದುವು. ಅವೆರಡರ ನಡುವೆ ಬ್ರಿಟಿಷ್ ದ್ವೀಪಗಳೂ ಗ್ರೀನ್‌ಲೆಂಡ್ ಮತ್ತು ಐಸ್‌ಲೆಂಡ್‌ಗಳೂ ಪಕ್ಕಪಕ್ಕಗಳಲ್ಲಿ ಜೋಡಿಸಿಕೊಂಡಿದ್ದುವು. ಇಂಡಿಯಾ ದೇಶವು ಆಗ ಪಶ್ಚಿಮಕ್ಕೆ

ಮಡಗಾಸ್ಕರ್, ಪೂರ್ವಕ್ಕೆ ಆಸ್ಟ್ರೇಲಿಯಾಗಳೊಂದಿಗೆ ಕೂಡಿಕೊಂಡಿತ್ತು. ಆಗಿನ ದಕ್ಷಿಣಧ್ರುವವು ಕೇಪ್‌ಕಾಲೊನಿ ಪ್ರಾಂತದಲ್ಲಿತ್ತು.

ಅದಾದಮೇಲೆ ಭೂಗರ್ಭದೊಳಗಿನ ಬಿರಿಯುವ ಶಕ್ತಿಯಿಂದ ಭೂಭಾಗಗಳಲ್ಲೆಲ್ಲ ಬಿರುಕುಗಳಾಗಿ ದೂರದೂರವಾಗಿ 'ತೇಲಿ' ಹೋಗಲು ಪ್ರಾರಂಭವಾಯಿತು. ಅಂಥ ಬಿರುಕುಗಳಲ್ಲಿ ಈಗಿನ ಕೆಂಪುಸಮುದ್ರವೊಂದು ಇನ್ನೂರು ಮೈಲಿಯಷ್ಟು ಅಗಲ ವಾಗಿದೆ; ಅಟ್ಲಾಂಟಿಕ್ ಬಿರುಕಂತೂ ಮಹಾಸಾಗರವಾಗಿಬಿಟ್ಟಿದೆ.

ಹೀಗೆ ದಕ್ಷಿಣ ಇಂಡಿಯವು ಇನ್ನೂ ಈಶಾನ್ಯದಕಡೆಗೆ ಕ್ರಮೇಣ ಸಾಗುತ್ತಿದೆ ಯೆಂದು ವೆಗನರ್‌ನ ಮತ. ಹಿಂದೆ ವಿಂಧ್ಯಪರ್ವತದ ಉತ್ತರಪ್ರದೇಶದಲ್ಲಿ "ಟೀಥಿಸ್" ಸಮುದ್ರವೆಂಬುದು ಏಷ್ಯದ ಇತರ ಭೂಪ್ರದೇಶಗಳಿಗೂ ಇಲ್ಲಿಗೂ ಮಧ್ಯೆ ಇತ್ತು. ಆಮೇಲೆ ಏಷ್ಯವೂ ಇಂಡಿಯಾದಕಡೆ 'ಅಲೆಯುತ್ತ' ಬಂದು ಮಧ್ಯಸಮುದ್ರದ ತಳದ ಪ್ರಸ್ತರಗಳು ಒತ್ತಲ್ಪಟ್ಟು ಮಡಿಕೆಗಳಾಗಿ ಈಗಿನ ಹಿಮಾಲಯ ಪರ್ವತವಾದುವು.


ಆದಿಯಲ್ಲಿನ ದೃಶ್ಯ

ದಕ್ಷಿಣ ಇಂಡಿಯದ ಬಹುಭಾಗವೆಲ್ಲ ಆದಿಯಲ್ಲಿ ಕರಗಿ ನೀರಾಗಿದ್ದ ಅಗ್ನಿಶಿಲೆ ಯಿಂದಾದದ್ದು.—ಅದು ಒಂದೇ ಸಲವಲ್ಲ, ಹಲವು ಸಲ ಮೇಲುಕ್ಕಿ ಶಿಲೆಯಾದದ್ದು. ದಕ್ಷಿಣ ಇಂಡಿಯದ ಪೂರ್ವದಕ್ಷಿಣ ಭಾಗಗಳು ಭೂಮಿಯಮೇಲಿನ ಪ್ರದೇಶಗಳೆಲ್ಲ ಕ್ಕಿಂತಲೂ ಪುರಾತನವಾದವು. ಅವು ಭೂಗ್ರಹ ಹಿಂದೆ ಜ್ವಾಲೆಯ ಗೋಳದಂತಿದ್ದು ತಣ್ಣಗಾದ ಮೇಲೆ ಮೊದಲು ಶಿಲೆಯಾದ ಭೂಪ್ರದೇಶದ ಭಾಗಗಳು. ಹೀಗೆ ಮೊದಲು ಹೆಪ್ಪುಕಟ್ಟಿದ 'ಕೆನೆ'ಯಲ್ಲಿ ಬಿರುಕುಗಳಾಗಿ ಮತ್ತಷ್ಟು ದ್ರವರೂಪವಾದ ಶಿಲೆ ಉಕ್ಕಿ ಬಂದು ಘನಿಸಿತು.

ಇಂಥ ರಂಗಸ್ಥಳದಲ್ಲಿ ಜೀವಾಣುವು ಮೊದಲು ಬಹುಶಃ ನೀರಿನಲ್ಲಿ ಅವತಾರ ವೆತ್ತಿತು. ಆಗಿನ ಸಮುದ್ರಕ್ಕೆ ಕೊಚ್ಚಿಕೊಂಡು ಹೋದ ಶಿಲೆಗಳೆಲ್ಲ ಪ್ರಸ್ತರಗಳಾಗಿ ಮತ್ತೆ ಅನೇಕಕಡೆ ಮೇಲಕ್ಕೆತ್ತಲ್ಪಟ್ಟು ಪುನಃ ಭೂಭಾಗಗಳಾಗಿವೆ. ಇಂಥ ಶಿಲಾ ಪ್ರಸ್ತರಗಳು ಮಹಾನದಿ, ಗೋದಾವರಿ ಮತ್ತು ನರ್ಮದಾ, ಈ ನದಿಗಳ ಪಾತ್ರ ಪ್ರದೇಶದಲ್ಲಿಯೂ, ಪೂರ್ವತೀರದಲ್ಲಿ ತಿರುಚನಾಪಲ್ಲಿಯಿಂದ ಕಟಕ್ ವರೆಗೂ ವಿಸ್ತರಿ ಸಿವೆ. ಈ ಪ್ರಸ್ತರಗಳು ಹೆಚ್ಚಾಗಿ ನದಿಗಳು ಮತ್ತು ಸರೋವರಗಳಲ್ಲಿ ತುಂಬಿದ ಮೆಕ್ಕಲು. ಕೆಲವೆಡೆಗಳಲ್ಲಿ ಆಳವಿಲ್ಲದ ತೀರದಬಳಿಯ ಸಮುದ್ರಭಾಗಗಳಾಗಿದ್ದುವು.

ಈ ಪ್ರಸ್ತರಗಳಲ್ಲಿ ಸಿಕ್ಕಿರುವ ಪಳೆಯುಳಿಕೆಗಳಿಂದ ಆಗಿನಕಾಲದ ವಾಯುಗುಣದ ವ್ಯತ್ಯಾಸಗಳೂ, ಸಸ್ಯ ಮತ್ತು ಪ್ರಾಣಿಸಂಕುಲಗಳ ಪರಂಪರೆಗಳೂ ವಿದಿತವಾಗಿವೆ.

ದಖ್ಖನ್ ಪ್ರದೇಶವು ಎಲ್ಲೋ ಕೆಲವು ಸಣ್ಣ ಪ್ರದೇಶಗಳ ವಿನಾ ಉಳಿದ ಭಾಗವೆಲ್ಲ ಆದಿಯಿಂದಲೂ ನೆಲಪ್ರದೇಶವಾಗಿಯೇ ಇದೆ. ಕೆಲವು ಪ್ರದೇಶಗಳು ಮಾತ್ರ ಸಮುದ್ರದ ತಳದಲ್ಲಿದ್ದುವು.



ಶಿಲಾಪದರಗಳ ಕಾಲವಿಭಾಗಗಳು

(ತೃತೀಯ ಜೀವಯುಗದ ಮೊದಲಂಕದ (Eocene) ಸ್ಥಾನವನ್ನು ನೋಡಿ. ಒಂದು ಸೆಂಟಿಮಿಾಟರ್ ದಪ್ಪವು ೨೦೦,೦೦೦,೦೦೦ ವರ್ಷಗಳಿಗೆ ಸಮ.)

ದಖ್ಖನ್ 'ಟ್ರ್ಯಾಪ್' ಪ್ರದೇಶ

ದಖ್ಖನ್ನಿನ ಮಧ್ಯ ಮತ್ತು ಪಶ್ಚಿಮಪ್ರದೇಶಗಳಲ್ಲಿನ ಶಿಲೆಗಳು ಅಗ್ನಿಶಿಲೆಗಳಾದರೂ ಬೇರೆ ಬಗೆಯವು. ಪೂರ್ವ ಮತ್ತು ದಕ್ಷಿಣ ಪ್ರದೇಶದವು ಮೇಲೆ ಹೇಳಿದಂತೆ ಅನಾದಿ

ಕಾಲದ ಶಿಲೆಗಳು. ಇವೆರಡಕ್ಕೂ ವಯಸ್ಸಿನಲ್ಲಿ ಬಹಳ ಅಂತರವಿದೆ. ಮೊದಲನೆಯ ತರದವು ತೃತೀಯ ಜೀವಯುಗದ ಕಾಲದವು. ಅವು ಭೂಮಿಯ ನೂರಾರು ಮೈಲಿ ಉದ್ದವಾದ ಬಿರುಕುಗಳಿಂದ ಉಕ್ಕಿಬಂದ ಕರಗಿದ ಶಿಲೆಗಳು; ಈಗಲೂ ಜ್ವಾಲಾಮುಖಿಗಳಿಂದ ಉಕ್ಕುವಂಥ ಶಿಲೆಗಳು.

ಬೊಂಬಾಯಿಸಿಂದ ನಾಗಪುರಕ್ಕೆ ಹೋಗುವಾಗ ಸಿಕ್ಕುವುದು ಇಂಥ ಶಿಲಾಪ್ರದೇಶ. ಎಲ್ಲೆಲ್ಲಿಯೂ ದೊಡ್ಡ ಜಗಲಿಗಳಂತೆ ಮಟ್ಟವಾದ ಬೆಟ್ಟಗಳು, ಇದೇಬಗೆಯ ದೇಶಲಕ್ಷಣವು ಕಾಥೆವಾರ್, ಕಚ್‌ವರೆಗೂ ಪ್ರಸರಿಸಿದೆ. ಬೊಂಬಾಯಿನಿಂದ ಪೂನಾಕ್ಕೆ ಬರುವಾಗ ಸಿಕ್ಕುವ ಪಶ್ಚಿಮಘಟ್ಟ ಪ್ರಾಂತವೂ ಇಂತಹದೇ. ಇವು ತೃತೀಯ ಜೀವಯುಗದ ಆದಿಯಲ್ಲಿ ಒಮ್ಮಿಂದೊಮ್ಮೆ ಉಕ್ಕಿಬಂದು ಕೆಲವೆಡೆಗಳಲ್ಲಿ ಆರುಸಾವಿರದಿಂದ ಹತ್ತುಸಾವಿರ ಅಡಿಗಳಷ್ಟು ಪೇರಿಸಿದಂಥ ಶಿಲೆಗಳು.

ಜ್ವಾಲಾಮುಖಪ್ರಕರಣದ ಹಿಂದಿನ ಕಾಲ

ಮೇಲೆ ಹೇಳಿದುದಕ್ಕಿಂತ ಹಿಂದಿನ ಎಂದರೆ 'ಕ್ರಿಟೇಷಿಯಸ್' ಕಾಲದ ದಖ್ಖನ್ನಿನ ಭೂವಿವರಣೆಯನ್ನು ಚಿತ್ರಿಸಿಕೊಳ್ಳೋಣ. ನೈರುತ್ಯಪ್ರಾಂತದಲ್ಲಿ ಎಂದರೆ ತಿರುಚನಾಪಲ್ಲಿಯಿಂದ ಪಾಂಡಿಚೆರಿಯ ವರೆಗಿನ ಪ್ರದೇಶವು ಸಮುದ್ರದ ತಳವಾಗಿತ್ತು. ಅಲ್ಲಿನ ಪ್ರಸ್ತರಗಳು ಜೀವಾವಶೇಷಗಳಿಂದ ತುಂಬಿತುಳುಕುತ್ತಿವೆ. ಅದೇ ಸಮುದ್ರವು ಈಶಾನ್ಯಕ್ಕೆ ಅಸ್ಸಾಂ ಪ್ರಾಂತದ ವರೆಗೂ ಹಬ್ಬಿತ್ತು. ತಿರುಚನಾಪಲ್ಲಿಯ ಬಳಿ ಇರುವ ಊಟತೂರ್ ಹತ್ತಿರ ಶಿಲೆಯಾಗಿ ಪರಿಣಮಿಸಿರುವ ಮರದ ಚೂರುಗಳು ಸಿಕ್ಕಿವೆ. ಅವುಗಳಲ್ಲಿ ಸಮುದ್ರದಲ್ಲಿ ಸಿಕ್ಕುವ ಮರ ಕೊರೆಯುವ ಹುಳುಗಳಿಂದ ಮಾಡಲ್ಪಟ್ಟ ರಂಧ್ರಗಳಿವೆ. ಆ ಹುಳುಗಳ ಚಿಪ್ಪುಗಳೂ ಮರದೊಳಗೆ ಸಿಕ್ಕಿವೆ. ಆಗಿನ ಕಾಲದಲ್ಲಿ ಮರದ ತುಂಡುಗಳು ಆಗಿನ ಹೊಳೆಗಳಲ್ಲಿ ತೇಲಿಹೋಗಿ ತೀರಸಮುದ್ರಗಳೊಳಗೆ ಮುಳುಗಿಹೋಗಿರಬೇಕು.

ದಖ್ಖನ್ನಿನ ಉತ್ತರಕ್ಕಿದ್ದ ಆಗಿನ ಸಮುದ್ರ ನರ್ಮದಾನದಿಯ ಒಂದು ಪ್ರಾಂತದಲ್ಲಿ ಸ್ವಲ್ಪ ಚಾಚಿಕೊಂಡಿತ್ತು. ಆದರೆ ಇಲ್ಲಿನ ಪ್ರಾಣಿಜಾತಿಗಳೇ ಬೇರೆ. ಏಕೆಂದರೆ ಉತ್ತರ ಮತ್ತು ದಕ್ಷಿಣಸಮುದ್ರಗಳನ್ನು ಮಧ್ಯವಿದ್ದ ಪ್ರಸ್ಥಭೂಮಿಯು ವಿಭಾಗಿಸಿತ್ತು. ಉತ್ತರಸಮುದ್ರದ ಜೀವಜಂತುಗಳು ಯೂರೋಪಿನವುಗಳ ಬಂಧುಗಳು. ಅಷ್ಟೇಕೆ, ಆಗಿನ "ಟೀಥಿಸ್" ಸಮುದ್ರವು ಯೂರೋಪಿನಿಂದ ಟಿಬೆಟ್ ಮತ್ತು ಚೈನಾಗಳವರೆಗೆ ಪ್ರಸರಿಸಿತ್ತು.

ಆಗ ನಮ್ಮ ಪಶ್ಚಿಮತೀರ ಹೇಗಿದ್ದಿತೆಂಬುದಕ್ಕೆ ನಿದರ್ಶನಗಳಿಲ್ಲ. ಇಂಡಿಯವು



ಡೆಕ್ಕನ್ ಟ್ರ್ಯಾಪ್‌ಗಳಿಗೂ ಆದಿಶಿಲೆಗಳಿಗೂ (Archaean) ಇರುವ ಸಂಬಂಧ

ಡೆಕ್ಕನ್ ಟ್ರ್ಯಾಪ್ ಹಸುರು, ಆದಿಶಿಲೆಗಳು ಕೆಂಪು ; ಇತರ ಶಿಲಾಪ್ರದೇಶವನ್ನು ಹಾಗೇ ಬಿಟ್ಟಿದೆ.

ಆಗ ಪ್ರಾಯಶಃ ಆಫ್ರಿಕಾಕ್ಕೆ ಅಂಟಿಕೊಂಡೇ ಇತ್ತು ; ಅಥವಾ ಆಗಿದ್ದ ಪಶ್ಚಿಮ ಪ್ರದೇಶದ ಕೆಲವು ಭೂಭಾಗಗಳು ಅರಬ್ಬಿ ಸಮುದ್ರದಲ್ಲಿ ಮುಳುಗಿಹೋಗಿವೆ.

ಆಗಿನ ನೆಲದ ಮೇಲಿನ ಪ್ರಾಣಿಗಳೆಂದರೆ ಡೈನೊಸಾರ್‌ಗಳೆಂಬ ಪೆಡಂಭೂತಗಳು. ಅವು ಮಧ್ಯಪ್ರಾಂತಗಳ ಕಾಡುಗಳಲ್ಲಿದ್ದುವು. ಅವುಗಳಲ್ಲಿ ಅನೇಕ ಪ್ರಾಣಿಗಳು ಇಂಡಿಯಾ, ಮಡಗಾಸ್ಕರ್ ಮತ್ತು ದಕ್ಷಿಣ ಅಮೆರಿಕಗಳಿಗೆ ವೈಶೇಷಿಕವಾದವು. ಈ ಪ್ರಾಣಿಗಳು ಹರಡುವುದಕ್ಕೆ ಈಗ ದೂರವಾಗಿರುವ ಈ ದೇಶಗಳನ್ನು ಸಂಬಂಧಿಸುತ್ತಿದ್ದ ನೆಲದ ಭಾಗವಿದ್ದಿರಬೇಕು. ಆದರೆ ಈ ಪೆಡಂಭೂತಗಳು ಹೆಚ್ಚು ಕಾಲವಿರಲಿಲ್ಲ. ತೃತೀಯ ಜೀವಯುಗ ಪ್ರಾರಂಭವಾದಾಗ ಇವು ನಿರ್ನಾಮವಾಗಿದ್ದುವು.

ತೃತೀಯ ಜೀವಯುಗದ ಉದಯ

ಮಧ್ಯಜೀವಯುಗ ಮುಗಿಯುತ್ತ ಬಂತು. ಪ್ರಾಚೀನಕಾಲದ ದಕ್ಷಿಣ ಭೂಭಾಗವು ಒಡೆದು ಖಂಡಗಳಾದುವು. ಇವುಗಳ ಅಂತರದ ಸಮುದ್ರಗಳು ಅಗಲವಾದುವು. ದಖ್ಖನ್ನಿನ ಉತ್ತರದಲ್ಲಿದ್ದ ಭೂಮಧ್ಯ ಸಮುದ್ರಕ್ಕೆ ಈಜಿಪ್ಟ್, ಫ್ರಾನ್ಸ್, ಬೆಲ್ಜಿಯಂ ಮತ್ತು ಇಂಗ್ಲೆಂಡ್ ದೇಶಗಳ ನದಿಗಳು ಮೆಕ್ಕಲನ್ನು ತಂದುಹಾಕುತ್ತಿದ್ದುವು. ಪಶ್ಚಿಮಕ್ಕೆ ಮೆಕ್ಸಿಕೋವರೆಗೂ, ಪೂರ್ವಕ್ಕೆ ಬೋರ್ನಿಯೋದ ಆಚೆಯವರೆಗೂ ಇದೇ ಸಮುದ್ರವು ವಿಸ್ತರಿಸಿತ್ತು. ಇದೇ ಆಗಿನ ಸಮಭಾಜಕವೃತ್ತದ ಮಹಾಸಾಗರ. ಇದರ ತಳದಿಂದಲೇ ಮುಂದೆ ಹಿಮಾಲಯ ಮತ್ತು ಆಲ್ಪ್ಸ್ ಪರ್ವತ ಶ್ರೇಣಿಗಳು ಉದ್ಭವಿಸಿದುವು.

ಜ್ವಾಲಾಮುಖಿಗಳ ರೌದ್ರ ರಭಸಗಳೊಂದಿಗೆ ತೃತೀಯ ಜೀವಯುಗ ಪ್ರಾರಂಭವಾಯಿತು. ಜ್ವಾಲಾಮುಖಿಗಳೆಂದರೆ ಈಗಿನ ವೆಸೂವಿಯಸ್‌ನಂತಹವಲ್ಲ : ಭೂಮಿಯಲ್ಲಿನ ಬಿರುಕುಗಳಿಂದ ಕರಗಿದ ಶಿಲೆಯು ಆಟೋಪವಿಲ್ಲದೆ ಉಕ್ಕುವುದು. ಈ ಬಿರುಕುಗಳು ನೂರಾರು ಗಜಗಳಷ್ಟು ಅಗಲವಾಗಿಯೂ ಹತ್ತಾರು ಮೈಲಿಗಳಷ್ಟು ಉದ್ದವಾಗಿಯೂ ಇದ್ದು ಎಡಬಲಗಳಲ್ಲಿ ಅಲ್ಲಲ್ಲಿ ಸೀಳಾಗಿ ಭಯಂಕರ ಜ್ವಾಲಾದ್ರವಗಳಿಂದ ಕೂಡಿರುತ್ತಿತ್ತು. ಕಾಥೆವಾರ್ ಮುಂತಾದ ಕೆಲವೆಡೆಗಳಲ್ಲಿ ಈ ಬಿರುಕುಗಳನ್ನು ಈಗಲೂ ಕಾಣಬಹುದು. ಅವುಗಳಲ್ಲಿ ಶಿಲೆಯು ಗೋಡೆಗಳಂತೆ ಘನಿಸಿದೆ.

ದಖ್ಖನ್ನಿನ ಈ ಶಿಲೆಗಳಲ್ಲಿ ಕಬ್ಬಿಣದ ಪರಿಮಾಣವು ಹೆಚ್ಚಾಗಿದ್ದು ಅವು ಘನಿಸುವ ಮೊದಲು ಧಾರಾಳವಾಗಿ ಹರಿಯುತ್ತಿದ್ದುವು. ಈ ಅಗ್ನಿಪ್ರಳಯದಲ್ಲಿ ಸಸ್ಯವೃಕ್ಷಗಳೆಲ್ಲವೂ ಸುಟ್ಟು ಭೂಮಿಯೇ ಹತ್ತಿಕೊಂಡು ಉರಿಯುತ್ತಿದ್ದಂತಿತ್ತು. ಅದು ಹರಿದ ಕಡೆ ನೆಲವೆಲ್ಲಾ ಸೀದು ಹುಸಿಮಣ್ಣೆಲ್ಲ ರೊಟ್ಟಿಕಟ್ಟಿಕೊಂಡಿತು.

ನೀರಿನಿಂದ ತುಂಬಿದ ಹಳ್ಳಗಳೆಲ್ಲ ಶಿಲೆಯ ಪ್ರವಾಹಕ್ಕೆ ಸಿಕ್ಕಿ ಕ್ಷಣಮಾತ್ರದಲ್ಲಿ ಹಬೆಯಾಗಿ ಶಿಲೆಯನ್ನು ಸಿಡಿಸಿ ಎರಚಿರಬೇಕು. ಪ್ರವಾಹವು ಅಡ್ಡಗಟ್ಟಿ ಹೊಸ ಸರೋವರಗಳನ್ನು ಮಾಡಿತು. ದೊಡ್ಡ ಹೊಳೆಗಳು ಕಾಲಕ್ರಮೇಣ ತಮ್ಮ ಪಾತ್ರಗಳನ್ನು ಹೊಸದಾಗಿ ಕೊರೆದುಕೊಂಡವು. ಅಗ್ನಿಪ್ರಳಯಗಳು ಪುನಃ ಪುನಃ ಆಗುತ್ತಿದ್ದವು—ಒಂದೊಂದು ಸಲ ಒಂದೊಂದು ಕಡೆ. ಮೊದಲು ಬಹುಶಃ ಐದು ಲಕ್ಷ ಚದರ ಮೈಲಿಗಳಷ್ಟು ಸ್ಥಳವನ್ನು ಅವು ಆಕ್ರಮಿಸಿರಬೇಕು. ಈಗ ಲಕ್ಷಾಂತರ ವರ್ಷಗಳಿಂದ ಮಳೆಗಾಳಿ ಬಿಸಿಲುಗಳ ಹೊಡೆತಕ್ಕೆ ಸಿಕ್ಕಿದ್ದರೂ ಇನ್ನೂ ಕರಗದೆ ನಿಂತಿರುವ ಈ ದಖ್ಖನ್ 'ಟ್ರ್ಯಾಪ್' (ಮೆಟ್ಟಲು ಮೆಟ್ಟಲಾಗಿರುವುದೆಂದು ಅರ್ಥ—ಸ್ವೀಡಿಷ್ ಪದ) ಈಗ ಸುಮಾರು ಎರಡುಲಕ್ಷ ಚದರಮೈಲಿಗಳಷ್ಟು ವಿಸ್ತೀರ್ಣವುಳ್ಳದಾಗಿದೆ. ಅದರ ವಿಸ್ತೀರ್ಣವು ಪಶ್ಚಿಮ ತೀರದಲ್ಲಿ ಹಟಾತ್ತನೆ ಕೊನೆಗಂಡಿದ್ದರೂ, ಅರಬ್ಬಿ ಸಮುದ್ರದಲ್ಲಿ ಎಷ್ಟು ಭಾಗವು ಮುಳುಗಿದೆಯೆಂದು ಹೇಳಲು ಕಷ್ಟವಾಗಿದೆ.

ಇಷ್ಟೊಂದು ವಿಸ್ತಾರ ಪ್ರದೇಶದಲ್ಲಿ ಅಗ್ನಿಪ್ರವಾಹವು ಎಲ್ಲಿ ಪ್ರಾರಂಭವಾಯಿತೆಂದು ಹೇಳುವುದು ಕಷ್ಟ. ಅಂತೂ ನಾಗಪುರದ ಬಳಿಯಿರುವ ಶಿಲೆಗಳು ಮೊದಲು ಉಕ್ಕಿ ಬಂದವಾಗಿರಬಹುದು. ಕಟ್ಟಕಡೆಯದೆಂದರೆ ಬೊಂಬಾಯಿನಲ್ಲಿ ಈಗ ಮಲಬಾರ್ ಹಿಲ್ ಎನ್ನಿಸಿಕೊಂಡಿರುವ ಶ್ರೀಮಂತ ಗುಡ್ಡವೊಂದು. ಅಗ್ನಿಪ್ರಳಯಗಳು ಪೂರ್ವ ಪ್ರದೇಶದಲ್ಲಿ ಪ್ರಾರಂಭವಾಗಿ ಪಶ್ಚಿಮದ ಕಡೆ ಹಬ್ಬಿದಂತೆ ಕಾಣುತ್ತದೆ.

ಈ ಪ್ರವಾಹಗಳು ಕೆಲವು ಅಡಿಗಳಿಂದ ಒಂದುನೂರು ಅಡಿಗಳಷ್ಟು ದಪ್ಪವಾಗಿವೆ. ಒಂದು ಸಲ ಉಕ್ಕಿದ ಕಡೆ ಮತ್ತೊಂದು ಸಲ ಉಕ್ಕಿ ಮೊದಲಿನ ಬಿರುಕುಗಳು ಕಾಣದಾಗಿವೆ. ಆ ಕಾಲದಲ್ಲಿ ಭೂಮಿಯ ಮೇಲೆ ಪ್ರಚಂಡ ಆರ್ಭಟಗಳೆದ್ದಿರಬೇಕು. ಆಕಾಶವೆಲ್ಲ ಅನೇಕ ಮೈಲಿಗಳಷ್ಟು ಎತ್ತರಕ್ಕೆ ಜ್ವಾಲೆ, ಹಬೆ, ಹೊಗೆ, ಬೂದಿಗಳಿಂದ ತುಂಬಿರಬೇಕು. ಶಾಂತಭೂತಾಯಿಯು ರೌದ್ರವನ್ನು ಮುಗಿಲಿಗೆರಚುತ್ತಿದ್ದಿರಬೇಕು.

ಮೇಲಕ್ಕೆ ಅಡರಿದ ಬೂದಿಯು ಪುನಃ ಭೂಮಿಯ ಮೇಲೆ ವೃಷ್ಟಿಯಾಯಿತು. ಇಂಥ ಬೂದಿಯಿಂದಲೇ ಆದ ಪ್ರಸ್ತರಗಳನೇಕವು ಪಶ್ಚಿಮ ಇಂಡಿಯದಲ್ಲಿ ಸಿಕ್ಕಿವೆ. ಪೂನಾ ಮಹಾಬಲೇಶ್ವರಗಳ ಬಳಿ ಇಂಥವಿವೆ. ಇಲ್ಲೊಂದು ರಭಸಯುಕ್ತವಾದ ಜ್ವಾಲಾಮುಖಿಯಿದ್ದಿರಬೇಕು.

ನದಿ ಅಥವಾ ಸರೋವರದ ಮೇಲೆ ಇಂಥ ಬೂದಿಯ ವೃಷ್ಟಿಯಾಯಿತೆಂದರೆ ಅದರಲ್ಲಿನ ಜೀವವರ್ಗವೆಲ್ಲ ಅಲ್ಲಿಯೇ ಸಮಾಧಿಗತವಾದುವು.

ಸಮಾಧಿಯೆಂದರೆ ಅವಕ್ಕೆ ಶಾಶ್ವತ ರೂಪವನ್ನೇ ಕೊಟ್ಟಂತಾಯಿತು. ಅದಾವ ಗುಣವಿಶೇಷದಿಂದಲೋ ನಾವರಿಯೆವು, ಆ ಸಸ್ಯಗಳು ಪ್ರಾಣಿಗಳೆಲ್ಲ ಸೊಗಸಾದ

ಸ್ಥಿತಿಯಲ್ಲಿ ಶಿಲಾಂತರ್ಗತವಾದ ಅವಶೇಷಗಳಾಗಿ ಉಳಿದುವು. ಸಸ್ಯಗಳ ಅಣು ಪರಮಾಣುಗಳೆಲ್ಲ ಒಂದರ ಸ್ಥಾನಕ್ಕೆ ಇನ್ನೊಂದರಂತೆ ಶಿಲಾಪದಾರ್ಥದ ಅಣುಗಳಿಂದ ರೂಪಾಂತರಗೊಂಡುವು. ಚಿಣಚುಕಲ್ಲಿನ ಪದಾರ್ಥವಾದ ಈ ಶಿಲೆಯಿಂದ ಹಿಂದಿದ್ದ ಜೀವಿತವಸ್ತುಗಳ ಅಚ್ಚುಗಳು ಅಳಿಯದೆ ನಿಂತುವು.

ಹೀಗೆ ಶಿಲಾಂತರ್ಗತ ಅವಶೇಷಗಳೆಂದರೆ ಶಿಲೆಯಲ್ಲಿ ಉಳಿದ ಅಚ್ಚುಗಳಲ್ಲ. ಸಸ್ಯರಚನೆಯ ಸೂಕ್ಷ್ಮಾಂಶಗಳೆಲ್ಲವೂ ಶಿಲೆಯಾಗಿ ಪರಿಣಮಿಸಿದುವು. ಇವನ್ನು ಸೂಕ್ಷ್ಮದರ್ಶಕದ ಕೆಳಗೆ ಕಾಣಬಹುದು. ಈ ರೂಪಾಂತರದ ಅಚ್ಚರಿಯೇನೆಂದರೆ ಅವನ್ನು ನೋಡುತ್ತಿರುವಾಗ ಈಗಿನ ಕಾಲದ ಸಸ್ಯವಿಶೇಷಗಳನ್ನೇ ಪರೀಕ್ಷಿಸು ತ್ತಿದ್ದೇವೋ ಎನ್ನುವಂತೆ ಭಾಸವಾಗುವುದು.

ಶಿಲಾಪ್ರವಾಹಕ್ಕೆ ಸಿಕ್ಕಿದುದರಿಂದ ಅದರ ಶಾಖದಿಂದಲೋ ಅಥವಾ ಘನೀ ಭೂತವಾದಮೇಲೂ ಶಿಲೆಗಳಲ್ಲಿ ಹರಿಯುವ ಸೂಕ್ಷ್ಮ ಶಿಲಾದ್ರವಗಳಿಂದಲೋ, ಅಂತೂ ಆ ಸರೋವರಗಳ ಮೆಕ್ಕಲು ಮಣ್ಣೆಲ್ಲ ಗಟ್ಟಿಯಾಗಿ ಸುತ್ತಿಗೆಯ ಬಡಿತಕ್ಕೆ ಉಕ್ಕಿನಂತೆ ಶಬ್ದವಾಗುವುದು. ಮೆಕ್ಕಲಿನಲ್ಲಿ ಹೂತಿದ್ದ ಸಸ್ಯಗಳ, ಮತ್ತು ಪ್ರಾಣಿಗಳ ಭಾಗ ಗಳೆಲ್ಲವೂ ಅಲ್ಲೇ ಉಳಿದುವು. ಹೀಗೆ ಆಗಿನ ಕಾಲದ ಸಸ್ಯ ಮತ್ತು ಪ್ರಾಣಿಗಳ ದೊಡ್ಡ ಸಂಕುಲಗಳೇ ನಮಗೆ ಸಿಕ್ಕಿವೆ.

ದಖ್ಖನ್ ಟ್ರ್ಯಾಪ್ ಕಾಲದ ಜೀವಿಗಳು

ಮೇಲೆ ತಿಳಿಸಿದಂತೆ ಅಳಿಯದೆ ಉಳಿದಿರುವ ಅವಶೇಷಗಳಿಂದ ಆ ಜೀವಜಾತಿಗಳ ಐತಿಹಾಸಿಕನಿಗೆ ಎಂಥ ಬೆಲೆಯಾದ ಸಾಮಗ್ರಿಗಳು ಸಿಕ್ಕಿವೆಯೆಂದು ಗೊತ್ತಾಗುವುದು. ಶಿಲಾರಾಶಿಗಳ ವಿಭಜನೆಗೆ ಈ ಅವಶೇಷಗಳು ಬಹು ಬೆಲೆಯಾದವು. ಅವುಗಳಲ್ಲಿನ ಜೀವಜಾತಿಗಳಿಂದ ಅವು ಯಾವ ಕಾಲದವೆಂದು ತಿಳಿಯಬಹುದು.

ದಖ್ಖನ್ ಟ್ರ್ಯಾಪ್ ಪ್ರಸ್ತರಗಳ ಕಾಲನಿರ್ದೇಶವು ಭೂಮಿಶಾಸ್ತ್ರಜ್ಞರಿಂದ ಈಗ ಎಪ್ಪತ್ತು ವರ್ಷಗಳಿಂದಲೂ ಚರ್ಚಿಸಲ್ಪಡುತ್ತಿದೆ. ಮುಖ್ಯವಾದ ವಾದವೇನೆಂದರೆ ಶಿಲಾಪ್ರವಾಹವು ಮಧ್ಯಜೀವಯುಗದ ಕಡೆಯಲ್ಲಿಯೇ ಪ್ರಾರಂಭವಾಯಿತೇ ಅಥವಾ ತೃತೀಯ ಜೀವಯುಗದ ಆದಿಯಲ್ಲಾಯಿತೇ ಎಂಬುದು. ಒಂದು ಪ್ರಸ್ತರದ ಕಾಲನಿರ್ದೇಶಕ್ಕೆ ಭೂಮಿಶಾಸ್ತ್ರಜ್ಞರಲ್ಲಿ ಇಷ್ಟೊಂದು ವಾದಗಳೇಳಬೇಕೇ ಎಂದೆನಿಸ ಬಹುದು. ಆದರೆ ತೀರ ವೈಜ್ಞಾನಿಕ ದೃಷ್ಟಿಯಿಂದ ಮಾತ್ರವಲ್ಲದೆ ಶಿಲಾಪ್ರಸ್ತರಗಳ ಸ್ಥಾನ ಮತ್ತು ಕಾಲನಿರ್ದೇಶವು ಮನುಷ್ಯನಿಗೆ ಖನಿಜಸಂಪತ್ತಿನ ಅನ್ವೇಷಣೆಯಲ್ಲಿ ಸಹಾಯಕವಾಗುವುದು.

ದಖ್ಖನ್ನಿನ ಶಿಲೆಯ ಪ್ರವಾಹಗಳಲ್ಲಿ ಮಧ್ಯೆ ಸಿಕ್ಕಿರುವ ಮೆಕ್ಕಲು ಮಣ್ಣಿನ ಪ್ರಸ್ತರಗಳೇ ಆ ಪ್ರವಾಹಗಳ ಕಾಲನಿರ್ದೇಶಕ್ಕೆ ನಿದರ್ಶನಗಳನ್ನು ಕೊಡುವುವು. ಅವುಗಳಲ್ಲಿನ ಸಸ್ಯಾವಶೇಷಗಳು ಸ್ಪಷ್ಟವಾದ ಉತ್ತರವನ್ನು ಕೊಡುವುವೆಂದು ನನ್ನ ಮತ. ಮೊದಲು ಅವುಗಳಲ್ಲಿನ ಕೆಲವು ಜೀವಾವಶೇಷಗಳನ್ನು ಪರೀಕ್ಷಿಸೋಣ.

ನಮಗೆ ತಿಳಿದಿರುವ ಸಸ್ಯಾವಶೇಷಗಳು ಹೆಚ್ಚಾಗಿ ನಾಗಪುರ ಡಿಸ್ಟ್ರಿಕ್ಟಿನವು. ಅಲ್ಲೇ ದಖ್ಖನ್ನಿನ ಶಿಲಾಪ್ರಸ್ತರಗಳಲ್ಲೆಲ್ಲ ಪುರಾತನವಾದ ಪದರಗಳು ಸಿಕ್ಕಿರುವುದು. ಇವುಗಳ ಕಾಲವನ್ನು ಗೊತ್ತುಮಾಡಿತೆಂದರೆ ಅಗ್ನಿ ಶಿಲೆಯ ಪ್ರವಾಹಗಳೂ ಯಾವಾಗ ಪ್ರಾರಂಭವಾದುವೆಂಬುದನ್ನು ಗೊತ್ತುಮಾಡಿದಂತಾಗುವುದು. ಇಲ್ಲಿ ನಮಗೆ ಅನೇಕ ವಿಧವಾದ ಬೀಜಗಳು ಕಾಯಿಗಳು ಮುಂತಾದುವು ಸಿಕ್ಕಿವೆ. ನೀರಿನಲ್ಲಿ ಬೆಳೆಯುವ ಸಸ್ಯಜಾತಿಗಳು ಹೇರಳವಾಗಿ ದೊರೆತಿವೆ. ಅಣಬೆಯ ಸಂಬಂಧವಾದ ಸೂಕ್ಷ್ಮ ಸಸ್ಯಗಳನೇಕ ಸಿಕ್ಕಿವೆ. ಶಿಲೆಯಾದ ಅನೇಕ ದೊಡ್ಡ ಮರದ ತುಂಡುಗಳು ಸಿಕ್ಕಿವೆ. ತೆಂಗಿನ ಮರದಂತಾಗುವ ಅನೇಕ ಜಾತಿಯ ಮರಗಳು ಸಿಕ್ಕಿವೆ. ಇವುಗಳೊಂದಿಗೆ ಕೆಲವು ಪ್ರಾಣಿಗಳ ಚಿಪ್ಪುಗಳೂ ಇವೆ. ಶಂಖದ ಹುಳು, ಮೀನಿನ ಮೈಸಿಪ್ಪೆ, ಕೀಟಗಳ ರೆಕ್ಕೆಗಳು ಮತ್ತು ಅನೇಕ ನೀರಿನ ಮತ್ತು ನೆಲದ ಮೇಲಿನ ಪ್ರಾಣಿಗಳ ಅಸ್ಥಿಪಂಜರಗಳು ಸಿಕ್ಕಿವೆ. ಇವುಗಳೆಲ್ಲವೂ ಒಂದೇ ಸಮಾಧಿಯಲ್ಲಿ ಅಡಕವಾಗಿವೆ.

ಈ ಸಸ್ಯಾವಶೇಷಗಳಲ್ಲಿ ಕೆಲವು ಸುಮಾರು ನೂರು ವರ್ಷಗಳ ಹಿಂದೆ ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯದ ಅಧಿಕಾರಿಗಳಿಂದಲೂ, ಕ್ರೈಸ್ತ ಪಾದ್ರಿಗಳಿಂದಲೂ, ಇನ್ನೂ ಇತರರಿಂದಲೂ ಸಂಗ್ರಹವಾದವು. ಅದರಲ್ಲಿ ಹೆಚ್ಚು ಭಾಗ ಲಂಡನ್ನಿನ ಬ್ರಿಟಿಷ್ ಮ್ಯೂಸ್ಸಿಯಮನ್ನು ಸೇರಿದುವು. ಅಲ್ಲಿಂದ ತರಿಸಿದವಲ್ಲದೆ ಇಂಡಿಯಾದ ಭೂಮಿಶಾಸ್ತ್ರದ ಸರ್ವೆ ಇಲಾಖೆಯವರಿಂದಲೂ ಮತ್ತು ಇತರರಿಂದಲೂ ಸಂಗ್ರಹಿಸಿದವೂ ಇವೆ.

ರಾಜಮಹೇಂದ್ರಿ ಬಳಿಯ ಪ್ರಸ್ತರಗಳು ಸ್ವಲ್ಪ ಉಪ್ಪುನೀರಿನ ಅಳಿವೆ ಪ್ರದೇಶದಂತಹ ಕಡೆ ಶೇಖರವಾದವು. ಇವೂ ನಾಗಪುರದ ಪ್ರಾಂತದವುಗಳಂತೆಯೇ ಬಹು ಪುರಾತನ ಪ್ರಸ್ತರಗಳು. ಇವುಗಳನ್ನು ಬೆಂಗಳೂರಿನ ಪ್ರೊ|| ಎಲ್. ರಾಮರಾಯರು ಮುಂತಾದವರು ಸಂಶೋಧಿಸುತ್ತಿದ್ದಾರೆ.

ಸಸ್ಯಗಳ ಪೈಕಿ 'ಗೈರ್‌ಗೊನೈಟಿಸ್' ಎಂಬುದು ಇಂಗ್ಲೆಂಡ್, ಫ್ರಾನ್ಸ್ ಮುಂತಾದ ದೇಶಗಳಲ್ಲಿ ತೃತೀಯ ಜೀವಯುಗದ ಆದಿಕಾಲದ ಪ್ರಸ್ತರಗಳಲ್ಲಿ ಸಿಕ್ಕಿವೆ. ಇವುಗಳಲ್ಲಿ ಕೆಲವು ಒಂದಕ್ಕೊಂದು ವ್ಯತ್ಯಾಸವೇ ಇಲ್ಲದಂತೆ ಹೋಲುವುವು.

ಅಣಬೆಯ ಜಾತಿಯ ಸೂಕ್ಷ್ಮಸಸ್ಯಗಳ ಎಳೆಗಳು ನಾಗಪುರ ಪ್ರಾಂತದಲ್ಲಿ ಸಿಕ್ಕಿವೆ.

'ಅಸ್ಗೊಲಾ' ಎಂಬ ಒಂದು ಬಗೆಯ, ನೀರಿನ ಮೇಲೆ ತೇಲಿಕೊಂಡೇ ಜೀವಿಸುವ, ಜರಿಸಸ್ಯದ ಹಲವು ಭಾಗಗಳು ಸಿಕ್ಕಿವೆ. ಇವಕ್ಕೆ ಸಂಬಂಧಪಟ್ಟ, ಆದರೆ ಈಗಿನ ಕಾಲದಲ್ಲಿರುವವುಗಳಿಗಿಂತ ಸ್ವಲ್ಪ ಭಿನ್ನವಾಗಿರುವ, ಸಸ್ಯವಿಶೇಷಗಳೂ ಸಿಕ್ಕಿವೆ. ಮುಖ್ಯವಾಗಿ ಈ ಜಾತಿಯ ಸಸ್ಯಗಳು ತೃತೀಯ ಜೀವಯುಗದ ಹಿಂದಿನ ಕಾಲದ ಪ್ರಸ್ತರಗಳಲ್ಲೆಲ್ಲೂ ಸಿಕ್ಕಿಲ್ಲ.*

ಹಿಮಾಲಯ ಪ್ರಾಂತಗಳಲ್ಲಿ ಬೆಳೆಯುವ ಈಗಿನ ದೇವದಾರು ವೃಕ್ಷಕ್ಕೆ ಸಂಬಂಧ ಪಟ್ಟ ಜಾತಿಯ ಬೀಜಗಳೂ ಕಾಯಿಗಳೂ ನಾಗಪುರದ ಬಳಿ ಸಿಕ್ಕಿವೆ.

'ಸಾಸರೋಸ್ಪರ್ಮಂ' ಎಂಬ ಹೆಸರಿಡಲ್ಪಟ್ಟ ಬೀಜವು ಕಲ್ಲಿದ್ದಲಿನ ಕಾಲದ ಕೆಲವು ಗಿಡಗಳ ಬೀಜಗಳನ್ನು ನೆನಪಿಗೆ ತರುತ್ತದೆ. ಏಲಕ್ಕಿಯಂತಹ ಕಾಯಿಗಳು ಈಗ ಸುಮಾರು ನೂರು ವರ್ಷಗಳ ಹಿಂದೆಯೇ ಸಂಗ್ರಹಿಸಲ್ಪಟ್ಟುವು. ಈಗ ಅವು ಬ್ರಿಟಿಷ್ ಮ್ಯೂಸಿಯಂನಲ್ಲಿವೆ.

ಇವೆಲ್ಲಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದ ಸಸ್ಯಾವಶೇಷವೆಂದರೆ 'ನೈಪಡೈಟಿಸ್' ಎಂಬುದು. ಇದು ಒಂದು ಬಗೆಯ ತೆಂಗಿನ ಜಾತಿಯ ವೃಕ್ಷದ ಕಾಯಿ. ಈ ವೃಕ್ಷವು ಸ್ತಂಬದಂತಹ ಮರವಾಗುವುದಿಲ್ಲ. ನೆಲದ ಮಟ್ಟದಿಂದಲೇ ಗರಿಗಳು ಮೇಲೇಳುವುವು. ಇವು ಸಮುದ್ರದ ಬಳಿ ಅಳಿವೆ ಪ್ರದೇಶಗಳಲ್ಲಿ ಮಾತ್ರ ಬೆಳೆಯುವುದು. ಈ ಜಾತಿಯ ಕಾಯಿಗಳು ಲಂಡನ್ನಿನ ಪ್ರದೇಶದಲ್ಲಿಯೂ ಸಿಕ್ಕಿವೆ. ಅಲ್ಲಿನ ಪ್ರಸ್ತರಗಳು ತೃತೀಯ ಜೀವಯುಗದ ಆದಿಕಾಲದವೆಂದು ಎಲ್ಲರೂ ಒಪ್ಪಿದ್ದಾರೆ. ಅದೇ ಜಾತಿಯ ಕಾಯಿಗಳು ಬೆಲ್ಜಿಯಂ, ಪ್ಯಾರಿಸ್, ಮಿಸಿಸಿಪಿ ನದಿಯ ಪಾತ್ರಪ್ರಾಂತ, ದಕ್ಷಿಣ ರಷ್ಯ, ಈಜಿಪ್ಟ್ ಮತ್ತು ಬೋರ್ನಿಯೋಗಳಲ್ಲಿ ಅದೇ ಕಾಲದ ಪ್ರಸ್ತರಗಳಲ್ಲಿ ಸಿಕ್ಕಿವೆ. ಈ ಒಂದು ಸಸ್ಯಾವಶೇಷದಿಂದ ಹಿಂದಿದ್ದ "ಟೀಥಿಸ್" ಸಮುದ್ರದ ತೀರವು ಎಲ್ಲಿಯವರೆಗಿದ್ದಿತೆಂದು ತಿಳಿಯುವುದು; ಎಂದರೆ ಮಧ್ಯಪ್ರಾಂತದಲ್ಲಿರುವ ಛಿಂದ್ವಾರ ಎಂಬ ಊರಿನ ಬಳಿಯಿತ್ತು. ಈ ಸಸ್ಯವು ತೃತೀಯ ಜೀವಯುಗದ ಹಿಂದಿರಲಿಲ್ಲ.

ಸಮುದ್ರದ ಉಪ್ಪುನೀರು ಮಿಶ್ರವಾದ ಅಳಿವೆ ಪ್ರದೇಶವು ಅಲ್ಲಿತ್ತು ಎಂಬುದಕ್ಕೆ ಕೆಲವು ಪ್ರಾಣಿಗಳ ಅವಶೇಷಗಳೂ ನಿದರ್ಶನವಾಗಿವೆ. ಅಳಿವೆ ಪ್ರದೇಶಗಳಲ್ಲಿಯೇ ಇರುವಂಥ ಮೀನಿನ ಮೈಸಿಪ್ಪೆಗಳೂ ದೊರಕಿವೆ. ಈ ಪ್ರಸ್ತರಗಳು ತೃತೀಯ ಜೀವ ಯುಗದವೆಂಬುದಕ್ಕೆ ಈ ಮೀನಿನ ಜಾತಿಗಳೂ ನಿದರ್ಶನಗಳು.

---

* ಈ ಮೇಲೆ ಹೇಳಿರುವ ಸಸ್ಯಾವಶೇಷಗಳಲ್ಲದೆ ಮತ್ತೆ ಕೆಲವುಗಳ ಮೇಲಿನ ಸಂಶೋಧನೆಯಲ್ಲಿ ಈ ಭಾಷಣದ ಅನುವಾದಕರದೂ ಭಾಗವಿದೆ.

ಮುಖ್ಯವಾಗಿ ತೆಂಗಿನ ಜಾತಿಯ ಮರಗಳ ಶಿಲಾರೂಪಾಂತರಗಳು ಹೇರಳವಾಗಿ ಸಿಕ್ಕಿವೆ. ಈ ಜಾತಿಯ ಮರಗಳ ವೈವಿಧ್ಯವು ಚೆನ್ನಾಗಿ ಕಂಡುಬಂದುದು ತೃತೀಯ ಯುಗವು ಪ್ರಾರಂಭವಾದ ಮೇಲೆಯೇ. ನಮಗೆ ಸಿಕ್ಕಿರುವ ಸಸ್ಯಾವಶೇಷಗಳೆಲ್ಲವೂ ಈ ಕಾಲನಿರ್ದೇಶಕ್ಕೆ ಹಿರಿತರವಾದ ನಿದರ್ಶನಗಳನ್ನು ಒದಗಿಸಿವೆ.

ದಖ್ಖನ್ನಿನ ಶಿಲಾಪ್ರವಾಹಗಳ ಕಾಲ

ದಖ್ಖನ್ನಿನ ಈಶಾನ್ಯ ಪ್ರದೇಶದ ಪ್ರಸ್ತರಗಳಲ್ಲಿನ ಸಸ್ಯಾವಶೇಷಗಳ ವಿಷಯವನ್ನು ಸಂಕ್ಷೇಪವಾಗಿ ತಿಳಿಸಿದಂತಾಯಿತು. ಈ ಸಸ್ಯಗಳ ಸಹಾಯದಿಂದ ಶಿಲಾಪ್ರವಾಹಗಳ ಕಾಲನಿರ್ದೇಶಮಾಡುವುದರಲ್ಲಿ ಸ್ವಲ್ಪ ಕಷ್ಟವಿದೆ. ಏಕೆಂದರೆ ಅವುಗಳಲ್ಲನೇಕವು ಹೊಸದಾಗಿ ಸಿಕ್ಕಿದವು, ಬೇರೆ ದೇಶಗಳಲ್ಲಿ ಸಿಕ್ಕಿರುವಂಥವುಗಳಲ್ಲ. ಅಂತೂ ಒಟ್ಟಿನಲ್ಲಿ ಮೇಲೆ ವಿವರಿಸಿದ ಸಸ್ಯ ಜಾತಿಗಳೆಲ್ಲ ಬಹುವಾಗಿ ತೃತೀಯ ಜೀವಯುಗದವು. ಪ್ರಾಣಿಗಳ ಅವಶೇಷಗಳೂ ಇದೇ ಕತೆಯನ್ನು ಹೇಳುವಂತೆ ತೋರುವುದು.

ಇದಿಷ್ಟು ನಾಗಪುರ—ಛಿಂದ್ವಾರ ಪ್ರಾಂತದ ಮಾತಾಯಿತು. ಇವೇ ದಖ್ಖನ್ನಿನ ಪ್ರಸ್ತರಗಳ ಪೈಕಿ ಬಹಳ ಹಿಂದಿನವೆಂದು ಭೂಮಿಶಾಸ್ತ್ರಜ್ಞರು ಹೇಳುತ್ತಾರೆ. ಛಿಂದ್ವಾರ ಪ್ರಾಂತದ ಶಿಲಾಪ್ರವಾಹಗಳು ಹತ್ತಿರದಲ್ಲೇ ಇದ್ದ ಉತ್ತರ ಸಮುದ್ರದೊಳಕ್ಕೆ ಹರಿದು ತುಂಬಿರಬಹುದು. ಪೂರ್ವತೀರದ ಶಿಲಾಪ್ರವಾಹಗಳೂ ಬಹಳ ಹಳೆಯವೆಂದು ಕಾಣುವುವು. ರಾಜಮಹೇಂದ್ರಿಯ ಬಳಿಯೂ ಮತ್ತು ಗೋದಾವರಿಯ ಮುಖಜ ಭೂಮಿಯಲ್ಲಿಯೂ ತೃತೀಯ ಜೀವಯುಗದ ಆದಿಭಾಗದ ಪ್ರಸ್ತರಗಳು ಸಿಕ್ಕಿವೆ.


ನಾಗಪುರದ ಪ್ರಾಂತವನ್ನು ಬಿಟ್ಟಮೇಲೆ ಬೊಂಬಾಯಿನ ವರೆಗೂ ಬೇರಾವ ಪ್ರಸ್ತರಗಳೂ ಸಿಕ್ಕಿಲ್ಲ. ಬೊಂಬಾಯಿ ದ್ವೀಪದಲ್ಲಿ ಇವೆಲ್ಲಕ್ಕಿಂತಲೂ ಈಚಿನ ಕಾಲದ ಪ್ರಸ್ತರಗಳು ಸಿಕ್ಕಿವೆ. ಆ ಮಧ್ಯಪ್ರದೇಶದಲ್ಲಿ ಪ್ರಸ್ತರಗಳು ಸಿಕ್ಕದಿರುವುದಕ್ಕೆ ಕಾರಣ ಬಹುಶಃ ಒಂದಾಗುತ್ತಲೊಂದು ಶಿಲಾಪ್ರವಾಹಗಳು ಹರಿದುದರಿಂದಿರಬೇಕು. ಪ್ರವಾಹಗಳ ನಡುವಿನ ಕಾಲವು ಸಸ್ಯಗಳ ಪ್ರಸರಣೆಗೆ ಸಾಕಷ್ಟು ದೀರ್ಘವಾಗಿಲ್ಲ ದಿರಬೇಕು. ಆದರೂ ಪೂನಾ ಪ್ರದೇಶದಲ್ಲಿ ಜೀವಾವಶೇಷಗಳನ್ನೊಳಕೊಂಡ ಪ್ರಸ್ತರಗಳಿಗಾಗಿ ಹುಡುಕುವುದು ಉಚಿತವೆಂದು ಕಾಣುತ್ತದೆ.

ಇವುಗಳೆಲ್ಲಕ್ಕಿಂತಲೂ ಅತ್ಯಂತ ನವೀನ ಕಾಲದವಾದ ಮಲಬಾರ್ ಹಿಲ್ ಮತ್ತು ಓರ್ಲಿಯ ಪ್ರಸ್ತರಗಳಲ್ಲಿ ಸಣ್ಣ ಸಣ್ಣ ಕಪ್ಪೆಗಳ ಅಸ್ಥಿಪಂಜರಗಳು ಸಿಕ್ಕಿವೆ. ಆದರೆ ಸಸ್ಯಾವಶೇಷಗಳಾವುವೂ ಸಿಕ್ಕಿಲ್ಲ.

ಅಂತೂ ಒಟ್ಟಿನಲ್ಲಿ ಈ ಸಾವಿರಾರು ಅಡಿಗಳಷ್ಟು ದಪ್ಪನಾದ ಶಿಲಾಪ್ರವಾಹಗಳು ತೃತೀಯ ಜೀವಯುಗದ ಆದಿಭಾಗದಲ್ಲೇ ಉಕ್ಕಿ ಹರಿದಿರಬೇಕು.




2.



3.



1.



7. ×300.



9. ×120.



5. ×370.



8. ×300.



6. ×170.



4. ×5.

ಪ್ರವಾಹಗಳ ನಡುವಿನ ಕಾಲಗಳಲ್ಲಿ ಜೀವಾವಶೇಷಗಳನ್ನೊಳಕೊಂಡ ಪ್ರಸ್ತರಗಳು ಶೇಖರವಾದುವು.

ದಖ್ಖನ್ನಿನ ಶಿಲಾಪ್ರವಾಹಗಳು ತೃತೀಯ ಯುಗದವು, ಅದಕ್ಕಿಂತ ಹಿಂದಿನವಲ್ಲ ಎನ್ನುವುದಕ್ಕೆ ಮತ್ತೊಂದು ನಿದರ್ಶನವೆಂದರೆ ಪ್ರಪಂಚದ ಬೇರೆ ಭಾಗಗಳಲ್ಲೂ ಇದೇ ಕಾಲದಲ್ಲಿ ಆದ ಅನೇಕ ಶಿಲಾಪ್ರವಾಹಗಳು. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಎರಡುಲಕ್ಷ ಚದರಮೈಲಿಗಳಷ್ಟು ಪ್ರದೇಶವು ಅದರಿಂದ ಆಚ್ಛಾದಿಸಲ್ಪಟ್ಟಿದೆ. ಹೀಗೆಯೇ ಇನ್ನೂ ಕೆಲವೆಡೆಗಳಲ್ಲಿವೆ.

ದಖ್ಖನ್ನಿನ ಪ್ರಸ್ತರಗಳು ತೃತೀಯ ಜೀವಯುಗದವೆಂಬುದು ಹೊಸದಾದ ವಾದವಲ್ಲ. ನೂರು ವರ್ಷಗಳ ಹಿಂದಿನ ಭೂಮಿಶಾಸ್ತ್ರಜ್ಞರೂ ಅದೇ ಮಾತನ್ನು ಹೇಳಿದ್ದರು. ಆದರೆ ಕಾರಣಾಂತರಗಳಿಂದ ಅನೇಕ ವಾದಗಳಾಗಿ ದಿಕ್ಕು ಕಾಣದಂತಾಗಿದ್ದಿತು. ಈಗ ಸಸ್ಯಜಾತಿಗಳ ಅವಶೇಷಗಳ ನಿದರ್ಶನಕ್ಕೆ ನ್ಯಾಯವಾದ ತೂಕ ಕೊಟ್ಟು ಪರೀಕ್ಷಿಸಿದುದರಲ್ಲಿ ಮೇಲೆ ಹೇಳಿದ ಕಾಲನಿರ್ದೇಶಕ್ಕೆ ಸಹಾಯವಾಯಿತು.

ಕೊನೆಮಾತು

ದಖ್ಖನ್ನಿನ ಪ್ರಸ್ತರಗಳಿಗೂ ಶಿಲಾಪ್ರವಾಹಗಳಿಗೂ ಮತ್ತು ದಕ್ಷಿಣ ಇಂಡಿಯದ ಈಶಾನ್ಯ ಮತ್ತು ದಕ್ಷಿಣ ಪ್ರದೇಶಗಳಲ್ಲಿನ ಶಿಲೆಗಳಿಗೂ ಬಹಳ ಕಾಲದ ಅಂತರವಿದೆ. ಆ ಅಂತರವು ಇನ್ನೂರು ಕೋಟಿ ವರ್ಷಗಳಿರಬಹುದು. ಆದರೆ ಮನುಷ್ಯನೋ ಇತ್ತೀಚಿನ ಒಂದೆರಡು ಘಳಿಗೆಗಳ ಪ್ರಾಣಿ. ಅವನು ಈ ಕಾಲದ ಅಂತರಗಳನ್ನೆಲ್ಲ ಒಂದುಗೂಡಿಸಿ ಸೃಷ್ಟಿಕರ್ತನಿಗೆ ತನ್ನ ಧನ್ಯತೆಯನ್ನು ಅರ್ಪಿಸುತ್ತಾನೆ. ಅವನು ದಕ್ಷಿಣ ಇಂಡಿಯದ ಪ್ರಾಚೀನ ಶಿಲೆಗಳಿಂದ ಮಹಾಬಲಿಪುರದ ದೇವಾಲಯಗಳನ್ನು ಕೊರೆದರೆ, ದಖ್ಖನ್ನಿನ ಅಗ್ನಿಶಿಲೆಗಳಿಂದ ಎಲ್ಲೋರ ಅಜಂತ ಗುಹೆಗಳನ್ನು ಕೊರೆದು ಚಿತ್ರಿಸಿದ್ದಾನೆ.


ಎಚ್. ಸೀತಾರಾಮರಾವ್, ಡಿ.ಎಸ್‌ಸಿ.

ಚಿತ್ರಗಳ ವಿವರ

(ಪಳೆಯುಳಿಕೆಗಳ ಅಳತೆಯನ್ನು ಅಂಕಿಗಳ ಪಕ್ಕದಲ್ಲಿ '×' ಆದಮೇಲೆ ಸೂಚಿಸಿದೆ)


1. ಮಧ್ಯಪ್ರಾಂತದ ಸಾಸರ್ ಬಳಿ ಇರುವ ಡೆಕ್ಕನ್ ಟ್ರ್ಯಾಪ್ ಗುಡ್ಡಗಳು. ಇದರ ಬಳಿ ಅನೇಕ ಜೀವಾವಶೇಷಗಳು ಸಿಕ್ಕಿದುವು.
2. ವಾರ್ಧಾ ಡಿಸ್ಟ್ರಿಕ್ಟಿನಲ್ಲಿರುವ ನವರ್‌ಗಾಂವ್ ಬಳಿಯ ದೃಶ್ಯ.
3. ಮಹಾಬಲೇಶ್ವರದ ಬಳಿ ಪಶ್ಚಿಮಘಟ್ಟಗಳಲ್ಲಿನ ಕೊರಕಲು. ಚಿತ್ರದಲ್ಲಿ ಡೆಕ್ಕನ್ ಟ್ರ್ಯಾಪ್ ಪದರಗಳನ್ನು ಕಾಣಬಹುದು.
4. ಸಾಸರ್ ಬಳಿ ಸಿಕ್ಕಿದ ಚಣಚುಕಲ್ಲಿನ ರೂಪಾಂತರವಾದ ಕೆರೆಮೆಕ್ಕಲು. ಪದರಗಳ ನಡುವೆ ಗೈರೊಗೊನೈಟಿಸ್ ಕಾಯಿಗಳಿವೆ. ಅಜ್ಜೊಲಾದ ಭಾಗಗಳೂ, ಮೀನಿನ ಮೈಸಿಪ್ಪೆಯೂ (ಚಿತ್ರ 29) ಇದರಲ್ಲಿ ಸಿಕ್ಕಿದುವು.
5. ಪೆರಿಸ್ಪೋರಿಯಸೈಟಿಸ್ ವೇರಿಯಾನ್ಸ್, ಸಾನಿ ಮತ್ತು ರಾವ್. ಅಣಬೆ ಸಸ್ಯದ ವೃದ್ಧೀಕರ ಣಾಂಗಗಳು ಮತ್ತು ಎಳೆಗಳು.
6. ಪೇಲಿಯೋಸಾರ್ಡೀರಿಯ ಲ್ಯಾಗಿನ, ಸಾನಿ ಮತ್ತು ರಾವ್. ಸೋರೆಕಾಯಿಯಾಕಾರದ ಅಣಬೆ ಸಸ್ಯದ ವೃದ್ಧೀಕರಣಾಂಗ.
7. ಅಜ್ಜೊಲಾ ಇಂಟರ್‌ಟ್ರ್ಯಾಪಿಯ, ಸಾನಿ ಮತ್ತು ರಾವ್. "ಮ್ಯಾಸುಲ" ಎಂಬ ಅಂಗ.
8. ಅಂಥದೇ ಇನ್ನೊಂದು: ಅದಕ್ಕೆ ಸೇರಿದ ಅಂಬಿನ ತುದಿಯಂತಿರುವ ಕೊಕ್ಕೆಗಳನ್ನು ಬಲಗಡೆ ನೋಡಬಹುದು.
9. ಅದೇ ಸಸ್ಯದ ವೃದ್ಧೀಕರಣಾಂಗ. ಹಿಂದಿನ ಚಿತ್ರದಲ್ಲಿ ಕಾಣುವ ಕೊಕ್ಕೆಗಳು ಇದಕ್ಕೆ ತಗುಲಿಕೊಳ್ಳುತ್ತವೆ.
10. ಮ್ಯಾಸುಲೈಟಿಸ್ ಸೀಲೀಟಿಸ್, ಸಾನಿ ಮತ್ತು ರಾವ್, ಅಜ್ಜೊಲಾ ಸಂಬಂಧದ ಮತ್ತೊಂದು ಸಸ್ಯದ "ಮ್ಯಾಸುಲ" ಎಂಬ ಅಂಗ.
11. ಅಂಥವುಗಳ ಗುಂಪೊಂದು, ಬಹುಶಃ ಒಂದೇ ಸಸ್ಯಕ್ಕೆ ಸೇರಿದವಿರಬೇಕು.
12. ಸಾಸರೊಸ್ಪರ್ಮಂ ಫರ್ಮರೈ, ಸಾನಿ ಮತ್ತು ಶ್ರೀವಾಸ್ತವ. ಸಾಸರ್ ಬಳಿ ಸಿಕ್ಕಿದ ಒಂದು ಬೀಜ
13. ವೀರಾಕಾರ್ಪಾನ್ ಹೆಕ್ಸಾಸ್ಪರ್ಮಂ, ಸಾನಿ. ಹಿಪ್ಪಲಿನೇರಳೆಯಂಥ ಒಂದು ಕಾಯಿ.
14. ಎನಿಗ್ಮೊಕಾರ್ಪಾನ್ ಪರಿಜಾಯ್ಸೆ, ಸಾನಿ. ಅಡ್ಡಲಾಗಿ ಕತ್ತರಿಸಿರುವ ಒಂದು ಕಾಯಿ.
15. ಅಮೋಮೊಕಾರ್ಪಂ ಅಫಿನಿ, ಸಾನಿ. ಏಲಕ್ಕಿಯಂತಹ ಒಂದು ಕಾಯಿ. ಪಳೆಯುಳಿಕೆಯ ಜೇಡಿಮಣ್ಣಿನ ಪ್ರತಿಯಿಂದ ತೆಗೆದ ಚಿತ್ರ.
16. ನೈಪ (ನೈಪಡೈಟಿಸ್) ಹಿಂದಿ, ರೋಡೆ. ಮೋಗಾಂವ್ ಕಲಾನ್ ಬಳಿಯಿಂದ.
17. ಅದನ್ನೇ ಅಡ್ಡಲಾಗಿ ಕತ್ತರಿಸಿರುವುದು.
18. ಪಾಲ್ಮೊಕಾರ್ಪಾನ್ (ಇರಿಯಾರ್ಟೈಟಿಸ್) ಟಾಕ್ಲಿಯೆನ್‌ಸಿಸ್, ಸಾನಿ. ತೆಂಗಿನಜಾತಿಯ ಮರದ ಕಾಯಿ. ನಾಗಪುರದ ಬಳಿಯಿರುವ ಟಾಕ್ಲಿಯಿಂದ.
19. ಟ್ರೈಕಾಕ್ಕೈಟಿಸ್ (ಪಾಲ್ಮೊಕಾರ್ಪಾನ್) ಟ್ರೈಗೊನಂ, ರೋಡೆ. ಹೊರಸಿಪ್ಪೆಯು ಅಲ್ಲಲ್ಲಿ ಸವೆದುಹೋಗಿದೆ.


10. × 280.



11. × 45.


12. × ca. 9½.



15. × 1.


14. × 2.



18. × 1.


17. × 1.


13. × 1.


21. × $\frac{4}{11}$.


16. × 1.





22. × 10.



23. × 10.

25. × 1.



26. × 1.




29. × $4\frac{1}{3}$.




24. × 1.



27. × 1.




28. × $4\frac{1}{3}$.



20. × 1.



19. × 1.



30. × 1

20. ಅದನ್ನೇ ಅಡ್ಡಲಾಗಿ ಕತ್ತರಿಸಿರುವುದು.
21. ಪಾಲ್ಮಾಗ್ಸಿಲಾನ್ ಇನ್‌ಟರ್‌ಟ್ರ್ಯಾಪಿಯಂ. ತೆಂಗಿನಜಾತಿಯ ಮರದ ಭಾಗ, ಉದ್ದ ೨೧ ಅಂಗುಲ, ವಾರ್ಧಾದ ಬಳಿಯಿಂದ.
22. ಪಾಲ್ಮಾಗ್ಸಿಲಾನ್ ಸುಂದರಂ, ಸಾನಿ. ಅಡ್ಡಲಾಗಿ ಕತ್ತರಿಸಿರುವ ತೆಂಗಿನಜಾತಿಯ ಮರದ ಭಾಗ. ಕಪ್ಪಾಗಿರುವುದು ನಾರು, ಗುಂಡಾಗಿರುವ ರಂಧ್ರಗಳು ವೃಕ್ಷದ ನಾಳಗಳು.
23. ರೈಸ್ಲೊಪಾಲ್ಮಾಗ್ಸಿಲಾನ್. ಅದೇ ಜಾತಿಯ ವೃಕ್ಷದ ಬೇರನ್ನು ಅಡ್ಡಲಾಗಿ ಕತ್ತರಿಸಿರುವುದು.
24. ಟಾಕ್ಲಿಯಾಸ್ಟ್ರೊಬಸ್ ಆಲೀಟಸ್, ಸಾನಿ. ದೇವದಾರುಜಾತಿಯ ವೃಕ್ಷದ ಕಾಯಿ.
25. ಅದನ್ನೇ ಅಡ್ಡಲಾಗಿ ಕತ್ತರಿಸಿರುವುದು.
26. ಅದೇ ಜಾತಿಯ ಮತ್ತೊಂದು ಕಾಯಿ.
27. ಇಂಡಾಸ್ಟ್ರೊಬಸ್ ಬೈಫಿಡೊಲೆಪಿಸ್, ಸಾನಿ. ಮತ್ತೊಂದು ಅದೇ ಜಾತಿ ಗಿಡದ ಕಾಯಿ.
28. ಮತ್ತು 29. ಮೀನಿನ ಮೈಸಿಪ್ಪೆ. ಈಗಿನ ಮತ್ತು ಪ್ರಾಚೀನತರದವನ್ನು ಹೋಲಿಸಿದೆ. (28, ಈಗಿನ ಪ್ರಿಸ್ಟೊಲೆಪಿಸ್ ಫ್ಯಾಸಿಯೇಟಸ್ ಎಂಬ ಮೀನಿನದು).
30. ಬೊಂಬಾಯಿಯ ಹತ್ತಿರವಿರುವ ಓರ್ಲಿಯಲ್ಲಿ ಸಿಕ್ಕುವ ಸಣ್ಣ ಕಪ್ಪೆಗಳ (ಇಂಡೊಬಟ್ರ್ಯಾಕಸ್) ಎರಡು ಅಸ್ಥಿಪಂಜರಗಳು.

ಆ ನೋಟದ ಹೇಳಿಕೆ

ತೊಳಗುವ ಸೂರ್ಯನ ಕಿರಣಾವಳಿಯಿಂ
ಪಸದನಗೊಂಡಿದೆ ಬಾಂದಳವು.
ಮೌನವು ನೆಲಸಿಹ ಮುದ್ದಿನ ಹೊಲಗಳು
ಜಲಧಿಯ ತೆರದಲಿ ಹಬ್ಬಿಹುವು.
ಚೆಲುವಿನ ನಿಲಯದ ಪಡಿಯರರಂದದಿ
ತಳಿತಿಹ ತರುಗಳು ನಿಂದಿಹುವು.
ಮೆಲುದನಿಯಿಂದಲಿ ಸೃಷ್ಟಿಯ ಮಹಿಮೆಯ
ಪೊಗಳುತ ಖಗತತಿ ಹಾರುತಿದೆ.
ಸುಮಗಳ ಹೃದಯದ ಕಂಪನು ಕದಿಯುತ
ತಣ್ಣೆಲರೊಯ್ಯನೆ ತೀಡುತಿದೆ.
ಬೆಡಗನು ಬೀರುತಲಿಹುದೀ ತಾಣವು
ಕಂಗಳ ಮೋಹಿಪ ಚಿತ್ರದೊಲು.
ಶಾಂತಿಯ ಸಾರುವ ಬಯಸುವ ಮನುಜನೆ,
ತಳುವದೆ ಬಾರೈ ಎನ್ನೆಡೆಗೆ!
ಬಗೆಯನು ದಹಿಸುವ ಚಿಂತೆಯ ಚಿತೆಯನು
ಮೋದದ ಜಲದಿಂ ನದಿಪುವೆನು!
ದುಃಖವ ಮಗ್ಗಿಸಿ ಅಗ್ಗದ ಸೌಖ್ಯವ
ಪಡೆವಾ ಹದನನು ನಿರವಿಪೆನು!
ನುಣ್ಪಸಲೆಯ ಪರ್ಯಂಕದಿ ಪವಡಿಸಿ
ಸುಳಿಯುವ ಗಾಳಿಗೆ ಮೈಯೊಡ್ಡು!
ಸೇದೆಯ ಕಳೆಯುತ, ಶಾಂತಿಯ ಸವಿಯುತ
ವಾರಿಸು ಬಾಳಿನ ಬವಣೆಯನು!
ಚೆಂದದ ನುಡಿಯೊಳು ಸೊಬಗನು ಬಣ್ಣಿಸ-
ಲೀತಕೆ ತೊಡಗುವೆ ಕಬ್ಬಿಗನೆ?
ನಾಕದ ಗಾಡಿಯು ಜರೆವೀ ನೋಟವ
ಪಡಿಯಿಡಲರಿದೈ ನಿನ್ನಿಂದ!
ಮೂಕನ ತೆರದಲಿ ಪ್ರಕೃತಿಯ ಸಿರಿಯನು
ದಿಟ್ಟಿಸಿ ನಲಿಯೈ ಮೈಮರೆತು!
ಒಸರುವ ಹರ್ಷದ ಕಂಬನಿ ಸುಮದಿಂ-
ದೆನ್ನನು ಪೂಜಿಸು ಭಕ್ತಿಯಲಿ!

—ಎ. ಸಿ. ಶಂಕರಭಾರತಿ.

“ವೀರಶೈವ ವಾಙ್ಮಯಾವತಾರ”ವನ್ನು ಕುರಿತು

“ಪ್ರಬುದ್ಧಕರ್ಣಾಟಕ”ದ ಗತಸಂಚಿಕೆಯಲ್ಲಿ ಶ್ರೀಮಾನ್ ಸಿ. ನಾರಾಯಣ ರಾವ್, ಎಂ.ಎ., ಪಿಎಚ್.ಡಿ. ಅವರ “ವೀರಶೈವ ವಾಙ್ಮಯಾವತಾರ”ವೆಂಬ ಭಾಷಣವನ್ನು ಪ್ರಕಟಿಸಲಾಗಿದೆ. ಅದರಲ್ಲಿರುವ ಅನೇಕ ವಿಧಾನಗಳು ತರ್ಕಶುದ್ಧ ವಾಗಿಲ್ಲದುದರಿಂದ ಅವುಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಪ್ರಕಟಿಸುತ್ತಿರುವೆನು.

“. . . . ವೀರಶೈವ ಮತಕ್ಕೆ ಪ್ರಮಾಣವೆಂದು ಹೇಳಲ್ಪಡುವ ‘ಶೈವಸಿದ್ಧಾಂತ ಶಿಖಾಮಣಿ’ ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿದೆ. ಈ ಗ್ರಂಥವು ಈಚೆಯದು . . . . ಇದನ್ನು ವೀರಣಾರಾಧ್ಯನ ಪೌತ್ರನೂ ಸಿದ್ಧಯ್ಯನ ಪುತ್ರನೂ ಆದ ರೇವಣನೆಂಬವನು ರೇಣುಕಕೃತಗ್ರಂಥಕ್ಕೆ ಟೀಕಾರೂಪವಾಗಿ ರಚಿಸಿದ್ದಾನೆ” ಎಂಬುದು ರಾಯರ ಮೊದಲನೆಯ ವಿಧಾನವಾಗಿದೆ. ಇದು ತುಂಬಾ ಪ್ರಾಮಾದಿಕವಾಗಿದೆ. ವೀರಶೈವ ವನ್ನು ಶೈವವೆಂದು ಸಾಮಾನ್ಯವಾಗಿ ಹೇಳಬಹುದಾದರೂ ಉದ್ದೇಶ್ಯಪೂರ್ವಕವಾಗಿ ಶೈವವೆನಲಾಗದು. ತೆಲುಗು ದೇಶದ ‘ಆರಾಧ್ಯರು’ ತಮ್ಮನ್ನೂ ಕೆಲವು ವೀರಶೈವ ಗ್ರಂಥಗಳನ್ನೂ ‘ಶೈವ’ ಶಬ್ದದಿಂದ ವ್ಯವಹಾರಮಾಡುವುದುಂಟು. ಇದನ್ನು ವಿಮರ್ಶಿಸದೆ ಅವರು ಪ್ರಕಟಿಸಿದ ಹಾಗೆ ‘ಶೈವಸಿದ್ಧಾಂತಶಿಖಾಮಣಿ’ ಎಂದು ಬರೆದಿದ್ದಾರೆ. ಇದರ ರೂಢನಾಮವು ‘ಸಿದ್ಧಾಂತಶಿಖಾಮಣಿ’ಯೇ ಆಗಿದೆ. ಗ್ರಂಥ ಕರ್ತನೇ ಪುಸ್ತಕದ ಅಂತ್ಯದಲ್ಲಿ “ಶ್ರೀ ವೇದಾಗಮ ವೀರಶೈವಸರಣಿಂ . . . . ಶ್ರೀ ಸಿದ್ಧಾಂತಶಿಖಾಮಣಿಂ” ಎಂಬ ಶ್ಲೋಕದಿಂದ “ವೀರಶೈವ ಸಿದ್ಧಾಂತ ಶಿಖಾಮಣಿ”ಯನ್ನಾಗಿಯೇ ಸ್ಪಷ್ಟಪಡಿಸಿದ್ದಾನೆ, ಶೈವವಲ್ಲ. ಈ ಗ್ರಂಥವನ್ನು ಸಿದ್ಧಯ್ಯನ ಮಗನಾದ ರೇವಣನು ರಚಿಸಿದ್ದಾನೆಂದು ಶ್ರೀ ನಾರಾಯಣರಾವ್ ಅವರಂತಹ ವಿದ್ವಾಂಸರು ಬರೆದಿದ್ದಾರೆಂಬುದು ವ್ಯಸನಕರವಾದ ವಿಷಯು. ಗ್ರಂಥಾದಿಯ

“ಆಸೀದ್ . . . . ಶಿವಯೋಗೀತಿ ವಿಖ್ಯಾತಃ ॥ ೧೩ ॥
ತಸ್ಯ ವಂಶೇ . . . . ಮುದ್ದದೇವಾಭಿಧಾಚಾರ್ಯಃ ॥ ೧೫ ॥
ತಸ್ಯಾಸೀನ್ನಂದನಃ . . . . ಸಿದ್ಧನಾಥಾಭಿಧಃ ॥ ೧೭ ॥
ತಸ್ಯ ನಂದನಃ . . . . ಅಭವಚ್ಛಿವಯೋಗೀಶಿ ॥ ೨೦ ॥
ನಾಮ್ನಾ ಪ್ರತೀಯತೇ ಲೋಕೇ ಯತ್ಸಿದ್ಧಾಂತಶಿಖಾಮಣಿಃ ॥ ೩೧ ॥

ಈ ಶ್ಲೋಕಗಳಿಂದ ಶಿವಯೋಗಿಯ ಪ್ರಪೌತ್ರನೂ ಮುದ್ದದೇವನ ಪೌತ್ರನೂ ಸಿದ್ಧನಾಥನ ಪುತ್ರನೂ ಆದ ಶಿವಯೋಗಿ ಶಿವಾಚಾರ್ಯನೇ ಸಿದ್ಧಾಂತಶಿಖಾಮಣಿ

ಯನ್ನು ವಿರಚಿಸಿದ್ದಾನೆಂಬುದು ನಿರ್ವಿವಾದವಾಗಿದೆ. ರಾಯರ ಪ್ರಮಾದಕ್ಕೆ ಕಾರಣವೇನೆಂದರೆ ಯೇಲೂರಿನ ಶ್ರೀ ಮಲ್ಲಮಪಲ್ಲಿ ಮಲ್ಲಿಕಾರ್ಜುನ ಶಾಸ್ತ್ರಿಗಳು ೧೮೯೭ರಲ್ಲಿ ತೆಲುಗಕ್ಷರಗಳಿಂದ ಸಿದ್ಧಾಂತಶಿಖಾಮಣಿಯೊಂದನ್ನು ಮುದ್ರಿಸಿದ್ದಾರೆ. ಅವರು ನೊಸಲೆ ರೇವಣಾರಾಧ್ಯನ ಕನ್ನಡ ಟೀಕೆಯಿಂದ ಕೂಡಿದ ಸಂಸ್ಕೃತ ಪ್ರತಿಯನ್ನು ಆಧಾರವಾಗಿರಿಸಿಕೊಂಡು ತೆಲುಗು ಪ್ರತಿಯನ್ನು ಸಿದ್ಧಗೊಳಿಸುವಾಗ ಕನ್ನಡ ಟೀಕೆಯನ್ನು ಬಿಟ್ಟರೂ ನೊಸಲೆ ರೇವಣಾರಾಧ್ಯನ ಟೀಕೆಯ ಆದಿಯಲ್ಲಿರುವ ಕೆಲವು ಶ್ಲೋಕಗಳನ್ನು ಪ್ರಮಾದದಿಂದ ಮೂಲಸಿದ್ಧಾಂತಶಿಖಾಮಣಿಯ ಆದಿಯಲ್ಲಿ ಸೇರಿಸಿ ಮುದ್ರಿಸಿರುವರು. ಆದರೂ ಸಿದ್ಧಾಂತಶಿಖಾಮಣಿಗೆ ಟೀಕೆಯನ್ನು ರಚಿಸುತ್ತೇನೆಂತಲೇ ಆತನು ಹೇಳಿದನೇ ಹೊರತು ಸಿದ್ಧಾಂತಶಿಖಾಮಣಿಯನ್ನು ಆತನೇ ರಚಿಸಿರಬಹುದೆಂಬ ಭ್ರಮೆಗೆ ಅವಕಾಶವಿಲ್ಲ. ಸಿದ್ಧಾಂತಶಿಖಾಮಣಿಯನ್ನು ಮೊಟ್ಟಮೊದಲು ಪ್ರಕಟಿಸಿದ ಕೈ. ವಾ. ವೀರಸಂಗಪ್ಪನವರ ಪ್ರತಿಯನ್ನಾಗಲಿ ವಾರದವರ ಪ್ರತಿಯನ್ನಾಗಲಿ ಆಮೇಲೆ ಮುದ್ರಿತವಾದ ವಿವಿಧಭಾಷೆಯ ಪ್ರತಿಗಳನ್ನಾಗಲಿ ಪ್ರಾಚೀನವಾದ ತಾಳದೋಲೆಯ ಪ್ರತಿಗಳನ್ನಾಗಲಿ ನೋಡಿದರೆ ಈ ಭ್ರಮೆಗೆ ಅವಕಾಶವಿಲ್ಲ. ತಮ್ಮ ಪ್ರತಿಯನ್ನಾದರೂ ರಾಯರು ಸರಿಯಾಗಿ ನೋಡಬಹುದಾಗಿದ್ದಿತು. "ತ್ರೈಲೋಕ್ಯಸಂಪದಾಲೇಖ್ಯ" ಎಂಬ ಶ್ಲೋಕದಿಂದ ಸಿದ್ಧಾಂತಶಿಖಾಮಣಿಯ ಆರಂಭ. ಮಲ್ಲಿಕಾರ್ಜುನಶಾಸ್ತ್ರಿಗಳು ಮುದ್ರಿಸಿದ "ಯಸ್ಸೋಮೇಶ್ವರಲಿಂಗ—"ದಿಂದ "ಮಯಾ ಟೀಕಾ ಕಾರಯತೇ ಶ್ರೀ ಸಿದ್ಧಾಂತಶಿಖಾಮಣೇಃ" ಎಂಬವರೆಗಿರುವ ಶ್ಲೋಕಗಳು ನೊಸಲೆ ರೇವಣಾರಾಧ್ಯನವೆಂಬುದನ್ನು ಸುಲಭವಾಗಿ ತಿಳಿಯಬಹುದು.

ಈ ಗ್ರಂಥವು ಈಚೆಯದೆಂಬ ವಾಕ್ಯದಲ್ಲಿ ರಾಯರ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯದಿದ್ದರೂ ನೊಸಲೆ ರೇವಣಾರಾಧ್ಯನ ಸಮಕಾಲಿಕ ಗ್ರಂಥವ (೧೭ನೆಯ ಶತಮಾನದಲ್ಲಿ ಹುಟ್ಟಿದುದು) ನ್ನಾಗಿ ಅವರು ಊಹಿಸಿದಂತೆ ತೋರುತ್ತದೆ. ಇದೂ ಸಮಂಜಸವಲ್ಲ. ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗಿಂತಲೂ ಪೂರ್ವದಲ್ಲಿ ಕ್ರಿ. ಶ. ೧೧ನೆಯ ಶತಮಾನದಲ್ಲಿ ಪ್ರಸಿದ್ಧನಾಗಿದ್ದ ಶ್ರೀಪತಿ ಪಂಡಿತಾರಾಧ್ಯನು ವಿರಚಿಸಿದ ಶ್ರೀಕರಭಾಷ್ಯದಲ್ಲಿ ಅನೇಕಸಲ ಈ ಸಿದ್ಧಾಂತಶಿಖಾಮಣಿಯು ಸಗೌರವವಾಗಿ ಉದಾಹೃತವಾಗಿರುವದರಿಂದ ಶ್ರೀಪತಿ ಪಂಡಿತನಿಗಿಂತಲೂ ಆ ಗ್ರಂಥವು ಪ್ರಾಚೀನವೆಂದು ನಿಸ್ಸಂದೇಹವಾಗಿ ಸ್ವೀಕರಿಸಬಹುದು. ಶ್ರೀಕರ ಭಾಷ್ಯವನ್ನು ಸಂಪಾದನೆ ಮಾಡಿದ ಶ್ರೀ ಸಿ. ಹಯವದನರಾಯರು ಆ ಭಾಷ್ಯದ ಕಾಲವನ್ನು ೧೪ನೆಯ ಶತಮಾನದವರೆಗೆ ಬಲಾತ್ಕಾರವಾಗಿ ಎಳೆದಿರುವರೆ ಹೊರತು ಅದರಲ್ಲಿ ತಥ್ಯಾಂಶ

ವೇನೂ ಇಲ್ಲ. ಯಾರಿಂದಲೋ ಅನ್ಯರಿಂದ ಇತ್ತೀಚೆಗೆ ಸೇರಿಸಲ್ಪಟ್ಟ ಮಧ್ವಶಬ್ದ ವನ್ನು ಬಹಳವಾಗಿ ನಂಬಿಕೊಂಡು ಶ್ರೀಕಂಠಾಚಾರ್ಯ ಭಾಸ್ಕರಾಚಾರ್ಯರ ಕಾಲವನ್ನೂ ಅಸಮಂಜಸವಾಗಿ ನಿರ್ಣಯಿಸಿ ಶ್ರೀಕರಭಾಷ್ಯದ ಶ್ರೀಪತಿ ಪಂಡಿತನ ಸಮಯವನ್ನೂ ಕೆಳಕ್ಕೆ ತಳ್ಳಿದ್ದಾರೆ. ಹಯವದನರಾಯರ ಶ್ರೀಕರಭಾಷ್ಯ ಪ್ರತಿಗೆ ಮೂಲವಾದ ದೇವಿಡೀ ಜಮೀಂದಾರ್ ಶ್ರೀ ಕಂದುಕೂರು ಬಾಲಸೂರ್ಯ ಪ್ರಸಾದ ಮಹಾಶಯರ ಪ್ರಾಚೀನ ಪ್ರತಿಯಲ್ಲಾಗಲಿ ಸಿಕಿಂದ್ರಾಬಾದಿನ ಪ್ರಾಚೀನ ಬರಹದ ಪ್ರತಿಯಲ್ಲಾಗಲಿ ಮಧ್ವಶಬ್ದವಿಲ್ಲ. ಶ್ರೀಕಂಠಾಚಾರ್ಯನ ಕಾಲವಾದರೂ ಮದ್ರಾಸು ಯೂನಿವರ್ಸಿಟಿಯ "Sivadwaita of Sreekantha" (ಶ್ರೀಕಂಠನ ಶಿವಾದ್ವೈತ) ಎಂಬ ಪುಸ್ತಕದಲ್ಲಿ ಹತ್ತನೆಯ ಶತಾಬ್ದಿಯೆಂದು ನಿರ್ಣೀತವಾಗಿದೆ. ಹಯವದನರಾಯರು ಮಾಡಿದ ಕಾಲಸೂಚನೆಗಳೆಲ್ಲವೂ "ಶ್ರೀಪತಿ ಪಂಡಿತಾರಾಧ್ಯರ ಕಾಲನಿರ್ಣಯ"ವೆಂಬ ಪುಸ್ತಕದಲ್ಲಿ ಸಪ್ರಮಾಣವಾಗಿ ನಿರಾಕರಿಸಲ್ಪಟ್ಟಿವೆ. ಇವರ ಇಂಗ್ಲೀಷು ಪೀಠಿಕೆಯನ್ನು ನೋಡಿ ಸಿದ್ಧಾಂತಶಿಖಾಮಣಿಗೆ ನೊಸಲೆ ರೇವಣಾರಾಧ್ಯನು ಕರ್ತನೆಂಬುದನ್ನೂ ನಾರಾಯಣರಾಯರು ನಂಬಿರಬಹುದು. ಹಯವದನರಾಯರೇನೋ ಮದ್ರಾಸು ಓರಿಯಂಟಲ್ ಲೈಬ್ರರಿಯ ಕೇಟಲಾಗನ್ನು ನೋಡಿ ಕರ್ತೃನಿರ್ಣಯಮಾಡಿಕೊಂಡಿರುವರು. ಮೂಲಗ್ರಂಥವನ್ನು ನೋಡದೆ ಪರಪ್ರತ್ಯಯಮಾಡಿದರೆ ಇದಕ್ಕೂ ಹೆಚ್ಚಿನ ಫಲವಾಗಲಾರದೆಂಬುದು ಸರಿಯೇ! ಶ್ರೀಕಂಠಶಿವಾಚಾರ್ಯನೂ ತನ್ನ ಬ್ರಹ್ಮಸೂತ್ರಭಾಷ್ಯದ ಚತುರ್ಥಾಧ್ಯಾಯ ೪ನೆಯ ಪಾದದ "ಅವಿಭಾಗೇನ ದೃಷ್ಟತ್ವಾತ್" ಎಂಬ ಸೂತ್ರವ್ಯಾಖ್ಯಾನದಲ್ಲಿ ಸಿದ್ಧಾಂತ ಶಿಖಾಮಣಿಯ (೯-೧೪) "ಮುಕ್ತಃ ಶಿವಸಮೋ ಭವೇತ್" ಎಂಬ ಪ್ರಮಾಣ ವನ್ನುದ್ಧರಿಸಿದ್ದಾನೆ. ಇದರಿಂದ ಸಿದ್ಧಾಂತಶಿಖಾಮಣಿಯು ಹತ್ತನೆಯ ಶತಮಾನದಲ್ಲಿ ಪ್ರಸಿದ್ಧವಾಗಿದ್ದಿತೆಂಬುದು ಸ್ಪಷ್ಟವಾಗುತ್ತಿದೆ. ಅದರ ರಚನೆ ಪ್ರತಿಪಾದನೆ ಮೊದ ಲಾದವುಗಳು ಕೂಡ ಅದರ ಪ್ರಾಚೀನತ್ವವನ್ನು ಸೂಚಿಸಲು ಸಮರ್ಥವಾಗಿವೆ.

ಶ್ರೀ ಸಿ. ನಾರಾಯಣರಾಯರೇ ಇತ್ತೀಚೆಗೆ ಪ್ರಕಟಿಸಿದ ತೆಲುಗು ಪಂಡಿತಾ ರಾಧ್ಯ ಚರಿತ್ರೆಯ ಪೀಠಿಕೆಯಲ್ಲಿಯೂ ಪ್ರಬುದ್ಧ ಕರ್ಣಾಟಕದ ಲೇಖದಲ್ಲಿಯೂ ಹಯವದನರಾಯರ ಶ್ರೀಕರಭಾಷ್ಯ ಶ್ರೀಪತಿ ಪಂಡಿತ ಕಾಲನಿರ್ಣಯವನ್ನು ಸರಿಯಾದುದಲ್ಲವೆಂದು ಹೇಳಿ ಶ್ರೀಪತಿ ಪಂಡಿತನು ೧೧ನೆಯ ಶತಮಾನದಲ್ಲಿದ್ದ ನೆಂಬುದನ್ನು ಸ್ವೀಕರಿಸಿದ್ದಾರೆ. ಅವನು ರಚಿಸಿದ ಭಾಷ್ಯದಲ್ಲಿಯೇ ಸಗೌರವವಾಗಿ ಉದ್ಧರಿಸಲ್ಪಟ್ಟ ಸಿದ್ಧಾಂತಶಿಖಾಮಣಿಯ ವಿಷಯವಾಗಿ "ಈ ಗ್ರಂಥವು ಈಚಿ ಯದು" ಎಂದು ಹೇಳುವದಾದರೆ ಹಯವದನರಾಯರ ಪೀಠಿಕೆಯ ಹೊರತು ಶ್ರೀಕರ

ಭಾಷ್ಯವನ್ನಾಗಲಿ ಸಿದ್ಧಾಂತಶಿಖಾಮಣಿಯನ್ನಾಗಲಿ ನಾರಾಯಣರಾಯರು ಅವಲೋಕನೆ ಮಾಡಿಲ್ಲವೆಂತಲೇ ಭಾವಿಸಬೇಕಾಗುವುದು.

ಶ್ರೀ ತೋಂಟದಾರ್ಯರು ಸಿದ್ಧಾಂತಶಿಖಾಮಣಿಗೆ ತತ್ತ್ವದೀಪಿಕೆಯೆಂಬ ಸಂಸ್ಕೃತಟೀಕೆಯನ್ನು ರಚಿಸಿದ್ದಾರೆ. ಅವರು ೧೬ನೆಯ ಶತಮಾನದವರು ಅಂದರೆ ಬಹಳ ಆಧುನಿಕರಾದುದರಿಂದ ಸಿದ್ಧಾಂತಶಿಖಾಮಣಿಯಲ್ಲಿರುವ "ಮುದ್ದದೇವ" ಎಂಬ ಶಬ್ದವನ್ನು ನೋಡಿ ತಮ್ಮ ಕರ್ನಾಟಕದ ಸೋಲಾಪುರದ ಮುದ್ದನ ಗೌಡನೆಂದು ಭ್ರಮಿಸಿ "ಸಿದ್ಧನಾಥ"ನೆಂಬ ಹೆಸರಿಗೆ ಸಿದ್ಧರಾಮನೆಂಬ ವಿಪರೀತಾರ್ಥವನ್ನು ಬರೆದಿದ್ದಾರೆ. ಇದು ಸಹಜವಾಗಿ ಜರುಗಿದ ಪಂಡಿತಪ್ರಮಾದವಾಗಿದೆ. ಇದನ್ನೇ ಪರಮಾರ್ಥವೆಂದು ನಂಬಿ ಸಿದ್ಧಾಂತಶಿಖಾಮಣಿಯ ಕಾಲವನ್ನು ೧೨ನೆಯ ಶತಾಬ್ದಿಯೆಂದು ತಿಳಿದವರೂ ಕೆಲವರುಂಟು. ಇದರಲ್ಲಿ ಎಷ್ಟೂ ಸತ್ಯಾಂಶವಿಲ್ಲ. ತೆಲುಗು ದೇಶದ ಕೊಲನುಪಾಕೆ (ಕುಲ್ಯಪಾಕ)ಯಲ್ಲಿ ಅವತರಿಸಿದ ರೇಣುಕನ ಮಹಿಮೆ ವಿಶೇಷಗಳನ್ನು ಪರಂಪರೆಯಾಗಿ ತನ್ನ ಆಚಾರ್ಯ ವಂಶಪುರುಷರಿಂದ ತಿಳಿದ ಆಂಧ್ರ ದೇಶದವನೇ ಆದ ಶಿವಯೋಗಿ ಶಿವಾಚಾರ್ಯನು ಸಿದ್ಧಾಂತಶಿಖಾಮಣಿಯನ್ನು ರಚಿಸಿರುವನು. ಸಿದ್ಧಾಂತಶಿಖಾಮಣಿಯ ಶ್ಲೋಕಗಳಲ್ಲಿ ಅನೇಕಕಡೆ ಆಂಧ್ರಭಾಷೆಯ ಸಂಪ್ರದಾಯಂತೆ ಯತಿಸ್ಥಾನವನ್ನು ಸಮಾಕ್ಷರ ಮೈತ್ರಿಯಿಂದ ರಚಿಸಿದ ಪಾದಗಳಿರುವದರಿಂದ ಆತನು ಆಂಧ್ರದೇಶದ ಕವಿಯೆಂದು ಸುಲಭವಾಗಿ ತಿಳಿಯಬಹುದು. ಯತಿಸ್ಥಾನದಲ್ಲಿ ಅಕ್ಷರಮೈತ್ರಿಯ ಪದ್ಧತಿಯು ಕನ್ನಡ ಭಾಷೆಯದಲ್ಲ. ಇದರ ವಿಸ್ತಾರವು ಮತ್ತೊಮ್ಮೆ ಪ್ರಕಟಿಸಲಾಗುವುದು. ಸಿದ್ಧರಾಮನಿಗೆ ಶಿವಯೋಗಿಯೆಂಬ ಮಗನಿದ್ದಂತೆಯೂ ಪೌರಾಣಿಕ ಪ್ರತೀತಿಯಿಲ್ಲ. ಸಿದ್ಧಾಂತಶಿಖಾಮಣಿಯಲ್ಲಿಯ ಸಿದ್ಧನಾಥನು ಸೊನ್ನಲಿಗೆಯ ಸಿದ್ಧರಾಮನೆಂದಿಗೂ ಅಲ್ಲ. ಸಿದ್ಧರಾಮನೇ ಆದ ಪಕ್ಷದಲ್ಲಿ ಆ ಹೆಸರನ್ನು ಸ್ಪಷ್ಟವಾಗಿ ಬರೆಯಲು ಛಂದೋಭಂಗಾದಿ ಯಾವ ಪ್ರತಿಬಂಧಕವೂ ಇರಲಿಲ್ಲ. ಮುದ್ದದೇವನು ಮುದ್ದನಗೌಡನೂ ಆಗಲಾರ. ಸೊನ್ನಲಿಗೆಯ ಮುದ್ದನಗೌಡನು ಲಿಂಗಾಂಗಿಯಲ್ಲ. ಸಿದ್ಧಾಂತಶಿಖಾಮಣಿಯ ಮುದ್ದದೇವನು ಅನೂಚಾನವಾಗಿ ಬಂದ ವೀರಶೈವಾಚಾರ್ಯಕುಲದಲ್ಲಿ ಹುಟ್ಟಿದವನೆಂತಲೂ ಇವರೆಲ್ಲರೂ ವೇದಾಗಮವಿಶಾರದರೂ ತಪಸ್ಸಂಪನ್ನರೂ ಆಗಿದ್ದರೆಂತಲೂ ಗ್ರಂಥಕರ್ತೃ ವಂಶಪರಿಚಯದಿಂದ ಸುಲಭವಾಗಿ ತಿಳಿಯತಕ್ಕ ಮಾತಾಗಿದೆ. ಶಿವಯೋಗಯ್ಯ ಮುದ್ದಯ್ಯ ಸಿದ್ಧನಾಥಯ್ಯ ಎಂಬ ಹೆಸರುಗಳು ಕುಲ್ಯಪಾಕದ ಪ್ರಾಚೀನ ಮಾಹೇಶ್ವರರಲ್ಲಿ ಹೆಚ್ಚಾಗಿಯೂ ಈಗ ಸ್ವಲ್ಪವಾಗಿಯೂ ಇವೆ. ರೇಣುಕನಿಗೆ ಸಿದ್ಧನಾಥನೆಂಬ ವಿಶೇಷಣವಿದ್ದಂತೆಯೂ (೨೧–೪೦) ಕುಲ್ಯಪಾಕವೆಂಬ ಕ್ಷೇತ್ರವು ರೇಣುಕನಿಗೆ

ಪ್ರಸ್ಥಲವಾಗಿದ್ದಂತೆಯೂ (೨೧-೩೯) ಸಿದ್ಧಾಂತಶಿಖಾಮಣಿಯಿಂದ ಸ್ಪಷ್ಟವಾಗಿ ತಿಳಿಯುತ್ತಿರುವದರಿಂದ ಈ ಗ್ರಂಥವು ಆಂಧ್ರದೇಶದಿಂದ ಅವತರಿಸಿತೆಂದು ನಿರ್ಣಯಿಸುವದೇ ಸಮಂಜಸವಾಗಿದೆ. ಇದು ಸ್ವಲ್ಪ ಸೂಕ್ಷ್ಮಾಂಶವಾದುದರಿಂದ ಆಧುನಿಕರಾದ ಪೌರಾಣಿಕರೂ ಕೆಲವು ಕರ್ನಾಟಕ ಲೇಖಕರೂ ರೇಣುಕ ರೇವಣಸಿದ್ಧ ಎಂಬ ಹೆಸರುಗಳುಳ್ಳ ಅನೇಕ ವ್ಯಕ್ತಿಗಳನ್ನು ತಿಳಿಯದೆ ತದ್ದೇವಾಡೆಯ ರೇವಣಸಿದ್ಧನಿಗೆ ಗಂಟುಹಾಕಿಕೊಂಡು ರೇಣುಕಾಚಾರ್ಯನ ಕಾಲವನ್ನು ೧೨ನೆಯ ಶತಾಬ್ದವೆಂದು ಬರೆದುಕೊಳ್ಳುತ್ತಿದ್ದಾರೆಯೇ ಹೊರತು ಇದು ಐತಿಹಾಸಿಕ ಸತ್ಯವಲ್ಲ. ರೇಣುಕನ ಉಪದೇಶರೂಪವಾಗಿ ಶಿವಯೋಗಿ ಶಿವಾಚಾರ್ಯನಿಂದ ರಚಿತವಾದ ಸಿದ್ಧಾಂತ ಶಿಖಾಮಣಿಯು ೧೧ನೆಯ ಶತಾಬ್ದದಲ್ಲಿಯೇ ಪ್ರಸಿದ್ಧವಾಗಿದ್ದು ವಿದ್ವದಾದರವನ್ನು ಪಡೆದಿದ್ದಿತೆಂಬುದಕ್ಕೆ ಶ್ರೀಕಂಠ ಶ್ರೀಕರಭಾಷ್ಯಗಳೇ ಸಾಕ್ಷಿಯಾಗಿವೆ.

ಶ್ರೀಕರಭಾಷ್ಯದಲ್ಲಿಯು ಸಿದ್ಧಾಂತವು "ಬಸವನ ಅನಂತರದಲ್ಲಿ ವಿಸ್ತರಿಸಿದ ವೀರಶೈವಸಿದ್ಧಾಂತದಿಂದ ಭೇದಿಸುತ್ತದೆ" ಎಂಬ ವಿಚಿತ್ರಧೋರಣೆಯನ್ನು ಅವರು ಬೈಲಿಗೆ ಹಾಕಿದ್ದಾರೆ. ಶ್ರೀಮಾನ್ ನಾರಾಯಣರಾಯರು ದಯಮಾಡಿ ಮೂಲ ಗ್ರಂಥಗಳಾದ ಶಿವಾಗಮ ಸಿದ್ಧಾಂತಶಿಖಾಮಣಿಗಳನ್ನೂ ಶ್ರೀಕರಭಾಷ್ಯವನ್ನೂ ಸ್ವತಃ ನೋಡಿ ಉಭಯಸಿದ್ಧಾಂತಗಳಿಗೆ ಇರುವ ವಿರೋಧವನ್ನು ಆಯಾ ಗ್ರಂಥಗಳ ಸ್ಥಲ ನಿರ್ದೇಶಪೂರ್ವಕವಾಗಿ ಪ್ರತಿಪಾದಿಸುವದಾದರೆ ತಕ್ಕ ಸಮಾಧಾನವನ್ನು ಬರೆಯಬಹುದು. ಹಯವದನರಾಯರ ಉಪೋದ್ಘಾತವನ್ನೇ ಅನುಸರಿಸಿ ಬರೆಯುತ್ತ ಹೋದರೆ ಪ್ರಯೋಜನವಾಗಲಾರದು. ಶ್ರೀಕರಭಾಷ್ಯದಲ್ಲಿ ಹೇಳಲ್ಪಟ್ಟ ಸೃಷ್ಟಿ, ಸ್ಥಿತಿ, ಲಯ, ವಾಚಿಕ, ಕಾಯಿಕ, ಮಾನಸಿಕ, ಎಂಬ ಷಟ್‌ಸ್ಥಲಗಳು ವೀರಶೈವ ಗ್ರಂಥಗಳಲ್ಲಿ ದೊರೆಯದೆ 'ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ' ಎಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿರುವದರಿಂದ ಪ್ರಾಚೀನ ವೀರಶೈವ ಮತಕ್ಕಿಂತಲೂ ಅರ್ವಾಚೀನ ವೀರಶೈವಮತವು ಬೇರೆ ಇದೆಯೆಂದು ನಾರಾಯಣರಾಯರು ಬರೆದಿದ್ದಾರೆ. ಇದು ಅತ್ಯದ್ಭುತವಾದ ಪೂರ್ವಪಕ್ಷವೆಂದು ಅವರು ನಂಬಿರಬಹುದು. ಭಾಷ್ಯದಲ್ಲಿ ನಿರೂಪಿಸತಕ್ಕ ವಿಷಯಗಳಾವುವೆಂಬುದು ಅವರಿಗೆ ಬೇಕಾಗಿಲ್ಲ. ತಾವು ಕೇಳಿದ ಪ್ರಶ್ನೆಗಳಿಗೆ ಭಾಷ್ಯದಲ್ಲಿ ಉತ್ತರ ದೊರೆತರೆ ಅದನ್ನು ವೀರಶೈವ ಗ್ರಂಥವನ್ನಾಗಿ ಸ್ವೀಕರಿಸಲು ಅವರು ಸಂಸಿದ್ಧರಾಗಿರುವರು. ಇದು ಸಾಮಾನ್ಯವಾದ ಉಪಕಾರವಲ್ಲ. ಮನುಸ್ಮೃತಿಯಲ್ಲಿರುವ ಸ್ಮಾರ್ತಪ್ರಕ್ರಿಯೆಗಳೆಲ್ಲ ಶಂಕರಭಾಷ್ಯದಲ್ಲಿಯೂ ಪಾಂಚರಾತ್ರಾಗಮಪ್ರಕ್ರಿಯೆಗಳೆಲ್ಲ ರಾಮಾನುಜಭಾಷ್ಯದಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ ಎಂಬ ನಂಬಿಕೆಯಿಂದ ಶಿವಾಗಮದ ಪ್ರಕ್ರಿಯೆಗಳಾದ ಏಕೋತ್ತರ ಶತಸ್ಥಲ

ಗಳೂ ಲಿಂಗಧಾರಣವಿಧಾನವೂ ಪಾದಪೂಜಾಪದ್ಧತಿಯೂ ಸಮಾಧಿಮಾಡುವ ಸಲಕರಣಗಳೂ ಶ್ರೀಕರಭಾಷ್ಯದಲ್ಲಿ ವಿವರಿಸಲ್ಪಡದಿರುವದರಿಂದ ಅದು ಅರ್ವಾಚೀನ ವೀರಶೈವರ ಗ್ರಂಥವಲ್ಲವೆಂದು ನಿರ್ಣಯಿಸತಕ್ಕ ಮಹಾನುಭಾವರಿಗೆ ಹೇಳತಕ್ಕುದಿಲ್ಲ. ಶ್ರೀಕರಭಾಷ್ಯವು ಶಿವತತ್ತ್ವ, ಭೇದಾಭೇದ (ಶಕ್ತಿವಿಶಿಷ್ಟಾದ್ವೈತ), ಲಿಂಗಧಾರಣ, ಶಿವಜಗತ್ಕಾರಣತ್ವ, ಶಿವಾಗಮ ಪ್ರಾಮಾಣ್ಯಗಳೆಂಬ ಮುಖ್ಯವಾದ ವಿಷಯಗಳನ್ನು ಸಿದ್ಧಾಂತಗೊಳಿಸಲು ಹುಟ್ಟಿರುವದೇ ಹೊರತು ವೀರಶೈವರ ಎಲ್ಲ ವಿಷಯಗಳನ್ನೂ ಸಂಗ್ರಹಿಸುವದಕ್ಕಲ್ಲ. ಶಿವಪರಬ್ರಹ್ಮನ ಸವಿಶೇಷತ್ವವನ್ನೂ ಸರ್ವಕರ್ತೃತ್ವವನ್ನೂ ಸಿದ್ಧಾಂತಗೊಳಿಸುವ ಪ್ರಸಂಗದಲ್ಲಿ ಅವನಿಗೆ ಸೃಷ್ಟಿಸ್ಥಿತಿಲಯವಾಚಕ ಕಾಯಿಕ ಮಾನಸಿಕ (ಇಚ್ಛಾ ಕ್ರಿಯಾ ಜ್ಞಾನ)ಗಳೆಂಬ ಷಟ್‌ಸ್ಥಲಗಳು ಹೇಳಲ್ಪಟ್ಟಿವೆ. ಅಂದರೆ ಶಿವನ ವಿವಿಧ ಶಕ್ತಿಗಳೇ ಜಗತ್ತಿಗೆ ಉಪಾದಾನಕಾರಣವೆಂಬುದು ನಿರೂಪಿಸಲಾಗಿದೆ. ಇವು ಆರೂ ಶಿವನ ಶಕ್ತಿಗಳೇ ಹೊರತು ಬೇರಲ್ಲ. ಇವು ಸಹಜವಾಗಿ ಸೃಷ್ಟಿ ಸ್ಥಿತಿಲಯ ತಿರೋಧಾನ ಅನುಗ್ರಹಗಳೆಂಬ ಶಿವಾಗಮಗಳ ಪಂಚಕೃತ್ಯಗಳಲ್ಲಿ ಅಂತರ್ಗತವಾಗಿವೆ. ಇವನ್ನೇ ಶ್ರೀಕರ ಭಾಷ್ಯಕಾರನು ಸ್ಥಲಗಳೆಂದು ಹೇಳಿದ್ದಾನೆ. ಇದು ಆತನಿಗೆ ಬಹಳ ಇಷ್ಟವಾದ ವಿಷಯವಾದುದರಿಂದ ಶಿವನಿಗೆ "ಅದ್ವಿತೀಯ ಷಟ್‌ಸ್ಥಲ ಪರಶಿವಬ್ರಹ್ಮ" ಎಂಬ ವಿಶೇಷಣವನ್ನು ಅನೇಕಸಲ ಉಪಯೋಗಿಸಿದ್ದಾನೆ. ಈ ವಿಶೇಷಣವು ಶಿವನ ಹೊರತು ಮತ್ತಾರಿಗೂ ಸಲ್ಲತಕ್ಕುದಲ್ಲವೆಂಬ ಅಭಿಪ್ರಾಯವನ್ನು "ಅದ್ವಿತೀಯ" ಶಬ್ದದಿಂದ ಶ್ರೀಕರಭಾಷ್ಯಕಾರನು ಸಾರಿದ್ದಾನೆ. ಈ ಪ್ರಸಂಗದಲ್ಲಿ ಜೀವನು ಭಕ್ತಾದಿ ಷಟ್‌ಸ್ಥಲಕ್ರಮವನ್ನು ಅನುಸರಿಸಿ ದೇವತ್ವವನ್ನು ಸಂಪಾದಿಸುವ ಪದ್ಧತಿಯು ಶ್ರೀಕರ ಭಾಷ್ಯಕಾರನಿಂದ ನಿರೂಪಿತವಾಗಿಲ್ಲ. ಆದರೆ ಭಾಷ್ಯಕಾರನು ಈ ವಿಷಯವನ್ನೇ ಹೇಳಿಲ್ಲವೆಂಬುದು ಅಸಂಬದ್ಧ ವಿಧಾನವಾಗಿದೆ. ಶ್ರೀಕರ ಭಾಷ್ಯದ ಪ್ರಥಮಾಧ್ಯಾಯ ದ್ವಿತೀಯ ಸೂತ್ರದ ಕಡೆಯ ಭಾಷ್ಯದಲ್ಲಿ—

"ಯದ್ಭಕ್ತಸ್ಥಲಮಿತ್ಯಾಹುಸ್ತತ್ಸರ್ವಜ್ಞತ್ವಮುಚ್ಯತೇ |
ಯನ್ಮಾಹೇಶ್ವರಕಂ ನಾಮ ಸಾ ತೃಪ್ತಿರ್ಮಮ ಶಾಂಕರಿ ||
ಯತ್ಪ್ರಸಾದಾಭಿಧಂ ನಾಮ ತದ್ಬೋಧೋ ಮೇ ನಿರಂಕುಶಃ |
ಯತ್ಪ್ರಾಣಲಿಂಗಕಂ ನಾಮ ತತ್ಸ್ವಾತಂತ್ರ್ಯಮುದಾಹೃತಂ ||
ಯದಸ್ತಿ ಶರಣಂ ನಾಮ ಹ್ಯಲುಪ್ತಾ ಶಕ್ತಿರುಚ್ಯತೇ |
ಯದೈಕ್ಯಸ್ಥಲಮೂರ್ಧ್ವಸ್ಥಂ ಹ್ಯನಂತಾ ಶಕ್ತಿರುಚ್ಯತೇ ||"

(ಇತಿ ಜನ್ಮಾದ್ಯಧಿಕರಣಾಂತೇ)

ಎಂದು ಭಕ್ತ, ಮಾಹೇಶ್ವರ, ಪ್ರಸಾದ, ಪ್ರಾಣಲಿಂಗ, ಶರಣ, ಐಕ್ಯ, ಸ್ಥಲಗಳನ್ನು ಭೇರೀನಿನಾದದಿಂದ ಹೇಳಿರುವುದು ಪುಸ್ತಕ ನೋಡದವರಿಗೆ ಗೋಚರವಾಗುವುದಿಲ್ಲವಷ್ಟೆ!

ವೀರಶೈವನಿಗೆ ಆರು ಸ್ಥಲಗಳೇ ಅಲ್ಲ. ತದಂತರ್ಗತಗಳಾದ ನೂರೊಂದು ಸ್ಥಲಗಳಿವೆ. ಇವೆಲ್ಲವೂ ಶಿವಾಗಮಗಳಲ್ಲಿಯೂ ಸಿದ್ಧಾಂತಶಿಖಾಮಣಿಯಲ್ಲಿಯೂ ಹೇಳಿರುವದನ್ನು ತಿಳಿಯದೆ "ಈ ವಿವರಣವು ಎಂದಿನಿಂದ ಬರುತ್ತಿದೆಯೋ ಹೇಳಲಿಕ್ಕೆ ಆಧಾರಗಳಿಲ್ಲ" ವೆಂದು ನಾರಾಯಣರಾಯರು ಚಿಂತಿಸುತ್ತಿದ್ದಾರೆ. ಅವರ ಈ ಬರಹವು ಕೇವಲ ನಿರಾಧಾರವಾಗಿದೆ. ವೀರಶೈವಮತದ ಗ್ರಂಥಗಳನ್ನು ಅವಲೋಕಿಸದೆ ಕೇವಲ ಊಹೆಗಳಿಂದಲೇ ಮತಚರಿತ್ರೆಯನ್ನೂ ತತ್ತ್ವಗಳನ್ನೂ ನಿರೂಪಿಸುವುದು ಸುಲಭವಲ್ಲ.

ಶಿವತತ್ತ್ವಸಾರವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನು ರಚಿಸಿರುವುದು ಆಂಧ್ರದೇಶದಲ್ಲಿ ಸುಪ್ರಸಿದ್ಧವಾದ ವಿಷಯ. ಅದನ್ನು ಪ್ರಕಟಿಸಿದ ಆಂಧ್ರಸಾಹಿತ್ಯ ಪರಿಷತ್ತಿನವರೂ ಶ್ರೀ ಕೊ|| ಲಕ್ಷ್ಮಣರಾಯರಂತಹ ಉದ್ದಾಮ ಪರಿಶೋಧಕರೂ ಅದನ್ನು ಪಂಡಿತಾರಾಧ್ಯರ ಕೃತಿಯೆಂದೇ ನಿರ್ಣಯಿಸಿದ್ದಾರೆ. ಆ ಗ್ರಂಥದಲ್ಲಿ ಸ್ವತಃ ಮಲ್ಲಿಕಾರ್ಜುನ ಪಂಡಿತನೇ—

ಒಂಡೇಮಿ ಮಲ್ಲಿಕಾರ್ಜುನ
ಪಂಡಿತುಡನ ನುಂಡುಕಂಟಿ ಪ್ರಮುಖುಲಲೋ ನೆ
ನ್ನಂಡೊಕೊ ನೀ ಯಾಜ್ಞೋನ್ನತಿ
ನುಂಡಂ ಗಾಂತು ನನಿ ಕೋರುಚುಂಡುದು ರುದ್ರಾ

ಎಂಬ ಪದ್ಯದಿಂದ ತಾನೇ ಈ ಶಿವತತ್ತ್ವಸಾರವನ್ನು ರಚಿಸಿದ್ದಾನೆಂಬುದನ್ನು ಸ್ಪಷ್ಟಗೊಳಿಸಿದ್ದಾನೆ. ಆತನ ಅನಂತರದಲ್ಲಿದ್ದ ಪಾಲ್ಕುರಿಕಿ ಸೋಮನಾಥನು ತನ್ನ ಪಂಡಿತಾರಾಧ್ಯ ಚರಿತ್ರೆಯ ದೀಕ್ಷಾಪ್ರಕರಣದಲ್ಲಿ—

ಅಂತ ಬಂಡಿತಮಲ್ಲಿಕಾರ್ಜುನಪ್ರಭುವು. . . .
ಶಿವತತ್ತ್ವಸಾರ ಸಂಚಿತ ಮಹಾಮಹಿಮ
'ಶಿವತತ್ತ್ವಸಾರ'ಮರ್ಕ ಶಿವಕೃತಿ ಬೊಗಡು

ಎಂಬ ಅಂಶದಿಂದಲೂ ಚತುರ್ವೇದಸಾರದಲ್ಲಿಯ ಮತ್ತೊಂದು ಪದ್ಯದಿಂದಲೂ ಮಲ್ಲಿಕಾರ್ಜುನ ಪಂಡಿತಾರಾಧ್ಯನೇ ಆ ಗ್ರಂಥವನ್ನು ರಚಿಸಿದ್ದಾನೆಂದು ಹೇಳಿದ್ದಾನೆ. ಆಂಧ್ರಲೋಕವೆಲ್ಲವೂ ಇದನ್ನೇ ನಿಜವೆಂದು ತಿಳಿದಿದೆ. ಇದೇ ಡಾ|| ನಾರಾಯಣರಾಯರೂ ಇತ್ತೀಚೆಗೆ ತಾವು ಪ್ರಕಟಿಸಿದ ಆಂಧ್ರ ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯಲ್ಲಿ (ಪುಟ ೭೯) ಶಿವತತ್ತ್ವಸಾರವನ್ನು ಪಂಡಿತಾರಾಧ್ಯನ ಕೃತಿಯೆಂತಲೇ ಬರೆದಿದ್ದಾರೆ. ಆದರೆ ಪ್ರಬುದ್ಧ ಕರ್ಣಾಟಕದ ಗತ ಲೇಖದಲ್ಲಿ "ಮಲ್ಲಿಕಾರ್ಜುನ ಪಂಡಿತಾರಾಧ್ಯನು ಶಿವತತ್ತ್ವಸಾರವನ್ನು ಬರೆಯಲಿಲ್ಲವೆಂದೇ ನನ್ನ ಅಭಿಪ್ರಾಯ" ವೆಂದು ಸಾರಿದ್ದಾರೆ. ೧೨ನೆಯ ಶತಾಬ್ದಿಯ ಇಷ್ಟು ಸುಪ್ರಸಿದ್ಧವಾದ ಗ್ರಂಥವನ್ನು ೧೪ನೆಯ

ಶತಮಾನದ ವರೆಗೆ ಎಳೆಯುವದಕ್ಕಾಗಿ ಅವರು ತೋರಿಸಿದ ಯುಕ್ತಿಯು ಹೀಗಿದೆ— "ಸೋಮನಾಥನ ಪಂಡಿತಾರಾಧ್ಯ ಚರಿತ್ರದಲ್ಲಿ ಶಿವತತ್ತ್ವಸಾರವೆಲ್ಲಾ ಪ್ರತ್ಯಕ್ಷ್ಷರವೂ ಸೇರಿದೆ. ಸೋಮನಾಥನಂತಹ ಮಹಾತ್ಮರಿಗೆ ಗ್ರಂಥಚೌರ್ಯವನ್ನು ಆಪಾದಿಸುವದು ನ್ಯಾಯವಲ್ಲ. . . . ತಾನೇ ತನ್ನ ಗ್ರಂಥದಿಂದ ಕೆಲವು ಭಾಗಗಳನ್ನು ತೆಗೆದು ಪಂಡಿತಾರಾಧ್ಯನ ಹೆಸರಿನಿಂದ ಪ್ರಕಟಿಸಿರಬಹುದೆಂದು ನನಗೆ ತೋರುತ್ತದೆ".

ಸೋಮನಾಥನಂತಹ ಮಹಾತ್ಮನು ಗ್ರಂಥಚೌರ್ಯಮಾಡುವುದು ಅನುಚಿತವಾಗಿದ್ದರೆ, ತಾನು ಸೃಷ್ಟಿಸಿದ ಗ್ರಂಥವನ್ನು ಸುಪ್ರಸಿದ್ಧ ಪಂಡಿತಶಿರೋಮಣಿಯಾದ ಮಲ್ಲಿಕಾರ್ಜುನ ಪಂಡಿತನ ಹೆಸರಿನಿಂದ ಪ್ರಕಟಿಸಿದನೆಂಬುದು, "ಮದ್ಯಪಾನ ಮಾಡಿಲ್ಲ, ಮಾಂಸಭಕ್ಷಣ ಮಾಡಿದ್ದಾನೆ" ಎಂಬ ಹಾಗಿದೆ. ಅಖಂಡ ಪಂಡಿತನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನಿಂದ ಅನೇಕ ಗ್ರಂಥಗಳು ರಚಿಸಲ್ಪಟ್ಟಿದ್ದರೂ ಸೌಭಾಗ್ಯವಶದಿಂದ ಶಿವತತ್ತ್ವಸಾರವೊಂದು ಮಾತ್ರ ಲಭಿಸಿದೆ. ಅದು ಶೈಲಿಯಲ್ಲಿಯೂ ವಿಷಯನಿರೂಪಣ ಪದ್ಧತಿಯಲ್ಲಿಯೂ ಪ್ರತ್ಯೇಕತೆಯುಳ್ಳದ್ದಾಗಿ ಸೋಮನಾಥನ ಕವಿತೆಗಿಂತಲೂ ಭಿನ್ನತೆಯನ್ನು ಸ್ಪಷ್ಟಗೊಳಿಸಲು ಸಮರ್ಥವಾಗಿದೆ. ಅದನ್ನು ಸೋಮನಾಥನು ರಚಿಸಿರುವನೆಂಬುದು ಕೇವಲ ಸಾಹಸದ ಮಾತು. ಅದನ್ನು ನೋಡಿಯೇ ಸೋಮನಾಥನು ಅನುಭವಸಾರವನ್ನೂ ಕಾಕತಿ ಗಣಪತಿ ದೇವನು ಶಿವಯೋಗಸಾರವನ್ನೂ ರಚಿಸಿದ್ದಾರೆ. ಅನುಭವಸಾರವೆಂಬ ಕೃತಿಯಲ್ಲಿಯೇ ಶಿವತತ್ತ್ವಗಳನ್ನು ಸೋಮನಾಥನು ನಿರೂಪಿಸಿರುವಾಗ ಮತ್ತೊಂದು "ಶಿವತತ್ತ್ವಸಾರ"ವನ್ನು ಬರೆದು ಪಿಷ್ಟಪೇಷಣಮಾಡುವ ಆವಶ್ಯಕತೆಯೇ ಇಲ್ಲ. ಸೋಮನಾಥನು ಆಂಧ್ರಭಾಷಾ ಪಾರಂಗತನೂ ವೇದವೇದಾಂತಾಭಿಜ್ಞನೂ ಆದ ಪ್ರೌಢಕವಿಯಾಗಿದ್ದಾನೆ. ಅವನು ವೇದೋಪನಿಷತ್ಸಾರಗಳನ್ನು ಹೇಳುವಾಗ ತನ್ನ ಕವಿತೆಯಲ್ಲಿ ಆಯಾ ವೇದವಾಕ್ಯಗಳನ್ನೇ ಹೊಂದಿಸಿದ್ದಾನೆ. ಇಂತಹ ಪ್ರಚಂಡ ಪ್ರತಿಭೆಯಿಂದ ಆತನ ದ್ವಿಪದಕಾವ್ಯವು ತುಂಬಿತುಳುಕುತ್ತಿದೆ. ಅದರಂತೆಯೇ ತನ್ನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಉಪದೇಶ ವಿಶೇಷಗಳನ್ನು ತಿಳಿಸುವದಕ್ಕಾಗಿ ಆತನ ಶಿವತತ್ತ್ವಸಾರವನ್ನೆ ಆಯಾ ವಾಕ್ಯಗಳಲ್ಲಿ ಸಂಗ್ರಹಿಸಿ ಸೋಮನಾಥನು ನಿರೂಪಿಸುತ್ತ ಗ್ರಂಥರಚನೆ ಮಾಡಿರುವುದು ಸಯುಕ್ತಿಕವಾಗಿಯೂ ಸಂಪ್ರದಾಯಶುದ್ಧವಾಗಿಯೂ ಇದೆ. ಪಂಡಿತಾರಾಧ್ಯನ ಸಿದ್ಧಾಂತವನ್ನು ಪಂಡಿತಾರಾಧ್ಯನ ವಾಕ್ಯಗಳಿಂದಲೇ ಹೇಳಿರುವ ಪದ್ಧತಿಯು ಪ್ರಶಂಸನೀಯವಾದುದಲ್ಲವೆ? ಇದನ್ನೇ ಗ್ರಂಥಚೌರ್ಯವೆಂದು ಹೇಳುವದಾದರೆ ಸುಪ್ರಸಿದ್ಧ ಆಚಾರ್ಯರ ಗ್ರಂಥಗಳನ್ನೆಲ್ಲ ಆಧುನಿಕಕಲ್ಪಿತಗಳೆನ್ನಬಹುದು. ವಿದ್ಯಾರಣ್ಯರ ಪಂಚದಶ್ಯಾದಿ ಗ್ರಂಥಗಳಲ್ಲಿ

ಶಾಂಕರಭಾಷ್ಯದ ಅನೇಕ ಸಿದ್ಧಾಂತವಾಕ್ಯಗಳು ತುಂಬಿರುವದರಿಂದ ವಿದ್ಯಾರಣ್ಯರೇ ಶಂಕರಭಾಷ್ಯವನ್ನು ಹುಟ್ಟಿಸಿರಬಹುದಲ್ಲವೆ! ಅಪ್ಪಯ್ಯದೀಕ್ಷಿತರ ರತ್ನತ್ರಯಪರೀಕ್ಷೆ, ಶಿವಾದ್ವೈತನಿರ್ಣಯ, ಶಿಖರಿಣೀಮಾಲಾ ಮೊದಲಾದ ಗ್ರಂಥಗಳಲ್ಲಿ ಶ್ರೀಕಂಠ ಶಿವಾಚಾರ್ಯನ ಭಾಷ್ಯಪಂಕ್ತಿಗಳೂ ಸಿದ್ಧಾಂತವೂ ತುಂಬಿರುವದರಿಂದ ಶ್ರೀಕಂಠ ಭಾಷ್ಯವನ್ನು ಅಪ್ಪಯ್ಯದೀಕ್ಷಿತರೇ ಹುಟ್ಟಿಸಿರಬಹುದು. ಹೀಗೆಯೇ ಅನೇಕ ಗ್ರಂಥ ಗಳನ್ನು ತಲೆಕೆಳಗೆ ಮಾಡಬಹುದು.

ಶಿವತತ್ತ್ವಸಾರದ ಆಧುನಿಕತ್ವವನ್ನು ಹೇಳುವದರಲ್ಲಿ ಒಂದು ರಹಸ್ಯವಿದೆ. ಆ ಗ್ರಂಥದಲ್ಲಿ ಗುರುಜಂಗಮ ನಾಮಗಳೂ ಶ್ರೀಪತಿ ಪಂಡಿತ ನಾಮವೂ ಬಂದಿವೆ. ಇವು ಶ್ರೀಪತಿ ಪಂಡಿತನ ಮತ್ತು ವೀರಶೈವಮತದ ಕಾಲವನ್ನು ೧೧ ನೆಯ ಶತಮಾನ ಕ್ಕಿಂತಲೂ ಹಿಂದೆ ಎಂದು ನಿರ್ಣಯಿಸಲು ಮುಖ್ಯ ಸಹಾಯಕಾರಿಗಳಾಗಿವೆ. ಇದು ರಾಯರಿಗೆ ಇಷ್ಟವಿಲ್ಲ. ಹೊರಗೆ ನೋಡುವದಕ್ಕೆ ಹಯವದನರಾಯರು ನಿರ್ಣಯಿಸಿದ ಶ್ರೀಕರಭಾಷ್ಯದ ಕಾಲವನ್ನು ಖಂಡಿಸಿದ ಹಾಗೆ ನಟಿಸಿ ಶಿವತತ್ತ್ವಸಾರವು ೧೪ನೆಯ ಶತಮಾನದಲ್ಲಿ ಹುಟ್ಟಿದಂತೆ ಹೇಳಿದರೆ ಶ್ರೀಕರಭಾಷ್ಯ ಶ್ರೀಪತಿಪಂಡಿತರ ಕಾಲವೂ ಸಂಶಯಕಲ್ಲೋಲವಾಗುವದಷ್ಟೆ! ನಾರಾಯಣರಾಯರ ಈ ವೈಖರಿಯು ಚರಿತ್ರೆ ಪರಿಶೋಧನೆಯಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗುವುದೆಂಬುದನ್ನು ಸತ್ಯಶೀಲ ರಾಲೋಚಿಸಲಿ!

ಶಿವತತ್ತ್ವಸಾರದ ಕನ್ನಡ ಅನುವಾದದ ಪ್ರತಿಯೂ ಇತ್ತೀಚೆಗೆ ದೊರೆತಿದೆ. ಅದರ ಬಗ್ಗೆ ಶ್ರೀ ವೇ|| ಪ್ರಭಾಕರಶಾಸ್ತ್ರಿಗಳ ಲೇಖವನ್ನು ನಮ್ಮ ವಿಭೂತಿ ವರ್ಷ ೨ ಸಂಚಿಕೆ ೪ರಲ್ಲಿ ನೋಡಬಹುದು. ನಾನು ಹಿಂದೆ ಉದಹರಿಸಿದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿವತತ್ತ್ವಸಾರದ ತೆಲುಗು ಪದ್ಯಕ್ಕೆ—

ಧರೆಯೊಳಗೆ ಮಲ್ಲಿಕಾರ್ಜುನ ವರಪಂಡಿತನೆನಿಸುತಿಹುದರಿಂ ನಿನ್ನಾಜ್ಞಾ |
ಭರಮೆಸೆಯಲ್ ಪ್ರಮಥರೊಳಾ ನಿರಲೆಂದೀಕ್ಷಿಸುವೆ ನಿಮ್ಮ ಬಯಸುವೆನೀಶಾ ||

ಎಂಬ ಕನ್ನಡ ಪದ್ಯವು ಕನ್ನಡ ಶಿವತತ್ತ್ವಸಾರದಲ್ಲಿಯೂ ಇರುವದರಿಂದ ಆಂಧ್ರ ಶಿವತತ್ತ್ವಸಾರವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನೇ ವಿರಚಿಸಿದ್ದಾನೆಂಬುದು ಸಿದ್ಧಾಂತವೇ ಸರಿ. ಕನ್ನಡ ಶಿವತತ್ತ್ವಸಾರದ ಕರ್ತೃತ್ವದ ವಿಷಯದಲ್ಲಿ ಇನ್ನೂ ವ್ಯಕ್ತಿನಿರ್ಣಯವಾಗಿಲ್ಲ. ನಾರಾಯಣರಾಯರಿಗೂ ಈ ವಿಷಯ ತಿಳಿಯುವದಕ್ಕಾಗಿ 'ವಿಭೂತಿ' ಸಂಚಿಕೆ ಕಳುಹಿಸಲಾಗಿದೆ.

"ಬಸವನಿಗೆ ಪೂರ್ವದಲ್ಲಿ ಈ ಅರ್ವಾಚೀನರೂಪದಿಂದ ವೀರಶೈವವು ಇತ್ತೆಂಬು ದಕ್ಕೆ ಯಾವ ಆಧಾರವೂ ಇಲ್ಲ" ಎಂದು ಬರೆಯುವ ರಾಯರಿಗೆ ಮತ್ತೊಮ್ಮೆ

ವೀರಶೈವ ಮತಗ್ರಂಥಗಳನ್ನು ಸರಿಯಾಗಿ ಪರಿಶೀಲಿಸಿ ತಮ್ಮ ಊಹೆಗಳನ್ನು ಸರಿಪಡಿಸಿ ಕೊಳ್ಳಬೇಕೆಂದು ನಿವೇದಿಸುತ್ತೇನೆ.

ಇನ್ನು ವೀರಶೈವರ ಕನ್ನಡ ವಚನಗ್ರಂಥಗಳ ಹೆಸರುಗಳನ್ನೇನೋ ಅವರು ಬಹಳ ವಾಗಿ ಉದಾಹರಿಸಿದ್ದಾರೆ. ಆದರೆ ಅವುಗಳಲ್ಲಿಯೂ ಕೂಡ "ಬರೀ ಭಕ್ತಿ ಶಿವಸಾಮರಸ್ಯ ಯಾಚನೆಗ"ಳಿದ್ದಂತೆ ರಾಯರು ಭಾವಿಸಿದ್ದರಿಂದ ಶ್ರೀ ರಾಯರು ಅವುಗಳನ್ನೂ ನೋಡದೆ ಅವುಗಳಲ್ಲಿರುವ ವಿಸ್ತಾರವಾದ ಷಟ್‌ಸ್ಥಳ—ಅಷ್ಟಾವರಣಾದಿಗಳನ್ನು ತಿಳಿದಿಲ್ಲವೆಂದು ಗೊತ್ತಾಗುತ್ತದೆ. ವಚನಗಳ ಕಾಲದ ವಿಷಯದಲ್ಲಿ ಒಂದು ತೊಡಕಿರು ವುದೇನೋ ಸತ್ಯ. ಶ್ರೀರಂಗನಾಥ ದಿವಾಕರರು ತಮ್ಮ 'ವಚನಶಾಸ್ತ್ರರಹಸ್ಯ'ದಂತಹ ಹೆಬ್ಬೊತ್ತಿಗೆಯಲ್ಲಿಯೂ ವಚನಗಳ ಕಾಲದ ವಿಷಯವಾಗಿ ಜಾಣ್ಮೆಯಿಂದ ಮೌನ ವಹಿಸಿದ್ದಾರೆ. ವಚನಗಳ ವಿಷಯದಲ್ಲಿ ಪರಿಶ್ರಮಪಡುತ್ತಲಿರುವವರೂ ಅವುಗಳ ಕಾಲವನ್ನು ನಿಷ್ಕಪಟವಾಗಿ ಹೇಳುತ್ತಿಲ್ಲ. ಶ್ರೀ ಬಸವಾದಿಗಳ ಕಾಲದಲ್ಲಿಯೂ ಅವರಿಂದ ಹೇಳಲ್ಪಟ್ಟ ವಚನಗಳು ಪ್ರಚಾರದಲ್ಲಿದ್ದು ಅನಂತರದಲ್ಲಿ ಕ್ರಮಕ್ರಮವಾಗಿ ೧೬ನೆಯ ಶತಮಾನದ ಪ್ರಾಂತದಲ್ಲಿ ಈಗ ಕಾಣುವ ವಚನಗಳು ಪೂರ್ತಿಯಾಗಿ ಗ್ರಂಥರೂಪಕ್ಕೆ ಬಂದಿರಬಹುದೆಂದು ಕೆಲವು ಕಾರಣಗಳಿಂದ ನಾನು ನಂಬಿದ್ದೇನೆ. ಇದು ಸರಿಯಲ್ಲವೆಂದು ಸಪ್ರಮಾಣವಾಗಿ ಯಾರಾದರೂ ನಿರೂಪಿಸಿದರೆ ಆದರದಿಂದ ಸ್ವೀಕರಿಸುವದರಲ್ಲಿ ನನಗೆ ಸಂಕೋಚವಿಲ್ಲ. ಆದರೆ ಪ್ರಾಚೀನರ ಮೂಲವಿಲ್ಲದಲೇ ಇತ್ತೀಚೆಗೆ ಯಾರೋ ಸಂಪೂರ್ಣ ಹೊಸದಾಗಿ ರಚಿಸಿ ಬಸವಾದಿಗಳ ಹೆಸರಿನಿಂದ ಪ್ರಸಿದ್ಧಮಾಡಿದ್ದಾರೆಂಬ ನಾರಾಯಣರಾಯರ ಸಿದ್ಧಾಂತವು ಮಾತ್ರ ಪ್ರಾಮಾದಿಕ ವೆಂದು ಹೇಳಬಹುದು. ಈಗಿನ ಗ್ರಂಥಗಳಲ್ಲಿಯ ಕೆಲವು ವಚನಗಳು ಆಯಾ ಪ್ರಾಚೀನ ವ್ಯಕ್ತಿಗಳಿಂದಲೇ ಹೇಳಲ್ಪಟ್ಟಿರಬೇಕೆನ್ನುವಷ್ಟು ಸ್ಫೂರ್ತಿಯನ್ನೊಳಗೊಂಡಿವೆ.

"ವೀರಶೈವಾಚಾರ್ಯ ಪಂಚಕದಲ್ಲಿ ಕೆಲವರು ಬಸವನಿಗೆ ಪೂರ್ವಿಕರು, ಕೆಲವರು ಸಮಕಾಲಿಕರು, ಕೆಲವರು ಈಚೆಯವರು," ಎಂದು ರಾಯರು ಹೇಳಿಬಿಟ್ಟಿದ್ದಾರೆ. ಇದು ಕನ್ನಡ ಕವಿಚರಿತೆಯ ಸಂಗ್ರಹಾನುವಾದವೆಂತಲೂ ಹೇಳಬಹುದು.

ಶ್ರೀಕರಭಾಷ್ಯದ ಆದಿಯಲ್ಲಿ ಪ್ರಸಿದ್ಧನಾದ ರೇಣುಕಾಚಾರ್ಯನನ್ನೂ ತನ್ನ ಗುರುವಾದ ಏಕೋರಾಮಾಚಾರ್ಯನನ್ನೂ ಶ್ರೀಪತಿಪಂಡಿತನು ಸ್ತುತಿಸಿದ್ದಾನೆ. ದ್ವಿತೀಯಾಧ್ಯಾಯ ತೃತೀಯಪಾದದ "ಸಮಾಧ್ಯಭಾವಾಚ್ಚ ॥ ೩೯ ॥" ಎಂಬ ಸೂತ್ರದ ಭಾಷ್ಯದಲ್ಲಿ ಮರುಲಸಿದ್ಧ (ದಾರುಕಾಚಾರ್ಯ)ನನ್ನೂ ಹೇಳಿದ್ದಾನೆ. ರೇವಣ-ಮರುಲ-ಏಕೋರಾಮರ ಹೆಸರುಗಳು ಭಾಷ್ಯದಲ್ಲಿ ನಾಲ್ಕಾರುಸಲ ಬಂದಿರು ವದರಿಂದ ಇವರು ಶ್ರೀಪತಿಗಿಂತಲೂ ಪೂರ್ವಿಕರೆಂತಲೇ ಸಹಜವಾಗಿ ಗ್ರಹಿಸಬಹುದು.

ಪಂಚಾಚಾರ್ಯ ಪಂಚಮೋತ್ಪತ್ತಿ-ಶಂಕರಸಂಹಿತಾ-ವೀರಲೈಂಗೋಪನಿಷತ್-ನಾರಾಯಣೋಪನಿಷದ್ಭಾಷ್ಯಗಳಲ್ಲಿ ವೀರಶೈವಾಚಾರ್ಯರಾದ ಪಂಡಿತಾರಾಧ್ಯ ವಿಶ್ವಾರಾಧ್ಯನಾಮಗಳೂ ಬಂದಿವೆ. ತೆಲುಗು ದೇಶದ ಮಲ್ಲಿಕಾರ್ಜುನ ಪಂಡಿತಾರಾಧ್ಯನು ವೀರಶೈವಾಚಾರ್ಯ ಪಂಡಿತಾರಾಧ್ಯನಿಗಿಂತಲೂ ಬೇರೆಂಬುದನ್ನು ತಿಳಿಯದೆ ಅನೇಕರು ಭ್ರಮೆಗೊಳಗಾಗಿದ್ದಾರೆ. ಮಲ್ಲಿಕಾರ್ಜುನ ಪಂಡಿತನು ಗೃಹಸ್ಥನಾಗಿದ್ದು ಆತನ ವಂಶಪರಂಪರೆಯೂ ಈಗ ಇದೆ. ವೀರಶೈವಾಚಾರ್ಯ ಪಂಡಿತಾರಾಧ್ಯನೂ ಆತನ ಶಿಷ್ಯ ಚಂದ್ರಗುಂಡ ಶಿವಾಚಾರ್ಯನೂ ಶ್ರೀಶೈಲ ಗುರುಪೀಠಾಧಿಕಾರಿಗಳಾಗಿದ್ದ ಪ್ರಾಚೀನರೆಂತಲೂ ಆ ಪೀಠವೀಗಲೂ ಪರಂಪರೆಯಾಗಿ ವೀರಶೈವಾಧೀನವಾಗಿ (ಗುಂತಕಲ್ಲಿನಲ್ಲಿ) ಇದೆಯೆಂತಲೂ ಅನೇಕ ಐತಿಹಾಸಿಕ ಆಧಾರಗಳನ್ನು "ಆಚಾರ್ಯ ಪಂಡಿತ"ನೆಂಬ ಲೇಖದಲ್ಲಿ (ವಿಭೂತಿ ೧–೧೨, ೨–೧) ಪ್ರಕಟಿಸಲಾಗಿದೆ. ಶಿವ ಪಂಚಸ್ತವಕ್ಕೆ ಟೀಕೆಯನ್ನು ಬರೆದಿರುವ ಆಧುನಿಕ ವಿಶ್ವಾರಾಧ್ಯನನ್ನು ಕೆಲವರು ಪಂಚಾಚಾರ್ಯರಲ್ಲಿ ಒಬ್ಬನನ್ನಾಗಿಯೂ ಭಾವಿಸಿದ್ದಾರೆ. ಚತುರಾಚಾರ್ಯ ವ್ಯವಹಾರವೂ ಇರುವದರಿಂದ ವಿಶ್ವಾರಾಧ್ಯನು ಆಧುನಿಕನಾಗಿರಬಹುದೆಂದು ಮತ್ತೆ ಕೆಲವರು ಊಹಿಸುತ್ತಿರುವರು. ಇದು ಸರಿಯಲ್ಲ. ಪಂಚಕಲಶಾರ್ಚನೆಯಲ್ಲಿ ನಾಲ್ವರನ್ನು ಋತ್ವಿಜರನ್ನಾಗಿಯೂ ಒಬ್ಬನನ್ನು ಗುರುವನ್ನಾಗಿಯೂ ವಿನಿಯೋಗಿಸುವಾಗ ಸಾಮಾನ್ಯವಾಗಿ ಚತುರಾಚಾರ್ಯ ವ್ಯವಹಾರವನ್ನು ಮಾಡಿದರೂ ಇಲ್ಲಿ ಗುರು ಶಬ್ದದಿಂದ ವಿಶ್ವಾರಾಧ್ಯನೇ ಸೂಚಿತನಾಗುತ್ತಿದ್ದಾನೆಂಬುದನ್ನು ಸಂಪ್ರದಾಯಜ್ಞರಿಗೆ ಹೇಳಬೇಕಾಗಿಲ್ಲ. "ಕಾಶೀಪೀಠಾಚೇ ಪ್ರಾಚೀನತ್ವ" ಎಂಬ ನನ್ನ ಮರಾಠಿ ಪುಸ್ತಕದಲ್ಲಿ ಈ ವಿಷಯವು ವಿಪುಲವಾಗಿ ನಿರೂಪಿಸಲ್ಪಟ್ಟಿದೆ. ಶಿವಾಗಮ ಶಂಕರ ಸಂಹಿತಾದಿಗಳಲ್ಲಿ ಹೇಳಿದಂತೆಯೂ, ಪರಂಪರೆಯಾಗಿ ಬಂದ ಪ್ರಕಾರವಾಗಿಯೂ ಪಂಚಾಚಾರ್ಯರು ಬಸವಾದಿಗಳಿಗಿಂತಲೂ ಪೂರ್ವಿಕರೇ ಹೊರತು ಯಾವುದಾದರೂ ಒಂದು ನಾಮಸಾಮ್ಯವು ಕಂಡಕೂಡಲೆ ಅವರನ್ನು ಆಚಾರ್ಯಪಂಚಕದಲ್ಲಿ ಸೇರಿಸುವುದು ಸಯುಕ್ತಿಕವಲ್ಲ.

ರಾಯರು ತಿಳಿದಂತೆ ಹರಿಹರನ ಕಾಲವು ಉದ್ಭಟಕಾವ್ಯದ ಸೋಮರಾಜನ ಕಾಲದ ಮೇಲೆ ಆಧಾರಪಟ್ಟಿಲ್ಲ. ಅನೇಕಗಳಾದ ಪ್ರಮಾಣಗಳಿಂದ "ಹರಿಹರದೇವ" ಎಂಬ ಗ್ರಂಥದಲ್ಲಿ ಹರಿಹರನಕಾಲವು ಕ್ರಿ. ಶ. ೧೨೧೬ ಎಂದು ನಿರ್ಣಯಿಸಲಾಗಿದೆ. ೧೨೪೫ರಲ್ಲಿದ್ದ ಮಲ್ಲಿಕಾರ್ಜುನಕವಿ ತನ್ನ ಸೂಕ್ತಿಸುಧಾರ್ಣವದಲ್ಲಿ ಹರಿಹರನ ಗಿರಿಜಾಕಲ್ಯಾಣದ ಪದ್ಯಗಳನ್ನು ಉದಾಹರಿಸಿದ್ದಾನೆನ್ನುವುದನ್ನೂ ಡಾ|| ವೆಂಕಟಸುಬ್ಬಯ್ಯನವರ ವಾದವನ್ನು ವಿಮರ್ಶಿಸಿ ಸೋಮರಾಜನ "ಸಾಸಿರದನೂಱಿಂ ಸಂದ" ಎಂಬ

ಕವಿಚರಿತಕಾರರ ಪಾಠವೇ ಸರಿಯಾದುದೆಂಬುದನ್ನೂ ವಿಪುಲವಾಗಿ ಆ ಗ್ರಂಥದಲ್ಲಿ ನಿರೂಪಿಸಿದುದು ನಾರಾಯಣರಾಯರಿಗೆ ಗೊತ್ತಿಲ್ಲದಂತೆ ತೋರುತ್ತದೆ. ಆದರೂ ನಾನು ನೋಡಿದ ಒಂದು ವಿಷಯವನ್ನು ಬರೆಯುವುದು ಆವಶ್ಯಕವೆಂದು ಕಾಣಿಸುತ್ತದೆ. ಕಳೆದ ೧೯೩೩ರ ಸುಮಾರಕ್ಕೆ ರಾಣಿಬೆನ್ನೂರು ಪ್ರಾಂತದಿಂದ ಮುದೇನೂರು ಹಿರಿಯಮಠದ ಶ್ರೀ ವಾಗೀಶಶಿವಾಚಾರ್ಯ ಸ್ವಾಮಿಗಳವರು ಕಾಶಿಗೆ ತಂದಿದ್ದ ಸೋಮರಾಜನ ಉದ್ಭಟಕಾವ್ಯದ ತಾಳದೋಲೆಯ ಪ್ರತಿಯಲ್ಲಿ "ಸಾಸಿರದನೂಱಿಂ ಸಂದ ನಾಲ್ವತ್ತುನಾಲ್ಕನೆಯಾ" (ಶಾ. ಶ. ೧೧೪೪) ಎಂಬ ಪಾಠವನ್ನೇ ನಾನು ಸ್ಪಷ್ಟವಾಗಿ ನೋಡಿದ್ದೇನೆ. ಪುನಃ ಆ ಪ್ರತಿಯಲ್ಲಿಯ ಓಲೆಯನ್ನು ಸಪ್ರತಿಬಿಂಬವಾಗಿ (ಫೋಟೋ ಸಹಿತ) ಮುಂದೆ ಪ್ರಕಟಿಸಲುದ್ಯುಕ್ತನಾಗಿರುವೆನು. ಇನ್ನು ಚಿತ್ರಭಾನು ಸಂವತ್ಸರವು ಶಾ. ೧೧೪೪ರಲ್ಲಿಯೇ ಆಗುತ್ತಿರುವದರಿಂದ 'ಸಂದ' ಎಂಬುದನ್ನು ಸರಿಮಾಡುವುದು ಹೇಗೆ ಎಂದು ಆಕ್ಷೇಪವುಂಟು. ಸೋಮರಾಜನ ಪಾಠವು ಶಾ. ಶ. ೧೪೪೪ರ ಎಂದು ಅರ್ಥಮಾಡಿದಾಗಲೂ ಈ ಆಕ್ಷೇಪವು ತಪ್ಪುವುದಿಲ್ಲ. 'ಸಂದ'ಕ್ಕೆ 'ಹೋದ' ಎಂತಲೇ ಸಹಜವಾಗಿ ಅರ್ಥವಾಗುತ್ತಿದ್ದರೂ ಶಾ. ೧೧೪೫ ರಲ್ಲಿ ಚಿತ್ರಭಾನು ಇಲ್ಲದಿರುವದರಿಂದ ಶಾ. ೧೧೪೩ ಸಂವತ್ಸರಗಳು ಕಳೆದು (ಸಂದ) ಶಾ. ೧೧೪೪ನೆಯ ವರ್ಷಾರಂಭವೆಂಬುದನ್ನೇ ಗ್ರಹಿಸಬೇಕಾಗುವುದು. ಕೆಲವು ಶಾಸನಾದಿಗಳಲ್ಲಿ ಗತವರ್ಷಗಳೂ ವರ್ತಮಾನ ವರ್ಷಗಳೂ ಹೇಳಲ್ಪಟ್ಟಿರುವದರಿಂದ ಈ ವಿಧವಾದ ಒಂದು ವರ್ಷದ ತಾರತಮ್ಯವನ್ನು ಸ್ವೀಕರಿಸುವುದು ಅನುಚಿತವೇನೂ ಅಲ್ಲ. "ನೂಱಿಂ ಸಂದ" "ನಾನೂಱ್ ಸಂದ" ಎಂಬ ಪ್ರಯೋಗಗಳ ಶುದ್ಧಾಶುದ್ಧತೆ ಹೇಗಿದ್ದರೂ ಸೋಮರಾಜನ ಪ್ರಯೋಗವು ಇದ್ದಕ್ಕಿದ್ದ ಹಾಗೆ ಗ್ರಹಿಸಲ್ಪಡಬೇಕೆಂಬ ಅಭಿಪ್ರಾಯವನ್ನು ನಾನು ಸಮರ್ಥಿಸುತ್ತೇನೆ.

ಪಾಲ್ಕುರಿಕಿ ಸೋಮನಾಥನ ಕಾಲವೂ ಸೋಮರಾಜನ ಹೇಳಿಕೆಯನ್ನವಲಂಬಿಸಿಲ್ಲ. ಪಿಡುಪರ್ತಿ ಸೋಮನಾಥನು ಹೇಳಿದಹಾಗೆ ಓರುಗಲ್ಲಿನ ಮೊದಲನೆಯ ಪ್ರತಾಪರುದ್ರನ ಕಾಲದಲ್ಲಿ ಅಂದರೆ ಕ್ರಿ. ಶ. ೧೧೯೦ರಲ್ಲಿಯೇ ಪಾಲ್ಕುರಿಕಿ ಸೋಮನಾಥನು ಇದ್ದನೆಂಬುದನ್ನು ಗ್ರಹಿಸುವದಕ್ಕೆ ಬಾಧಕಪ್ರಮಾಣಗಳೇನೂ ಇಲ್ಲ. ಆಂಧ್ರ ಹಿಸ್ಟಾರಿಕಲ್ ಸೊಸೈಟಿಯವರ "ಕಾಕತೀಯ ಸಂಚಿಕೆ"ಯಲ್ಲಿ ಹೀಗೆಯೇ ಸೋಮನಾಥನ ಕಾಲವು ನಿರೂಪಿಸಲ್ಪಟ್ಟಿದೆ. ಮತ್ತೊಂದು ವಿಶೇಷವೂ ಇದೆ. ಪಾಲ್ಕುರಿಕಿ ಸೋಮನಾಥನು ಆಂಧ್ರದೇಶದಲ್ಲಿಯೂ ಹರಿಹರಕವಿಯು ಕರ್ಣಾಟಕ ದೇಶದಲ್ಲಿಯೂ ದೂರಸ್ಥರಾಗಿರುವದರಿಂದಲೂ ಸಮಕಾಲಿಕರಾದುದರಿಂದಲೂ ತಮ್ಮತಮ್ಮ ಬಸವಚರಿತ್ರೆಗಳಲ್ಲಿ ಪರಸ್ಪರವಾಗಿ ನಾಮೋಲ್ಲೇಖನೆಮಾಡಿಲ್ಲ.

ಆದುದರಿಂದಲೇ ಉಭಯರ ಗ್ರಂಥಗಳಲ್ಲಿ ಬಸವನ ಕಥಾಂಶಗಳ ಬಗ್ಗೆ ವಿರೋಧವಿದೆ. ರಾಯರು ಹೇಳಿದಂತೆ ಸೋಮನಾಥನು ೧೩ನೆಯ ಶತಮಾನದ ಕೊನೆಯಲ್ಲಿದ್ದರೆ ಹರಿಹರನ ಬಸವರಗಳೆಯನ್ನು ಅವಶ್ಯವಾಗಿ ಅವಲೋಕಿಸಿ ಆತನ ನಾಮೋಲ್ಲೇಖ ವನ್ನು ತನ್ನ ಬಸವಪುರಾಣದಲ್ಲಿ ಮಾಡದೇ ಬಿಡುತ್ತಿರಲಿಲ್ಲ. ಕಾರಣವೇನೆಂದರೆ ಬಸವೇಶ್ವರನ ಚರಿತ್ರೆಯ ಬಗ್ಗೆ ಅನೇಕ ಅಂಶಗಳನ್ನು ಸಂಗ್ರಹಿಸುವುದಕ್ಕೋಸ್ಕರ ಸೋಮನಾಥನು ಅವಶ್ಯವಾಗಿ ಪ್ರಯತ್ನಪಟ್ಟಿರಬೇಕು. ಎಲ್ಲಿಯೂ ಕೃತಿರೂಪದಿಂದ ಆಗ ಸೋಮನಾಥನಿಗೆ ಸಿಕ್ಕಿಲ್ಲ. ಆದುದರಿಂದಲೇ "ಶಿವಭಕ್ತರ ಹೇಳಿಕೆಯನ್ನನುಸರಿಸಿ ಇದನ್ನು ರಚಿಸುತ್ತಿರುವೆ"ನೆಂದು ಬಸವಪುರಾಣದಲ್ಲಿ ಸೋಮನಾಥನು ಸೂಚಿಸಿದ್ದಾನೆ. ಸೋಮನಾಥನು ಬಸವನ ಕಾಲಕ್ಕೆ ಅಂದರೆ ಕ್ರಿ. ಶ. ೧೧೬೮ರ ಪ್ರಾಂತದಲ್ಲಿ ಹುಟ್ಟಿ ೧೧೯೦ರ ಪ್ರಾಂತದಲ್ಲಿ ಪಂಡಿತಾರಾಧ್ಯನ ಶಿಷ್ಯರಿಂದಲೂ ವೀರಶೈವ ಭಕ್ತರಿಂದಲೂ ಕೇಳಿದ ಕಥಾಂಶಗಳನ್ನು ಸಂಗ್ರಹಿಸಿ ಬಸವಪುರಾಣವನ್ನು ರಚಿಸಿ ಆಂಧ್ರ ಕರ್ಣಾಟಕದೇಶಗಳಲ್ಲಿ ಪ್ರಸಿದ್ಧಿಯನ್ನು ಹೊಂದಿ ಪಂಡಿತಾರಾಧ್ಯಚರಿತ್ರಾದಿ ಪ್ರೌಢ ಗ್ರಂಥಗಳನ್ನು ನಿರ್ಮಿಸಿ ಸುಮಾರು ೧೨೨೪ ಸಂವತ್ಸರದ ಸಮೀಪದ ವರೆಗೂ ಜೀವಿಸಿರಬಹುದು. ಬಸವನ ಅನಂತರ ಎರಡು ಶತಾಬ್ದಗಳು ಕಳೆದಮೇಲೆ ಬಸವ ಪುರಾಣದ ರಚನೆಯಾಗಿದ್ದರೆ ಅದರಲ್ಲಿ ಅಂತಹ ಸ್ಫೂರ್ತಿಯೇ ಬರುತ್ತಿರಲಿಲ್ಲ. ಅಂತಹ ಸುಪ್ರಸಿದ್ಧನಾದ ಬಸವನ ಕಾಲದಲ್ಲಿ ಕವಿಗಳು ಯಾರೂ ಇರಲಿಲ್ಲ; ಹದಿನಾಲ್ಕನೆಯ ಶತಮಾನದವರೆಗೂ ಆತನ ಚರಿತ್ರೆ ಜಗತ್ತಿಗೆ ಗೊತ್ತಿಲ್ಲವೆಂದು ಹೇಳಿದರೆ ಅಸಂಗತವಾಗುವದಷ್ಟೆ! ಬಸವನ ಕಾಲಕ್ಕೆ ಸಮೀಪಸ್ಥರಾದ ಹರಿಹರನೂ ಸೋಮನಾಥನೂ ತಮ್ಮ ತಮ್ಮ ಮಾತೃಭಾಷೆಯಲ್ಲಿ ಬಸವಚರಿತ್ರೆಗಳನ್ನು ರಚಿಸಿದ್ದಾರೆಂತಲೂ ಆಮೇಲೆ ಇವನ್ನನುಸರಿಸಿ ಇತರ ಪುರಾಣಗಳು ಹುಟ್ಟಿದವೆಂದೂ ಭಾವಿಸುವುದೇ ಸಮಂಜಸವಾಗಿದೆ. ಆದುದರಿಂದ ಸೋಮನಾಥನು ೧೩೦೦ರ ಪ್ರಾಂತದಲ್ಲಿದ್ದನೆಂದು ರಾಯರು ಕಲ್ಪಿಸಿದ ಕಾಲವು ಗಾಳಿಯ ಮಾತೇ ಹೊರತು ಅದಕ್ಕೆ ಆಧಾರವಿಲ್ಲ. ಹರಿಹರ ಕೆರೆಯಪದ್ಮರಸರು ಮಲ್ಲಿಕಾರ್ಜುನಕವಿಯ (ಕ್ರಿ. ಶ. ೧೨೪೫) ಸೂಕ್ತಿಸುಧಾರ್ಣವದಲ್ಲಿ ಹೆಸರ್ಗೊಳ್ಳಲ್ಪಟ್ಟಿದ್ದಾರೆಂಬ ವಿಷಯವು ರಾಯರಿಗೆ ಗೊತ್ತಿಲ್ಲದೆ ಎಲ್ಲರನ್ನೂ ಹದಿಮೂರನೆಯ ಶತಾಬ್ದಿಯ ಅಂತ್ಯದಲ್ಲಿ ಇರಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ.

ರಾಯರಿಗೆ 'ಶಿವಾನುಭವ'ದಲ್ಲಿ ಪ್ರಕಟಿತವಾದ ಬಸವೇಶ್ವರನ ಅರ್ಜುನವಾಡ ಶಿಲಾಶಾಸನದ ವಿಷಯವು ಗೊತ್ತಿಲ್ಲದುದರಿಂದ ಬಸವನು ನಿಜವಾಗಿ ಇದ್ದನೋ ಇಲ್ಲವೋ ಎಂದು ಏನೇನೋ ಬರೆದಿದ್ದಾರೆ. ಬಸವನು ಬಿಜ್ಜಳನ ಹತ್ತಿರ ಬಹಳ ಸ್ವಲ್ಪಕಾಲ ಅಂದರೆ ಐದಾರು ವರ್ಷಗಳು ಮಾತ್ರ ಇರುವದರಿಂದಲೂ ಅದು

3

ಕ್ರಾಂತಿಯ ಕಾಲವಾದುದರಿಂದಲೂ ಬಿಜ್ಜಳನ ಶಾಸನಗಳೆಲ್ಲವೂ ಬಸವನ ಮಂತ್ರಿತ್ವದ ಕಾಲಕ್ಕಿಂತ ಪೂರ್ವಕಾಲದವಾದುದರಿಂದಲೂ ಬಿಜ್ಜಳನ ಶಾಸನಗಳಲ್ಲಿ ಬಸವನು ಹೇಳಲ್ಪಟ್ಟಿಲ್ಲ. ಈ ವಿಷಯದಲ್ಲಿಯ ರಾಯರ ಬರಹಗಳು ಸಪ್ರಯೋಜನವಾಗಿಲ್ಲ. ಇನ್ನೊಂದು ಅದ್ಭುತವಿಷಯವೇನೆಂದರೆ ಅಬ್ಲೂರಿನ ಏಕಾಂತರಾಮಯ್ಯನ ಶಿಲಾ ಶಾಸನದಲ್ಲಿ ಬಸವನ ಹೆಸರು ಬಂದಿದೆಯೆಂದು ರಾಯರು ಜ್ಯೋತಿಷ ಹೇಳುತ್ತಿರುವರು. ಬಸವನ ಹೆಸರು ಬಂದಿಲ್ಲವೆಂಬುದನ್ನು ಸತ್ಯವಾಗಿ ರಾಯರು ಶಾಸನ ನೋಡಿದಾಗ ತಿಳಿಯಬಹುದು. ಇನ್ನು ಮುನವಳ್ಳಿಶಾಸನದ ಬಸವನೇ ಕಲ್ಯಾಣದ ಬಸವನೆಂದು ಅವರು ಪ್ರತಿಪಾದಿಸಹತ್ತಿದ್ದಾರೆಯೇ ಹೊರತು ಆ ಶಾಸನವನ್ನಾದರೂ ರಾಯರು ಸರಿಯಾಗಿ ಅರ್ಥಮಾಡಿಲ್ಲ. ೧೨೬೦ರಲ್ಲಿ ಹುಟ್ಟಿದ ಅರ್ಜುನವಾಡದ ಶಿಲಾಶಾಸನವು *Epigraphia Indica*, Vol. XXI, p. 9ರಲ್ಲಿಯೂ ಮುದ್ರಿತವಾಗಿದೆ. ಅದರಿಂದ ಬಸವನು ಬಾಗೆವಾಡಿಯವನೆಂತಲೂ ಮಾದಿರಾಜನ ಮಗನೆಂತಲೂ ಸಂಗಮೇಶ್ವರನ ಶಿಷ್ಯನೆಂತಲೂ ಸ್ಪಷ್ಟವಾಗಿ ಗೊತ್ತಾಗಿ ಬಿಡುವ್ರದು. ಅರ್ಜುನವಾಡದ ಶಾಸನವನ್ನು ನೋಡದ ಡಾ|| ಫ್ಲೀಟುಸಾಹೇಬರು *Epigraphia Indica*, Vol. V ಸಲ್ಲಿ ಮನಗೋಳಿ ಶಾಸನದ ಬಗ್ಗೆ ಬರೆದಿರುವ ಅಸಂಗತವಾಕ್ಯಗಳು ಉಂಟು. ಅದೇ ಪುಸ್ತಕದಲ್ಲಿಯ ಅಬ್ಲೂರು ಶಾಸನದ ವಿವರಣದಲ್ಲೂ ಫ್ಲೀಟ್‌ರವರು ಬರೆದ ವಿಷಯವು ಸಂಗತವಾಗಿಲ್ಲ. ಇದನ್ನೇ ಬಹಳ ಪ್ರಮಾಣವನ್ನಾಗಿ ನಂಬಿ ಮೂಲಶಾಸನಗಳನ್ನು ನೋಡದೆ, ಡಾ|| ರಾಯರೂ ಅಡ್ಡಹಾದಿ ಹಿಡಿದಿರುವರು. ಪ್ರಬುದ್ಧ ಕರ್ಣಾಟಕ ಲೇಖದಲ್ಲಿಯೂ ತಮ್ಮ ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯಲ್ಲಿಯೂ ಮನಗೋಳಿ ಬಸವನನ್ನು ಬಾಗೆವಾಡಿ ಬಸವನನ್ನಾಗಿ ಹೇಳುತ್ತ ಹೋಗಿದ್ದಾರೆ. ಇದರ ಬಗ್ಗೆ ಸ್ವಲ್ಪ ಸರಿಯಾದ ವಿವರಣೆಯನ್ನು ಮಾಡುವುದು ಆವಶ್ಯಕವೆಂದು ತೋರುತ್ತದೆ.

ಕ್ರಿ. ಶ. ೯೭೩-೯೯೭ ರಲ್ಲಿದ್ದ ದ್ವಿತೀಯ ತೈಲಪದೇವನಿಂದ ಮನಗೋಳಿ (ಮಣಿಂಗವಲ್ಲಿ)ಯ ಅಗ್ರಹಾರವನ್ನು ಪಡೆದ ಹಾರೀತಗೋತ್ರದ ಮಾಧವನು ಬಸವೇಶ್ವರನ ತಂದೆಯಾದ ಮಾದಿರಾಜನೆಂದು ಇವರು ಭ್ರಮೆಗೊಳಗಾಗಿದ್ದಾರೆ. ಹಾಗಾದರೆ ಹತ್ತನೆಯ ಶತಮಾನದಲ್ಲಿಯೇ ಬಸವನು ಹುಟ್ಟಿರಬೇಕಾಗುವುದು. ಇದರಿಂದಾಗುವ ಚಾರಿತ್ರಕಹತ್ಯೆಯನ್ನು ಇವರು ಗಮನಿಸಿದಂತೆ ಕಾಣುವುದಿಲ್ಲ. ಮತ್ತು ಕಾಶ್ಯಪಗೋತ್ರದ ಚಂಡಿರಾಜಪುತ್ರ ಒಸವರಸಯ್ಯನನ್ನೂ ಬಸವೇಶ್ವರನನ್ನಾಗಿ ಹೇಳುವ ಫ್ಲೀಟರ ಸಿದ್ಧಾಂತವು ಎಷ್ಟು ಅವಿಚಾರಮೂಲಕವಾಗಿದೆಯೆಂಬುದು ಸ್ಪಷ್ಟವೇ ಸರಿ. ಮನಗೋಳಿಯಲ್ಲಿಯ ಕಲಿದೇವೇಶ್ವರನ ಆಲಯವು ೨ನೆಯ ಜಗದೇಕ ಮಲ್ಲನಿಗಿಂತಲೂ (ಕ್ರಿ. ಶ. ೧೧೪೨) ಪೂರ್ವದಲ್ಲಿಯೇ ಇದ್ದಂತೆಯೂ, ಆ ಆಲಯ

ವನ್ನು ನಿರ್ಮಿಸಿದ ಬಸವರಸಯ್ಯನು ಅವನಿಗಿಂತ ಹಿಂದಿನವನೆಂತಲೂ ಶಾಸನದ ಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ ತಿಳಿಯುವದು. ಅಂದರೆ ಅಲ್ಲಿಯ ಬಸವರಸಯ್ಯನು ಜಗದೇಕಮಲ್ಲನ ಸಮಕಾಲಿಕನಲ್ಲ. ಬಸವರಸಯ್ಯನು ಆಲಯವನ್ನು ನಿರ್ಮಿಸಿದ ೧೪೫ ವರ್ಷಗಳ ಅನಂತರದಲ್ಲಿ ಜಗದೇಕಮಲ್ಲನೂ ಬಂದು ಮನಗೋಳಿಯ ಮಾದಿರಾಜಾದಿಗಳ ಪ್ರಾರ್ಥನೆಯಂತೆ ೧೧೪೨ರಲ್ಲಿ ಆಲಯಕ್ಕಾಗಿ ಮತ್ತೊಂದು ದಾನವನ್ನು ಕಾಲಾಮುಖ ಸದ್ಯೋಜಾತಪಂಡಿತನಿಗೆ ದಾನಮಾಡಿದ್ದಾನೆ. ಈ ಬಸವರಸಯ್ಯನಿಗೂ ೨ನೆಯ ಜಗದೇಕಮಲ್ಲನಿಗೂ ಯಾವ ಸಂಬಂಧವೂ ಸಮಕಾಲಿಕತ್ವವೂ ಇಲ್ಲ. ಈ ಉಭಯರಿಗೂ ಬಾಗೆವಾಡಿಯ ಬಸವನಿಗೂ ಮೊದಲೇ ಸಂಬಂಧವಿಲ್ಲ. ಬಸವೇಶ್ವರನಿಗಿಂತಲೂ ಪೂರ್ವದಲ್ಲಿ "ಬಸವ"ಶಬ್ದವು ಪ್ರಚಾರವಾಗಿದ್ದುದನ್ನು ತಿಳಿಯದೆ ಆ ಹೆಸರಿನವರನ್ನೆಲ್ಲ ಬಾಗೆವಾಡಿ ಬಸವನಿಗೆ ಗಂಟುಹಾಕಲು ಹವಣಿಸುವದರಲ್ಲಿ ತಥ್ಯವೇನೂ ಇಲ್ಲ. ಬಸವೇಶ್ವರನ ವಂಶದ ಗೋತ್ರಾದಿಗಳು ಎಲ್ಲಿಯೂ ಹೇಳಲ್ಪಡದಿರುವದರಿಂದ ರಾಯರು ಮಾಡಿದ ಗೋತ್ರಾನ್ವೇಷಣವೂ ನಿಷ್ಫಲವಾಗಿದೆ.

ಶ್ರೀ ರಾಯರು ಬಳ್ಳಾರಿಜಿಲ್ಲಾ ಹಡಗಲಿ ತಾಲ್ಲೂಕು ಬರುವಾಯಿ ಗ್ರಾಮದ ಬೆಣಕಪ್ಪನ ಗುಡಿಯಲ್ಲಿದ್ದ ಶಾಸನವೊಂದನ್ನು ಸಮನ್ವಯ ಮಾಡಲು ಹೊರಟಿದ್ದಾರೆ. (ಕ್ರಿ. ಶ. ೧೨೦೩ರಲ್ಲಿ ಹುಟ್ಟಿದ ಈ ಶಾಸನವು *South Indian Inscriptions*, Vol. IX, Part I. ಪುಸ್ತಕದಲ್ಲಿ ೩೩೪ನೆಯ ಶಾಸನ.) ಅದರಲ್ಲಿರುವ ಮುಖ್ಯಾಂಶವು ಹೀಗಿದೆ—

"ಸ್ವಸ್ತಿ ಶ್ರೀಮತು ಯಾದವನಾರಾಯಣಂ ಪ್ರತಾಪಚಕ್ರವರ್ತಿ ಹೊಯ್ಸಳ ವೀರಬಲ್ಲಾಳದೇವರಾಜ್ಯಸಮುದ್ಧರ ಬಸವದಂಡನಾಯಕ ಗುಣಪ್ರಭಾವವೆಂತೆಂದೊಡೆ—

ನುಡಿವಂ ಸತ್ಯವಚೋಕ್ತಿಯಂ, ಸಕಲಧರ್ಮವ್ಯಾಪ್ತಿಯಿಂದರ್ಥಮಂ
ಪಡೆವಂ, ವಿಪ್ರಸುರಾದಿಶಿಷ್ಟಜನತಾಸಂತುಷ್ಟಿಯಾಗಲ್ಕೆ ತಾ
ಕೊಡುವಂ, ದ್ರವ್ಯಮನೀಗುಣಾಶ್ರಯಮುಮಂ ಲೋಕಂಬ ಬಾಪ್ಪೆಂಬಿನಂ
ಪಡೆದಂ, ಸದ್ಗುಣಿ ದಂಡನಾಥಬಸವಂ ಪ್ರಖ್ಯಾತಿಯಂ ಕೀರ್ತಿಯಂ

ಕಲಿಯುಮೃತದಂಡನಾಥರ ಲಲಿತಾತ್ಮಜನೆಂದೊಡೊಪ್ಪುಗುಂ ಕವಿತನಮುಂ |
ಸಲೆ ಸತ್ಯಾಮೃತವಾಕ್ಯಂ ಕುಲತಿಲಕಂ ಬಸವದಂಡನಾಥಾಧಿಪನೊಳ್ ||

ಶ್ರೀಮದೀಶ್ವರಸಂವತ್ಸರ ಶ್ರಾವಣ ಬಹುಳ ಅಮಾವಾಸ್ಯಾ ಶುಕ್ರವಾರ ಸೂರ್ಯಗ್ರಹಣದಂದು ಶ್ರೀವಿನಾಯಕದೇವರ್ಗೆ ರಣಧವಳ ಬಸವಚಮೂಪಂ ಧಾರಾಪೂರ್ವಕಂ ಮಾಡಿಕೊಟ್ಟು. . . . "—

ಇದರಲ್ಲಿಯ ಬಸವದಂಡನಾಥನು ಬಾಗೇವಾಡಿಯ ಬಸವನೆಂದು ಹೇಳುವುದು ತುಂಬಾ ಪರಿಹಾಸದ ಮಾತಾಗಿದೆ. ಕಲಿಯಮೃತದಂಡನಾಥನ ಮಗನೂ ವೀರ ಬಲ್ಲಾಳನ ಮಂತ್ರಿಯೂ ರಣಧವಳ ಬಿರುದಾಂಕಿತನೂ ಆದ ಬರುವಾಯಿ ಶಾಸನದ ಬಸವನು ಎಂದೆಂದಿಗೂ ಕಲ್ಯಾಣದ ಬಸವನಾಗಲಾರ. ಮತ್ತೊಂದು ಆಶ್ಚರ್ಯ ಕರವಾದ ವಿಷಯವೇನೆಂದರೆ ಮನಗೋಳಿಯ ಬಸವನನ್ನೂ ಬರುವಾಯಿ ಬಸವನನ್ನೂ ಒಂದುಮಾಡಿ ಕಲ್ಯಾಣಬಸವನ ರೂಪವನ್ನು ತಯಾರ್‍ಮಾಡಲು ರಾಯರು ಯತ್ನಿಸಿದ್ದಾರೆ. ಅದಕ್ಕಾಗಿ ಬಿಜ್ಜಳನು ಮೃತಿಪಟ್ಟನಂತರ ಹೊಯ್ಸಳ ಬಲ್ಲಾಳನ ಹತ್ತಿರಕ್ಕೆ ಬಂದು ಬಿಜ್ಜಳನ ವಂಶವನ್ನು ಸಂಪೂರ್ಣವಾಗಿ ನಾಶಗೊಳಿಸಲು ಬಸವೇಶ್ವರನು ಹೆಣಗಾಡಿದ್ದಾನೆಂದು ರಾಯರು ಬರೆದಿದ್ದಾರೆ. ಮಹಾಪುರುಷರ ಮೇಲೆ ಹೇಯವಾದ ಅಪರಾಧಗಳನ್ನು ಹೊರಿಸುವ ಸಾಹಸವಿದೆಂದು ನಾನು ಹೇಳುತ್ತೇನೆ. ಈ ಮಾತುಗಳನ್ನೇ ನಂಬಿದರೆ ಬಸವೇಶ್ವರನು ೨ನೆಯ ತೈಲಪನ ಮೊದಲ್ಗೊಂಡು ಹೊಯ್ಸಳದ ವೀರಬಲ್ಲಾಳನ ವರೆಗೆ ಅಂದರೆ ೧೨೦ ವರ್ಷಗಳ ಕಾಲ ಬಾಳಿದನೆಂದು ಹೇಳಬೇಕಾಗುವುದು. ಈ ಅಸಂಬದ್ಧ ವಿಷಯಗಳನ್ನು ಉದಾಸೀನಮಾಡಿ ಪಾಲ್ಕುರಿಕಿ ಸೋಮನಾಥನು ಹೇಳಿದಂತೆಯೂ, ಸಂಪ್ರದಾಯದಲ್ಲಿದ್ದಂತೆಯೂ ಬಸವೇಶ್ವರನು ಯೌವನದಲ್ಲಿ (೩೦, ೩೫ ವರ್ಷಗಳ ವಯಸ್ಸಿನಲ್ಲಿ) ಬಿಜ್ಜಳನೊಡನೆಯೇ ಶಿವೈಕ್ಯವಾಗಿರುವನೆಂಬುದೇ ಸರ್ವಸಮ್ಮತವಾಗಿದೆ. "ಬಸವೇಶ್ವರನ ಬಗ್ಗೆ ಶಾಸನ ಸಾಮಗ್ರಿ" ಎಂಬ ಲೇಖ (ವಿಭೂತಿ ೨-೪) ದಲ್ಲಿ ಇದನ್ನು ವಿಸ್ತರಿಸಿದೆ.

ಪಾಲ್ಕುರಿಕಿ ಸೋಮನಾಥನು "ಮೈಸೂರು ರಾಷ್ಟ್ರದ ತುಮಕೂರು ಜಿಲ್ಲಾ ಪಾಲ್ಕುರಿಕೆಯಲ್ಲಿ ಹುಟ್ಟಿದವ"ನೆಂಬ ಒಂದು ನವೀನ ಇತಿಹಾಸವನ್ನು ಅವರು ಹೇಳಿದ್ದಾರೆ. ಇದು ಅಸತ್ಯವಾದ ವಿಷಯವೆಂದು ನಾನು ಧಾರಾಳವಾಗಿ ಹೇಳಬಿಚ್ಛಿಸುತ್ತೇನೆ. ಒಂದು ನಾಮಸಾಮ್ಯವು ಸಿಕ್ಕಿದ ಕೂಡಲೆ ನಿಜಾಂದೇಶದ ಸುಪ್ರಸಿದ್ಧವಾದ ಓರುಗಲ್ಲಿನ ಹತ್ತರ ಇರುವ "ಪಾಲ್ಕುರಿಕಿ"ಯನ್ನು ತುಮಕೂರಿನ "ಹಾಲ್ಕುರಿಕೆ" ಯನ್ನಾಗಿ ಹೇಳುವುದು ತುಂಬಾ ಅನ್ಯಾಯ. ಈ ಎರಡು ಗ್ರಾಮಗಳನ್ನೂ ರಾಯರು ನೋಡಿದಂತಿಲ್ಲ. ನಾನು ೧೯೨೪ರಲ್ಲಿ ತುಮಕೂರು ತಾಲ್ಲೂಕಿನ ಹಾಲ್ಕುರಿಕೆಯನ್ನೂ ನಾಲ್ಕೈದು ಸಲ ಓರುಗಲ್ಲಿನ ಹತ್ತಿರ ಇರುವ ಪಾಲ್ಕುರಿಕಿಯನ್ನೂ ನೋಡಿದ್ದೇನೆ. ರಾಯರು ಹೇಳಿದಂತೆ "ಪಾಲಗುರ್ತಿ"ಯೆಂಬ ವ್ಯವಹಾರವು ಅದಕ್ಕೆ ಇಲ್ಲ. ಪ್ರಾಚೀನ ಕಾಲದಿಂದ ಈ ವರೆಗೂ ಅದಕ್ಕೆ 'ಪಾಲ್ಕುರಿಕಿ' ಎಂಬುದೇ ಶಿಷ್ಟವ್ಯವಹಾರವು. "ಪಾಲಕುರ್ತಿ" ಎಂಬ ಗ್ರಾಮ್ಯಜನರ ವ್ಯವಹಾರವೂ ಈಗ ಉಂಟು. ಸೋಮೇಶ್ವರ ದೇವಾಲಯವೂ ಸೋಮನಾಥನ ಸಮಾಧಿಯೂ ಈ ಊರಲ್ಲಿ ಇದ್ದು ಈಗಲೂ

ಜಂಗಮಮಾಹೇಶ್ವರರ ಅಧೀನದಲ್ಲಿದೆ. ಪಾಲ್ಕುರಿಕಿ ಸೋಮನಾಥನ ಜ್ಞಾತಿಗಳಾಗಿ ತೋರುವ 'ಪಾಲಕುರಿಕಿ' ಎಂಬ ಮನೆಯ ಹೆಸರುಳ್ಳ ಮಾಹೇಶ್ವರರು, ವರಂಗಲ್ ಜಿಲ್ಲೆಯ ರಘುನಾಥಪಲ್ಲಿಯು ಹತ್ತಿರದಲ್ಲೂ ಸಿಕಿಂದ್ರಾಬಾದಿನಲ್ಲೂ ಏಂಜಾಲದಲ್ಲೂ ಈಗಲೂ ಇದ್ದಾರೆ. ಸೋಮನಾಥನ ಶಿಷ್ಯರಾಗಿ ಕಾಣುವ "ಪಿಡುಪರ್ತಿ"ಯವರೂ, ಬೀಗರಾಗಿ ಕಾಣುವ "ವಿಭೂತಿ" "ಶಿವರಾತ್ರಿ"ಯವರೂ ಗುರುಗಳ ಸ್ಥಾನವಾದ "ಕಟ್ಟಕೂರೂ" ಇದೇ ಪ್ರಾಂತದಲ್ಲಿ ಒತ್ತಟ್ಟಿಗೇನೇ ಹತ್ತಿರ ಹತ್ತಿರ ಇವೆ. "ವರಂಗಲ್ಲಿನ ಪ್ರತಾಪರುದ್ರನು ಸೋಮನಾಥನ ಪುರಾಣವನ್ನು ಕೇಳಿದ್ದನು" ಎಂಬ ಪಿಡುಪರ್ತಿಕವಿಯ ಹೇಳಿಕೆಯೂ ಮೇಲಿನ ಅಂಶಗಳನ್ನು ಬಲಪಡಿಸುತ್ತದೆ. ಸೋಮನಾಥನ ಗ್ರಂಥಗಳೂ ಈ ದೇಶದಲ್ಲಿ ಬಹಳ ಪ್ರಚಾರವಾಗಿವೆ. ೧೫ ವರ್ಷಗಳ ಹಿಂದೆ ಈ ಪಾಲ್ಕುರಿಕಿಯನ್ನು ನೋಡಿ ಪರಿಶೀಲನೆಮಾಡಿದ ಸುಪ್ರಸಿದ್ಧರಾದ ಶ್ರೀ ಶೇಷಾದ್ರಿರಮಣಕವಿಗಳು ತಮ್ಮ "ನಿಜಾಂರಾಷ್ಟ್ರ ಪ್ರಶಂಸೆ" ಎಂಬ ತೆಲುಗು ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ—

"ಸೋಮನಾಥನು ಓರುಗಲ್ಲಿಗೆ ಮೂರುಗಾವದ ದೂರದಲ್ಲಿರುವ ಪಾಲ್ಕುರಿಕಿ ಯಲ್ಲಿ ಶಿವೈಕ್ಯನಾದನು. ಆ ಪ್ರದೇಶದಲ್ಲಿ ಮಠವೊಂದು ದೇವಾಲಯದಂತೆ ಕಟ್ಟಲ್ಪಟ್ಟಿದೆ. ಅಲ್ಲೊಂದು ಶಿವಲಿಂಗವನ್ನು ಪ್ರತಿಷ್ಠಿಸಿ ಈಗಲೂ ಜಂಗಮರು ಪೂಜಿಸುತ್ತಿರುತ್ತಾರೆ. ಕವಿವರ್ಯನು ಶಿವೈಕ್ಯವಾದ ಸ್ಥಳದಲ್ಲಿ ದೊಡ್ಡ ಉತ್ಸವವು ಜರುಗಿಸಲ್ಪಡುತ್ತಿದೆ. ಕವಿಚರಿತ್ರೆಯನ್ನು ಗ್ರಂಥಸ್ಥ ಮಾಡಲಿಚ್ಛೆಯಾದರೆ ಇಲ್ಲಿ ಬಹಳ ಚರಿತ್ರೆ ರಹಸ್ಯಗಳು ಲಭಿಸುವುವು. ಸೋಮನಾಥನ ಗ್ರಂಥಗಳು ಕೂಡ ಇಲ್ಲಿ ಬಹಳ ವ್ಯಾಪಕವಾಗಿವೆ"—(೪೫ನೆಯ ಪುಟ).

ಇತ್ಯಾದಿ ಪ್ರಮಾಣಗಳಿಂದ ಪಾಲ್ಕುರಿಕಿ ಸೋಮನಾಥ ಕವಿಯ ಜನ್ಮನಿವಾಸ ಭೂಮಿಯು ಓರಂಗಲ್ಲಿನ ಹತ್ತಿರ ಇರುವ ಆಂಧ್ರದೇಶದ "ಪಾಲಕುರಿಕಿ"ಯೇ ಎಂಬುದು ಸಿದ್ಧಾಂತವೇ ಸರಿ. 'ಪಾಲ್ಕುರಿಕಿ' ಎಂಬ ಶಬ್ದವು ಈಗಿನ ಪ್ರಾಂತವಿಭಾಗವನ್ನನುಸರಿಸಿ ಕನ್ನಡ ನುಡಿಯೆಂದು ರಾಯರ ಹೇಳಿಕೆಯಿದೆ. ಅದು ಪ್ರಾಚೀನಕಾಲದಲ್ಲಿ ಯಾವ ಭಾಷೆಗೆ ಸೇರಿರುವುದೆಂಬುದನ್ನು ಹೇಳುವುದು ಸಾಧ್ಯವಿಲ್ಲ. ಅದು ಆಂಧ್ರ ಭಾಷೆಯದೇ ಏಕಾಗಬಾರದು? 'ಕುಱ್ಱು' ಎಂಬುದು ಔಪವಿಭಕ್ತಿಕವಾಗಿ "ಕುರಿಕಿ"ಯಾಗುತ್ತದೆ. ಅಂಗಲಕುರ್ರು = ಅಂಗಲಕುರಿಕಿ, ಮೋತುಕುರ್ರು = ಮೋತ್ಕುರಿಕಿ ಮೊದಲಾದ ಗ್ರಾಮದ ರೂಪಗಳು ಆಂಧ್ರದೇಶದಲ್ಲಿಯೂ ಉಂಟು. ತುಮಕೂರಿನ ಹಾಲ್ಕುರಿಕೆಯು ಸೋಮನಾಥಕವಿಯ ಯಾವ ಸ್ಮೃತಿಯಿಂದಲೂ ಕೂಡಿರುವದಿಲ್ಲ. ಪಿಡುಪರ್ತಿ, ವಿಭೂತಿ ಮುಂತಾದ ಉಪನಾಮಗಳುಳ್ಳ ಜಂಗಮರಾಗಲಿ

ಸೋಮನಾಥನ ಗ್ರಂಥಗಳಾಗಲಿ ಹಾಲ್ಕುರಿಕೆಯಲ್ಲಿಲ್ಲ. ಸೋಮನಾಥನ ಊರೆಂದು ಹೇಳುವ ಸಂಪ್ರದಾಯವೂ ಇಲ್ಲ. ಒಂದೆರಡು ತೆಲುಗು ಸೊಟ್ಟಪುಟ್ಟ ನುಡಿಗಳು ಆ ಊರಲ್ಲಿ ಕೆಲವರಿಗೆ ತಿಳಿದರೂ ಅದು ಶುದ್ಧ ಕನ್ನಡ ಪ್ರದೇಶವೇ ಆಗಿದೆ. ಪಾಲ್ಕುರಿಕಿ ಸೋಮನಾಥನು ಅಲ್ಲಿ ಹುಟ್ಟಿದ್ದರೆ ಅವನಿಗೆ ಕನ್ನಡದಲ್ಲಿಯೇ ದೊಡ್ಡ ಪಾಂಡಿತ್ಯವು ಸಹಜವಾಗಿ ಲಭಿಸಬೇಕಾಗಿದ್ದಿತು. ಅವನು ತನ್ನ ಬಸವಪುರಾಣವನ್ನು ಬಸವನ ಮತ್ತು ತನ್ನ ಮಾತೃಭಾಷೆಯಾದ ಕನ್ನಡದಲ್ಲಿಯೇ ರಚಿಸುತ್ತಿದ್ದನು. ಹಾಲ್ಕುರಿಕೆಯು ಪ್ರಾಚೀನಕಾಲದಿಂದ ಇದ್ದು ಸೋಮನಾಥನ ಭೂಮಿಯಾಗಿದ್ದರೆ ಅಪ್ರಸಿದ್ಧವಾಗಿ ರಲು ಕಾರಣಗಳಿಲ್ಲ. ಸೋಮನಾಥನು ಶುದ್ಧ ಆಂಧ್ರದೇಶ ಮಧ್ಯದಲ್ಲಿ ಹುಟ್ಟಿದ ನೆಂಬುದನ್ನು ಆತನ ತೆಲುಗು ಜಾಣ್ನುಡಿಯ ಬಿಗುವಿನಿಂದಲೇ ತಿಳಿಯಬಹುದು. ಬಸವಪುರಾಣದ ರಚನೆಮಾಡಿದಮೇಲೆ ಸೋಮನಾಥನಿಗೆ ಪ್ರಸಿದ್ಧಿಯುಂಟಾಗಿ ದೇಶ ದೇಶಾಂತರಗಳ ಸಂಚಾರದ ಮೂಲಕವಾಗಿ ಆತನಿಗೆ ತಮಿಳು, ಕನ್ನಡ, ಮರಾಠಿ ಭಾಷೆಗಳೂ ಬಂದಿರಬಹುದು. ಅಷ್ಟೇ ಹೊರತು ಕನ್ನಡಭಾಷೆಯಲ್ಲಿ ಸರಿಯಾದ ಪಾಂಡಿತ್ಯವಿತ್ತೆಂಬುದಕ್ಕೆ ನಿದರ್ಶನಗಳಿಲ್ಲ.

ವೀರಶೈವ ವಾಙ್ಮಯವು, ಸಂಸ್ಕೃತ ಆಂಧ್ರ ಕರ್ಣಾಟಕ ಮಹಾರಾಷ್ಟ್ರ ದ್ರವಿಡಭಾಷೆಗಳಲ್ಲಿ ಅನಂತವಾಗಿದೆ. ಅಚ್ಚಾದ ಸಾಮಗ್ರಿಯೇ ಎರಡೆತ್ತುಗಳ ಗಾಡಿಗೆ ಸರಿಹೋಗುವಷ್ಟಿದೆ. ೧೫-೨೦ ವರ್ಷಗಳಿಂದ ವೀರಶೈವರ ಪತ್ರಿಕಾ ಪ್ರಪಂಚವೂ ಆರಂಭವಾಗಿದೆ. ಅನೇಕ ವಿಮರ್ಶೆಗಳೂ ಬಂದಿವೆ. ಬಹಳ ಪ್ರಾಚೀನ ಕಾಲದಿಂದಲೂ ಪ್ರಚಾರದಲ್ಲಿರುವ ವೀರಶೈವ ವಾಙ್ಮಯವು ೧೨ನೆಯ ಶತಮಾನದಲ್ಲಿ ಹುಟ್ಟಿತೆಂಬುದು ಸಾಹಸವೇ ಸರಿ. ಶ್ರೀ ಹಯವದನರಾಯರ ಶ್ರೀಕರಭಾಷ್ಯದ ಇಂಗ್ಲೀಷು ಪೀಠಿಕೆಯೂ ಶ್ರೀ ನಾರಾಯಣರಾಯರ ಪಂಡಿತಾರಾಧ್ಯ ಚರಿತ್ರೆಯ ಪೀಠಿಕೆಯೂ ಅಪಸಿದ್ಧಾಂತಗಳಿಂದ ತುಂಬಿರುವುವು. ಗ್ರಂಥಗಳನ್ನೂ ಶಾಸನಗಳನ್ನೂ ಸರಿಯಾಗಿ ಪರಿಶೀಲಿಸದೆ ಸಂಪ್ರದಾಯವನ್ನೂ ತಿಳಿಯದೆ "ಚರಿತ್ರಗ್ರಂಥಗಳ" ಹೆಸರಿನಿಂದ ಪ್ರಕಟಿಸಿದರೆ ಪ್ರಯೋಜನವಾಗಲಾರದು. ಸುಮ್ಮನೆ ಕಲ್ಪನಾತ್ಮಕವಾಗಿ ಬರೆಯುತ್ತ ಹೋದರೆ ವಿವಾದ ವಿಸ್ತಾರವಾಗುವದಲ್ಲದೆ ಪರಿಶ್ರಮೆಯು ಸಫಲವಾಗುವುದಿಲ್ಲ. ಸಪ್ರಮಾಣವಾಗಿ ಗುಣದೋಷಾದಿಗಳನ್ನು ನಿರೂಪಿಸಿದರೆ ಯಾರಿಗೂ ಹಾನಿಯಿಲ್ಲವಷ್ಟೆ! ಪರಿಶೋಧಕನು ಬಹಳವಾಗಿ ನೋಡಿ ಸ್ವಲ್ಪವಾಗಿ ಬರೆಯಬೇಕೇ ಹೊರತು ಸ್ವಲ್ಪವಾಗಿ ನೋಡಿ ಬಹಳವಾಗಿ ಬರೆಯಬಾರದೆಂದು ನಿವೇದಿಸುತ್ತೇನೆ.

ಚಿದಿರೆಮಠದ ವೀರಭದ್ರಶಾಸ್ತ್ರಿ.

ಎಕ್ಸ್ ರೇ ಅಥವಾ ರಾಂಟ್‌ಜನ್ ಕಿರಣಗಳು


(೩) ವೈದ್ಯಶಾಸ್ತ್ರದಲ್ಲಿ ಎಕ್ಸ್ ರೇ ಉಪಯೋಗ

ವ್ಯಾಧಿಪರೀಕ್ಷೆಗೆ ಸಹಾಯ.—ಈ ನೂತನ ರಶ್ಮಿಗಳನ್ನು ಉಪಯೋಗಿಸಿ ವ್ಯಾಧಿಪರೀಕ್ಷೆಯನ್ನು ಮಾಡಿದವರಲ್ಲಿ ಮೊಟ್ಟಮೊದಲನೆಯವನು ಅಮೆರಿಕ ದೇಶದ ಒಬ್ಬ ವೈದ್ಯನೆಂದು ಮೇಲೆ ತಿಳಿಸಿದೆ. ರೋಗಿಯ ಕಾಲಿನೊಳಗೆ ಹೊಕ್ಕಿದ್ದ ಒಂದು ಗುಂಡಿನ ಸ್ಥಳವನ್ನು ತಿಳಿಯಲು ಅವನು ನಲವತ್ತು ನಿಮಿಷಗಳ ಕಾಲ ಈ ಕಿರಣಗಳನ್ನು ಬಿಡಬೇಕಾಯಿತು. ಇದಕ್ಕೆ ಕಾರಣ ಮೊದಮೊದಲು ತಯಾರಿಸಿದ ಕಿರಣಗಳ ಮಾರ್ದವ. ಈಗ ಈ ಪರೀಕ್ಷೆಗೆ ಕೆಲವು ಸೆಕಂಡುಗಳು ಸಾಕು. ಎಕ್ಸ್ ರೇ ಹೊರಬಿದ್ದ ತರುಣದಲ್ಲಿಯೆ ಅಮೆರಿಕ ದೇಶದ ಒಬ್ಬ ವೈದ್ಯನು ಉಡುಗೆ ತೊಡಿಗೆಗಳನ್ನು ಪೂರ್ತಿಯಾಗಿ ಧರಿಸಿದ್ದ ಒಬ್ಬ ಕುತೂಹಲಿಯ ಮೇಲೆ ಅದನ್ನು ಬಿಟ್ಟು ಅವನ ಸಂಪೂರ್ಣ ಅಸ್ಥಿಪಂಜರದ ಚಿತ್ರವನ್ನು ತೆಗೆದನು. ವ್ಯಾಧಿ ಪರೀಕ್ಷೆಯಲ್ಲಿ ಇದು ಹೆಚ್ಚು ವ್ಯಾಪಿಸಿತು. ಶ್ವಾಸಕೋಶ, ಹೃದಯ, ಜೀರ್ಣಕೋಶ ಮೊದಲಾದವುಗಳನ್ನೆಲ್ಲ ಸರಿಯಾಗಿ ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ಮಾಡಲು ಅವಕಾಶವಾಯಿತು. ಕ್ಷಯ, ಕ್ಯಾನ್‌ಸರ್, ಮುಂತಾದ ರೋಗಗಳನ್ನು ಪ್ರಾರಂಭದಲ್ಲಿಯೇ ಗುರುತಿಸಿದ್ದರಿಂದ ಅನೇಕ ಜೀವಗಳು ಉಳಿದುಕೊಂಡವು.


ಎಕ್ಸ್ ರೇ ಫೋಟೋವನ್ನು ಮೊದಲು ನೋಡಿದರೆ ನಮಗೆ ಏನೂ ತಿಳಿಯುವುದಿಲ್ಲ. ಈ ಚಿತ್ರವು ಬೀಳುವುದಕ್ಕೆ ಬೇರಿಯಂಪ್ಲಾಟಿನೋ ಸಯನೈಡಿನಿಂದ ತೆರೆಯನ್ನು ಸಜ್ಜುಗೊಳಿಸಬೇಕು. ಎಕ್ಸ್ ರೇಯು ಆ ಉಪ್ಪಿನ ಮೇಲೆ ಬಿದ್ದರೆ ಅದು ಪ್ರಕಾಶಮಾನವಾಗುತ್ತದೆ. ಅದರ ಮೇಲೆ ಬೀಳುವಾಗ ದಾರಿಯಲ್ಲಿ ಒಂದು ವಸ್ತುವನ್ನು ಹಿಡಿದರೆ ಆ ಭಾಗವನ್ನು ಬಿಟ್ಟು ಉಳಿದ ಭಾಗದ ತೆರೆಯು ಪ್ರಕಾಶವಾಗಿ ಕಾಣುತ್ತದೆ. ಗೋಡೆಯ ಮೇಲೆ ಬೆಳಕನ್ನು ಬಿಟ್ಟು ದಾರಿಯಲ್ಲಿ ಒಂದು ವಸ್ತುವನ್ನು ಹಿಡಿದರೆ ಏನಾಗುತ್ತದೆ? ಆ ವಸ್ತುವಿನ ಭಾಗ ಬಿಟ್ಟು ಉಳಿದ ಭಾಗವು ಪ್ರಕಾಶವಾಗುತ್ತದೆ. ವಸ್ತುವಿನ ಆಕಾರಕ್ಕೆ ತಕ್ಕ ನೆರಳು ಗೋಡೆಯ ಮೇಲೆ ಬೀಳುತ್ತದೆ. ಎಕ್ಸ್ ರೇಗಳು ತೆರೆಯ ಮೇಲೆ ಬೀಳುವಾಗ ನಿಮ್ಮ ಕೈಯನ್ನು ದಾರಿಯಲ್ಲಿ ಹಿಡಿದರೆ ಅದೇ ರೀತಿ ಇದರ ನೆರಳು ತೆರೆಯ ಮೇಲೆ ಬೀಳುತ್ತದೆ. ಆದರೆ ಒಂದು ವ್ಯತ್ಯಾಸ ಮಾತ್ರ ಕಾಣುತ್ತದೆ. ಬೆಳಕಿಗೆ ಎದುರಾಗಿ ಕೈಹಿಡಿದರೆ ನಿಮ್ಮ ಕೈ ಆಕಾರವು

ಪೂರ್ತಿಯಾಗಿ ಗೋಡೆಯ ಮೇಲೆ ಬೀಳುತ್ತದೆ. ಎಕ್ಸ್ ರೇಗೆ ಕೈಹಿಡಿದಾಗ ಈ ಪೂರ್ತಿ ಆಕಾರವು ಬೀಳದೆ ಒಳಗಿನ ಅಸ್ಥಿಪಂಜರದ ನೆರಳು ಮಾತ್ರ ಬೀಳುತ್ತದೆ. ಮೊದಲು ಸಲ ನಿಮ್ಮ ಕೈಯಿಟ್ಟು ಈ ವಿಕೃತವಾದ ನೆರಳನ್ನು ನೋಡಿದಾಗ ನಿಮ್ಮ ಮೈ 'ಜುಂ' ಎನ್ನುತ್ತದೆ. ನಿಮಗೆ ನಿಜವಾಗಿಯೂ ಗಾಬರಿಯಾಗುತ್ತದೆ. ಈ ವಿಕೃತ ಛಾಯೆಗೆ ಕಾರಣವೇನು? ರಾಂಟ್‌ಜನ್ನನು ತನ್ನ ಮೊಟ್ಟಮೊದಲ ಪರೀಕ್ಷೆಗಳಲ್ಲಿಯೇ ಕಂಡಿದ್ದಂತೆ ಈ ಕಿರಣಗಳು ಪದಾರ್ಥಗಳ ಸಾಂದ್ರತೆಗೆ ತಕ್ಕಂತೆ ಅವುಗಳನ್ನು ಪ್ರವೇಶಿಸುತ್ತವೆ. ನಮ್ಮ ಕೈಯಲ್ಲಿರುವ ಚರ್ಮ ರಕ್ತ ಮಾಂಸಕ್ಕಿಂತಲೂ ಮೂಳೆಗಳ ಸಾಂದ್ರತೆ ಹೆಚ್ಚು. ಈ ಮೂಳೆಗಳ ಮಧ್ಯೆ ಒಂದು ಗುಂಡಿದ್ದರೆ ಅದರ ಸಾಂದ್ರತೆ ಮೂಳೆಗಳಿಗಿಂತ ಹೆಚ್ಚು. ಎಕ್ಸ್ ರೇಗಳು ಚರ್ಮ ರಕ್ತ ಮಾಂಸಗಳ ಮೂಲಕ ನುಗ್ಗಬಲ್ಲವು. ಮೂಳೆಗಳ ಮೂಲಕ ನುಗ್ಗಲಾರವು. ಆ ಮೂಳೆಗಳಿರುವ ಕಡೆಗಳಲ್ಲೆಲ್ಲ ಅವು ಹಾಯಲಾರದೆ ಆ ಮೂಳೆಗಳ ಆಕಾರಕ್ಕೆ ಸಮನಾದ ಸ್ಥಳವನ್ನು ಬಿಟ್ಟು ಮಿಕ್ಕಕಡೆಗಳನ್ನು ಬೆಳಗುತ್ತವೆ. ಅಂದರೆ ಮೂಳೆಗಳ ನೆರಳು ತೆರೆಯ ಮೇಲೆ ಬೀಳುತ್ತದೆ. ಮೂಳೆಗಳು ಒಡೆದಿದ್ದರೆ ಛಾಯೆಯಲ್ಲಿ ಇದನ್ನು ನೋಡಬಹುದು. ಗುಂಡಿನ ಛಾಯೆಯು ಇನ್ನೂ ಕಪ್ಪಗೆ ಬೀಳುವುದರಿಂದ ಅದು ಇರುವ ಸ್ಥಳವನ್ನು ಪತ್ತೆಮಾಡಬಹುದು. ಗುಂಡಿನಂತೆಯೇ ಭಾರವಾದ ಯಾವ ಪದಾರ್ಥಗಳು—ಉಂಗುರ, ಕಾಸು, ಬಂಗಾರದ ಕಲ್ಲು, ಇತ್ಯಾದಿ—ಒಳಗೆ ಸೇರಿಕೊಂಡಿದ್ದರೂ ಅಸ್ಥಿಗಿಂತ ಅವುಗಳು ಭಾರವಾಗಿರುವುದರಿಂದ ಎಕ್ಸ್ ರೇ ಛಾಯೆಯಲ್ಲಿ ಅವುಗಳ ಆಕಾರಕ್ಕೆ ತಕ್ಕಂತೆ ಅತಿ ಕಪ್ಪಗಿರುವ ಒಂದು ಆಕೃತಿಯು ಕಾಣುತ್ತದೆ. ಕೂಡಲೆ ಅವು ಪತ್ತೆಯಾಗುತ್ತವೆ. ಹೆಚ್ಚು ಕಷ್ಟವಿಲ್ಲದೆ ಹೊರಗೆ ತೆಗೆಯಬಹುದು.

ವ್ಯಾಧಿಚಿಕಿತ್ಸೆಯಲ್ಲಿ ಉಪಯೋಗ.—ವ್ಯಾಧಿಪರೀಕ್ಷೆಗೆ ಇದು ಸಹಾಯಕವೆಂದು ಮೊದಲಿಂದಲೂ ಹೆಸರಾಯಿತು. ಜೊತೆಗೆ ಇದರ ಇನ್ನೊಂದು ಗುಣವು ಶೀಘ್ರದಲ್ಲಿಯೇ ಗೋಚರವಾಯಿತು. ಈ ಕಿರಣಗಳ ಪರೀಕ್ಷೆಯಲ್ಲಿಯೇ ಮಗ್ನರಾಗಿದ್ದ ಕೆಲವು ಉತ್ಸಾಹಿಗಳಿಗೆ ಕೆಲವು ವಿಚಿತ್ರವಾದ ಅನುಭವಗಳು ಪ್ರಾಪ್ತವಾದುವು. ಕೆಲವರ ಕೂದಲು ಉದುರಲಾರಂಭಿಸಿತು. ಕೆಲವರು ಕಣ್ಣುನೋವಿನಿಂದ ಪೀಡಿತರಾದರು. ಕೆಲವರಿಗೆ ಕೈಸುಟ್ಟು ಗಾಯಗಳಾದವು. ತೀಕ್ಷ್ಣವಾದ ಅಲೆಗಳನ್ನು ತಯಾರಿಸಲು ಹೊರಟ ಕೆಲವರಿಗೆ ಇನ್ನೂ ಹೆಚ್ಚಿನ ವ್ಯಾಧಿಗಳು ತಗಲಿದವು. ಇವು ಅವರ ಶರೀರದೊಳಕ್ಕೆ ಹೊಕ್ಕು ರಕ್ತಕಣಗಳನ್ನು ನಾಶಮಾಡಿ ಅವರ ಶಕ್ತಿಯನ್ನೂ ಕ್ರಮೇಣ ಕೆಲವರ ಜೀವವನ್ನೂ ಹೀರಿಕೊಂಡವು. ಜೀವಾಣುಗಳಿಗೆ ಈ ಕಿರಣಗಳು ಹಾನಿಕರವೆಂದು ವ್ಯಕ್ತವಾಯಿತು. ಈ ವಿಷಯವನ್ನು ವಿಶದವಾಗಿ ಪರೀಕ್ಷಿಸ




ಎಕ್ಸ್‌ರೇ ಫೋಟೋ ತೆಗೆಯುವುದು




ಕರುಳಿನ ಎಕ್ಸ್‌ರೇ ಚಿತ್ರ

(ಪಡಿಯಚ್ಚುಗಳು ಶ್ರೀಮಾನ್ ಯು. ರಾಘವೇಂದ್ರಾಚಾರ್ಯರು ದಯೆಯಿಟ್ಟು ಕೊಟ್ಟವು.)



ವಾಚಿನ ಎಕ್ಸ್‌ರೇ ಚಿತ್ರ



ಪಿಸ್ತೂಲಿನ ಎಕ್ಸ್‌ರೇ ಚಿತ್ರ

(ಪಡಿಯಚ್ಚುಗಳು ಶ್ರೀಮಾನ್ ಯು. ರಾಘವೇಂದ್ರಾಚಾರ್ಯರು ದಯೆಯಿಟ್ಟು ಕೊಟ್ಟವು.)

ಬೇಕೆಂದು ತೀರ್ಮಾನಿಸಿ, ತಮಗೆ ಉಂಟಾಗಬಹುದಾದ ತೊಂದರೆಗಳನ್ನು ಲಕ್ಷಿಸದೆ, ಕೆಲವು ವೀರಪಟುಗಳು ಹೊರಟರು. ಇವರ ಪ್ರಯೋಗಗಳಿಂದ ಕೆಲವು ಆಶ್ಚರ್ಯಕರ ವಾದ ವಿಷಯಗಳು ಹೊರಬಿದ್ದವು. ಈ ಕಿರಣಗಳು ದೇಹದ ಒಂದೊಂದು ಭಾಗವನ್ನು ಒಂದೊಂದು ರೀತಿ ಬದಲಾಯಿಸಿದವು. ಇವುಗಳ ಕಾವಿನಲ್ಲಿ ಕೆಲವು ಜೀವಕಣಗಳು ಮಡಿದರೆ ಮತ್ತೆ ಕೆಲವಕ್ಕೆ ಇವು ಹೊಸ ಜೀವವನ್ನು ತುಂಬಿದವು. ಎಳೆಯ ಕಣಗಳು (immature cells) ಇವುಗಳ ಜೋರನ್ನು ಬೆಳೆದ ಕಣಗಳಂತೆ ತಡೆದು ಕೊಳ್ಳಲಿಲ್ಲ. ಕ್ಯಾನ್‌ಸರ್ ರೋಗ ತಗಲಿದ ಕಣಗಳು ಇವುಗಳ ಹೊಡೆತದಲ್ಲಿ ಹುಟ್ಟಡಗಿದವು. ದೇಹದಲ್ಲಿರುವ ಸೂಕ್ಷ್ಮ ಕ್ರಿಮಿಗಳು (germs) ಇವುಗಳ ಉದ್ವೇಗ ದಲ್ಲಿ ನಾಶವಾದವು. ದೇಹದಲ್ಲಿರುವ ಪ್ರತಿಯೊಂದು ವಿಷಕ್ರಿಮಿಯನ್ನೂ ನಾಶ ಮಾಡುವ ಉದ್ದೇಶದಿಂದ ಹೊರಟವರು ಇವು ನಾಶವಾಗುವಷ್ಟು ಕಾಲ ಎಕ್ಸ್ ರೇಯು ದೇಹಕ್ಕೆ ತಗಲುವುದರಿಂದ ಇತರ ವಿಧವಾದ ಹಾನಿಗಳು ಪ್ರಾಪ್ತವಾಗುವು ವೆಂದು ತಿಳಿದರು. ಕ್ಯಾನ್‌ಸರ್ ಮತ್ತು ಹುಳುಕಡ್ಡಿಗಳ ನಿವಾರಣೆಗಾಗಿಯೂ ಕೆಲವು ಗಾಯಗಳು ಬೇಗ ಮಾಯುವಂತೆ ಪ್ರಚೋದಿಸುವುದಕ್ಕಾಗಿಯೂ ಈ ಕಿರಣಗಳು ಪ್ರತಿಯೊಂದು ಮುಖ್ಯ ಆಸ್ಪತ್ರೆಯಲ್ಲಿಯೂ ಈಗ ಉಪಯೋಗದಲ್ಲಿವೆ.

ವೈಜ್ಞಾನಿಕರ ಕಷ್ಟಸುಖಗಳು

ಸತ್ಯಪ್ರೇಮ.—ಎಕ್ಸ್ ರೇಗಳ ಗುಣಾವಗುಣಗಳನ್ನು ಪರೀಕ್ಷಿಸಲು ಹೊರಟ ವೈಜ್ಞಾನಿಕರ ವಿಷಯವಾಗಿ ಸ್ವಲ್ಪ ಯೋಚಿಸೋಣ. ಈ ಪರೀಕ್ಷೆಯು ಅಪಾಯಕರ ವೆಂದು ಅನೇಕರಿಗೆ ತಿಳಿದಿತ್ತು. ಆದರೂ ಈ ಕಷ್ಟಕೆಲಸವನ್ನು ಏಕೆ ಕೈಕೊಂಡರು? ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಕುತೂಹಲ ಮತ್ತು ವಿದ್ಯಾತುರತೆ. ಹೊನ್ನು ಹೆಣ್ಣುಗಳ ವ್ಯಾಮೋಹ ಹಿಡಿದವನಿಗೆ ನಿದ್ದೆ ಹತ್ತುತ್ತದೆಯೆ? ಈ ಆಸೆಗಳ ಉದ್ವೇಗದಲ್ಲಿ ಬುದ್ಧಿವಿಕಲ್ಪವಾಗಿ ಅಂಧಕಾರ ಕವಿಯುವುದಿಲ್ಲವೆ? ಅವರ ಉದ್ದೇಶ ಸಾಧನೆ ಉಳಿದು ಬೇರೆ ಯೋಚನೆ ಅವರ ಮನಸ್ಸಿಗೆ ಹತ್ತುತ್ತದೆಯೆ? ವಿದ್ಯಾತುರತೆಯೂ ಇಷ್ಟೇ ತೀವ್ರವಾದುದು. ವೀರವಿಜ್ಞಾನಿಗೆ ಮಿಕ್ಕ ಪ್ರಪಂಚವೆಲ್ಲ ಶೂನ್ಯ. ನ್ಯೂಟ ನ್ನನು ಶಾಸ್ತ್ರಾನ್ವೇಷಣೆಯಲ್ಲಿ ಮಗ್ನನಾಗಿದ್ದಾಗ ಅವನಿಗೆ ಬೇರಾವುದೂ ಕಂಡು ಕೇಳುತ್ತಿರಲಿಲ್ಲವಂತೆ. ಎದುರಿಗೆ ನಿಂತ ಸ್ನೇಹಿತರು ಅವನನ್ನು ತಿವಿದು ಎಬ್ಬಿಸಿದಲ್ಲದೆ ಅವರು ಅವನ ಕಣ್ಣಿಗೆ ಗೋಚರಿಸುತ್ತಿರಲಿಲ್ಲವಂತೆ. ನಿಜವಾದ ವಿಜ್ಞಾನಿಗಳು ಸತ್ಯಾನ್ವೇಷಣೆಯೆಂಬ ವ್ರತದಲ್ಲಿ ಸದಾ ಮಗ್ನರಾಗಿರುತ್ತಾರೆ. ಸತ್ಯವೇ ಅವರ ಜೀವನದ ಗುರಿ, ಅವರ ದಾಹವನ್ನಡಗಿಸುವ ಪಾನ. ಅನ್ನಾಹಾರಗಳ ತವಕ

ಅವರನ್ನು ಸೋಂಕದು. ಎಡಿಸನ್ನನು ಒಂದು ಪರಿಶೋಧನೆಯನ್ನು ನಡೆಸುತ್ತಿದ್ದಾಗ ತಾನು ಕೂತಿದ್ದ ಸ್ಥಳದಿಂದ ಕದಲಲು ಎರಡೂವರೆ ದಿನಗಳಾದವಂತೆ. ವೈಜ್ಞಾನಿಕರು ಈ ರೀತಿ ಏಕಾಗ್ರಚಿತ್ತದಿಂದ ಪ್ರಕೃತಿಯನ್ನು ಪೂಜಿಸದಿದ್ದರೆ ನಮ್ಮ ಬಾಳ್ವೆಯು ಇಷ್ಟು ಹಿತವಾಗುತ್ತಿರಲಿಲ್ಲ. ನಾವು ಕೈಗೊಳ್ಳುವ ಪ್ರತಿಯೊಂದು ಕೆಲಸಕ್ಕೂ ಒಳ್ಳೆಯದೋ ಕೆಟ್ಟದ್ದೋ ಒಂದು ಧ್ಯೇಯವಿದ್ದೇ ಇರುತ್ತದೆ. ಮೇಲೆ ಕಾಣಿಸಿ ಕೊಳ್ಳದಿದ್ದರೂ ಸ್ವಲ್ಪ ಕಣ್ಣಿಟ್ಟು ನೋಡಿದರೆ ಇದು ಗೋಚರಿಸುತ್ತದೆ. ಯೋಗಿಗಳಲ್ಲಿ ಕೆಲವರ ದೃಷ್ಟಿ ಬ್ರಹ್ಮಸಾಕ್ಷಾತ್ಕಾರದ ಕಡೆ; ಕೆಲವರದು ಮಾರಿಮಸಣಿಗಳನ್ನೂ ದುರ್ದೈವಗಳನ್ನೂ ಒಲಿಸಿಕೊಂಡು ಮಾಟಕಾಟಗಳನ್ನು ಹುಡುಕುವ ಕಡೆ. ವಿಜ್ಞಾನಿ ಗಳಿಗೆ ಸತ್ಯದೃಷ್ಟಿಯು ಪ್ರಧಾನವಾದದ್ದಾದರೂ ಲೋಕಕಲ್ಯಾಣಬುದ್ಧಿಯೂ ಜೊತೆಗೆ ಹೆಣೆದುಕೊಂಡಿರಬೇಕು. ತಾವು ತೋರುವ ಮಾರ್ಗಗಳು ಜೀವನರಥದ ಚಕ್ರಗಳಿಗೆ ಕೀಲೆಣ್ಣೆಯಂತಿರಬೇಕು. ಬಂಧನದಲ್ಲಿರುವ ದುಷ್ಟಶಕ್ತಿಗಳನ್ನು ಕಳಚಿ ಪ್ರಪಂಚವು ಅಲ್ಲೋಲಕಲ್ಲೋಲದಲ್ಲಿ ಮುಳುಗುವಂತೆ ಮಾಡುವುದು ಶಾಸ್ತ್ರಧರ್ಮವಲ್ಲ. ಇಂಥ ಪ್ರಸಂಗವು ಈಗ ನಮಗೆ ಒದಗಿ ವಿಜ್ಞಾನವನ್ನು ದ್ವೇಷಿಸಬೇಕಾಗಿ ಬಂದಿದೆ. ಸರ್ ಸಿ. ವಿ. ರಾಮನ್ ಅವರು ಈಚೆಗೆ ಕೊಟ್ಟ ಒಂದು ಉಪನ್ಯಾಸದಲ್ಲಿ ಇಂಥ ವಿಜ್ಞಾನಿಗಳು ಹುಟ್ಟಿಕೊಂಡಿರುವುದರಿಂದ ವೈಜ್ಞಾನಿಕರು ತಲೆಯೆತ್ತಿಕೊಂಡು ತಿರುಗು ವುದು ಕಷ್ಟವಾಗಿದೆಯೆಂದೂ, ಅಂಥ ಪರಿಶೋಧನೆಗಳನ್ನು ದಂಡಿಸುವುದು ಜನಾಂಗದ ಕರ್ತವ್ಯವೆಂದೂ ನುಡಿದರು. ಈ ದುಷ್ಟಶಕ್ತಿಗಳಿಂದ ನಾಗರಿಕತೆಯನ್ನುಳಿಸಿಕೊಳ್ಳು ವುದು ಹೇಗೆಂಬುದೇ ಈಗಿನ ಮುಂದಾಳುಗಳ ಯೋಚನೆ.

ಆನಂದ.—ಜನರ ಹಿತಕ್ಕಾಗಿ ಹೊಸ ಸಾಧನಗಳನ್ನು ಕಂಡುಹಿಡಿಯುವ ವೈಜ್ಞಾನಿಕರ ಸಂಖ್ಯೆ ವಿಶೇಷವಾಗಿದೆ. ಆರ್ಕಿಮಿಡಿಸ್ ಮೊದಲುಗೊಂಡು ಸಾಲ್ವರ್ ಸನ್ ಸಂಯುಕ್ತ (compound)ವನ್ನು ಕಂಡುಹಿಡಿದ ವಿಜ್ಞಾನಿ ಪಾಲ್ ಆರ್‌ಲಿಕ್ ಪರ್ಯಂತ ಈ ಸಂತತಿಯು ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ. ಯೋಗಿಗೆ ಬ್ರಹ್ಮಸಾಕ್ಷಾತ್ಕಾರವಾದರೆ ಉಂಟಾಗುವ ಆನಂದ ಇವರಿಗೆ ವಿಜ್ಞಾನಮಾರ್ಗಗಳ ಬೆಳಕಿನಿಂದ ಉಂಟಾಗುತ್ತದೆ. ಆರ್ಕಿಮಿಡೀಸನು ಪದಾರ್ಥಗಳ ಘನತ್ವಕ್ಕೆ ಸಂಬಂಧ ಪಟ್ಟ ಒಂದು ಸಮಸ್ಯೆಯನ್ನು ಯೋಚಿಸಿ, ಬಗೆಹರಿಯದೆ ಬಹಳ ದಿನ ಅವಸ್ಥೆ ಪಡುತ್ತಿದ್ದನು. ಒಂದು ದಿನ ನಗ್ನಾವಸ್ಥೆಯಲ್ಲಿ ಸ್ನಾನಮಾಡುತ್ತಿದ್ದಾನೆ: ಸ್ನಾನ ಮಾಡುವ ತೊಟ್ಟಿಯಲ್ಲಿಯೂ ಇದೇ ಯೋಚನೆ. ಥಟಕ್ಕನೆ ಒಂದು ಸಮಾಧಾನ ತೋರಿ ಸಮಸ್ಯೆಯು ಹರಿಯಿತು. ಆನಂದಪರವಶನಾಗಿ, ಬಂಧವಿಮೋಚನೆಯಾದ ಹಕ್ಕಿಯಂತೆ, 'ಕಂಡೆ!', 'ಕಂಡೆ!' ಎಂದು ಕೂಗುತ್ತಾ ಬೀದಿಬೀದಿಯಲ್ಲಿ

ಕುಣಿದಾಡಿಕೊಂಡು ಓಡುತ್ತಾ, ದೇವರು ಕರುಣಿಸಿದ ತನ್ನ ನಿಜರೂಪದಿಂದ ಜನರೆಲ್ಲರನ್ನೂ ಮುಗ್ಧಪಡಿಸಿ, ಕ್ಷಣಕಾಲ ಅವರ ಕಣ್ಣನ್ನು ಮುಚ್ಚಿಸಿದನು. ಮಾದಕ ಪದಾರ್ಥಗಳು ಕೆಡುವ ಕಾರಣವನ್ನು ಪರಿಶೀಲಿಸುತ್ತಿದ್ದ ಪಾಸ್ಟ್ಯೂರನಿಗೆ ವಾಯುವಿನಲ್ಲಿರುವ ಸೂಕ್ಷ್ಮ ಕ್ರಿಮಿಗಳು ಇವುಗಳ ನಾಶಕ್ಕೆ ಕಾರಣವೆಂದು ಗೋಚರಿಸಿದಾಗ ಉಂಟಾದ ಆನಂದದಿಂದ ಕೊಂಚಕಾಲ ಏನೂ ಕಾಣಲಿಲ್ಲವಂತೆ ; ಒಂದು ಮಾತನ್ನೂ ಆಡಲಾರದೆ ಸಂತೋಷದ ಮಡುವಿನಲ್ಲಿ ಮುಳುಗಿಹೋದನಂತೆ. ವಿಜ್ಞಾನಸಾಧನೆಯಲ್ಲಿ ಇಂಥ ಅಪಾರ ಸನ್ನಿವೇಶಗಳಿಗೆ ಅವಕಾಶವುಂಟು. ತಮ್ಮ ಒಡನಾಡಿಗಳಿಗೂ ತಮಗೂ ಹಿತವಾಗುವಂತೆ ಮಾಡುವ ಅನೇಕ ಮಾರ್ಗಗಳಿವೆ. ಇದರ ಪರಿಣಾಮವಾಗಿ ತಮ್ಮ ಮತ್ತು ತಮ್ಮ ದೇಶದ ಸಂಪತ್ತು ಹೆಚ್ಚಿ ಮಾನವನ ಅಭ್ಯುದಯವೂ ಮುಂದುವರಿಯಬಹುದು. ರಾಂಟ್‌ಜನ್, ಪಾಸ್ಟ್ಯೂರ್, ಲಿಸ್ಟರ್ ಮುಂತಾದವರು ಇಂಥ ವಿಭೂತಿ ಪುರುಷರು

ವೀರಪರಾಕ್ರಮ.—ಪ್ರಕೃತಿಯು ಒಲಿದಾಗ ವೈಜ್ಞಾನಿಕರಿಗೆ ಉಂಟಾಗುವ ಆನಂದವನ್ನು ನೋಡಿ ಅವರ ಕೆಲಸವು ಸುಲಭವಾದುದು, ಹಿತವಾದುದು, ಎಂದು ಊಹಿಸಬಾರದು. ಅನೇಕವೇಳೆ ಅವರು ಕೈಗೊಳ್ಳುವ ಕೆಲಸವು ಬಹಳ ಕಷ್ಟತರವಾದುದು, ಅಸಹ್ಯಕರವಾದುದು. ಪಾಸ್ಟ್ಯೂರನು ಹುಚ್ಚುನಾಯಿಯ ಕಡಿತಕ್ಕೆ ಕಾರಣವನ್ನೂ ನಿವಾರಣೋಪಾಯವನ್ನೂ ಹುಡುಕುವುದಕ್ಕೆ ಅನೇಕ ತಿಂಗಳುಗಳಾದವು. ಈ ಪರೀಕ್ಷೆಗೆ ಮುಖ್ಯವಾಗಿ ಬೇಕಾದ್ದು ಹುಚ್ಚುನಾಯಿಗಳು. ಈ ಕಾಲದಲ್ಲಿ ಅವನ ಬಂಗಲೆಯ ಸುತ್ತ ವಿವಿಧ ಅವಸ್ಥೆಯಲ್ಲಿದ್ದ ನಾಯಿಗಳು ತುಂಬಿದ್ದುವು. ಕೆಲವಕ್ಕೆ ಹುಚ್ಚು; ಇವುಗಳ ಸಹಾಯದಿಂದ ಹುಚ್ಚನ್ನುಂಟುಮಾಡಿದ್ದವು ಇನ್ನು ಕೆಲವು; ಹುಚ್ಚಿನ ನಿವಾರಣೆಗಾಗಿ ದೇಹದೊಳಕ್ಕೆ ಔಷಧವನ್ನು ಬಿಟ್ಟಿದ್ದವು ಮತ್ತೆ ಕೆಲವು. ಅವನ ಮನೆಯ ಸುತ್ತ ಈ ನಾಯಿಗಳು ಒಂದಿಲ್ಲದಿದ್ದರೆ ಮತ್ತೊಂದು ಸದಾ ಬೊಗಳುತ್ತಿದ್ದವು. ಇವುಗಳ ಭೀಕರನಾದವು ವಿದ್ಯಾತುರತೆಯಲ್ಲಿ ಲೀನನಾಗಿದ್ದ ಪಾಸ್ಟ್ಯೂರನಿಗೆ ಕೇಳದಿರಬಹುದು. ಅವನ ಹೆಂಡತಿ ಮಕ್ಕಳ ಪಾಡೇನು? ಈ ಕೆಲಸಕ್ಕೆ ಸಹಾಯಮಾಡಲು ಅವನು ನೇಮಿಸಿಕೊಂಡವರ ಪೈಕಿ ಯಾರೂ ಮೂರು ತಿಂಗಳಿಗೆ ಮೇಲೆ ನಿಲ್ಲಲಿಲ್ಲವಂತೆ. ಪಾಸ್ಟ್ಯೂರನು ಈ ಕಷ್ಟವನ್ನನುಭವಿಸದಿದ್ದರೆ ಈಗ ಹುಚ್ಚುನಾಯಿಯ ಕಡಿತದಿಂದ ಎಷ್ಟು ಜನ ಸಾಯಬೇಕಾಗಿತ್ತು! ಯೆಲ್ಲೊಫೀವರ್ ರೋಗಪರೀಕ್ಷೆಯನ್ನು ಕೈಗೊಂಡ ಕೆಲವರು ಆ ರೋಗದಿಂದ ಸತ್ತವರ ಬಟ್ಟೆಯನ್ನು ಧರಿಸಿ ಕೆಲವು ದಿನಗಳಿದ್ದರು. ವ್ಯಾಧಿಯ ಗುಟ್ಟು ರಟ್ಟಾಗದಿರಲು ಅನಂತರ ಆ ರೋಗವನ್ನುಂಟುಮಾಡುವ ಸೊಳ್ಳೆಯಿಂದ ಕಚ್ಚಿಸಿಕೊಂಡರು. ವ್ಯಾಧಿಯು ತಗಲಿತು. ಸೊಳ್ಳೆಯೇ ಇದರ

ವಾಹಕವೆಂದು ಸ್ಥಿರಪಡಿಸಿದರು. ಈ ವ್ಯಾಧಿಯ ಗುಡಿಯನ್ನು ಪ್ರವೇಶಿಸಲು ಇವರು ತಮ್ಮ ಪ್ರಾಣಗಳನ್ನೇ ಬಲಿಕೊಡಲು ಸಿದ್ಧರಾಗಿದ್ದರು. ರಾಂಟ್‌ಜನ್ ಕಿರಣಗಳ ವೇಗವನ್ನು ಪರೀಕ್ಷಿಸಲು ಹೊರಟ ಅನೇಕ ವೀರಪಂಡಿತರು ಇದೇ ರೀತಿ ಮಡಿದರು. ನೀಷೆ, ಮಸೊಲೀನಿ, ಹಿಟ್ಲರ್ ಮುಂತಾದ ರಣಪಟುಗಳು ಯುದ್ಧವು ಪ್ರತಿದೇಶಕ್ಕೂ ಆವಶ್ಯಕ; ಒಂದು ಜನಾಂಗದಲ್ಲಿ ಧೈರ್ಯ, ದೇಶಪ್ರೇಮ, ಅಸ್ವಾರ್ಥತೆ ಮೂಡ ಬೇಕಾದರೆ ಇದೇ ಸಾಧನ; ಶಾಂತಿಯ ನೋಟವನ್ನೇ ಬಯಸುವ ದೇಶದ ಜೀವವು ಶಾಂತವಾಗುತ್ತದೆ—ಎಂದು ವಾದಿಸುತ್ತಾರೆ. ಯುದ್ಧದಾಹದಲ್ಲಿ ತವಕಪಡುವ ಇವರು ತಮ್ಮಂತೆ ಬದುಕಿ ಬಾಳುವ ಇತರ ಮಾನವರ ರಕ್ತವನ್ನು ಹೀರಿ, ಅವರ ಸಂಸಾರವೂ ದೇಶವೂ ದುಃಖಜ್ವಾಲೆಯಲ್ಲಿ ಉರಿಯುವುದನ್ನು ಕಂಡು ಅಸುರರಂತೆ ಆನಂದಿಸು ತ್ತಾರೆ. ನಮ್ಮ ಬುದ್ಧಿಕುಶಲತೆಗಳನ್ನೂ ಧೈರ್ಯೋತ್ಸಾಹಗಳನ್ನೂ ಪ್ರದರ್ಶಿಸಲು ವ್ಯಾಧಿಗಳೆಂಬ ವಿವಿಧ ಶತ್ರುಗಳಿಲ್ಲವೆ? ಪಾಸ್ಟ್ಯೂರ್, ವಾಲ್ಟರ್ ರೀಡ್ (ಯೆಲ್ಲೋ ಫೀವರ್ ಶೋಧಕ) ಮುಂತಾದ ವೈಜ್ಞಾನಿಕರು ಎಂಥ ಕೆಚ್ಚೆದೆಯವರು! ಯೋಧರು ಹೊಡೆದಾಡುವ ಶತ್ರುಗಳು ಅವರ ಕಣ್ಣಿಗೆ ಕಾಣುತ್ತಾರೆ. ವಿಜ್ಞಾನಿಗಳ ವೈರಿಗಳು (ಸೂಕ್ಷ್ಮಕ್ರಿಮಿಗಳು) ಅನೇಕ ಸಲ ರಹಸ್ಯದಲ್ಲಿಯೇ ಇದ್ದು ಅವರನ್ನು ನುಂಗುತ್ತಾರೆ. ಅಲ್ಪಪ್ರಾಣಿಗಳಾದರೂ ಅವುಗಳ ಹಾವಳಿ ಬಹಳ ಹೆಚ್ಚು. ಜಾಡ್ಯದಿಂದುಂಟಾಗುವ ನಷ್ಟವು ಯುದ್ಧದಿಂದುಂಟಾಗುವುದಕ್ಕಿಂತ ನೂರ್ಮಡಿಯಾದದ್ದು. ೧೯೧೯ರಲ್ಲಿ ಹರಡಿದ ಇನ್‌ಫ್ಲುಯಂಜ ವ್ಯಾಧಿಯು ೧೯೧೪ರಿಂದ ೧೯೧೮ರ ವರೆಗೆ ನಡೆದ ಘೋರ ಯುದ್ಧದಲ್ಲಿ ಮಡಿದ ಜನಕ್ಕಿಂತ ಐದುಪಾಲು ಹೆಚ್ಚು ಜನರನ್ನು ನುಂಗಿತು. ಯುದ್ಧದಲ್ಲಿ ತೋರಿಸುವ ಶೌರ್ಯವನ್ನು ಪುರಸ್ಕರಿಸಿ, ಸ್ಮರಿಸುವುದು ನಮ್ಮ ಪ್ರಾಚೀನ ಸಂಪ್ರದಾಯ. ಆದರೆ ವ್ಯಾಧಿಗಳೊಡನೆ ಹೊಡೆದಾಡುವವರ ಶೌರ್ಯಕ್ಕೆ ಆ ಮನ್ನಣೆಯಿಲ್ಲ. ಇಂಥ ಯುದ್ಧವು ಮಾನವಕುಲಕ್ಕೇ ಕೀರ್ತಿಯನ್ನು ತರುತ್ತ ದೆಂಬುದನ್ನು ನಾವು ಮರೆಯುತ್ತೇವೆ. ಇಂಥವರಿಗೆ ವೀರಗಲ್ಲುಗಳನ್ನು ನೆಡದಿರುವುದು ನಾಗರಿಕತೆಗೆ ಕೀರ್ತಿಕರವಲ್ಲ. ಪಾಸ್ಟ್ಯೂರ್, ರಾಂಟ್‌ಜನ್, ಮುಂತಾದ ಕೆಲವು ಪ್ರಮುಖರ ಹೆಸರನ್ನು ನಾವು ಶಾಶ್ವತಗೊಳಿಸಿರಬಹುದು. ಅವರಂತೆಯೇ ಕೆಲಸ ಮಾಡಿ ಹೊಸದನ್ನು ಕಾಣದೆಹೋದ ದುರದೃಷ್ಟಶಾಲಿಗಳನೇಕರು ಮಾನವವರ್ಗದ ಹಿತಕ್ಕಾಗಿ ದುಡಿದು ಧನ್ಯರಾಗಿರುತ್ತಾರೆ. ಅವರನ್ನೂ ನಾವು ಸ್ಮರಿಸಬೇಕು.

ಹೊಸ ಜೀವರೂಪಗಳನ್ನುಂಟುಮಾಡಬಲ್ಲವು.—ಎಕ್ಸ್‌ರೇಗಳ ಹೊಂಬಿ ಸಿಲಿನಲ್ಲಿ ಕೆಲವು ಜೀವಾಣುಗಳು ಹುಲುಸಾಗಿ ಬೆಳೆಯುತ್ತವೆಯೆಂದು ಹೇಳಿದೆಯಷ್ಟೆ. ಅಷ್ಟೇ ಅಲ್ಲ. ಕೆಲವು ಜೀವಾಣುಗಳು ಇವುಗಳ ಪ್ರಚೋದನೆಯಿಂದ ಮಾರ್ಪಟ್ಟೆ

ಬೇರೆ ಬೇರೆ ರೂಪಗಳನ್ನು ತಾಳುತ್ತವೆ. ಈ ಕಿರಣಗಳಲ್ಲಿ ನೆನೆದ ಕೆಲವು ನೊಣಗಳ (fruitfly) ಮರಿಗಳು ತಾಯಿಯನ್ನು ಹೋಲದೆ ಹೊಸ ರೂಪುಗಳನ್ನು ತಾಳಿದವು; ಹೊಸ ಜಾತಿಯ ಕಣ್ಣುಗಳು ಹೊಸ ಬಣ್ಣದ ರೆಕ್ಕೆಗಳು ಮತ್ತು ಅವುಗಳ ಮೇಲೆ ಹೊಸ ರೀತಿಯ ಗುರುತುಗಳು ಕಂಡುಬಂದುವು. ಇವು ತಾಯಿಯಿಂದ ಭಿನ್ನವಾಗಿದ್ದದ್ದು ಮಾತ್ರವಲ್ಲ. ಇಂಥ ರೂಪಗಳ ಚಿಟ್ಟೆಗಳು ಅದುವರೆಗೂ ಕಂಡುಬಂದಿರಲಿಲ್ಲ. ನೂರಾರು ಮರಿಗಳು ಜನಿಸಿ ಪ್ರತಿಯೊಂದೂ ಬೇರೆ ಬೇರೆ ರೂಪವನ್ನು ತಾಳಿದ್ದವು. ಆದುದರಿಂದ ಎಕ್ಸ್‌ರೇಯು ಹೊಸ ರೀತಿಯ ಜೀವಸೃಷ್ಟಿಗೆ ಸಹಾಯಕವೆಂದು ನಿರ್ಧರವಾಯಿತು. ನಮ್ಮ ಸಂಸ್ಥಾನದ ವ್ಯವಸಾಯ ಇಲಾಖೆಯವರು ಎಕ್ಸ್‌ರೇ ಸಹಾಯದಿಂದ ಹೊಸ ಜಾತಿಯ ಕಬ್ಬನ್ನು ತಯಾರಿಸಿದ್ದಾರೆ. ಇಂಥ ಹಲವಾರು ಹೊಸ ಜಾತಿಗಳ ಪೈಕಿ ಹೆಚ್ಚು ಸಕ್ಕರೆಯನ್ನು ಉತ್ಪತ್ತಿಮಾಡುವ ಜಾತಿಯ ಬೀಜಗಳನ್ನು ತಯಾರಿಸಿ ಮಂಡ್ಯದ ಸುತ್ತಮುತ್ತಲಿನ ರೈತರಿಗೆ ಕೊಟ್ಟು ಅವರ ಆರ್ಥಿಕಸ್ಥಿತಿಯನ್ನು ಉತ್ತಮ ಗೊಳಿಸಿರುತ್ತಾರೆ. ಎಕ್ಸ್‌ರೇ ಸಹಾಯದಿಂದ ರೈತನ ಸ್ಥಿತಿಯು ಇನ್ನೂ ಉತ್ತಮ ಗೊಳ್ಳಲು ಹೆಚ್ಚು ಅವಕಾಶವಿದೆ. ಹೆಚ್. ಜಿ. ವೆಲ್ಸ್‌ರವರು ಈ ವಿಷಯವಾಗಿ ಚರ್ಚಿಸುತ್ತ ಒಂದು ಹೊಸ ಸೂಚನೆಯನ್ನು ಮಾಡಿದ್ದಾರೆ. ಸೃಷ್ಟಿಯಲ್ಲಿ ಕಾಣುವ ವಿವಿಧ ರೂಪಗಳಿಗೆ ಅನುವಂಶೀಯತೆ, ದೃಢಸಂಕಲ್ಪ, ಸನ್ನಿವೇಶ ಸೌಕರ್ಯ ಮುಂತಾದವು ಕಾರಣವೆಂದು ಸ್ಪಷ್ಟಪಟ್ಟಿದೆ. ಸೂರ್ಯರಶ್ಮಿಗಳಲ್ಲಿರುವ ಅಲ್ಪ ಸ್ವಲ್ಪ ಎಕ್ಸ್‌ರೇಗಳೂ ಹತ್ತಾರು ವರ್ಷಗಳಲ್ಲಿ ಜೀವರಾಶಿಗಳನ್ನು ರೂಪಾಂತರಗೊಳಿಸ ಬಹುದು. ಆದುದರಿಂದ ಜೀವರಾಶಿಗಳ ರೂಪಭೇದಗಳಿಗೆ ಎಕ್ಸ್‌ರೇಗಳೂ ಒಂದು ಮೂಲಕಾರಣವಾಗಿರಬಾರದೇಕೆ?

ಉಪಯೋಗಿಸುವಾಗ ಎಚ್ಚರಿಕೆಯಿಂದಿರಬೇಕು.—ಈ ವೇಳೆಗೆ ಎಕ್ಸ್ ರೇಗಳ ತಯಾರಿಕೆ ಮತ್ತು ಉಪಯೋಗವು ಅಪಾಯಕರವೆಂದು ವಾಚಕರಿಗೆ ತಿಳಿದಿರ ಬಹುದು. ಗಟ್ಟಿಯಾದ ಕಿರಣಗಳು ಬೇಕಾದಾಗ ಕೊಳವೆಯಲ್ಲಿ ಹೆಚ್ಚಿನ ವಿದ್ಯುನ್ಮಟ್ಟ ವನ್ನುಂಟುಮಾಡಬೇಕಾಗುತ್ತದೆ. ಶಿವನಸಮುದ್ರದಿಂದ ಬರುವ ಕರೆಂಟಿನ ಮಟ್ಟ ಸುಮಾರು ೭೫೦೦೦ ವೋಲ್ಟುಗಳು. ಈ ಕೊಳವೆಯಲ್ಲಿ ಕೆಲವು ವೇಳೆ ಉಂಟು ಮಾಡಬೇಕಾದ ಅಂತರ ನಾಲ್ಕು ಲಕ್ಷ ವೋಲ್ಟುಗಳು. ಆದರೆ ಆಸ್ಪತ್ರೆಗಳಲ್ಲಿ ಅಷ್ಟು ತೀಕ್ಷ್ಣವಾದ ಕಿರಣವು ಸಾಮಾನ್ಯವಾಗಿ ಬೇಕಾಗುವುದಿಲ್ಲ. ಒಂದು ಲಕ್ಷ ವೋಲ್ಟು ಗಳಿಗೆ ಅಧಿಕವಾದ ಮಟ್ಟ ವ್ಯತ್ಯಾಸವಾಗಬೇಕಾಗುವುದು ಅಪರೂಪ. ಇದೂ ಅಪಾಯಕರವಾದದ್ದೇ. ಇದನ್ನು ತಯಾರಿಸಿ ಉಪಯೋಗಿಸುವ ವೈದ್ಯರು ಇದರ ಶಿಕ್ಷಣಕ್ಕೆ ಮುಡುಪಾಗಿರುವ ಪ್ರೌಢಶಾಲೆಗಳಲ್ಲಿ ಎರಡು ವರ್ಷಕಾಲವಾದರೂ

ವ್ಯಾಸಂಗಮಾಡಿರಬೇಕು. ಈ ಕೆಲಸದಲ್ಲಿ ಸುರಿತವರಾಗಿ ವ್ಯಾಧಿ ಚಿಕಿತ್ಸೆಯಲ್ಲಿ ಇದರ ಉಪಯೋಗವನ್ನು ಕ್ರಮಪಡಿಸಬೇಕೆಂದು ಉತ್ಸಾಹವುಳ್ಳ ಪಂಡಿತರೆಲ್ಲರೂ ಆಗಿಂದಾಗ್ಗೆ ಸಭೆ ಸೇರಿ ತಮ್ಮ ಅನುಭವಗಳನ್ನು ಕುರಿತು ಚರ್ಚಿಸುತ್ತಾರೆ. ಈಗ ಯಾವ ಖಾಯಿಲೆಗೆ ಯಾವ ತೀಕ್ಷ್ಣತೆಯ ಎಷ್ಟು ಪ್ರಮಾಣ ಕಿರಣಗಳು ಬೇಕೆಂದು ಗೊತ್ತುಮಾಡಿರು ತ್ತಾರೆ. ಈ ಕಿರಣಗಳ ಪ್ರಮಾಣವನ್ನಳೆಯಲು ಒಂದು ಹೊಸ ಮಾಸವನ್ನು ಗೊತ್ತು ಮಾಡಿ ಅದಕ್ಕೆ ರಾಂಟ್‌ಜನ್ ಎಂದು ಹೆಸರಿಟ್ಟು ಆ ವೈಜ್ಞಾನಿಕನ ಹೆಸರನ್ನು ಕೀರ್ತಿಗೊಳಿಸಿದ್ದಾರೆ. ಸುರಿತ ವೈದ್ಯರು ವ್ಯಾಧಿಗೆ ತಕ್ಕಂತೆ ಮೂರು ರಾಂಟ್‌ಜನ್, ನಾಲ್ಕು ರಾಂಟ್‌ಜನ್ ಅಥವಾ ಆವಶ್ಯಕವಾದಷ್ಟು ಶಕ್ತಿಯನ್ನು ಮಾತ್ರ ತಯಾರಿಸಿ ಉಪಯೋಗಿಸುತ್ತಾರೆ. ಈ ಶಕ್ತಿಯ ಉತ್ಪತ್ತಿ ಮತ್ತು ಉಪಯೋಗವು ಸೀಸೆಯಿಂದ ಬೇಕಾಗುವಷ್ಟು ದ್ರಾವಕವನ್ನು ತೆಗೆದು ಉಪಯೋಗಿಸುವಷ್ಟು ಸುಲಭವಾಗಿದೆ. ಹೀಗೆ ಹೇಳುವುದರಿಂದ ಈ ಕೆಲಸ ಸುಲಭ, ಇದನ್ನು ಬೇಕಾದವರು ಮಾಡಬಹುದು ಎಂದು ತಿಳಿಯಕೂಡದು. ಈ ಶಾಸ್ತ್ರವು ಬಹಳ ಮುಂದುವರಿದು ಮೊದಲಿದ್ದ ತೊಡಕು ಗಳೆಲ್ಲ ಪರಿಹಾರವಾಗಿವೆಯೆಂದು ತಿಳಿಸುವುದೇ ನಮ್ಮ ಉದ್ದೇಶ.

(೪) ವಾಣಿಜ್ಯದಲ್ಲಿ ಎಕ್ಸ್‌ರೇಗಳ ವ್ಯಾಪ್ತಿ

ಎರಕಗಳ ಮತ್ತು ಬೆಸಗೆಗಳ ಪರೀಕ್ಷೆಯಲ್ಲಿ.—ಈ ಹೊಸ ಕಿರಣಗಳು ಮೊಟ್ಟಮೊದಲು ಪ್ರಚಾರಕ್ಕೆ ಬಂದದ್ದು ರೋಗನಿವಾರಣೆಯಲ್ಲಿ. ಕ್ರಮೇಣ ಇತರ ಜೀವನ ಕ್ಷೇತ್ರಗಳಲ್ಲಿಯೂ ಇದರ ಉಪಯೋಗವು ಪ್ರಸರಿಸಿತು. ೧೮೯೬ರಲ್ಲಿ ಯೇಲ್ ವಿಶ್ವವಿದ್ಯಾಲಯದ ರೈಟ್ ಎಂಬ ಸಂಶೋಧಕನು ಬೆಸೆದ ಒಂದು ಲೋಹದ ತುಂಡನ್ನು ಈ ಕಿರಣಗಳಲ್ಲಿ ಪರೀಕ್ಷಿಸಿದನು. ಮೇಲೆ ನೋಡಲು ಬೆಸಗೆಯಲ್ಲಿ, ಯಾವ ಲೋಪವೂ ಇಲ್ಲದೆ, ಈ ತುಂಡು ಎರಡು ಪ್ರತ್ಯೇಕ ಚೂರುಗಳಿಂದ ಕೂಡಿದ್ದು ಎಂದು ಹೇಳಲೇ ಸಾಧ್ಯವಿರಲಿಲ್ಲ. ಆದರೆ ಎಕ್ಸ್ ರೇ ನೆರಳಿನಲ್ಲಿ ಬೆಸಗೆಯ ಒಳಭಾಗ ದಲ್ಲಿದ್ದ ಬಿರುಕು ವಿಶದವಾಗಿ ಕಂಡಿತು. ಸೈನ್ಯಶಾಖೆಯವರಿಗೆ ಈ ವಿಷಯ ಮುಟ್ಟಿತು. ದೊಡ್ಡ ದೊಡ್ಡ ಫಿರಂಗಿಗಳನ್ನು ಈ ರೀತಿ ಪರೀಕ್ಷಿಸುವುದು ಎಷ್ಟು ಆವಶ್ಯಕ ಮತ್ತು ಅನುಕೂಲ ಎಂದು ತಿಳಿಯಿತು. ಯುದ್ಧದಲ್ಲಿ ಈಗ ಉಪಯೋಗಿಸುವ ಫಿರಂಗಿಗಳು ಅಗಾಧವಾದ ಯಂತ್ರಗಳು. ಅವುಗಳಿಂದ ಹೊರಟ ಅತಿ ಭಾರವಾದ ಗುಂಡುಗಳು ಇಪ್ಪತ್ತು ಮೈಲಿಯಾಚೆ ಆಸ್ಫೋಟನವಾಗುವಂತೆ ಏರ್ಪಡಿಸಬೇಕಾಗು ತ್ತದೆ. ಜರ್ಮನರು ಎಪ್ಪತ್ತೈದು ಮೈಲಿ ದೂರ ಗುಂಡನ್ನು ಎಸೆಯಬಲ್ಲ ಯಂತ್ರ ಗಳನ್ನು ಇತ್ತೀಚೆಗೆ ಕಂಡುಹಿಡಿದಿರುತ್ತಾರೆ. ಈ ಫಿರಂಗಿಗಳ ಕೊಳಬೆಗಳು ಸುಮಾರು

ಮೂವತ್ತು ಅಡಿಗಳಷ್ಟಿರುತ್ತವೆ. ಅವುಗಳ ಬಾಯಿಯಲ್ಲಿ ನಾವು ಧಾರಾಳವಾಗಿ ನುಸಿಯಬಹುದು. ಇವುಗಳ ಮೈ ದಪ್ಪ ಅರ್ಧ ಅಡಿ ಅಥವಾ ಅದಕ್ಕೆ ಹೆಚ್ಚಾಗಿಯೂ ಇರಬೇಕಾಗುತ್ತದೆ. ಈ ರೀತಿಯ ಕೊಳವೆಗಳನ್ನು ಎರಕ ಹೊಯ್ಯುವುದು ಎಷ್ಟು ಕಷ್ಟ, ನೋಡಿ! ಕೊಳವೆಗಳಲ್ಲಿ ಹುಳುಕು ಬಿರುಕು ಯಾವುದೂ ಇರಕೂಡದು. ಸರಿಯಾಗಿ ಪರೀಕ್ಷಿಸದಿದ್ದರೆ ಯುದ್ಧ ಮಧ್ಯದಲ್ಲಿ ಇವುಗಳಿಂದ ನೂರಾರು ಮೈಲಿ ವೇಗದಲ್ಲಿ ನುಗ್ಗುವ ಅತಿ ತೂಕವಾದ ಗುಂಡುಗಳ ಸಿಡಿತದಲ್ಲಿ ಇವೂ ಸಿಡಿದುಹೋಗಿ ವ್ಯೂಹವೇ ಹಾಳಾಗುವ ಸಂಭವವುಂಟು. ಎಕ್ಸ್ ರೇ ಸಹಾಯವಿಲ್ಲದೆ ಇವುಗಳನ್ನು ಪರೀಕ್ಷಿಸಲು ಸಾಧ್ಯವೇ ಇಲ್ಲ. ಯುದ್ಧಕಾಲದಲ್ಲಿ ಶತ್ರುಪಕ್ಷದ ಯುದ್ಧಸಾಮಗ್ರಿಗಳನ್ನು ಕಷ್ಟಪಟ್ಟು ಪಡೆದು ಪರೀಕ್ಷಿಸಬೇಕಾಗುತ್ತದೆ. ಕೆಲವು ಗುಂಡುಗಳನ್ನೂ ಬಂದೂಕಗಳನ್ನೂ ಒಡೆಯುವ ಆಗತ್ಯ ಬೀಳುತ್ತದೆ. ಮೊದಲು ಎಕ್ಸ್ ರೇ ಸಹಾಯದಿಂದ ಇವುಗಳ ಒಳಪರೀಕ್ಷೆ ನಡಸಿ ಅವುಗಳಲ್ಲಿ ಅಪಾಯಕರವಾದ ಸಾಮಾನುಗಳಿದ್ದರೆ ತಕ್ಕ ಭದ್ರತೆಗಳನ್ನುಂಟುಮಾಡಿಕೊಂಡು ಅನಂತರ ಅವುಗಳನ್ನು ಒಡೆಯುತ್ತಾರೆ. ಈ ಕ್ರಮವು ರೂಢಿಗೆ ಬರುವುದಕ್ಕೆ ಮೊದಲು ಈ ಕೆಲಸಕ್ಕೆ ನಿಯಮಿತರಾದವರಲ್ಲಿ ಅನೇಕರು ಸಾಯುತ್ತಿದ್ದರು. ದೊಡ್ಡ ಹಡಗುಗಳ ಬುಡವೂ ಬಹಳ ದಪ್ಪನಾದ ತಗಡಿನಿಂದ ಬೆಸೆದಿರುತ್ತದೆ. ಈ ತಗಡುಗಳನ್ನೂ ಬೆಸಗೆಗಳನ್ನೂ ಸರಿಯಾಗಿ ಪರೀಕ್ಷಿಸಬೇಕು. ನೀರಿನ ಮಧ್ಯದಲ್ಲಿ ಇವು ಬಾಯಿಬಿಟ್ಟುಕೊಂಡರೆ ವಿಪರೀತ ಅನರ್ಥವು ಸಂಭವಿಸುತ್ತದೆ. ವಿಮಾನಗಳು ಅತ್ಯಂತ ವೇಗವಾಗಿ ಸಂಚರಿಸುತ್ತವೆ. ಅವುಗಳಲ್ಲಿರುವ ಒಂದೊಂದು ಬೆಸಗೆಯನ್ನೂ ಸರಿಯಾಗಿ ಪರೀಕ್ಷಿಸಬೇಕು. ರೈಲ್ವೆ ಎಂಜಿನ್ ಮೊದಲಾದ ದೊಡ್ಡದೊಡ್ಡ ಯಂತ್ರಗಳ ಭಾಗಗಳನ್ನೂ ಇದೇ ರೀತಿ ಪರೀಕ್ಷಿಸಬೇಕು. ಅರವತ್ತು ಮೈಲಿ ವೇಗದಲ್ಲಿ ನುಗ್ಗುವ ಒಂದು ರಾಕ್ಷಸಯಂತ್ರವು ಯಾವುದಾದರೂ ಒಂದು ಬೆಸಗೆಯಲ್ಲಿ ಲೋಪವಿದ್ದು, ಅಥವಾ ತಗಡಿನಲ್ಲಿ ಬಿರುಕಿದ್ದು, ಸಿಡಿದರೆ ಎಷ್ಟು ಜನ ಸಾಯುವರು ನೋಡಿ! ಅಮೆರಿಕದಲ್ಲಿ ಅನೇಕ ಮನೆಗಳು ಹದಿನೈದು ಇಪ್ಪತ್ತು ಅಂತಸ್ತಿರುತ್ತವೆ. ಅವುಗಳಿಗೆ ಉಪಯೋಗಿಸುವ ಉಕ್ಕಿನ ತೊಲೆಗಳಲ್ಲಿ ಸ್ವಲ್ಪವೂ ಕಳಂಕವಿರಕೂಡದು. ಈ ಪ್ರತಿಯೊಂದು ಪರೀಕ್ಷೆಗೂ ಎಕ್ಸ್ ರೇಗಳನ್ನು ಉಪಯೋಗಿಸದೆ ಗತ್ಯಂತರವಿಲ್ಲ. ಯುದ್ಧರಂಗದಲ್ಲಿ ಅನೇಕ ಕಟ್ಟಡಗಳ ಗೋಡೆ ಮತ್ತು ಸೂರುಗಳ ಒಳಪರೀಕ್ಷೆಯನ್ನು ಮಾಡಬೇಕಾಗುತ್ತದೆ. ಇವುಗಳ ಒಳಗಡೆ ಅಪಾಯಕರವಾದ ಸಾಮಾನುಗಳನ್ನು ಹೂಳಲು ಅನೇಕ ಒಳಸಂಚುಗಳು ನಡೆಯುತ್ತವೆ. ಸರಿಯಾದ ಪರೀಕ್ಷೆ ನಡೆಸಿ ಅನಂತರ ಸೇನಾಧಿಪತಿಗಳ ವಾಸಕ್ಕೋ ಅಥವಾ ಮದ್ದು ಗುಂಡುಗಳನ್ನಿಡುವುದಕ್ಕೋ ಇವುಗಳನ್ನು ಉಪಯೋಗಿಸುತ್ತಾರೆ.

ಆಹಾರಸಾಮಗ್ರಿಗಳ ಮತ್ತು ಇತರ ವಸ್ತುಗಳ ಪರೀಕ್ಷೆ.—ವ್ಯಾಪಾರಗಾರನಿಗೆ ಇದರ ಉಪಯೋಗ ನೋಡಿ: ಅಮೇರಿಕ ದೇಶದಲ್ಲಿ ಹಿಟ್ಟಿಗೆ ಅದೇ ವರ್ಣದ ಮರಳನ್ನೂ, ಸಕ್ಕರೆಗೆ ಸುಣ್ಣಕಲ್ಲು ಪುಡಿಯನ್ನೂ ಸೇರಿಸಿ ತೂಕವನ್ನು ಹೆಚ್ಚಿಸುತ್ತಿದ್ದರು. ಎಕ್ಸ್ ರೇಗಳು ಈ ಕಳ್ಳತನವನ್ನು ಬಯಲುಮಾಡಿದವು. ಜರ್ಮನಿಯಲ್ಲಿ ಆಹಾರಪದಾರ್ಥಗಳ ಪರೀಕ್ಷೆಯಲ್ಲಿ ಇವುಗಳನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ರೇಷ್ಮೆ ಮತ್ತು ಹತ್ತಿಯಿಂದ ತಯಾರಾದ ಬಟ್ಟೆಗಳನ್ನು ಕೆಲವು ಲೋಹಗಳ ದ್ರಾವಕದಲ್ಲಿ ಅದ್ದಿ ಅವುಗಳ ದಪ್ಪ ಮತ್ತು ಹೊಳಪನ್ನು ಹೆಚ್ಚಿಸಿ ಜನರನ್ನು ಮೋಸಪಡಿಸುತ್ತಿದ್ದರು. ಈಗ ಇದಕ್ಕೆ ಅವಕಾಶವಿಲ್ಲ. ಒಳ್ಳೆಯ ವಜ್ರದ ಮೂಲಕ ಈ ಕಿರಣಗಳು ಪ್ರವೇಶಿಸುತ್ತವೆ. ಕೃತಕ ವಜ್ರಗಳಲ್ಲಿ ಇವು ಸರಿಯಾಗಿ ಹಾಯುವುದಿಲ್ಲ. ಈ ರೀತಿ ಪರೀಕ್ಷೆಯಿಂದ ಒಳ್ಳೆಯ ರತ್ನಗಳನ್ನು ಪತ್ತೆಮಾಡಲು ಅನುಕೂಲವಾಯಿತು. ಸಮುದ್ರತಳದಲ್ಲಿ ಮುತ್ತನ್ನು ಬೆದಕುವವರು ಈಗ ಆ ಪ್ರಾಣಿಗಳ ಒಳಗಡೆ ಮುತ್ತು ತಯಾರಾಗಿದೆಯೆ ಇಲ್ಲವೆ ನೋಡಿಕೊಂಡು ಅನಂತರ ಅವುಗಳನ್ನು ಸಂಗ್ರಹಿಸುತ್ತಾರೆ. ಮೊದಲು ಮುತ್ತಿಲ್ಲದಿದ್ದ ಅನೇಕ ಪ್ರಾಣಿಗಳನ್ನು ಕೊಲ್ಲಬೇಕಾಗಿತ್ತು. ಈಗ ಅವನ್ನು ಪುನಃ ನೀರಿಗೆ ಬಿಡುವುದರಿಂದ ಮುತ್ತು ತಯಾರಾಗಲು ಹೆಚ್ಚು ಅವಕಾಶ ಕಲ್ಪಿಸಿದಂತಾಯಿತು. ಗಣಿಗಳಲ್ಲಿ ಕಲ್ಲಿದ್ದಲಿನ ಒಳರಚನೆಯನ್ನು ನೋಡಲು ಇವನ್ನು ಉಪಯೋಗಿಸುತ್ತಾರೆ. ಗಾಲ್ಫ್ ಚಂಡುಗಳ ಒಳರಚನೆಯು ಸರಿಯಾಗಿಲ್ಲದಿದ್ದರೆ ಅವು ನೆಲಕ್ಕೆ ಬಿದ್ದೊಡನೆ ಸರಿಯಾದ ದಿಕ್ಕಿನಲ್ಲಿ ಹೋಗುವುದಿಲ್ಲ. ಕಾರ್ಖಾನೆಯವರು ಎಕ್ಸ್ ರೇಗಳಿಂದ ಇವುಗಳನ್ನು ಪರೀಕ್ಷಿಸುತ್ತಾರೆ. ಹೊಗೆಸೊಪ್ಪಿನ ಮೇಲೆ ಒಂದು ವಿಧವಾದ ಸೂಕ್ಷ್ಮ ಕ್ರಿಮಿಗಳಿರುತ್ತವೆ. ಇವು ಬಹಳ ಅಪಾಯಕರ. ಈಗ ಈ ಕಿರಣಗಳ ಕಾವಿನಲ್ಲಿ ಸೊಪ್ಪನ್ನು ಶುದ್ಧಿಮಾಡಿ ಅನಂತರ ಒಳ್ಳೊಳ್ಳೆಯ ಸಿಗರೇಟುಗಳನ್ನು ತಯಾರಿಸುವುದು ವಾಡಿಕೆಗೆ ಬಂದಿದೆ. ರೈಲಿಗೂ, ಪೋಸ್ಟಾಫೀಸಿಗೂ ಬರುವ ಭಾಂಗಿಗಳಲ್ಲಿಯೂ ಮತ್ತು ಹಡಗುಗಳ ಮೂಲಕ ಬಂದುಹೋಗುವ ಭಾಂಗಿಗಳಲ್ಲಿಯೂ ಸಂಶಯವಾದವುಗಳನ್ನು ಪರೀಕ್ಷಿಸಲು ಈ ಕಿರಣಗಳು ಸಹಾಯಮಾಡುತ್ತವೆ. ಮಾಲಿಗೆ ತಕ್ಕಂತೆ ರುಸುಂ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಹಿಂದೆ ಈ ರೀತಿ ಪರೀಕ್ಷೆಗೆ ಅವಕಾಶವಿಲ್ಲದೆ ಕೆಲವು ಅಪಾಯಗಳುಂಟಾಗಿವೆ. ಯುದ್ಧಕಾಲದಲ್ಲಿ ಈ ಪರೀಕ್ಷೆಯ ಅಗತ್ಯವೆಷ್ಟು ನೀವೇ ಊಹಿಸಿ! ನಾಯಿಗಳು ಕುದುರೆಗಳು ಮತ್ತಿತರ ಪ್ರಾಣಿಗಳು ಕಾಣದೆ ಲೋಹಗಳ ಚೂರನ್ನು ನುಂಗಿ ನರಳುವುದುಂಟು. ಆಗ ತಕ್ಕ ಪರೀಕ್ಷೆ ನಡಸಿ ಚಿಕಿತ್ಸೆ ಮಾಡಿ ಅವುಗಳನ್ನು ಬದುಕಿಸುತ್ತಾರೆ. ಒಂದು ಆನೆಯು ಬೆಲೆಬಾಳುವ ಒಂದು

ಉಂಗುರವನ್ನು ನುಂಗಿತ್ತಂತೆ. ಆನೆಯನ್ನು ಕೊಲ್ಲುವುದಕ್ಕಿಲ್ಲ, ಉಂಗುರವನ್ನು ಕಳೆದುಕೊಳ್ಳುವುದಕ್ಕಿಲ್ಲ. ಆಗ ಎಕ್ಸ್‌ರೇ ಸಹಾಯದಿಂದ ಉಂಗುರವು ಇದ್ದ ಸ್ಥಳವನ್ನು ಪತ್ತೆಮಾಡಿ ಆನೆಯನ್ನು ಸಾಯಿಸದೆ ಅದನ್ನು ಹೊರಕ್ಕೆ ತೆಗೆದರಂತೆ.


ಪುರಾತನ ಚಿತ್ರಪರೀಕ್ಷೆ.—ಈ ಕಿರಣಗಳಿಂದ ಕಲೆಗೂ ಉಪಯೋಗವಾಗಿದೆ. ಕೆಲವು ಪುರಾತನ ಚಿತ್ರಪಟಗಳ ಸೌಂದರ್ಯವನ್ನು ಸರಿಯಾಗಿ ತಿಳಿಯಲಾರದ ಅಜ್ಞರು ತಮ್ಮ ಅಭಿರುಚಿಗೆ ತಕ್ಕಂತೆ ಅವುಗಳನ್ನು ಬದಲಾಯಿಸುತ್ತಾರೆ. ಈ ಬದಲಾವಣೆಗೆ ಉಪಯೋಗಿಸುವ ಈಗಿನ ಬಣ್ಣಗಳು ಕಲ್ಲಿದ್ದಲಿನ ಟಾರಿನಿಂದ ತಯಾರಾದವು. ಇವುಗಳ ಮೂಲಕ ಎಕ್ಸ್ ರೇ ನುಗ್ಗುತ್ತದೆ. ಹಳೆಯ ಕಾಲದಲ್ಲಿ ಬಣ್ಣಗಳನ್ನು ಬೇರೆ ವಿಧಾನದಲ್ಲಿ ತಯಾರಿಸಿಕೊಳ್ಳುತ್ತಿದ್ದರು. ಅವುಗಳ ಮೂಲಕ ಈ ಕಿರಣಗಳು ಪ್ರವೇಶಿಸುವುದು ಕಷ್ಟ. ಕ್ರೈಸ್ತನ ಮರಣಚಿತ್ರವೊಂದರ ಮುನ್ನೆಲೆಯಲ್ಲಿ ಒಬ್ಬ ಮಹಿಳೆಯು ಚಿತ್ರಿತಳಾಗಿದ್ದಳು. ಅದು ಬಹಳ ಪ್ರಾಚೀನಕಾಲದ ಪಟ. ಕಲಾಭಿಜ್ಞರು ಇದನ್ನು ಬಹಳವಾಗಿ ಮೆಚ್ಚಿ, ಆ ಮಹಿಳೆಯ ಚಿತ್ರವಿಲ್ಲದಿದ್ದರೆ ಅದರ ಸೌಂದರ್ಯವು ಅತ್ಯಧಿಕವಾಗುತ್ತಿತ್ತೆನ್ನುತ್ತಿದ್ದರು. ಆಮ್ಸ್‌ಟರ್ಡಾಂ ನಿವಾಸಿಯಾದ ಡಾ|| ಹೇಲ್ ಬ್ರಾರ್ಕ್ ಎಂಬ ಪಂಡಿತನು ಎಕ್ಸ್ ರೇ ಸಹಾಯದಿಂದ ಇದನ್ನು ಪರೀಕ್ಷಿಸಿ ಆ ಮಹಿಳೆಯ ಹಿಂದೆ ಒಬ್ಬ ಯತಿಯ ರೂಪವನ್ನು ಕಂಡನು. ಮೇಲೆ ನೋಡಿದರೆ ಅದರ ಸುಳಿವೇ ತಿಳಿಯುತ್ತಿರಲಿಲ್ಲ. ಕಷ್ಟಪಟ್ಟು ಆ ಮಹಿಳೆಯ ಚಿತ್ರವನ್ನಳಿಸಲು, ಮೊದಲಿದ್ದ ಯತಿಯ ರೂಪವು ಕಂಗೊಳಿಸಿತು. ಆಗ ಚಿತ್ರದ ಕಳೆಯೇ ಬದಲಾಯಿಸಿ, ಕಲಾನಿಪುಣನ ಕೌಶಲ್ಯವು ಸರಿಯಾಗಿ ವ್ಯಕ್ತವಾಯಿತು; ಕಲಾಕೋವಿದರೆಲ್ಲರೂ ಚಿತ್ರದ ಮಹಿಮೆಯನ್ನು ಕೊಂಡಾಡಿದರು. ಕಲಾಪ್ರಪಂಚದಲ್ಲಿ ನೂರಾರು ವರ್ಷಗಳಿಂದ ಬದುಕಿ ಬಂದು, ಜನರಲ್ಲಿ ಸ್ಫೂರ್ತಿಯನ್ನುಂಟುಮಾಡಿ ಅವರ ವಿಶ್ವಾಸಕ್ಕೆ ಪಾತ್ರವಾಗಿರುವ ಅನೇಕ ಚಿತ್ರಗಳಿವೆ. ಇಂಥ ಒಂದು ಚಿತ್ರವು ಈಗ ಕೆಲವು ದಿವಸಗಳಲ್ಲಿ ಎಂಟು ಲಕ್ಷ ರೂಪಾಯಿಗೆ ಮಾರಾಟವಾಯಿತು. ಸರಿಯಾದ ವ್ಯಾಪಾರಗಾರರು ಇವನ್ನು ಸರಿಯಾಗಿ ಪರೀಕ್ಷಿಸದೆ ಕೊಳ್ಳುವುದಿಲ್ಲ, ಮಾರುವುದಿಲ್ಲ. ಎಕ್ಸ್ ರೇಗಳು ಇವುಗಳ ನಿಜಸ್ವರೂಪವನ್ನು ಸುಲಭವಾಗಿ ತಿಳಿಯಪಡಿಸುತ್ತವೆ. ಹಳೆಯ ಚಿತ್ರಗಳ ಪುನರ್‍ರಚನೆಗೂ ಇವು ಹೆಚ್ಚು ಸಹಾಯಕವಾಗಿವೆ.

ವಸ್ತುಗಳ ಸ್ವರೂಪನಿರ್ಣಯಕ್ಕೆ ಸಹಕಾರಿ.—ಈ ಕಿರಣಗಳ ಸ್ವರೂಪವು ಮೊದಮೊದಲು ತಿಳಿಯದೆ ಅನಂತರ ಪ್ರೊ|| ಲಾವೆಯ ಸಲಹೆಯ ಮೇಲೆ ಹರಳುಗಳ ಮೂಲಕ ಬಿಡಲು, ಸ್ಥಿರವಾಯಿತೆಂದು ತಿಳಿಸಲಾಗಿದೆ. ಇವುಗಳ ಸ್ವರೂಪವನ್ನು ಹರಳು ತಿಳಿಸಿಕೊಟ್ಟಂತೆಯೇ ಹರಳುಗಳ ನಿಜವಾದ ಸ್ವರೂಪವನ್ನು ಇವು ಸರಿಯಾಗಿ

ತಿಳಿಸುತ್ತವೆ. ಇವುಗಳ ಸಹಾಯದಿಂದ "ಹರಳುಶಾಸ್ತ್ರ"ವೆಂಬ ಒಂದು ದೊಡ್ಡ ಶಾಸ್ತ್ರವೇ ಹುಟ್ಟಿಕೊಂಡಿದೆ. ಇದರ ಆವಶ್ಯಕತೆಯನ್ನು ತಿಳಿಯಲು ಒಂದು ಉದಾ ಹರಣೆಯನ್ನು ತೆಗೆದುಕೊಳ್ಳೋಣ. ವಜ್ರವು ಬಹಳ ಗಟ್ಟಿಯಾದ ಪದಾರ್ಥ. ಸರಿಯಾಗಿ ಕತ್ತರಿಸಿದರೆ ಅದು ಅದ್ವಿತೀಯ ಪ್ರಕಾಶವನ್ನು ಬೀರುತ್ತದೆ. ಆದುದರಿಂದಲೇ ಅದನ್ನು ಒಂದು ರತ್ನವೆನ್ನುತ್ತೇವೆ, ಅತ್ಯಧಿಕ ಬೆಲೆಯನ್ನು ಕೊಟ್ಟು ಕೊಳ್ಳಲು ಸಿದ್ಧ ರಾಗಿದ್ದೇವೆ. ಆದರೆ ಅದರ ನಿಜಸ್ವರೂಪವನ್ನು ಹೇಳಿದರೆ ನಂಬುವುದೇ ಕಷ್ಟವಾಗು ತ್ತದೆ. ಇದರ ಸ್ವರೂಪಕ್ಕೂ ಹಣೆಯಮೇಲಿನ ಅಂಗಾರಕ್ಕೂ ಸ್ವಲ್ಪವೂ ವ್ಯತ್ಯಾಸ ವಿಲ್ಲ. ಇದು ಅಂಗಾರದ ಅತಿ ಶುದ್ಧರೂಪ. ಇದರಂತೆಯೇ ಇರುವ ಇಂಗಾಲದ ಇನ್ನೊಂದು ಶುದ್ಧರೂಪವನ್ನು ನಾವು ನಿತ್ಯವೂ ವ್ಯವಹಾರದಲ್ಲಿ ಉಪಯೋಗಿಸು ತ್ತೇವೆ. ಸೀಸದಕಡ್ಡಿಯನ್ನು ನಾವೆಲ್ಲರೂ ಉಪಯೋಗಿಸುತ್ತೇವೆ. ಅದರಲ್ಲಿರುವುದು ಸೀಸವಲ್ಲ. ತಿಳಿಯದೆ ಮೊದಲು ಅದನ್ನು ಸೀಸದಕಡ್ಡಿಯೆಂದು ಕರೆದು ಆ ಮಾತು ಬೇರೂರಿಕೊಂಡಿದೆ. ಸೀಸವು ಇಷ್ಟು ಸುಲಭವಾಗಿ ಸವೆಯುವ ಪದಾರ್ಥವಲ್ಲ. ನಾವು ಬರೆಯುವ ಪ್ರತಿಯೊಂದು ಮಾತಿಗೂ ಸ್ವಲ್ಪ ಸವೆಯುವುದು ಇಂಗಾಲದ ಈ ಇನ್ನೊಂದು ರೂಪ. ಇದನ್ನು ಗ್ರ್ಯಾಫೈಟ್ (graphite) ಎನ್ನುತ್ತಾರೆ. ಇದರ ಮಾರ್ದವ ಕ್ಕಾಗಿ ಅನೇಕ ಯಂತ್ರಗಳಿಗೆ ಇದನ್ನು ಕೀಲೆಣ್ಣೆಯಂತೆ ಉಪಯೋಗಿಸುತ್ತಾರೆ. ಇಂಗಾಲದ ಈ ರೂಪವು ಇಷ್ಟು ಮೃದುವಾಗಿಯೂ ಕಪ್ಪಗೂ ವಜ್ರದ ರೂಪವು ಅಷ್ಟು ಗಟ್ಟಿಯಾಗಿಯೂ ಪ್ರಕಾಶವಾಗಿಯೂ ಇರಲು ಕಾರಣವೇನು? ಈ ಸಮಸ್ಯೆ ಯನ್ನು ಪರಿಹಾರಮಾಡಿದ್ದು ಎಕ್ಸ್ ರೇ. ಈ ವಿಷಯವಾಗಿ ಸ್ವಲ್ಪ ಚರ್ಚಿಸೋಣ.

ನಾವು ನೋಡುವ ಗಟ್ಟಿಪದಾರ್ಥಗಳೆಲ್ಲವೂ ಹರಳುಗಳೇ. ತುಪ್ಪಟ, ರೇಷ್ಮೆ, ದಾರ, ಮಣ್ಣು ಮೊದಲಾದುವೆಲ್ಲ ಹರಳುಗಳೇ. ಪಟಿಕದ, ಗಂಧಕದ, ಅಥವಾ ಕಲ್ಲುಸಕ್ಕರೆಯ ಹರಳುಗಳಂತೆ ದೊಡ್ಡದಾಗಿ, ನೋಡಲು ಅಂದವಾಗಿ ನುಣುಪಾಗಿರು ವುದನ್ನು ಹರಳೆನ್ನುವುದು ವಾಡಿಕೆ. ಆದರೆ ಪದಾರ್ಥಗಳ ಸಣ್ಣಸಣ್ಣ ಕಣಗಳೂ ಹರಳುಗಳೇ. ಬರಿಯ ಕಣ್ಣಿಗೆ ಇವು ಕಾಣುವುದಿಲ್ಲ, ಅಷ್ಟೇ. ತಕ್ಕ ಸಾಧನಗಳಿಂದ ಪದಾರ್ಥಗಳ ಒಳರಚನೆಯನ್ನು ಪರೀಕ್ಷಿಸಿದರೆ ಕ್ರಮವಾಗಿ ಜೋಡಿಸಿರುವ ಕೆಲವು ಆಕೃತಿಗಳು ಕಾಣುತ್ತವೆ. ಕೆಲವು ಘನಾಕೃತಿಗಳು (cubes); ಮೂಲೆಗಳಲ್ಲಿ ಒಂದೊಂದು ಪರಮಾಣು, ಮಧ್ಯದಲ್ಲಿ ಒಂದು ಪರಮಾಣು ಈ ರೀತಿ ನಿರ್ಮಿಸಿರುವ ಕಟ್ಟಡಗಳು. ಕೆಲವು ಘನಾಕೃತಿಗಳ ಪ್ರತಿಯೊಂದು ಮುಖದ ಮಧ್ಯದಲ್ಲಿಯೂ ಒಂದೊಂದು ಅಣುವಿರುತ್ತದೆ. ಪದಾರ್ಥಗಳ ಒಂದೊಂದು ಕಣವೂ ಈ ರೀತಿಯ ಆಕೃತಿಗಳ ಒತ್ತಾದ ಜೋಡಣೆಯಿಂದ ಆದದ್ದು. ಇಟ್ಟಿಗೆಗಳನ್ನು ಜೋಡಿಸಿ

ಕಟ್ಟಡವನ್ನು ನಿರ್ಮಿಸುವಂತೆ ಆಕೃತಿಗಳ ಜೋಡಣೆಯಿಂದ ಪದಾರ್ಥವು ನಿರ್ಮಿತವಾಗಿರುತ್ತದೆ. ಒಂದು ಪದಾರ್ಥದ ಪ್ರತಿಯೊಂದು ಮೂಲ ಆಕೃತಿಯೂ ಒಂದೇ ತೆರನಾಗಿರುತ್ತದೆ. ಒಂದು ಆಕೃತಿಗೂ ಪಕ್ಕದ್ದಕ್ಕೂ ಒಂದು ಗೊತ್ತಾದ ಅಂತರ ವಿರುತ್ತದೆ. ಈ ಅಂತರವನ್ನು ಬದಲಾಯಿಸುವುದು ಬಹಳ ಕಷ್ಟ. ಸೂರ್ಯನೂ



ಅಡಿಗೆ ಉಪ್ಪಿನ ಒಂದು 'ಹರಳು'

ಇದರಲ್ಲಿ ಸೋಡಿಯಂ (ಸೊ) ಮತ್ತು ಕ್ಲೋರೀನ್ (ಕ್ಲೊ) ಪರಮಾಣುಗಳು ಹೇಗೆ ಘನಾಕೃತಿಯಾಗುವಂತೆ ಜೋಡಿಸಿಕೊಂಡಿವೆ ಎಂಬುದನ್ನು ನೋಡಬಹುದು. ಒಂದು ಸಣ್ಣ ಹರಳಿನಲ್ಲಿ ಈ ರೀತಿ ಜೋಡಿಸಿಕೊಂಡಿರುವ ಅನೇಕ ಕೋಟಿ ಪರಮಾಣುಗಳಿರುತ್ತವೆ.

ಗ್ರಹಗಳೂ ಪರಸ್ಪರ ಎಳೆಯುವಂತೆ ಈ ಆಕೃತಿಗಳು ಒಂದನ್ನೊಂದು ವಿಶೇಷವಾದ ಶಕ್ತಿಯಿಂದ ಎಳೆಯುತ್ತವೆ. ವಜ್ರದಲ್ಲಿ ಆಕೃತಿಗಳಿಗೆ ಒಂದು ಕ್ಲುಪ್ತ ಅಂತರವಿದೆ. ಸೀಸದಕಡ್ಡಿ ಸೀಸದ ಆಕೃತಿಗಳೂ ವಜ್ರದ ಆಕೃತಿಗಳಂತೆಯೇ ಇವೆ. ಆದರೆ ಅವುಗಳಿಗಿರುವ ಪರಸ್ಪರ ಅಂತರವು ವಜ್ರದ ಆಕೃತಿಗಳಿಗೆ ಇರುವ ಅಂತರದ ಎರಡರಷ್ಟಿದೆ. ಬ್ರಾಗ್ ಎಂಬವನು ಈ ಸಮಸ್ಯೆಯ ವಿಷಯವನ್ನು ಬಹಳವಾಗಿ ಯೋಚಿಸಿ ಪರಿಹಾರಮಾಡಿದನು. ವಜ್ರದ ಆಕೃತಿಗಳಿಗೆ ಇರುವ ಅಂತರ ೧.೫೪ ಆ. ಮಾನವೆಂದೂ ಗ್ರಾಫೈಟ್ ಆಕೃತಿಗಳಿಗಿರುವ ಅಂತರ ಸುಮಾರು ೩ ಆ.ಮಾ. ಗಳೆಂದೂ

ಕಂಡುಹಿಡಿದನು. ಈ ವ್ಯತ್ಯಾಸವು ಪದಾರ್ಥಗಳಲ್ಲಿ ಎಷ್ಟೊಂದು ತಾರತಮ್ಯ ವನ್ನುಂಟುಮಾಡುತ್ತವೆ, ನೋಡಿ ! ಒಂದನ್ನು ಅಮರಲೋಕದ ವಸ್ತುವೆಂದು ಮೆಚ್ಚುತ್ತೇವೆ. ಇನ್ನೊಂದನ್ನು ಕಾಕರಾಜನ ಕುಲಮುದ್ರೆಯೆಂದು ಧಿಕ್ಕರಿಸು ತ್ತೇವೆ. ವಜ್ರದಿಂದ ನಿಜವಾಗಿಯೂ ಏನೂ ಪ್ರಯೋಜನವಿಲ್ಲ. ಸೀಸದಕಡ್ಡಿಯ ಸೀಸವು ನಮ್ಮ ನಿತ್ಯಜೀವನದಲ್ಲಿ ಅತ್ಯುಪಯುಕ್ತವಾದ ಒಂದು ವಸ್ತು. ಇದರ ಆಕೃತಿಗಳು ಸ್ವಲ್ಪ ದೂರವಾಗಿರುವುದರಿಂದಲೇ ಇದು ಅಷ್ಟು ಮೃದುವಾಗಿರುವುದು. ಆಕೃತಿಗಳು ಸಮೀಪವಾಗಿರುವುದರಿಂದ ವಜ್ರವು ಗಟ್ಟಿಯಾಗಿರುವುದೇನೋ ಸರಿಯೆ. ಆದರೆ ಅದಕ್ಕೆ ಆ ಅಪಾರ ಸೌಂದರ್ಯ ಎಲ್ಲಿಂದ ಬಂತು ? ಇದು ಆಶ್ಚರ್ಯಕರವಾದ ವಿಷಯವಾದರೂ ಸೃಷ್ಟಿರಚನೆಯ ವೈಚಿತ್ರ್ಯವೆಂದರಿತು ನಾವು ತೃಪ್ತಿಪಡಬೇಕಾಗು ತ್ತದೆ. ಬ್ರಾಗನು ಇತರ ಪದಾರ್ಥಗಳನ್ನೂ ಈ ರೀತಿ ಪರೀಕ್ಷಿಸಿ ಎರಡು ಮೂರು ರೂಪಗಳಲ್ಲಿ ಕಾಣುವ ಪದಾರ್ಥಗಳಲ್ಲಿ ಇದೇ ರೀತಿ ರಚನಭೇದವಿದೆಯೆಂದು ತೋರಿಸಿ ದನು. ಕಬ್ಬಿಣದಲ್ಲಿಯೂ ಎರಡು ಜಾತಿ ಇವೆಯೆಂದು ಕಂಡುಹಿಡಿದು ಅವುಗಳ ರಚನೆಯನ್ನು ಸರಿಯಾಗಿ ವಿವರಿಸಿ ಯಾವುದು ಹೆಚ್ಚು ಗಟ್ಟಿ ಎಂದು ಸ್ಪಷ್ಟಪಡಿಸಿ ದನು. ಇದರಿಂದ ದೊಡ್ಡ ಯಂತ್ರಗಳ ಮತ್ತು ಕಟ್ಟಡಗಳ ನಿರ್ಮಾಣಕರಿಗೆ ಬಹಳ ಸಹಾಯವಾಗಿದೆ. ಅವರು ಸರಿಯಾದ ಜಾತಿಯ ಕಬ್ಬಿಣವನ್ನು ಉಪಯೋಗಿಸಿ ಮುಂದೆ ಅಪಾಯವಾಗದಂತೆ ನೋಡಿಕೊಳ್ಳುತ್ತಾರೆ.

ಹರಳುಗಳು ರಾಂಟ್‌ಜನ್ ಕಿರಣಗಳನ್ನು ಪ್ರತ್ಯೇಕಿಸಲು ತಕ್ಕ ಸಾಧನಗಳೆಂದು ಹೇಳಿದೆ. ಪ್ರತಿ ಹರಳಿನಲ್ಲಿಯೂ ಪರಮಾಣುಗಳಿಗಿರುವ ಅಂತರವು ಕ್ಲುಪ್ತವಾದದ್ದು. ಈ ಅಂತರಕ್ಕೆ ಸರಿಯಾದ ಅಳತೆಯುಳ್ಳ ಎಕ್ಸ್ ರೇ ಅಲೆಗಳನ್ನು ಅದು ಪ್ರತ್ಯೇಕಿಸಿ ಹೊರಗೆ ಬಿಡುತ್ತದೆ. ಈ ಅಲೆಗಳ ಅಳತೆ ತಿಳಿದೊಡನೆ ಪರಮಾಣುಗಳ ಅಂತರವು ತಿಳಿಯುತ್ತದೆ. ಇದು ತಿಳಿದೊಡನೆ ಪದಾರ್ಥವು ಯಾವುದೆಂದು ಹೇಳಿಬಿಡಬಹುದು. ಏಕೆಂದರೆ ಒಂದು ಪದಾರ್ಥದ ಕಣಗಳಿಗಿರುವ ಅಂತರವು ವಿಧಿವತ್ತಾದದ್ದು. ಅದನ್ನು ಬದಲಾಯಿಸಲಾಗುವುದಿಲ್ಲ. ಮತ್ತು ಬೇರಾವ ಪದಾರ್ಥವನ್ನು ಪರೀಕ್ಷಿಸಿದರೂ ಅವುಗಳ ಪರಮಾಣುಗಳಿಗಿರುವ ಅಂತರವು ಇದಕ್ಕಿಂತ ಭಿನ್ನವಾದುದು, ಪದಾರ್ಥಗಳ ಪರೀಕ್ಷೆ ಎಷ್ಟು ಸುಲಭವಾಯಿತು ನೋಡಿ! ಒಂದು ಲೋಹವನ್ನು ಪರೀಕ್ಷಿಸ ಬೇಕೆನ್ನೋಣ. ಅದರ ಮೂಲಕ ಎಕ್ಸ್ ರೇ ಹಾಯಿಸಿ ವಿಭಜನವಾದ ಅಲೆಗಳನ್ನು ಅಳೆಯಿರಿ. ಈ ಅಲೆಗಳು ಯಾವ ಲೋಹಕ್ಕೆ ಸಂಬಂಧಪಟ್ಟವೆಂದು ಪಟ್ಟಿಯನ್ನು ನೋಡಿ. ಪರೀಕ್ಷಿಸುತ್ತಿರುವ ಲೋಹವು ಅದೇ. ಲೋಹವು ಮಿಶ್ರವಾಗಿದ್ದರೂ ಯಾವ ಯಾವ ಅಲೆಗಳು ಹೊರಬೀಳುತ್ತವೆಯೆಂದು ನೋಡಿಕೊಂಡು ಲೋಹದಲ್ಲಿರುವ

ಪದಾರ್ಥಗಳನ್ನು ಖಚಿತಪಡಿಸಬಹುದು. ಈ ರೀತಿ ವಸ್ತುಪರೀಕ್ಷೆಯಲ್ಲಿ ಈ ಕಿರಣಗಳು ಅತ್ಯಮೂಲ್ಯವಾದ ಸಾಧನವಾಗಿವೆ.

(೫) ವಿಶ್ವಶಕ್ತಿಯ ಮೂಲ

ಪರಮಾಣುಗಳ ಒಳರಚನೆ.—ಸರ್ ಜೆ. ಜೆ. ಥಾಮ್ಸನ್‌ರವರ ಸಂಶೋಧನೆಯ ಫಲವಾಗಿ ಪರಮಾಣುಗಳ ವಿಷಯದಲ್ಲಿದ್ದ ಅಭಿಪ್ರಾಯವು ಮಾರ್ಪಟ್ಟಿತೆಂದು ಮೊದಲೇ ತಿಳಿಸಿದ್ದೇವೆ. ಒಂದೊಂದು ಪರಮಾಣುವಿನಲ್ಲಿಯೂ ಧನವಿದ್ಯುದಂಶದ ಸುತ್ತ ಸಂಚರಿಸುವ ವಿದ್ಯುತ್ಕಣಗಳ ಸಂಖ್ಯೆ ಗೊತ್ತಾದದ್ದು. ಪ್ರತಿಯೊಂದು ಮೂಲ ವಸ್ತುವಿಗೂ ವಸ್ತುಪಟ್ಟಿಯಲ್ಲಿ ಪರಮಾಣುಗಳಲ್ಲಿರುವ ಈ ವಿದ್ಯುತ್ಕಣಗಳ ಸಂಖ್ಯೆಗೆ ತಕ್ಕ ಸ್ಥಾನ ಕೊಡಲಾಗಿದೆ. ಮೊದಲನೆಯದು ಜಲಜನಕ. ಏಕೆಂದರೆ ಇದರ ಪರಮಾಣುವಿನಲ್ಲಿ ಒಂದೇ ಒಂದು ವಿದ್ಯುತ್ಕಣವಿದೆ. ೭೯ನೆಯದು ಬಂಗಾರ. ಏಕೆಂದರೆ ಅದರ ಪರಮಾಣುವಿನಲ್ಲಿ ೭೯ ವಿದ್ಯುತ್ಕಣಗಳಿವೆ. ಇದೇರೀತಿ ೮೮ನೆಯದು ರೇಡಿಯಂ. ಎಲ್ಲಕ್ಕೂ ಕೊನೆಯಾದದ್ದು ಯುರೇನಿಯಂ. ಇದರ ಸ್ಥಾನ ೯೨. ಈ ಮಧ್ಯೆ ಕೆಲವು ಸಂಖ್ಯೆಗಳಿಗೆ ತಕ್ಕ ಪದಾರ್ಥಗಳು ದೊರೆಯದೆ ಖಾಲಿ ಇತ್ತು. ಈಚಿನ ಪರಿಶೋಧನೆಯ ಪರಿಣಾಮವಾಗಿ ಈ ಖಾಲಿ ಸ್ಥಳಗಳಿಗೆ ತಕ್ಕ ಹೊಸ ಲೋಹಗಳು ದೊರೆತಿವೆ. ೧೯೨೩ರಲ್ಲಿ ಹಾಫ್‌ನಿಯಂ ಎಂಬ ಲೋಹವು ಈ ರೀತಿ ಹೊರಬಿತ್ತು. ೮೫, ೮೭ ನೆಯವು ಇನ್ನೂ ದೊರೆತಿಲ್ಲ. ವಸ್ತುಗಳನ್ನು ಈ ರೀತಿ ಕ್ರಮವಾಗಿ ಜೋಡಿಸುವುದರಿಂದ ಹೊಸ ವಸ್ತುಗಳನ್ನು ಕಂಡುಹಿಡಿಯಲು ಸಹಾಯವಾಯಿತು. ಈ ಸಂಖ್ಯೆಯು ಹೆಚ್ಚುತ್ತಾ ಹೋದಂತೆ ಪದಾರ್ಥಗಳ ಸಾಂದ್ರತೆಯೂ ಹೆಚ್ಚುತ್ತಾ ಹೋಗುತ್ತದೆ. ಬಂಗಾರ, ಸೀಸ, ಪ್ಲಾಟಿನಂ ಹೆಚ್ಚು ಘನತ್ವವುಳ್ಳವು. ಪಟ್ಟಿಯ ಆದಿಯಲ್ಲಿ ಬಹಳ ಸಮೀಪವಾಗಿ ಕಾಣುತ್ತವೆ. ಅನಿಲಗಳು ಬಹಳ ಹಗುರವಾದವು. ಎಲ್ಲವೂ ಪಟ್ಟಿಯ ಪ್ರಾರಂಭದಲ್ಲಿ ಸಿಗುತ್ತವೆ.


ಲೋಹಪರಿವರ್ತನೆ.—ಬಂಗಾರವು ಆದಿಯಿಂದಲೂ ಬಹಳ ಬೆಲೆಯುಳ್ಳ ಪದಾರ್ಥವೆಂದು ಮನ್ನಣೆಪಡೆದಿದೆ. ಪಾದರಸವೂ ಇದರಂತೆಯೇ ಪ್ರಕಾಶವಾದ ಪದಾರ್ಥ. ಇದರ ಬೆಲೆ ಸುಲಭ. ಪ್ರಯತ್ನಪಟ್ಟರೆ ಇದನ್ನು ಬಂಗಾರಮಾಡಬಹುದು, ಹೆಚ್ಚು ಧನಿಕರಾಗಬಹುದು ಎಂಬ ಬಯಕೆಯಿಂದ ಅನೇಕರು ಆಸ್ತಿಪಾಸ್ತಿಗಳನ್ನು ಕಳೆದಿದ್ದಾರೆ. ಈ ಗುಟ್ಟನ್ನು ಕಲಿಸುವ ನೆಪದಿಂದ ಕೆಲವು ಬೈರಾಗಿಗಳು ಅನೇಕ ಮಾನ್ಯರಿಗೆ ಹುಚ್ಚು ಹಿಡಿಸುತ್ತಿದ್ದರು. ಇಂಥ ಕೆಲವು ಅಪ್ರಾಮಾಣಿಕರ ದುರ್ವರ್ತನೆಯಿಂದ ಇಂಥ ಸಂಶೋಧಕರೆಲ್ಲರೂ ಮಾಯಗಾರರು, ಮೋಸಗಾರರು ಎಂಬ ಅಪಪ್ರಥೆ

ಹುಟ್ಟಿ ಸರಕಾರವು ಇಂಥವರನ್ನು ಬಂಧಿಸುವ ಪ್ರಸಂಗ ಒದಗಿ ಶಾಸ್ತ್ರದ ಬೆಳವಣಿಗೆಗೆ ಬಹಳ ಕುಂದಕವಾಗಿತ್ತು. ಇದು ಹಳೆಯಕಾಲದ ಮಾತು. ಈಗ ಕೆಲವು ವರ್ಷಗಳ ಹಿಂದೆ ಕ್ಯಾವೆಂಡಿಷ್ ಪ್ರಯೋಗಶಾಲೆಯ ರದರ್‌ಫರ್ಡ್ ಎಂಬ ಪ್ರಸಿದ್ಧ ವಿಜ್ಞಾನಿಯು ಈ ಪರೀಕ್ಷೆಯನ್ನು ಕೈಗೊಂಡನು. ಬಂಗಾರದ ಪರಮಾಣುವಿನಲ್ಲಿ ಪಾದರಸದ ಪರಮಾಣುವಿನಲ್ಲಿರುವುದಕ್ಕಿಂತ ಒಂದು ವಿದ್ಯುತ್ಕಣ ಮಾತ್ರ ಕಡಮೆ ಇದೆ. ಪಾದ ರಸದ ಪರಮಾಣುವಿನ ಕೇಂದ್ರದಿಂದಬಂದು ವಿದ್ಯುತ್ಕಣವನ್ನು ತೆಗೆಯಲು ಸಾಧ್ಯವೇ? ಈ ರೀತಿ ಭಿನ್ನಮಾಡಿದರೆ ಅದು ಬಂಗಾರವಾಗುತ್ತದೆಯೇ? ಈ ಮಹನೀಯನು ಬಹಳಕಾಲ ಪರೀಕ್ಷಿಸಿ, ಕಡುಕಷ್ಟವಾದ ಪ್ರಯೋಗಗಳನ್ನು ನಡೆಸಿ, ಕೊನೆಗೆ ಇದು ಸಾಧ್ಯವೆಂದು ತೋರಿಸಿದನು. ಲೋಹಪರಿವರ್ತನೆಯು ಸಾಧ್ಯವೆಂದೊಡನೆ ಇದು ಸುಲಭವೆಂದೆಣಿಸಬಾರದು. ಸ್ವಲ್ಪ ಪಾದರಸವನ್ನು ಕೊಟ್ಟು ಅದನ್ನು ಬಂಗಾರ ಮಾಡಬೇಕೆಂದು ಹೇಳಿದರೆ ಯಾವ ವಿಜ್ಞಾನಿಗೂ ಸಾಧ್ಯವಿಲ್ಲ. ವಿಶೇಷ ಸಾಹಸದಿಂದ ಕೆಲವು ಪರಮಾಣುಗಳನ್ನು ಮಾತ್ರ ಪರಿವರ್ತಿಸಬಹುದು. ಆದುದರಿಂದ ಈ ಕೆಲಸವು ಮನುಷ್ಯನ ಸಾಹಸಕ್ಕೆ ಒಂದು ಹೆಗ್ಗುರುತಾದರೂ, ವಸ್ತುಜ್ಞಾನವನ್ನು ಹೆಚ್ಚು ಬೆಳೆಸಿದರೂ, ವ್ಯಾಪಾರಗಾರನಿಗೆ ಯಾವ ಸಹಾಯವನ್ನೂ ಮಾಡಲಾರದು. ಸುಲಭ ವಾದ ಮಾರ್ಗಗಳು ಗೊತ್ತಾದರೆ ಬಂಗಾರಕ್ಕೆ ಈಗ ಇರುವ ಬೆಲೆಯು ಬಹಳ ಇಳಿದುಹೋಗುತ್ತದೆ.

ಎಕ್ಸ್ ರೇಗಳು ಏಕೆ ಉತ್ಪನ್ನವಾಗುತ್ತವೆ?

ಪರಮಾಣುಗಳಲ್ಲಿರುವ ವಿದ್ಯುತ್ಕಣಗಳನ್ನು ಹೆಚ್ಚುಕಡಮೆ ಮಾಡುವುದು ಬಹಳ ಕಷ್ಟವೆಂದು ಹೇಳಿದ್ದೇವೆ. ಮಧ್ಯದಲ್ಲಿ ಸೂರ್ಯನಂತಿರುವ ಧನವಿದ್ಯುದಂಶದ ಸುತ್ತ ಇವು ಗ್ರಹಗಳಂತೆ ಕ್ಲುಪ್ತಪಥದಲ್ಲಿ ಸಂಚರಿಸುತ್ತವೆಯೆಂದೂ ತಿಳಿಸಿದ್ದೇವೆ. ಇವುಗಳ ಪಥವನ್ನು ಬದಲಾಯಿಸುವುದಕ್ಕೆ ವಿಶೇಷ ಶಕ್ತಿಬೇಕು. ಎಕ್ಸ್ ರೇ ಯಂತ್ರದಲ್ಲಿ ಋಣಧ್ರುವದಿಂದ ಹೊರಡುವ ವಿದ್ಯುತ್ಕಣಗಳು ಬಹಳ ವೇಗವಾಗಿ ಸಂಚರಿಸುತ್ತವೆ. ಆದುದರಿಂದ ಅವುಗಳಿಗೆ ವಿಶೇಷ ಶಕ್ತಿಯಿದೆ. ಇವು ಧನಧ್ರುವದ ಸಮೀಪದಲ್ಲಿರುವ ಲಕ್ಷ್ಯದ ಮೇಲೆ ಬಡಿದರೆ ಲಕ್ಷ್ಯದ ಪರಮಾಣುಗಳಲ್ಲಿರುವ ವಿದ್ಯುತ್ಕಣಗಳು ತಮ್ಮ ಪಥವನ್ನು ಬದಲಾಯಿಸುತ್ತವೆ. ಪರಮಾಣುಗಳ ಮಧ್ಯದಲ್ಲಿ ಸಂಚರಿಸುವ ಕೆಲವು ವಿದ್ಯುತ್ಕಣಗಳು ಹೊರಕ್ಕೆ ಬರುತ್ತವೆ. ಪರಮಾಣುವಿನ ಸಮಸ್ಥಿತಿ ಕೆಡುತ್ತದೆ. ಹೆಚ್ಚು ಹೊತ್ತು ಹೀಗಿರಲು ಸಾಧ್ಯವಿಲ್ಲ. ಕೂಡಲೇ ವಿದ್ಯುತ್ಕಣಗಳು ತಮ್ಮ ತಮ್ಮ ಸ್ಥಾನಗಳನ್ನು ಸೇರಿ ಪರಮಾಣುವು ಸಮಸ್ಥಿತಿಗೆ ಬರುತ್ತದೆ. ಸ್ಥಾನಪಲ್ಲಟ

ಹೊಂದಿದ ವಿದ್ಯುತ್ಕಣಗಳು ಸ್ವಸ್ಥಾನವನ್ನು ಸೇರುವಾಗ, ಆ ಸ್ಥಾನಪಲ್ಲಟಕ್ಕೆ ತಗಲಿದ ಶಕ್ತಿಯನ್ನು ಅವು ಪುನಃ ಹೊರಕ್ಕೆ ಚೆಲ್ಲುತ್ತವೆ. ಈ ಶಕ್ತಿಯು ಅಲೆಗಳ ರೂಪದಲ್ಲಿ ಹೊರಡುತ್ತದೆ. ಇವೇ ಎಕ್ಸ್ ರೇ ಅಲೆಗಳು. ಸುಮಾರಾಗಿ ಒಳಗಡೆ ಇರುವ ವಿದ್ಯುತ್ಕಣವನ್ನು ಚಲಿಸುವುದಕ್ಕೆ ಹೆಚ್ಚು ಶಕ್ತಿ ಬೇಕಿಲ್ಲ. ಇದು ಪುನಃ ಸ್ವಸ್ಥಾನವನ್ನು ಸೇರುವಾಗ ಒರುವ ಎಕ್ಸ್ ರೇಗಳೂ ಅಷ್ಟು ಬಲವಾಗಿರುವುದಿಲ್ಲ.



ಹೀಲಿಯಂ ಪರಮಾಣುವಿನ ಒಳರಚನೆ

(ಮಧ್ಯದಲ್ಲಿ ಪ್ರೊಟಾನ್. ಸುತ್ತ ಎರಡು ವಿದ್ಯುದಣುಗಳು ತೋರಿಸಿರುವ ಪಥದಲ್ಲಿ ಸಂಚರಿಸುತ್ತವೆ.)

ಬಹಳ ಆಳದಲ್ಲಿರುವ ವಿದ್ಯುತ್ಕಣಗಳನ್ನು ಎಬ್ಬಿಸುವುದಕ್ಕೆ ವಿಶೇಷಶಕ್ತಿ ಬೇಕು. ಇವು ತಮ್ಮ ಸ್ಥಾನವನ್ನು ಸೇರಿದಾಗ ಹೊರಡುವ ಎಕ್ಸ್ ರೇಗಳು ಬಹಳ ತೀಕ್ಷ್ಣವಾದವು. ಆದುದರಿಂದ ಎಕ್ಸ್ ರೇಗಳ ಉತ್ಪತ್ತಿಗೆ ಕಾರಣ ಈಗ ಸ್ಪಷ್ಟವಾಗಿರಬೇಕು. ಪದಾರ್ಥಗಳ ಪರಮಾಣುಗಳೊಳಗಿರುವ ವಿದ್ಯುತ್ಕಣಗಳನ್ನು ತಕ್ಕ ಸಾಧನಗಳಿಂದ ಪ್ರಚೋದಿಸಿದರೆ ಎಕ್ಸ್ ರೇಗಳು ಉದ್ಭವಿಸುತ್ತವೆ.

ಗ್ಯಾಮಾ ರಶ್ಮಿಗಳ ತಯಾರಿಕೆ

ಈ ರೀತಿ ನಾವು ಪ್ರಚೋದಿಸಬಹುದಾದದ್ದು ಪರಮಾಣುಗಳಲ್ಲಿರುವ ಋಣ ವಿದ್ಯುತ್ಕಣಗಳನ್ನು ಮಾತ್ರ. ಮಧ್ಯದಲ್ಲಿರುವ ಧನವಿದ್ಯುದಂಶವನ್ನು ಕದಲಿಸುವುದು

ಬಹಳ ಕಷ್ಟ. ಅನೇಕ ವಿದ್ಯುತ್ಕಣಗಳ ಶಕ್ತಿಯನ್ನು ಇದು ತಡೆದಿಟ್ಟಿರುವುದರಿಂದ ಇದರ ಶಕ್ತಿ ಬಹಳ ಹೆಚ್ಚು. ಲಕ್ಷಾಂತರ ವಿದ್ಯುತ್ಕಣಗಳ ಬಾಣವನ್ನು ಬಿಟ್ಟರೂ ಒಂದು ವಿದ್ಯುತ್ಕಣ ಹೋಗಿ ಇದಕ್ಕೆ ಬಡಿದು ಇದರಲ್ಲಿರುವ ಒಂದು ಸಣ್ಣ ಅಂಶವನ್ನು ಕದಲಿಸುವುದೂ ಬಹಳ ಕಷ್ಟ. ಆದರೆ ಹೀಗೆ ಕದಲಿಸಿದ ಪಕ್ಷದಲ್ಲಿ ಹೊರಡುವ ಅಲೆಗಳು ಅತ್ಯಂತ ಬಲವುಳ್ಳವಾಗಿ, ಅಂದರೆ ಸಣ್ಣಗೆ, ಇರತಕ್ಕವು. ಎಕ್ಸ್‌ರೇಗಳಿಗಿಂತ ಇವು ಬಹಳ ತೀಕ್ಷ್ಣವಾಗಿರುತ್ತವೆ. ಇವನ್ನು ಉತ್ಪತ್ತಿಮಾಡಲು ಅರ್ಧಕೋಟಿ ವೋಲ್ಟಿನ ವಿದ್ಯುನ್ಮಟ್ಟ ಬೇಕಾಗುತ್ತದೆ. ಇಷ್ಟು ಹೆಚ್ಚಿನ ವಿದ್ಯುನ್ಮಟ್ಟವನ್ನು ಪಡೆಯುವುದು ಸುಲಭಸಾಧ್ಯವಲ್ಲ. ಸೃಷ್ಟಿಯ ವೈಖರಿಯನ್ನು ನೋಡಿ.—ರೇಡಿಯಂ ಎಂಬ ಒಂದು ಲೋಹವಿದೆ; ಅದರ ಪರಮಾಣುಗಳು ಯಾವ ಸಹಾಯವೂ ಇಲ್ಲದೆ ಬದಲಾವಣೆ ಹೊಂದುತ್ತಾ ಶಕ್ತಿಯನ್ನು ಹೊರಸೂಸುತ್ತವೆ. ಇದು ಆ ಪರಮಾಣುಗಳಲ್ಲಿ ಕಾಣುವ ಆಶ್ಚರ್ಯಕರವಾದ ಲಕ್ಷಣ. ಇನ್ನೂ ಹೆಚ್ಚಿನ ವಿಶೇಷವೇನೆಂದರೆ ಪರಮಾಣುಗಳ ಮಧ್ಯವರ್ತಿಯಾದ ಧನವಿದ್ಯುದಂಶವೇ ಸ್ವಯಂಪ್ರಚೋದಿತವಾಗುವುದರಿಂದ ಅತಿ ತೀಕ್ಷ್ಣವಾದ ಕಿರಣಗಳು ಹೊರಹೊಮ್ಮುತ್ತವೆ. ಎಕ್ಸ್‌ರೇಗಳು ಅರ್ಧ ಅಡಿ ಉಕ್ಕನ್ನು ಹೊಕ್ಕರೆ ಇವು ಸುಮಾರು ಒಂದು ಮೊಳ ದಪ್ಪದ ಉಕ್ಕಿನ ಒಳಕ್ಕೆ ನುಗ್ಗಬಲ್ಲವು. ಇವನ್ನೇ ಗ್ಯಾಮ ಕಿರಣಗಳೆನ್ನುವುದು. ಎಕ್ಸ್ ರೇಗಳಿಗಿಂತ ಇವು ಬಹಳ ಚಿಕ್ಕವು. ಎಕ್ಸ್ ರೇಗಳಂತೆ ಇವನ್ನು ಉತ್ಪನ್ನಮಾಡುವುದಕ್ಕಾಗುವುದಿಲ್ಲ. ಸ್ವಯಂಪ್ರಭೆಯುಳ್ಳ ಲೋಹಗಳಿಂದಲೇ ಇವು ನಮಗೆ ದೊರೆಯುವುದು. ರೇಡಿಯಂ ಲೋಹವು ತನ್ನಲ್ಲಿರುವ ಶಕ್ತಿಯನ್ನು ಸಂತತವಾಗಿ ಚೆಲ್ಲುತ್ತಾ ಸ್ವಲ್ಪ ಸ್ವಲ್ಪವಾಗಿ ಪರಿವರ್ತನೆ ಹೊಂದಿ ಸೀಸವಾಗುತ್ತದೆ. ಇದಕ್ಕೆ ತಗಲುವ ಕಾಲ ೩,೫೦೦ ವರ್ಷಗಳು.

ಮ್ಯಾಡಂ ಕ್ಯೂರಿಯ ಅಪೂರ್ವ ಶಾಸ್ತ್ರಪ್ರೇಮ.—ರೇಡಿಯಂ ವಿಷಯ ಹೇಳುವಾಗ ಅದನ್ನು ಕಂಡುಹಿಡಿದ ಮಹಿಳಾಶಿರೋಮಣಿಯನ್ನು ನೆನೆಯದಿರಲಾಗುವುದಿಲ್ಲ. ಈಕೆ ಪೋಲೆಂಡ್ ದೇಶದ ಒಂದು ದಾರಿದ್ರ್ಯ ಮತ್ತು ದಾಸ್ಯಕೂಪದಲ್ಲಿ ಜನಿಸಿದ ಅಲ್ಪವ್ಯಕ್ತಿ. ಬಾಲ್ಯದಲ್ಲಿಯೇ ತನ್ನ ದೇಶವನ್ನು ರಷ್ಯದ ಶೃಂಖಲೆಯಿಂದ ಬಿಡುಗಡೆಮಾಡುವ ಒಂದು ಗೂಢಸಮಿತಿಗೆ ಸೇರಿದ್ದಳು. ಗುಟ್ಟು ಬಯಲಾಗಿ ಸರ್ಕಾರವು ಸೆರೆಮನೆಗೆ ದೂಡುವುದಕ್ಕೆ ಮುನ್ನ ಫ್ರಾನ್ಸ್ ದೇಶವನ್ನು ಸೇರಿದಳು. ಆ ವೇಳೆಗೆ ಕಲಿತಿದ್ದ ಶಾಸ್ತ್ರವಿದ್ಯೆಯ ಸಹಾಯದಿಂದ ಕ್ರಮೇಣ ಪ್ಯಾರಿಸ್ ನಗರದ ಸಾರ್ಬಾನ್ ಎಂಬ ಪ್ರಸಿದ್ಧ ಶಾಸ್ತ್ರಶಾಲೆಯಲ್ಲಿ ಕ್ಯೂರಿ ಎಂಬ ಅಧ್ಯಾಪಕನಿಗೆ ಸಹಾಯಕಳಾಗಿ ನಿಯಮಿತಳಾದಳು. ಇವಳ ಅಸಾಧಾರಣ ಶಕ್ತಿಯಿಂದ ಮೋಹಿತ

ನಾಗಿ ಕ್ಯೂರಿಯು ಇವಳನ್ನು ಮದುವೆಯಾದನು. ಇಬ್ಬರೂ ದಾರಿದ್ರ್ಯದಲ್ಲಿ ಸವೆಯಬೇಕಾಗಿದ್ದರೂ ತಮ್ಮ ಶಾಸ್ತ್ರಪ್ರೇಮವನ್ನು ಸ್ವಲ್ಪವೂ ತ್ಯಜಿಸಲಿಲ್ಲ. ನೈಸರ್ಗಿಕವಾದ ಈ ಆತುರವನ್ನು ಬಾಹ್ಯಜೀವನದ ಯಾವ ತೊಡಕುಗಳೂ ನಂದಿಸ ಲಾಗುವುದಿಲ್ಲ. ಹತ್ತಾರು ವರ್ಷ ಕಷ್ಟಪಟ್ಟು, ಮೂವತ್ತು ನಲವತ್ತು ಗಾಡಿ ಪಿಚ್‌ಬ್ಲೆಂಡ್ ಎಂಬ ಮಣ್ಣನ್ನು ಕರಗಿಸಿ ಕೊನೆಗೆ ಅವುಗಳಲ್ಲಿ ಪ್ರಭೆಯನ್ನುಂಟು ಮಾಡುತ್ತಿದ್ದ ರೇಡಿಯಂ ಲೋಹವನ್ನು ಪ್ರತ್ಯೇಕಿಸಿದರು. ಅಷ್ಟು ಮಣ್ಣನ್ನು ಕರಗಿಸಿದರೂ ಕೆಲವು ಗುಲಗಂಜಿ ತೂಕದಷ್ಟು ಮಾತ್ರ ರೇಡಿಯಂ ದೊರೆಯಿತು. ಇವರ ಪರಿಶ್ರಮವು ಮೆಚ್ಚಿಗೆ ಪಡೆದು, ಪ್ರಪಂಚದ ವೈಜ್ಞಾನಿಕರೆಲ್ಲರ ಪರಮ ಗುರಿಯಾದ ನೊಬೆಲ್ ಬಹುಮಾನವು ಇವರಿಗೆ ದೊರೆಯಿತು. ರೇಡಿಯಂ ಗುಣಗಳು ಶೀಘ್ರದಲ್ಲಿಯೇ ವ್ಯಕ್ತವಾದವು. ರೋಗ ಚಿಕಿತ್ಸೆಗೆ ಇದು ಅತ್ಯಂತ ಸಹಾಯಕಾರಿ ಯೆಂದು ತಿಳಿಯಿತು. ಆದುದರಿಂದ ಕ್ಯೂರಿಯವರು ಪ್ರತ್ಯೇಕಿಸಿದ್ದಷ್ಟು ರೇಡಿಯಂಗೆ ಐದಾರು ಲಕ್ಷ ರೂಪಾಯಿ ಕೊಟ್ಟು ಕೊಳ್ಳಲು ಸರ್ಕಾರದವರು ಸಿದ್ಧವಾಗಿದ್ದರು. ಆದರೆ ದುಡ್ಡಿನ ಮೇಲಿನ ಆಸೆಯು ಈ ವೈಜ್ಞಾನಿಕರಿಗಿರಲಿಲ್ಲ. ನಾಲ್ಕಾರು ವರ್ಷದ ಕಷ್ಟದ ಪರಿಣಾಮವಾಗಿ ಗಳಿಸಿದ್ದ ರೇಡಿಯಂ ಎಲ್ಲವನ್ನೂ ಯಾವ ಪ್ರತಿಫಲವನ್ನೂ ಪಡೆಯದೆ ದೇಶಕ್ಕೆ ಧಾರೆಯೆರೆದು ಒಂದು ರೇಡಿಯಂ ಆಸ್ಪತ್ರೆಯ ಸ್ಥಾಪನೆಗೆ ಕಾರಣ ರಾದರು. ಸ್ವಲ್ಪಕಾಲದಲ್ಲಿಯೇ ಗಂಡನು ಒಂದು ವಾಹನಕ್ಕೆ ಸಿಕ್ಕಿ ಮೃತನಾಗಲು ಮ್ಯಾಡಂ ಕ್ಯೂರಿಯು ಒಂಟಿಯಾದಳು. ಆದರೂ ಅವಳ ಶಾಸ್ತ್ರದಾಹವು ಏಕರೀತಿ ಉಕ್ಕುತ್ತಿತ್ತು. ತನ್ನ ಅದ್ಭುತ ಮೇಧಾಶಕ್ತಿಯಿಂದಲೇ ಹೊಸ ವಿಷಯಗಳನ್ನು ಕಂಡುಹಿಡಿದಳು. ಶಾಸ್ತ್ರಲೋಕವು ಇವಳ ಕೆಲಸವನ್ನು ಮೆಚ್ಚಿ ಎರಡನೆಯಬಾರಿ ಇವಳಿಗೆ ನೊಬೆಲ್ ಬಹುಮಾನವನ್ನು ಕೊಟ್ಟಿತು. ಈ ಮರ್ಯಾದೆಯು ಇದುವರೆಗೂ ಯಾರಿಗೂ ಲಭಿಸಿಲ್ಲ. ೧೯೧೪ರಿಂದ ೧೯೧೮ರ ವರೆಗೆ ನಡೆದ ಯುದ್ಧದಲ್ಲಿ ಮ್ಯಾಡಂ ಕ್ಯೂರಿಯು ದಾದಿಯಾಗಿ ಯುದ್ಧಭೂಮಿಯಲ್ಲಿ ಗಾಯಗೊಂಡವರಿಗೆ ರೇಡಿಯಂ ಚಿಕಿತ್ಸೆ ನಡೆಸಿ ಹೆಚ್ಚು ಖ್ಯಾತಿ ಪಡೆದಳು. ತನ್ನ ಶಾಸ್ತ್ರವಿದ್ಯೆಯು ಪರಹಿತಸಾಧನೆಗೆ ಮುಡುಪಾಗಿರಬೇಕೆಂಬುದನ್ನು ಅವಳು ಮರೆಯಲಿಲ್ಲ.

ರೇಡಿಯಂ ಚಿಕಿತ್ಸೆಯ ಕಷ್ಟ.—ರೇಡಿಯಂ ಸಹಾಯದಿಂದ ಅನೇಕ ರೋಗ ಗಳನ್ನು ಗುಣಪಡಿಸಬಹುದು. ಈ ಸುದ್ದಿಯು ಸಾಮಾನ್ಯರಿಗೇನೂ ಸಂತೋಷ ಪಡಿಸುವಂಥದಲ್ಲ. ಏಕೆಂದರೆ ರೇಡಿಯಂ ದೊರೆಯುವುದು ಕಷ್ಟ. ಆದುದರಿಂದ ಅದರ ಬೆಲೆ ಬಹಳ ಹೆಚ್ಚು. ಲಂಡನ್ ನಗರದ ಒಂದು ಪ್ರಸಿದ್ಧ ಆಸ್ಪತ್ರೆಯಲ್ಲಿ ಇದರಿಂದ ರೋಗ ಚಿಕಿತ್ಸೆಮಾಡಲು ತಗಲುವ ಖರ್ಚನ್ನು ಈ ಕೆಳಗೆ ಕಾಣಿಸಿದೆ.

೧೯೩೦ರ ಅಂಕೆಗಳು

ನಾಲಗೆಯ ಕ್ಯಾನ್ಸರಿಗೆ	.... ೧೨ ಮಿಲಿಗ್ರಾಂ	....	£ ೧೪೦
ಮೆದುಳಿನ ಕ್ಯಾನ್ಸರಿಗೆ	.... ೭೦ ,,	....	£ ೮೦೫
ಎದೆಯ ಕ್ಯಾನ್ಸರಿಗೆ	.... ೧೩೭ ,,	....	£೧,೫೦೦

ಆದುದರಿಂದ ಇದರ ಅನುಕೂಲವು ಬಡವರಿಗೆ ದುಸ್ಸಾಧ್ಯವಾದುದು. ಶುದ್ಧ ರೂಪದಲ್ಲಿ ಇದನ್ನು ಉಪಯೋಗಿಸಿದರೆ ತೊಂದರೆಯಾಗುತ್ತದೆ, ಮತ್ತು ಅದು ಆವಶ್ಯಕವೂ ಅಲ್ಲ. ಆದುದರಿಂದ ಅದರ ಸಂಯುಕ್ತವನ್ನು (Radium Sulphate) ಆಸ್ಪತ್ರೆಗಳಲ್ಲಿ ಉಪಯೋಗಿಸುತ್ತಾರೆ. ಇದನ್ನು ಉಪಯೋಗಿಸುವವರೂ ಬಹಳ ಹುಷಾರಾಗಿರುತ್ತಾರೆ. ಇದನ್ನು ಆರು ಅಂಗುಲ ದಪ್ಪದ ಸೀಸದ ಪೆಟ್ಟಿಗೆಗಳಲ್ಲಿ ಇಟ್ಟು ಕಾಪಾಡುತ್ತಾರೆ. ಸಾಮಾನ್ಯ ಆಸ್ಪತ್ರೆಗಳಲ್ಲಿ ಇದರ ಚಿಕಿತ್ಸೆಯು ರೂಢಿಗೆ ಬರುವುದು ಕಷ್ಟ. ಎಕ್ಸ್‌ರೇಗೆ ಇಷ್ಟು ಖರ್ಚು ತಗಲುವುದಿಲ್ಲ. ಆದುದರಿಂದ ಮೈಸೂರು ಬೆಂಗಳೂರು ಆಸ್ಪತ್ರೆಗಳಲ್ಲಿ ಅದರ ಉಪಯೋಗವನ್ನು ನಾವು ನೋಡಬಹುದು.

ಮಾನವನ ಶಕ್ತಿಯು ಸನ್ಮಾರ್ಗದಲ್ಲಿ ಹರಿದರೆ ಲೋಕಕ್ಕೇ ಸಮೃದ್ಧಿ. ಆತ್ಮಸಾಕ್ಷಿಗೆ ವಿರುದ್ಧವಾಗಿ ಅದನ್ನು ದುರುಪಯೋಗಪಡಿಸುವುದರಿಂದ ಉಂಟಾಗುವ ಪರಿಣಾಮಕ್ಕೆ ಈಗಿನ ಯುದ್ಧವೇ ಸಾಕ್ಷಿ.

[ಈ ಪ್ರಬಂಧವನ್ನು ಬರೆಯುವುದರಲ್ಲಿ ನನಗೆ ಅನೇಕರು ಸಹಾಯಮಾಡಿರುತ್ತಾರೆ. ಅವರಲ್ಲಿ ಮುಖ್ಯರಾದವರು ಶ್ರೀಗಳಾದ ಟಿ. ಎಸ್. ಸುಬ್ಬರಾಯ ಮತ್ತು ಆರ್. ಕೆ. ಸಂಗಮೇಶ್ವರನ್. ಇವರಿಗೂ, ನನಗೆ ಸಹಾಯಮಾಡಿದ ಇತರ ಮಹನೀಯರಿಗೂ, ಉಚಿತವಾಗಿ ಪಡಿಯಚ್ಚುಗಳನ್ನು ಕಳುಹಿಸಿಕೊಟ್ಟ ಶ್ರೀ|| ಯು. ರಾಘವೇಂದ್ರಾಚಾರ್ಯರಿಗೂ ನಾನು ಚಿರಋಣಿ.]

ಜಿ. ಆರ್. ರಂಗಸ್ವಾಮಿ.

ಪ್ರಮಾಣಲೇಖನಾವಳಿ

1. *X-Rays and Radium*—V. E. Pullin.
2. *Science of Life*—H. G. Wells.
3. *Encyclopaedia Britannica* (XIV Edition)—X-Rays, Radiation, Atom, etc.
4. *Madam Curie*—By Eve Ourie—*Readers Digest*, March, 1938.
5. *The Story of Civilization*—C. E. M. Joad.
6. *At Home Among The Atoms*—James Kendall.

ಉಪಾಧ್ಯಾಯ ಪಂಡಿತರು

ಅವರ ಸ್ಥಾನ, ಅವರ ಕರ್ತವ್ಯ, ಅವರ ಪುರೋದೃಷ್ಟಿ

(೧೯೪೦ನೆಯ ಇಸವಿ ಮೇ ೨೫ರಲ್ಲಿ ಮೇಲುಕೋಟೆಯಲ್ಲಿ ನೆರೆದಿದ್ದ ಮೈಸೂರು ಪಂಡಿತಮಂಡಲದ ಆರನೆಯ ಸಮ್ಮೇಳನದ ಅಧ್ಯಕ್ಷೋಪನ್ಯಾಸ)

ರಾಜಮಂತ್ರಪ್ರವೀಣ ಶ್ರೀಮಾನ್ ಮಾಧವರಾಯರವರೆ, ಸ್ವಾಗತಮಂಡಲಾಧ್ಯಕ್ಷ ಶ್ರೀಮಾನ್ ಬಿ. ಎಸ್. ರಾಘವೇಂದ್ರರಾಯರವರೆ, ಪಂಡಿತಮಂಡಲೋಪಾಧ್ಯಕ್ಷ ಶ್ರೀಮಾನ್ ಡಿ. ವೆಂಕಟರಾಮಯ್ಯನವರೆ, ವಿದ್ವನ್ಮಣಿಗಳೆ, ಸಮಸ್ತ ಸಭಿಕ ಮಹಾಶಯರೆ,—

ಇಂಥ ಸಭೆಯ ಅಧ್ಯಕ್ಷಸ್ಥಾನದ ಗೌರವವು ದ್ವಿಮುಖಿಯಾದದ್ದೆಂಬುದು ನನ್ನ ಮನಸ್ಸಿಗೆ ಚೆನ್ನಾಗಿ ಗೊತ್ತಿದೆ. ಒಂದುಕಡೆ ಅದು ದೊಡ್ಡ ಪ್ರಶಸ್ತಿಯಾದರೆ ಇನ್ನೊಂದುಕಡೆ ಅದು ಅಷ್ಟೊ ಅಷ್ಟು ದೊಡ್ಡ ಕರ್ತವ್ಯಭಾರ. ಒಂದನ್ನು ನೋಡುವುದರಿಂದಾಗುವ ಸಂತೋಷವು ನನ್ನಂಥವನ ಪಾಲಿಗೆ ಇನ್ನೊಂದರಿಂದ ಹುಟ್ಟುವ ಭಯದಲ್ಲಿ ಮುಳುಗಿಹೋಗುತ್ತದೆ. ಈ ಪದವಿಗೆ ನನ್ನನ್ನು ಆಹ್ವಾನಿಸುವುದರಲ್ಲಿ ನಮ್ಮ ಪಂಡಿತಮಂಡಲದ ಅಧಿಕಾರಿಗಳಿಗೆ ಇದ್ದ ಭಾವವು ನನ್ನ ಮೇಲಣ ಅಭಿಮಾನವೆಂಬುದನ್ನು ನಾನು ಕಂಡುಕೊಂಡಿದ್ದೇನೆ. ಆದರೆ ಆ ಆಹ್ವಾನವನ್ನು ಅಂಗೀಕರಿಸುವುದರಲ್ಲಿ ನನಗಿದ್ದ ಭಾವವು ಆತ್ಮವಿಶ್ವಾಸವಲ್ಲವೆಂಬುದನ್ನು ಕೃತಕವಿಲ್ಲದೆ ತಮ್ಮಲ್ಲಿ ಅರಿಕೆ ಮಾಡಬೇಕಾಗಿದೆ. ಇಂಥ ಪದವಿಗೆ ಅವಶ್ಯವಾದ ಪಾಂಡಿತ್ಯವಾಗಲಿ ಪ್ರಜ್ಞೆಯಾಗಲಿ ಲೌಕಿಕ ಪ್ರಭಾವವಾಗಲಿ ನನಗೆ ಲಭ್ಯವಾದದ್ದಲ್ಲ. ಈ ನನ್ನ ಮಾತನ್ನು ನಾನೇ ನಿಜವಾಗಿ ನಂಬಿದ್ದ ಪಕ್ಷದಲ್ಲಿ ಈ ಪೀಠದಲ್ಲಿ ಕುಳ್ಳಿರಲು ನಾನು ಏಕೆ ಒಪ್ಪಬೇಕಾಗಿತ್ತು ಎಂದು ಯಾರಾದರೂ ಕೇಳಬಹುದು. ಅದಕ್ಕೆ ನನ್ನ ಉತ್ತರ ಹೀಗಿದೆ:—ದೇಶಭಾಷೆಗಳ ಅಭ್ಯುದಯದ ವಿಷಯದಲ್ಲಿ ನಾನು ಉತ್ಸಾಹವುಳ್ಳವನು. ನಮ್ಮ ಪಂಡಿತರಿಂದ ನಮ್ಮ ಜನಸಾಮಾನ್ಯಕ್ಕೆ ಆಗಬೇಕಾಗಿರುವ ಉಪಕಾರಗಳು ಅಪಾರವಾಗಿವೆಯೆಂದು ನಾನು ನಂಬಿಕೊಂಡಿದ್ದೇನೆ. ಹೀಗೆ ಸಾಮಾನ್ಯ ಜನರು ಪಂಡಿತವರ್ಗದಿಂದ ಏನನ್ನು ಅಪೇಕ್ಷಿಸಿ ನಿರೀಕ್ಷಿಸಿಕೊಂಡಿದ್ದಾರೆಂಬುದನ್ನು ಸೂಚಿಸಲು ನನಗೆ ಇದು ಒಳ್ಳೆಯ ಅವಕಾಶವಾಗಿದೆ. ಸಾಮಾನ್ಯಲೋಕದ ಪರವಾಗಿ ಪಂಡಿತ ಸಮ್ಮುಖದಲ್ಲಿ ಒಂದೆರಡು ವಿಚಾರಗಳನ್ನು ಬಿನ್ನಯಿಸುವುದೇ ನನ್ನ ಇಂದಿನ ಉದ್ದೇಶ.

ಪಂಡಿತ ಕಸಬು

ಭಗವದ್ಗೀತಾದಿ ಪುರಾತನ ಗ್ರಂಥಗಳಲ್ಲಿ "ಪಂಡಿತ" ಶಬ್ದದ ಅರ್ಥವು ಬಹು ಉದಾತ್ತವಾದದ್ದಾಗಿದ್ದರೂ, ನಮ್ಮ ಪ್ರಕೃತ ಸಂದರ್ಭದಲ್ಲಿ ಆ ಶಬ್ದವು ಒಂದು ಕಸಬಿನ ಹೆಸರಾಗಿದೆ. "ಪಂಡಿತರು" ನಮ್ಮ ವಿದ್ಯಾಶಾಲೆಗಳಲ್ಲಿ ಸಂಸ್ಕೃತದ, ಅಥವಾ ಕನ್ನಡ ಮೊದಲಾದ ದೇಶಭಾಷೆಗಳಲ್ಲೊಂದರ, ಸಾಹಿತ್ಯ ಗ್ರಂಥಗಳನ್ನು ಪಾಠ ಹೇಳುವವರು. ಹೀಗೆ ಆ ಶಬ್ದದ ಅರ್ಥವು ಈಗ ಸಂಕುಚಿತವಾಗಿದೆಯೆಂದಮಾತ್ರದಿಂದ ಆ ವೃತ್ತಿಯ ಬೆಲೆ ಹೆಚ್ಚಿನದಲ್ಲವೆಂದು ಸೂಚಿಸಿದಂತೆ ಯಾರೂ ಭಾವಿಸತಕ್ಕದ್ದಲ್ಲ. ಲೋಕದಲ್ಲಿ ಯಾವ ಒಂದು ವಸ್ತುವಿನ ಬೆಲೆಯೇ ಆಗಲಿ ಅದರ ಜನೋಪಯೋಗಿತೆಯನ್ನು ಅವಲಂಬಿಸಿಕೊಂಡಿರುತ್ತದೆ. ನಮ್ಮ ಜನಕ್ಕೆ ಸಂಸ್ಕೃತ ಕನ್ನಡಗಳ ಆವಶ್ಯಕತೆ ಎಷ್ಟುಮಟ್ಟಿಗೆ ಇರುತ್ತದೆಯೋ ಆ ಭಾಷೆಗಳನ್ನು ಕಲಿಸುವವರಿಗೆ ದೊರೆಯುವ ಮನ್ನಣೆಯು ಅಷ್ಟುಮಟ್ಟಿಗೆ ಇರುತ್ತದೆ. ಎದುವರೆಗೂ ಮನುಷ್ಯಮನುಷ್ಯರ ಪರಸ್ಪರ ಮನೋಭಿವ್ಯಕ್ತಿಯು ವಾಕ್ಕಿನ ಮೂಲಕ ಆಗಬೇಕಾಗಿರುವುದೋ, ಎದುವರೆಗೂ ವಾಗ್ವಿಲಾಸದಿಂದ ಸಂತೋಷಿಸಿ ಹಿಗ್ಗುವ ಸ್ವಭಾವವು ಮನುಷ್ಯರ ಶ್ರವಣೇಂದ್ರಿಯವನ್ನು ತೊರೆಯುವುದಿಲ್ಲವೋ, ಎದುವರೆಗೂ ಲೋಕವ್ಯವಹಾರಕ್ಕೆ ವಾಕ್ಕು ಮುಖ್ಯ ಸಾಧನವಾಗಿರುವುದೋ ಅದುವರೆಗೂ ಈ ದೇಶದ ಜನರಿಗೆ ಕನ್ನಡ ಸಂಸ್ಕೃತಗಳು ಜೀವಿತಭಾಗ್ಯದ ಒಂದು ಮುಖ್ಯ ನಿಧಿಯಾಗಿರುತ್ತವೆ. ಈ ಕಾರಣದಿಂದ ದೊಡ್ಡದಾಗ ತಕ್ಕದ್ದು ನಮ್ಮ ಉಪಾಧ್ಯಾಯ-ಪಂಡಿತರ ಬೆಲೆ.

ಪ್ರಾಚೀನ ಪಾಂಡಿತ್ಯ

ಹಾಗಾದರೆ ಈ ಪಂಡಿತರೆಂಬವರಿಗೆ ಇರಬೇಕಾದ ಯೋಗ್ಯತಾ ಸಂಪತ್ತು ಎಂಥಾದ್ದು, ಅವರ ವೈಲಕ್ಷಣ್ಯವೇನು—ಎಂಬ ಪ್ರಶ್ನೆಗಳು ವಿಚಾರ್ಯವಾಗುತ್ತವೆ. ಹಿಂದಿನ ಕಾಲದಲ್ಲಿ ಪಂಡಿತರೆನ್ನಿಸಿಕೊಳ್ಳುತ್ತಿದ್ದವರು ಬಹುಶಃ ಒಂದೆರಡು ಪ್ರಾಚೀನ ಶಾಸ್ತ್ರಗಳಿಗೆ ಅಧಿಕಾರಿಗಳಾಗಿದ್ದುಕೊಂಡು, ಆ ಶಾಸ್ತ್ರಗಳಿಗೆ ಸಂಬಂಧಪಟ್ಟ ಇತರ ಶಾಸ್ತ್ರಗಳಲ್ಲಿಯೂ ತಕ್ಕಮಟ್ಟಿಗೆ ನಿಷ್ಣಾತರಾಗಿರುತ್ತಿದ್ದರು. ಸಾಹಿತ್ಯವನ್ನೋ ವ್ಯಾಕರಣವನ್ನೋ, ತರ್ಕವನ್ನೋ, ಮೀಮಾಂಸಾಶಾಸ್ತ್ರವನ್ನೋ, ಧರ್ಮಶಾಸ್ತ್ರವನ್ನೋ ಆಮೂಲಾಗ್ರವಾಗಿ ಸಂಪ್ರದಾಯ ಸಿದ್ಧವಾದ ರೀತಿಯಲ್ಲಿ ಅಭ್ಯಾಸಮಾಡಿ, ಆಯಾ ಶಾಸ್ತ್ರದ ವಿಚಾರದಲ್ಲಿ ಬಂದ ಪ್ರಶ್ನೆ ಸಂದೇಹಗಳಿಗೆ ನಿಷ್ಕೃಷ್ಟವಾದ ಉತ್ತರವನ್ನು ಕೊಡಬಲ್ಲವರು ಪಂಡಿತರೆನ್ನಿಸಿಕೊಳ್ಳುತ್ತಿದ್ದರು. ವಿಸ್ತಾರವಾದ ಗ್ರಂಥರಾಶಿ ಅವರಿಗೆ ಮುಖಸ್ಥವಾಗಿರುತ್ತಿತ್ತು. ಪ್ರತಿದಿನವೂ ಮನುಸ್ಮೃತಿಯ ಭಾಗಗಳನ್ನೋ

ಅಷ್ಟಾಧ್ಯಾಯಿಯನ್ನೋ ಶಬ್ದಾನುಶಾಸನವನ್ನೋ ಪಾರಾಯಣಮಾಡಿದ ಹೊರತು ಭೋಜನಮಾಡಲೊಪ್ಪದಿದ್ದ ಸ್ವಶಾಸ್ತ್ರಭಕ್ತರನ್ನು ನಾನು ನೋಡಿದ್ದೇನೆ. ಒಂದು ಪ್ರಾಚೀನ ಶಾಸ್ತ್ರದಲ್ಲಿ ಸಂಪೂರ್ಣವಾದ ಮತ್ತು ಸಂಪ್ರದಾಯಾನುಸಾರವಾದ ಪ್ರಜ್ಞೆ, ಅದರ ಜೊತೆಗೆ ಸಾಹಿತ್ಯ ವ್ಯಾಕರಣಾದಿ ವಿದ್ಯೆಗಳಲ್ಲಿ ತಕ್ಕಷ್ಟು ವಿದ್ವತ್ತು, ವಿಸ್ತಾರವಾದ ಗ್ರಂಥಧಾರಣೆ, ಇವುಗಳ ಸಮ್ಮೇಳನದಿಂದ ಉತ್ಪನ್ನವಾದ ವಾಗ್ವೈಭವ— ಇವು ಪೂರ್ವಕಾಲದ ಪಾಂಡಿತ್ಯದ ಲಕ್ಷಣಗಳಾಗಿದ್ದವು. ಇಂಥ ಪಂಡಿತರು ಇದ್ದ ಕಾಲವನ್ನು ನೋಡುವ ಯೋಗ ನನಗೆ ದೊರೆತಿತ್ತು. ನನ್ನ ಮಕ್ಕಳು ಮುಮ್ಮಕ್ಕಳ ಕಾಲಕ್ಕೂ ಅಂಥ ಯೋಗವಿದ್ದೀತೆಂಬ ಭರವಸೆ ನನಗೆ ಅಷ್ಟಾಗಿಲ್ಲ. ಇದು ಯಂತ್ರಯುಗ. ಶಾಲುಗಳು ಯಂತ್ರಗಳಿಂದ ತಯಾರಾಗುತ್ತವೆ. ಯೋಗ್ಯತಾಪತ್ರಿಕೆಗಳೂ ಹಾಗೆಯೇ. ಆದ್ದರಿಂದಲೇ ಸರಕು ಅಗ್ಗ.

ಶಿಥಿಲವೇಕೆ?

ಹಿಂದಣ ತೆರದ ಪಾಂಡಿತ್ಯ ಶಿಥಿಲವಾಗುತ್ತಿರುವುದಕ್ಕೆ ಕಾರಣಗಳೇನೆಂದು ವಿಚಾರಿಸುವುದು ಅನುಚಿತವಲ್ಲ. ಮೊದಲನೆಯದಾಗಿ, ಪೂರ್ವಕಾಲದಲ್ಲಿ ಪಂಡಿತರಿಗೆ ಹೊರಜಗತ್ತಿನ ಅಬ್ಬರ ಈಗಿನಷ್ಟು ಹೆಚ್ಚಾಗಿರಲಿಲ್ಲ. ರಾಜಾಶ್ರಯದಿಂದ ದೊರೆತಷ್ಟರಲ್ಲಿ ಅವರು ತೃಪ್ತರಾಗಿ ಲೋಕಸನ್ಮಾನದಿಂದ ಸಂತುಷ್ಟರಾಗಿರುತ್ತಿದ್ದರು. ಈಗಿನ ಪ್ರಪಂಚದ ಆಕರ್ಷಣೆಗಳು ಬೇರೆ ತೆರದವು, ಹೆಚ್ಚು ಗೊಂದಲದವು. ಇಂಗ್ಲಿಷ್ ಕಲಿತು ಲೌಕಿಕ ವಿದ್ಯೆಗಳಲ್ಲಿ ಪ್ರಸಿದ್ಧರಾದವರಿಗೆ ಲಭ್ಯವಾಗಿರುವ ಸುಖಸಾಧನಗಳು ಕೇವಲ ಸಂಸ್ಕೃತಾಭ್ಯಾಸಿಗಳ ಮನಸ್ಸಿಗೂ ಮೋಹಕಗಳಾಗಿವೆ. ಸಂಸ್ಕೃತ ಕಲಿತ ಮಾತ್ರದಿಂದ ಕುಕ್ಷಿಕ್ಲೇಶ ದೂರ ತೊಲಗುವುದೆಂದು ಊಹಿಸಲು ಕಾರಣವೇನೂ ಇಲ್ಲ. ಅಥವಾ ಪಂಡಿತರಾದವರು ತಮ್ಮೊಬ್ಬರಷ್ಟಕ್ಕೆ ತಾವು ಇಹವೈಭವದ ಆಶೆಯನ್ನು ಜಯಿಸಿಯಾರೆಂದು ಭಾವಿಸಿದರೂ, ಅವರ ದಾರಾ ಪುತ್ರಾದಿಗಳೂ ಹಾಗೆಯೇ ಮಾಡಬೇಕೆಂಬ ನಿಬಂಧನೆಯೇನೂ ಇಲ್ಲ. ಸಾಮಾನ್ಯ ಮನುಷ್ಯನಿಗಿರುವ ಹಸಿವು ಹಂಬಲುಗಳೆಲ್ಲ ಪಂಡಿತರಿಗೂ ಇರುವುದು ಸ್ವಾಭಾವಿಕ. ಪಂಡಿತರೇನೂ ಅತಿಮಾನುಷ ಜೀವಿಗಳಲ್ಲ. ನೆರೆಹೊರೆಯಂತೆ ಬದುಕಿ ಬೆಳೆಯಬೇಕೆಂದು ಅವರಲ್ಲಿ ಆಶೆ ಹುಟ್ಟಿದ ಮೇಲೆ ನೆರೆಹೊರೆಯವರು ಹಿಡಿದ ಉಪಾಯಗಳನ್ನು ಅವರೂ ಅನುಸರಿಸಬೇಕಾಯಿತು. ವೈದಿಕತನ ಇಳಿಯಿತು, ಲೌಕಿಕತನ ಏರಿತು. ಶಾಸ್ತ್ರೋಪಾಸನೆ ಕಡಮೆಯಾಯಿತು, ಆಶ್ರಯಾನ್ವೇಷಣೆ ಹೆಚ್ಚಿತು. ಹೀಗೆ "ಶತಶ್ಲೋಕೇನ ಪಂಡಿತಃ", "ಶಾಲೂಮಾತ್ರೇಣ ಪಂಡಿತಃ" ಎಂಬ ವಿಡಂಬನ ವಾಕ್ಯಗಳಿಗೆ ದಾರಿಯಾಯಿತು.

ದುರೀಶ್ವರದ್ವಾರ ಬಹಿರ್ವಿತರ್ದಿಕಾ
ದುರಾಶಿಕಾಯೈ ರಚಿತೋಽಯಮಂಜಲಿಃ ||

ಎಂದು ಹೇಳಿಸುವ ಮನೋದಾರ್ಢ್ಯವು ಪುಸ್ತಕ ಪಾಂಡಿತ್ಯದಿಂದ ಬರತಕ್ಕದ್ದಲ್ಲ. ಶಾಲುವಿನ ಹಾಸು ಹೊಕ್ಕುಗಳಲ್ಲಿ ವೈರಾಗ್ಯದ ಕಣಗಳು ಅಡಗಿಕೊಂಡಿರುವುದಿಲ್ಲ. ಈ ನಿಜಾಂಶವನ್ನು ಪಂಡಿತರು ತಾವು ಸ್ಪಷ್ಟವಾಗಿ ಒಪ್ಪಿಕೊಂಡು ಸರಕಾರದ ಅಧಿಕಾರಿಗಳು ಗಮನದಲ್ಲಿರಿಸಿಕೊಳ್ಳುವಂತೆ ಮಾಡಿದರೆ ವೈದಿಕ ಲೌಕಿಕರಿಗಿರುವ ಪರಸ್ಪರ ವೈಮನಸ್ಯವು ಬಹುಮಟ್ಟಿಗೆ ನಿವಾರಣೆಯಾದೀತು. ಇಂಗ್ಲಿಷ್ ಸಾಹಿತ್ಯವನ್ನೂ ಭೌತಶಾಸ್ತ್ರ ರಸಾಯನಶಾಸ್ತ್ರಗಳನ್ನೂ ಗಣಿತ ಭೂವಿವರಣೆಗಳನ್ನೂ ಬೋಧಿಸುವ ಉಪಾಧ್ಯಾಯರಂತೆಯೇ ನಮ್ಮ ಪಂಡಿತರೂ ವೇತನಾರ್ಥಿಗಳು. ಅವರು ಹಿಡಿಯದ ಮಡಿಯನ್ನು ಇವರೇನೂ ಹಿಡಿದಿಲ್ಲ. ಇದನ್ನು ಎಲ್ಲರೂ ಸ್ಪಷ್ಟವಾಗಿ ಅಂಗೀಕರಿಸಬೇಕು. ಪಂಡಿತರಿಗೆ ವೈರಾಗ್ಯದ ಸೋಗು ಬೇಕಿಲ್ಲ. ಪ್ರಭುಗಳು ಅವರಲ್ಲಿ ಆ ನಟನೆಯನ್ನು ನಿರೀಕ್ಷಿಸಬೇಕಾದದ್ದಿಲ್ಲ. ಹೀಗೆ ಒಂದು ಕಡೆ ಪಂಡಿತರ ವಿಷಯದಲ್ಲಿಯೂ ಇನ್ನೊಂದು ಕಡೆ ಇತರ ಉಪಾಧ್ಯಾಯರ ವಿಷಯದಲ್ಲಿಯೂ ಬಹು ದಿನಗಳಿಂದ ಜನಕ್ಕೆ ಅಭ್ಯಾಸವಾಗಿ ಬಂದಿರುವ ದೃಷ್ಟಿಭೇದವನ್ನು ತೊಡೆದುಹಾಕುವುದು ಸಾಮಾನ್ಯ ನ್ಯಾಯಸಾಧನೆಗೆ ಮೊದಲನೆಯ ಮೆಟ್ಟಲು. ಪಂಡಿತವರ್ಗವೂ ಇತರ ಉಪಾಧ್ಯಾಯ ವರ್ಗವೂ ಒಂದೇ ಕಸಬಿನ ಎರಡು ವಿಭಾಗಗಳು. ಅವುಗಳಲ್ಲಿ ಒಂದು ಹೆಚ್ಚು ಒಂದು ಕಡಮೆಯೆಂಬ ವ್ಯತ್ಯಾಸವೇನೂ ಇರತಕ್ಕದ್ದಲ್ಲ. ಇದು ಇನ್ನು ಮುಂದಣ ಮಾತಾಯಿತು. ಹಿಂದೆ ಪಾಂಡಿತ್ಯಾಭಿವೃದ್ಧಿ ಕಡಮೆಯಾದದ್ದಕ್ಕೆ ಆಗಣ ಪಂಡಿತರು ಹಲಕೆಲವರಾದರೂ ನವೀನಲೋಕದ ಸಿರಿಸೊಗಸುಗಳಿಗೆ ಮನಸೋತದ್ದು ಒಂದು ಕಾರಣವೆಂಬುದನ್ನು ಅನಿಷ್ಟವಾದರೂ ನಾವು ಒಪ್ಪಿಕೊಳ್ಳಬೇಕು. ಅನ್ಯದೇಶಗಳ ಬುದ್ಧಿ ಶಕ್ತಿ ವಿಕಾಸದ ಫಲವಾಗಿ ಬಂದ ಯಂತ್ರಸಾಧನಗಳೂ ಅದರ ಪರಿಣಾಮವಾದ ಐಶ್ವರ್ಯವೂ ಭೋಗಸಾಮಗ್ರಿಗಳೂ ನಮ್ಮ ದೇಶದ ಪಾಂಡಿತ್ಯಕ್ಕೆ ಸ್ವಲ್ಪ ಮಾತ್ರವಾದರೂ ಮುಪ್ಪನ್ನು ತಂದವು.

ಪುರಾತನ ನೂತನಗಳ ಪ್ರಸ್ಪರ್ಧೆ

ಎರಡನೆಯದಾಗಿ, ನಮ್ಮ ಸ್ಕೂಲು ಕಾಲೇಜುಗಳು ಪ್ರಾರಂಭವಾದ ಕಾಲದಲ್ಲಿ ಇಂಗ್ಲಿಷ್ ಭಾಷೆಯನ್ನೂ ವಿಜ್ಞಾನಾದಿ ಪಾಶ್ಚಾತ್ಯ ವಿದ್ಯೆಗಳನ್ನೂ ಬೋಧಿಸಲು ಜನ ವಿರಳರಾಗಿದ್ದಂತೆ ಸಂಸ್ಕೃತವನ್ನೂ ಇತರ ದೇಶಭಾಷೆಗಳನ್ನೂ ಬೋಧಿಸಬಲ್ಲವರು ವಿರಳರಾಗಿರಲಿಲ್ಲ. ಹೀಗೆ ನಮ್ಮ ಪಂಡಿತರು ಆಗ ಅಗ್ಗದ ವೇತನಗಳನ್ನು ಸಂತೋಷದಿಂದ ಅಂಗೀಕರಿಸಿದರು. ಆ ವೇತನಗಳಿಗಾಗಿ ತಮ್ಮ ತಮ್ಮಲ್ಲಿ ಪೋಟಾಪೋಟಿಯನ್ನೂ

ಮಾಡಿದರು. ಹೀಗೆ ಆಗ ಅವರು ಮಾಡಿಸಿದ ಅಗ್ಗದ ಸ್ಥಿತಿ ಇದುವರೆಗೂ ಅನುಸರಿಸಿಕೊಂಡು ಬಂದಿದೆ. ಪಂಡಿತವರ್ಗದ ಇಂದಿನ ಅವಸ್ಥೆಗೆ ಅದೂ ಒಂದು ಕಾರಣ.

ಮೂರನೆಯದಾಗಿ, ಲೋಕೋಪಯೋಗಿತೆಯಲ್ಲಿಯೂ, ತಜ್ಜನ್ಯವಾದ ಲೌಕಿಕ ಮೂಲ್ಯದಲ್ಲಿಯೂ ಪ್ರಾಚೀನ ವಿದ್ಯೆಗೂ ನವೀನ ವಿದ್ಯೆಗೂ ಇರುವ ವ್ಯತ್ಯಾಸವು ಹಳೆಯ ಪಾಂಡಿತ್ಯವನ್ನು ಶಿಥಿಲಗೊಳಿಸಿತು. ಪೂರ್ವ ಪಾಂಡಿತ್ಯವೇನಿದ್ದರೂ ಸಂಸ್ಕೃತದಲ್ಲಿರುವ ಸಾಹಿತ್ಯವನ್ನೂ ನಾಲ್ಕಾರು ಶಾಸ್ತ್ರಗಳನ್ನೂ ಒಳಕೊಂಡಿತ್ತು. ಈಗ ಅವುಗಳಿಗೆ ಪ್ರತಿಸ್ಪರ್ಧಿಗಳಾಗಿ ಅನೇಕ ಹೊಸ ಶಾಸ್ತ್ರಗಳು ನಮ್ಮ ದೇಶದೊಳಕ್ಕೆ ಬಂದಿವೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಭೂಗರ್ಭಶಾಸ್ತ್ರ, ಖಗೋಳ ಶಾಸ್ತ್ರ ಮೊದಲಾದ ಆಧುನಿಕ ಪ್ರಕೃತಿ ವಿಜ್ಞಾನಶಾಸ್ತ್ರಗಳು ನಮ್ಮ ಪುರಾತನ ತರ್ಕ ಮೀಮಾಂಸಾದಿ ಶಾಸ್ತ್ರಗಳಿಗೆ ಪ್ರತಿದ್ವಂದ್ವಿಗಳಾಗುತ್ತಿವೆ. ಹಾಗೆಯೇ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ವ್ಯವಹಾರ ಧರ್ಮಶಾಸ್ತ್ರ ಮೊದಲಾದ ಆಧುನಿಕ ಸಮಾಜ ವಿಜ್ಞಾನ ಶಾಸ್ತ್ರಗಳೂ ತಮ್ಮ ತಮ್ಮ ಪ್ರಾಧಾನ್ಯವನ್ನು ಸ್ಥಾಪಿಸುತ್ತಿವೆ. ಈ ನೂತನ ಶಾಸ್ತ್ರಗಳೂ ನಮ್ಮ ಪುರಾತನ ಶಾಸ್ತ್ರಗಳಂತೆ ದೊಡ್ಡವು, ವಿಸ್ತಾರವಾದವು, ಕಷ್ಟತರವಾದುವು. ಹೀಗೆ ನಾಲ್ಕು ಶಾಸ್ತ್ರಗಳಿದ್ದ ಕಡೆ ಈಗ ನಲವತ್ತು ಶಾಸ್ತ್ರಗಳು ಪರಸ್ಪರ ಪೋಟಾಪೋಟಿಗೆ ನಿಂತಿವೆ. ಇದರಲ್ಲಿ ಯಾವುದು ಜನದ ನಿತ್ಯಜೀವನಕ್ಕೆ ಪ್ರತ್ಯಕ್ಷೋಪಯೋಗಿಯೋ ಅದಕ್ಕೆ ಹೆಚ್ಚು ಪ್ರತಿಫಲ ದೊರೆಯುವುದು ಸ್ವಾಭಾವಿಕವಾಗಿದೆ. ಅದೃಷ್ಟಹಿತಕ್ಕಿಂತ ದೃಷ್ಟಹಿತಕ್ಕೆ ಹೆಚ್ಚಾಗಿ ಬೆಲೆಕಟ್ಟುವುದೂ, ದೂರದ ಹಿತಕ್ಕಿಂತ ಸಮೀಪದ ಹಿತವನ್ನು ಹೆಚ್ಚು ಆದರದಿಂದ ನೋಡುವುದೂ ಮಾನವ ಸ್ವಭಾವದ ಗುಣ; ಅಥವಾ ಅವಗುಣ. ಹೇಗಾದರೂ, ಅದರಿಂದ ತಪ್ಪಿಸಿಕೊಳ್ಳುವುದು ಯಾರಿಗೂ ಸಾಧ್ಯವಿಲ್ಲ. ಯೂರೋಪಿನಿಂದ ಬರುತ್ತಿರುವ ನವೀನ ವಿಜ್ಞಾನಗಳು ನಮ್ಮ ಲೌಕಿಕಜೀವನದ ಸಾಧನಸೌಕರ್ಯಗಳನ್ನು ಹೆಚ್ಚಿಸುತ್ತಿವೆ; ಹೊಸ ಹೊಸ ಉಪಭೋಗ ಸಾಮಗ್ರಿಗಳನ್ನು ಒದಗಿಸುತ್ತಿವೆ; ಹೊಸ ಹೊಸ ಕುಶಲ ಸಂಧಾನಗಳನ್ನು ತೋರಿಸುತ್ತಿವೆ. ಅವು ಎಲ್ಲರಿಗೂ ಬೇಕಾಗಿವೆ. ಪೂರ್ವಕಾಲದ ಪಂಡಿತರು ಸಹ ಮೋಟಾರು ಸವಾರಿಯನ್ನು ಬೇಡವೆನ್ನುತ್ತಿಲ್ಲ. ಹೀಗೆ ನವೀನ ವಿದ್ಯೆಯ ಲೌಕಿಕ ಮೂಲ್ಯ ಹೆಚ್ಚಿದೆ. ಈ ನವೀನ ವಿದ್ಯೆಯಲ್ಲಿಯೂ ಇಂಗ್ಲಿಷ್ ಸಾಹಿತ್ಯ ಪಾಂಡಿತ್ಯಕ್ಕೆ ದೊರೆಯುವ ಮೌಲ್ಯಕ್ಕಿಂತ ಯಂತ್ರೋಪಕರಣಗಳ ಕುಶಲತೆಗೆ ದೊರೆಯುವ ಮೌಲ್ಯ ದೊಡ್ಡದಾಗಿದೆ. ಇದು ಅಪರಿಹಾರ್ಯವಾದ ವ್ಯತ್ಯಾಸ. ಮನುಷ್ಯನಿಗೆ ಶ್ರೇಯವಾದದ್ದರಲ್ಲಿರುವುದಕ್ಕಿಂತ ಪ್ರೇಯವಾದದ್ದರಲ್ಲಿ ಪ್ರವೃತ್ತಿ ಹೆಚ್ಚೆಂಬುದನ್ನು ನಮ್ಮ ಉಪನಿಷತ್ತುಗಳೇ ಸೂಚಿಸಿಲ್ಲವೆ?

ಸ್ಮೃತಿ ಸ್ವತಂತ್ರ ಬುದ್ಧಿಗಳ ಪ್ರಸ್ಪರ್ಧೆ

ನಾಲ್ಕು:—ಇನ್ನೂ ಒಂದು ವಿಶೇಷವುಂಟು. ದ್ರವ್ಯರೂಪ ಪ್ರತಿಫಲದ ಮಾತು ಹಾಗಿರಲಿ. ಪುರಸ್ಕಾರವೂ ಸಹ ಕೆಲವು ಭಾಗಗಳಲ್ಲಿ ನವೀನ ವಿದ್ಯಾಪ್ರವೀಣರಿಗೆ ಹೆಚ್ಚಾಗಿ ದೊರೆಯುತ್ತಿದೆ. ಪಂಡಿತಾಭಿಮಾನಿಗಳು ಇದನ್ನು ಅನ್ಯಾಯವೆನ್ನುವುದುಂಟು. ಆದರೆ ನವೀನವಿದ್ಯೆಯ ಪರವಾಗಿ ಹೇಳುವ ಕಾರಣವನ್ನು ನಾವು ಮನಸ್ಸಿಗೆ ತಂದುಕೊಳ್ಳುವುದು ಉಚಿತವಾಗಿದೆ. ನಮ್ಮ ದೇಶದಲ್ಲಿ ಸ್ವತಂತ್ರವಾದ ಬುದ್ಧಿ ಕಾರ್ಯವೂ ಅನ್ಯಾನುವಾದವಲ್ಲದ ಶಾಸ್ತ್ರರಚನೆಯೂ ನಿಂತುಹೋಗಿ ನೂರಾರು ವರ್ಷಗಳಾದವು. ಈಚಿನ ಪಾಂಡಿತ್ಯವೇನಿದ್ದರೂ ಸ್ಮೃತಿ ಮಹಿಮಾಮಾತ್ರದ್ದು. ಹೊಸ ಗ್ರಂಥಗಳೇನಾದರೂ ಇದ್ದರೆ ಅವು ಚರ್ವಿತಚರ್ವಣ ಅಥವಾ ಛಾಯಾನುಕರಣ. ಈಚಿನ ಅಲಂಕಾರ ಗ್ರಂಥಗಳಲ್ಲಿಯ ಉದಾಹರಣೆಗಳು ಹಿಂದಿನ ಗ್ರಂಥಗಳ ಪ್ರತಿಬಿಂಬಗಳು. ಈಚಿನ ವಾಕ್ಯಾರ್ಥಗಳಲ್ಲಿಯ ಕೋರಿ ಪ್ರತಿಕೋರಿಗಳು ಹಿಂದಿನ ವಾದಸರಣಿಯ ಪಡಿಯಚ್ಚುಗಳು. ಹೀಗೆ ಈಚಿನ ಗ್ರಂಥಸಂಖ್ಯೆ ಬಹುವಾಗಿದ್ದರೂ ವಿಷಯ ಮಾತ್ರ ಹಿಂದಿನಷ್ಟೇ ಆಗಿದೆ. ಯೂರೋಪಿನಿಂದ ಬಂದು ಬೆಳೆಯುತ್ತಿರುವ ನವೀನ ವಿದ್ಯೆಗಳಾದರೋ ದಿನೇ ದಿನೇ ಮತ್ತೂ ನವನವೀನಗಳಾಗುತ್ತಿವೆ. ಹೊಸ ಹೊಸ ಸಂಶೋಧನೆಗಳೂ ಹೊಸ ಹೊಸ ಅನ್ವೇಷಣೆಗಳೂ ಪ್ರತಿನಿತ್ಯವೂ ನಡೆಯುತ್ತಿವೆ. ಹೀಗೆ ಈ ವಿಜ್ಞಾನಶಾಸ್ತ್ರಗಳು ಅಪಾರವಾಗಿ ಬೆಳೆಯುತ್ತಿವೆ; ವಿಜ್ಞಾನದ ಕ್ರಿಯಾಕ್ಷೇತ್ರವು ವಿಸ್ತಾರಪಡುತ್ತಿದೆ. ಆ ಶಾಸ್ತ್ರಗಳ ಬೋಧಕರು ಅನುದಿನವೂ ಈ ವಿಜ್ಞಾನ ವಿಸ್ತರಣೆಗಳನ್ನು ಸಮೀಕ್ಷಿಸುತ್ತ ಸ್ವಬುದ್ಧಿಕಾರ್ಯದಿಂದ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳಬೇಕಾಗಿದೆ. ಹೀಗೆ ಎಲ್ಲಿಯೋ ಒಬ್ಬ ಐನ್‌ಸ್ಟೈನ್, ಅಥವಾ ರಾಮನ್, ಅಥವಾ ಕೇನ್ಸ್, ಅಥವಾ ಲಾಸ್ಕಿ ಸ್ವತಂತ್ರವಾಗಿ ತೋರಿಸುವ ಬುದ್ಧಿಪ್ರಭಾವದಿಂದ, ಅವರಿಗೆ ಸಂಬಂಧಪಟ್ಟ "ಫಿಸಿಕ್ಸ್" ಅಥವಾ "ಎಕನಾಮಿಕ್ಸ್" ಅಥವಾ "ಪಾಲಿಟಿಕ್ಸ್" ಶಾಸ್ತ್ರಗಳನ್ನು ಬೋಧಿಸುವ ನಮ್ಮೂರಿನ ಉಪನ್ಯಾಸಕರಿಗೂ ಅಷ್ಟಿಷ್ಟು ವಿಶೇಷ ಪ್ರಶಸ್ತಿ ದೊರೆಯುತ್ತದೆ. ಸಂಸ್ಕೃತ ಕನ್ನಡಗಳಿಗೆ ದೊರೆಯುವ ಬೆಲೆಯಾದರೋ ಬಹುಮಟ್ಟಿಗೆ ಕಂಠಪಾಠಕ್ಕೆ ಸಲ್ಲುವ ಬೆಲೆ. ನಮ್ಮ ಪಂಡಿತರಿಗೂ ಅದೇ ರೀತಿ ಪುರಸ್ಕಾರ ದೊರೆಯುವಂತೆ ನಮ್ಮ ಶಾಸ್ತ್ರ ಸಾಹಿತ್ಯಗಳಲ್ಲಿಯೂ ಹೊಸ ಹೊಸ ಬುದ್ಧಿ ಪ್ರಕಾಶಗಳನ್ನು ಉತ್ಪತ್ತಿಮಾಡುವುದು ಹೇಗೆ—ಎಂಬುದು ಬಹು ದೊಡ್ಡ ಪ್ರಶ್ನೆ. ಅದಕ್ಕೆ ಉತ್ತರ ಹೇಳಲು ನಾನು ಇಲ್ಲಿ ಪ್ರಯತ್ನಿಸಲಾರೆ. ನನ್ನ ಮನಸ್ಸಿನಲ್ಲಿರುವ ಒಂದು ಭರವಸೆಯನ್ನು ಮಾತ್ರ ನಿರೂಪಿಸಲು ಅಪ್ಪಣೆ ಬೇಡುತ್ತೇನೆ. ನಮ್ಮ ಪ್ರಾಚೀನವಿದ್ಯೆಗೆ ನೂತನವಿದ್ಯೆಯ ಸಂಪರ್ಕವಾಗುತ್ತಿರುವುದು ಲೋಕಕ್ಕೆ

ಪರಮ ಶೋಭನಕರವೆಂದು ನಾನು ಭಾವಿಸಿದ್ದೇನೆ. ಮಳೆಯ ಮರುದಿನ ಬಂದ ಹೊಸ ಪ್ರವಾಹದಿಂದ ಕೆರೆಯ ನೀರು ಕದಡಿ ಬಂಡಾದಂತೆ ಕಂಡರೂ, ಅಂದಿನ ಮಾರನೆಯ ದಿನ ಆ ನೀರು ತಿಳಿಯಾಗಿ ಹಿಂದಿಗಿಂತ ರಮಣೀಯವಾಗುವುದು. ವಿದ್ಯೆ ಸಂಸ್ಕೃತಿಗಳ ಕಥೆಯೂ ಹಾಗೆಯೇ. ಹೊಸಹೊಸದಾಗಿ ಬರುತ್ತಿರುವ ವಿಜ್ಞಾನ ವಿದ್ಯಾಪ್ರವಾಹ ಗಳಲ್ಲಿ ನಮ್ಮ ಪ್ರಾಚೀನ ವಿದ್ಯೆಯ ಮೈಮೇಲೆ ನೂರಾರು ವರ್ಷಗಳಿಂದ ಸೇರಿರುವ ಧೂಳುಕೊಳೆಗಳನ್ನು ತೊಳೆಯಬೇಕಾಗಿದೆ. ನಮ್ಮ ಸಾಹಿತ್ಯ ಸೂತ್ರಗಳನ್ನೂ ನಮ್ಮ ಸಮಾಜ ಧರ್ಮ ತತ್ತ್ವಗಳನ್ನೂ ನಮ್ಮ ಆಧ್ಯಾತ್ಮಿಕ ಸಿದ್ಧಾಂತಗಳನ್ನೂ ಸಹ ಹೊಸ ಕಾಲದ ಬೆಳಕಿನಲ್ಲಿ ಪರೀಕ್ಷಿಸಿ ವಿಮರ್ಶಿಸಿ ಪುನಃ ಪರಿಷ್ಕಾರಗೊಳಿಸಬೇಕಾಗಿದೆ.

ಪುರಾತನ ನೂತನಗಳ ಏಕಪ್ರವಾಹ

ವಾಸ್ತವವಾಗಿ ಮನುಷ್ಯಲೋಕದ ಅಂತರಂಗ ಜೀವನದಲ್ಲಿ ಹಳೆಯದಾವುದು? ಹೊಸದಾವುದು? ಒಳಗಿನದಾವುದು? ಹೊರಗಿನದಾವುದು? ಪೌರಸ್ತ್ಯವಾವುದು? ಪಾಶ್ಚಾತ್ಯವಾವುದು? ಮಾನವಜೀವಿತದ ಸಾರಭಾಗಗಳು ಎಲ್ಲ ಕಡೆಯೂ ಒಂದೇ ಆಗಿರುತ್ತವೆ. ಇಂದಿಗೆ ನಿನ್ನೆ ಹಳೆಯದು, ಈ ಗಳಿಗೆ ಹೊಸದು; ನಾಳೆಯ ಮೈಯಲ್ಲಿ ನಿನ್ನೆಯೂ ಈ ಹೊತ್ತೂ ಎರಡೂ ಕೂಡಿಕೊಂಡಿರುತ್ತವೆ. ನಮ್ಮ ದೇಶದ ಸ್ವತಂತ್ರ ಪ್ರತಿಭೆಯು ಪಾಶ್ಚಾತ್ಯ ಸಾಹಿತ್ಯಸಂಸ್ಕೃತಿಗಳ ಸಂಸರ್ಗದಿಂದ ಪುನಃ ಪ್ರಬುದ್ಧವಾಗಿ, ಅದರಿಂದ ನಮ್ಮ ಹಳೆಯ ಸಾಹಿತ್ಯಸಂಸ್ಕೃತಿಗಳು ಪುನಃ ಒಂದು ಅಭಿನವ ತೇಜಸ್ಸನ್ನು ತಾಳಿ ಅಭಿವೃದ್ಧಿ ಪಡೆದಾವೆಂದು ನನಗೆ ದೃಢವಾದ ನಂಬಿಕೆ ಇದೆ.

ಪುನಃ ಪುನರ್ಜಾಯಮಾನಾ ಪುರಾಣೀ |
ಸಮಾನಂ ವರ್ಣಮಭಿಶುಂಭಮಾನಾ ||

(ಬಹು ಹಳಬಳು; ಹಾಗೆಯೇ ಹೊಸಹೊಸದಾಗಿ ಹುಟ್ಟುತ್ತಿರುವವಳು; ಎಂದಿಗೂ ಕಳೆಗುಂದದ ಕಾಂತಿಯಿಂದ ಸೊಗಯಿಸುತ್ತಿರುವವಳು.)

ಈ ವೇದಮಂತ್ರದ ಉಷಾಸ್ತವವು ವಾಗ್ದೇವಿಗೂ ಅನ್ವಯಿಸತಕ್ಕದ್ದು.

ಐದು :—ನಮ್ಮ ಈಚೀಚಿನಕಾಲದ ಪಾಂಡಿತ್ಯದ ಮಟ್ಟವು ಪೂರ್ವಕಾಲದ್ದ ಕ್ಕಿಂತ ಕಡಮೆಯಾದಂತೆ ಕಾಣಲು ಇನ್ನೂ ಒಂದು ಕಾರಣವನ್ನು ಹೇಳಬಹುದು. ಪೂರ್ವದಲ್ಲಿ ಪಂಡಿತ ತರಗತಿಗೆ ಸೇರುತ್ತಿದ್ದವರು ಸಾಮಾನ್ಯವಾಗಿ ತಮ್ಮ ಮನೆಯಲ್ಲಿ ಒಂದಿಷ್ಟು ಶಾಸ್ತ್ರಸಂಸ್ಕಾರವನ್ನು ಪಡೆದಿದ್ದಂಥವರು. ಅವರು ಬಾಲ್ಯದಿಂದಲೂ ತಮ್ಮ ಬಂಧುಬಳಗದ ಗೋಷ್ಠಿಯಲ್ಲಿಯೂ ಮಿತ್ರಗೋಷ್ಠಿಯಲ್ಲಿಯೂ ಹಿಂದಿನಿಂದ ಬಂದಿದ್ದ ಕಾವ್ಯಶಾಸ್ತ್ರ ಜಿಜ್ಞಾಸೆಯನ್ನು ಕಿವಿಯಿಂದ ಕೇಳಿ, ಅಲ್ಪಸ್ವಲ್ಪ ಬಾಯಿಂದಲೂ

ಉಚ್ಚರಿಸಿದ್ದವರು. ಈ ತೆರದ ಬಹುಶ್ರುತತೆಯಿಂದ ಅವರಿಗೆ ಸ್ವಲ್ಪಮಟ್ಟಿನ ಸಂಸ್ಕಾರವು ಅಪ್ರಯತ್ನವಾಗಿ ಆಗುತ್ತಿತ್ತು. ಈ ಪೂರ್ವಸಿದ್ಧತೆಯನ್ನು ಪಡೆದುಕೊಂಡು ಪಂಡಿತ ಪಾಠಶಾಲೆಗೆ ಬಂದು ಅಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದವರು ಉತ್ತಮ ಪಂಡಿತರಾಗು ತ್ತಿದ್ದುದು ಸ್ವಾಭಾವಿಕವಾಗಿದೆ. ಈಚೆಗೆ ಈ ಸನ್ನಿವೇಶ ಬದಲಾಯಿಸಿದೆ. ಈಗ ಪಂಡಿತ ತರಗತಿಗೆ ಸೇರುವವರೆಲ್ಲರೂ ಆ ರೀತಿಯ ಬಾಲ್ಯಸಂಸ್ಕಾರವನ್ನು ಪಡೆದವರೆಂದು ಹೇಳ ಲಾಗುವುದಿಲ್ಲ. ಅವರಲ್ಲಿ ಎಷ್ಟೋ ಮಂದಿಗೆ ಪ್ರೌಢಕಾವ್ಯಗಳೂ ಶಾಸ್ತ್ರಗಳೂ ತೀರಾ ಹೊಸದುವಾಗಿ, ಪಾಠಶಾಲೆಯಲ್ಲಿಯೇ ಮೊದಲು ಪರಿಚಿತವಾಗತಕ್ಕುವು. ಇಂಥವರ ಪಾಂಡಿತ್ಯ ಪರಿಪಾಕವು ಸ್ವಲ್ಪ ಮಂದವಾಗಿ ನಡೆಯುವುದು ಸ್ವಾಭಾವಿಕವಾಗಿದೆ. ಹೀಗೆ ಹೇಳಿದ್ದರಿಂದ ಪಂಡಿತ ಮನೆತನದಲ್ಲಿ ಹುಟ್ಟದೆ ಇರುವವರು ಪಂಡಿತರಾಗ ಕೂಡದೆಂಬುದು ನನ್ನ ಅಭಿಪ್ರಾಯವೆಂದು ಅರ್ಥಮಾಡತಕ್ಕದ್ದಲ್ಲ. ನಮ್ಮ ದೇಶದಲ್ಲಿ ಕನ್ನಡ-ಸಂಸ್ಕೃತ ಪಾಂಡಿತ್ಯವು ಎಲ್ಲ ಕುಲ ಎಲ್ಲ ಕೋಮು ಎಲ್ಲ ವರ್ಗಗಳಲ್ಲಿಯೂ ಹರಡಬೇಕೆಂಬುದು ನನ್ನ ನಿಜವಾದ ಆಶೆ. ತೆಲುಗುಸೀಮೆ ತಮಿಳುಸೀಮೆಗಳಲ್ಲಿ ದೇಶ ಭಾಷಾ ಪಾಂಡಿತ್ಯವು ಕನ್ನಡನಾಡಿನಲ್ಲಿರುವುದಕ್ಕಿಂತ ಹೆಚ್ಚಾಗಿ ಎಲ್ಲ ಜನ ವರ್ಗಗಳ ಲ್ಲಿಯೂ ವ್ಯಾಪಿಸಿದೆ. ಅಲ್ಲಿ ವಿದ್ವತ್ತನ್ನು ಕುಲಕ್ರಮಾಗತವಾಗಿ ಪಡೆಯದ ಜಾತಿವರ್ಗ ಗಳಲ್ಲಿಯೂ ವಿದ್ವಾಂಸರೂ ಲೇಖಕರೂ ಪ್ರಸಿದ್ಧರಾಗಿದ್ದಾರೆ. ಕನ್ನಡದಲ್ಲಿಯೂ ಹಾಗೆ ಆಗಿ, ಸಾರಸ್ವತ ಕ್ಷೇತ್ರದಲ್ಲಿ ಸಕಲರಿಗೂ ಸಮಾನವಾದ ಗಣ್ಯತೆ ಇರಬೇಕೆಂಬುದೇ ನನ್ನ ಆಶೆ. ಇದಕ್ಕೆ ಬೇಕಾದ ಪೀಠಿಕೆ ನಮ್ಮ ಪೂರ್ವಸಾಹಿತ್ಯದ ಚರಿತ್ರೆಯಲ್ಲಿದೆ. ಕನ್ನಡ ಗ್ರಂಥ ಲೇಖಕರಲ್ಲಿ ನಾನಾ ಕುಲ ನಾನಾ ವರ್ಗಗಳವರು ಹಿಂದಿನಿಂದ ಗಣ್ಯರಾಗಿ ಬಂದಿದ್ದಾರೆ. ಈ ಸರ್ವಜನೈಕಸುಲಭತೆ ನಮ್ಮ ಸಾಹಿತ್ಯರಾಜ್ಯದಲ್ಲಿ ಇನ್ನು ಮುಂದೆ ಕಾಲಕ್ರಮದಲ್ಲಿ ಮತ್ತಷ್ಟು ವಿಶೇಷವಾಗಿ ವ್ಯಾಪಿಸೀತೆಂದು ನನಗೆ ತೋರುತ್ತಿದೆ.

ಕಾವ್ಯಸ್ವರೂಪ

ಪ್ರಕೃತ ಸಂದರ್ಭದಲ್ಲಿ ಪಂಡಿತ ಶಬ್ದಕ್ಕೆ ದೇಶಭಾಷಾ ಸಾಹಿತ್ಯೋಪಾಧ್ಯಾಯ ರೆಂದು ಅರ್ಥಹೇಳಿದೆನಷ್ಟೆ. ಆ ಅಧಿಕಾರದ ಮಹತ್ತ್ವವೆಂಥಾದ್ದು, ಅದಕ್ಕೆ ಆಗ ಬೇಕಾದ ಸಿದ್ಧತೆ ಎಂಥಾದ್ದು ಎಂಬ ವಿವರವನ್ನು ಕುರಿತು ಒಂದಿಷ್ಟು ಪ್ರಸ್ತಾವಿಸು ವುದು ಇಲ್ಲಿ ಅಪ್ರಕೃತವೆನಿಸಲಾರದು. ಈ ಪ್ರಸ್ತಾವದ ಅಂಗವಾಗಿ ಕಾವ್ಯಪಾಠದ ವಿವರವನ್ನು ಕುರಿತು ಒಂದು ಮಾತನ್ನಾಡಬೇಕಾಗಿದೆ.

ಉತ್ತಮ ಕಾವ್ಯವು ಮೂರು ಬಗೆಯ ದ್ರವ್ಯಗಳ ಸಮ್ಮೇಳನ. ಒಂದು ಶ್ರವಣ ಮೋಹಕದ್ರವ್ಯ, ಇನ್ನೊಂದು ಮನೋವೇಧಕದ್ರವ್ಯ, ಮತ್ತೊಂದು ಬುದ್ಧಿಬೋಧಕ

ದ್ರವ್ಯ. ಮೊದಲು, ಕವಿಯ ವಾಗ್ಸಂಘಸದ ಒಂದು ಗುಣವಿಶೇಷವು—ಒಂದು ನಾದ, ಒಂದು ಧಾಟಿ, ಒಂದು ಧ್ವನಿಗತಿ, ಒಂದು ಪದಮೈತ್ರಿ, ಒಂದು ಪ್ರಾಸನರ್ತನ, ಒಂದು ಶಬ್ದವಿನ್ಯಾಸ, ಇವು—ಶ್ರೋತ್ರೇಂದ್ರಿಯವನ್ನು ಹಿಡಿದು ವಶಪಡಿಸಿಕೊಂಡು ಮನಸ್ಸಿನೆಡೆಗೆ ದಾರಿ ಬಿಡಿಸುತ್ತವೆ. ಅನಂತರ ಕವಿಯು ಬಣ್ಣಿಸಿರುವ ವಸ್ತುಪರಂಪರೆಗಳೂ ಕಥಾಸಂದರ್ಭಗಳೂ ನಮ್ಮ ಮನಸ್ಸಿನ ಮುಂದೆ ಬಂದು, ಚಿತ್ರ ಚಿತ್ರವಾಗಿ ಎದ್ದುನಿಂತು, ಕುತುಕವನ್ನು ಹುಟ್ಟಿಸಿ, ಕ್ರಮ ಕ್ರಮವಾಗಿ ಭಾವಾವೇಶವನ್ನು ತಂದು, ತಲ್ಲೀನತೆಯನ್ನುಂಟುಮಾಡುತ್ತವೆ. ಹೀಗೆ ಮನಸ್ಸು ಕಾದು ಕರಗಿ ತಳಮಳಗುಟ್ಟುತ್ತಿರುವಲ್ಲಿ ಆ ಕಾವು ಬುದ್ಧಿಗೆ ವ್ಯಾಪಿಸಿ ಅಲ್ಲಿ ಚಿಂತಾತರಂಗಗಳನ್ನೇಳಿಸುತ್ತದೆ. ಈ ಚಿಂತೆಯಿಂದ ಆತ್ಮಸಂಸ್ಕಾರ. ಇಷ್ಟು ಕೆಲಸ ನಡೆದರೆ ಕಾವ್ಯವ್ಯಾಸಂಗ ಪೂರ್ಣವಾಗಿ ನಡೆದಂತೆ. ಶಬ್ದಸೌಂದರ್ಯದಿಂದ ಶ್ರವಣಗ್ರಹಣ; ಶ್ರವಣಗ್ರಹಣದಿಂದ ಚಿತ್ರ ಸಂದರ್ಭದರ್ಶನ; ಚಿತ್ರ ಸಂದರ್ಭದಿಂದ ರಸಾವಿರ್ಭಾವ; ರಸಾನುಭವದಿಂದ ವಿಚಾರೋದಯ; ವಿಚಾರೋದಯದಿಂದ ಧೀರತೆ ಪ್ರಸನ್ನತೆ ಶಾಂತತೆಗಳು—ಈ ತೆರನಾದದ್ದು ಆತ್ಮಪರಿಪಾಕ. ಇಂಥಾ ಮಹಾ ಆತ್ಮಯಜ್ಞದಲ್ಲಿ ಋತ್ವಿಕ್ಪುರೋಹಿತರುಗಳಾಗಿರತಕ್ಕವರು ನಮ್ಮ ಸಾಹಿತ್ಯ ಪಂಡಿತರು. ಹೀಗೆಂದ ಮೇಲೆ ಅವರಿಗಿರಬೇಕಾದ ಯೋಗ್ಯತಾಸಿದ್ಧಿಯೆಂಥದೆಂಬುದು ಸುಸ್ಪಷ್ಟವಾಗುತ್ತದೆ.

ಗಮಕ ಕಲೆ

ಮೊದಲು ಅವರು ಒಳ್ಳೆಯ ಗಮಕಿಗಳಾಗಿರಬೇಕು. ಪದ್ಯಗದ್ಯಗಳನ್ನು ಶ್ರಾವ್ಯವಾದ ರೀತಿಯಲ್ಲಿ ಓದುವುದೇ ಒಂದು ದೊಡ್ಡ ಕಲೆ. ಪೂರ್ವದಲ್ಲಿ ಈ ಕಲೆಯ ವ್ಯವಸಾಯಕ್ಕೆ ಹೆಚ್ಚು ಗಮನ ಕೊಡುತ್ತಿದ್ದರೆಂದು ತೋರುತ್ತದೆ. ಪದ್ಯವು ಬುದ್ಧಿಗೆ ಅರ್ಥವಾಗಲಿ ಅರ್ಥವಾಗದಿರಲಿ, ಅದರ ಶಬ್ದ ಸೌಂದರ್ಯವೇ ಕಿವಿಯನ್ನು ಅರಳಿಸಿ ಮನಸ್ಸನ್ನು ಮುಗ್ಧಪಡಿಸುವಂತೆ ಓದುಬಲ್ಲ ವಾಚನ ಕುಶಲಿಗಳನ್ನು ತಾವೂ ನೋಡಿರಬಹುದು. ಮಹರ್ಷಿಗಳು ಶ್ರವಣೇಂದ್ರಿಯದ ಮಹತ್ತ್ವವನ್ನೂ ಅದರ ಪರಮೋತ್ತಮ ವಿನಿಯೋಜನ ಕ್ರಮವನ್ನೂ ಚೆನ್ನಾಗಿ ಕಂಡುಕೊಂಡಿದ್ದವರು. ಆದದ್ದರಿಂದಲೇ ವೇದಘೋಷೆಯು ಒಂದು ಘನಗಂಭೀರವಾದ, ಒಂದು ಲೋಕಾತೀತವಾದ, ಒಂದು ದೈವೀಯವೆನಿಸುವ ವಾತಾವರಣವನ್ನು ಕಲ್ಪಿಸುವ ಶಕ್ತಿಯುಳ್ಳದ್ದಾಗಿದೆ. ವಾಲ್ಮೀಕಿ ಮಹರ್ಷಿ ತನ್ನ ಕಾವ್ಯವನ್ನು ರಾಗ ತಾಳ ಸಮನ್ವಿತವಾಗಿ ಹಾಡಿಸಿದನಂತೆ:—"ಕಾವ್ಯಮೇತದಗಾಯತಾಂ!" ಒಂದೊಂದು ಅಕ್ಷರಧ್ವನಿಯಲ್ಲಿಯೂ, ಒಂದೊಂದು ಧ್ವನಿವಿನ್ಯಾಸದಲ್ಲಿಯೂ, ಒಂದೊಂದು ಶಕ್ತಿಯಿರುತ್ತದೆ. ಈ ಅಕ್ಷರಶಕ್ತಿಗಳನ್ನು ಸಂಪೂರ್ಣ

ವಾಗಿ ಮೂರ್ತಗೊಳಿಸಿದಲ್ಲದೆ ಮನಸ್ಸಿನಲ್ಲಿ ಭಾವೋದ್ರೇಕವುಂಟಾಗಲಾರದು. ಈ ದೃಷ್ಟಿಯಿಂದ ಶಬ್ದಗಳ ಸ್ಫುಟೋಚ್ಚಾರಣೆಯೂ ಛಂದಸ್ಸಿನ ಯತಿತಾಳಗಳ ಅನುಸರಣೆಯೂ ಉಚಿತರಾಗ ಸಮ್ಮೇಳನವೂ ಅತ್ಯಂತ ಮುಖ್ಯವಾದ ಸಂಗತಿಗಳಾಗುತ್ತವೆ. ಹೀಗೆ ಕಾವ್ಯದ ಪ್ರಥಮ ಸೌಂದರ್ಯ ಪ್ರದರ್ಶಕವಾಗಿರುವ ಗಮಕಕಲೆಯ ಅಭ್ಯಾಸವು ವಾಸ್ತವವಾಗಿ ಚಿಕ್ಕವಯಸ್ಸಿನಲ್ಲಿಯೇ ಆರಂಭವಾಗಬೇಕಾದದ್ದು. ಬಾಲ್ಯದಲ್ಲಿ "ಅಮರ"ವನ್ನು ಬಾಯಿಪಾಠಮಾಡಿಸುತ್ತಿದ್ದವರು ಈ ತತ್ತ್ವವನ್ನು ಅರಿತುಕೊಂಡಿದ್ದರು. ಅವರನ್ನು ಸಂಪೂರ್ಣ ಕಂಸಾವತಾರಗಳೆಂದು ಹೇಳಲಾಗುವುದಿಲ್ಲ. ಅವರು ಮಕ್ಕಳಿಗೆ ಕಾಟಕೊಡುತ್ತಿದ್ದುದರಲ್ಲಿ ಒಂದು ಉದಾರವಾದ ದೂರಾಲೋಚನೆಯಿತ್ತು. ಜ್ಞಾಪಕಶಕ್ತಿಯನ್ನು ಬಲಪಡಿಸುವುದೂ ಉಚ್ಚಾರಣೆಯನ್ನು ಸ್ಫುಟಗೊಳಿಸುವುದೂ ಕಾವ್ಯಾಭ್ಯಾಸಕ್ಕೆ ಅತ್ಯವಶ್ಯವಾದ ಪೂರ್ವಸಿದ್ಧತೆ. ಅವೇ ಸಾಹಿತ್ಯದಲ್ಲಿ ಮೊದಲ ಪಾಠ.

ಪದ್ಯಸ್ಮೃತಿ

ಈ ಮೂಲತತ್ತ್ವವನ್ನು ಈಚಿನ ಶಿಕ್ಷಣಪದ್ಧತಿ ಮೂಲೆಗೊತ್ತಿದೆಯೆಂದು ನನ್ನ ಮನಸ್ಸಿಗೆ ಚಿಂತೆ ತೋರಿದೆ. ನನ್ನ ಮಿತ್ರರೊಬ್ಬರು ಸಂಸ್ಕೃತ ವಿದ್ವಾಂಸರಾದವರು ವಿದ್ಯಾಪ್ರಚಾರದ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು. ಒಂದು ದಿನ ನಾನು ಅವರ ಮನೆಗೆ ಹೋಗಿದ್ದಾಗ ಅವರ ಹುಡುಗರು ಅಲ್ಲಿ ಓಡಾಡುತ್ತಿದ್ದದ್ದನ್ನು ನೋಡಿ— "ಈ ಮಕ್ಕಳಿಗೆ ಅಮರ ಹೇಳಿ ಕೊಡುತ್ತಿದ್ದೀರಾ"? ಎಂದು ಆತನನ್ನು ಕೇಳಿದೆ. "ನಿಮಗೆ ಉರುಹಚ್ಚುವುದರಲ್ಲಿ ಇನ್ನೂ ನಂಬಿಕೆಯಿದೆಯೆ?"—ಎಂದು ಅವರು ನನಗೆ ಪ್ರತಿಪ್ರಶ್ನೆ ಹಾಕಿದರು. ಅಮರ, ಶಬ್ದ, ಧಾತುರೂಪ—ಇವುಗಳನ್ನು ಕಂಠಪಾಠ ಮಾಡುವುದು ಸಂಸ್ಕೃತ ಭಾಷಾಭ್ಯಾಸಕ್ಕೆ ತಳಹದಿಯೆಂದು ನಾನು ಹೇಳಿದೆ. ಅವರು ತಲೆಯಲ್ಲಾಡಿಸಿ ಅಪನಂಬಿಕೆಯನ್ನು ಸೂಚಿಸಿದರು. ನಾನು ಇನ್ನೂ ನನ್ನ ಆ ಹಳೆಯ ನಂಬಿಕೆಯನ್ನು ಬಿಡಲು ಕಾರಣ ಕಂಡಿಲ್ಲ. ಹಿಂದೆ ಪಾಠಶಾಲೆಗಳಲ್ಲಿ ಪರೀಕ್ಷ್ಯರ ಪದ್ಯಸ್ಮೃತಿಯನ್ನು ಪರೀಕ್ಷಿಸುವುದಕ್ಕಾಗಿ ಕೆಲವು ಪದ್ಯಗಳ ಹಲಕೆಲವು ಪದಗಳನ್ನು ಮಾತ್ರ ಕೊಟ್ಟು ಉಳಿದ ಪದ್ಯಭಾಗಗಳನ್ನು ಭರ್ತಿಮಾಡಬೇಕೆಂದು ಕೇಳುತ್ತಿದ್ದುದುಂಟು. ಈಚಿನ ಪರೀಕ್ಷಾ ಪತ್ರಿಕೆಗಳಲ್ಲಿ ಇಂಥಾ ಪ್ರಶ್ನೆಗಳು ಕಡಮೆಯಾಗುತ್ತಿವೆಯೆಂದು ಕೇಳಿದ್ದೇನೆ. ಈ ವಿಚಾರವು ಪಂಡಿತಮಂಡಲದ ಗಮನಕ್ಕೆ ಅರ್ಹವಾದದ್ದೆಂದು ನನ್ನ ಅಭಿಪ್ರಾಯ. ಪದಗಳ ಧ್ವನಿಸೌಂದರ್ಯವನ್ನರಿತುಕೊಂಡು ಓದಲಾರದವನು ಕಾವ್ಯರಸವನ್ನೇನನುಭವಿಸಿಯಾನು? ಪದ್ಯಗಳನ್ನು ನೆನಪಿನಲ್ಲಿ ತುಂಬಿರಿಸಿಕೊಳ್ಳದವನು ಹೇಗೆ ಉಚಿತಪದ ಪ್ರಯೋಗದಿಂದ ಉತ್ತಮವಾಗ್ಮಿಯೆನಿಸಿಯಾನು? ಪಾಠಶಾಲೆ

ಗಳಲ್ಲಿ ಪಠ್ಯಗ್ರಂಥವು ಈಚೆಗೆ ಬಹು ವಿಪುಲವಾಗಿರುವುದರಿಂದ ಬಾಯಿಪಾಠದ ಪದ್ಧತಿ ಈಗ ಅಸಾಧ್ಯವೆಂದು ಯಾರಾದರೂ ಆಕ್ಷೇಪಣೆ ತೆಗೆದಾರೇನೋ! ನನ್ನ ಉತ್ತರವಿಷ್ಟೆ:—ಐನೂರು ಪದ್ಯಗಳನ್ನು ಅಷ್ಟಿಷ್ಟು ಕಚ್ಚಿ ಎಂಜಲು ಮಾಡುವುದಕ್ಕಿಂತ, ನೂರು ಪದ್ಯಗಳನ್ನು ಚರಣ ಚರಣವಾಗಿ, ಅಕ್ಷರಕ್ಷರವಾಗಿ, ನೋಡಿ ಪರೀಕ್ಷಿಸಿ, ಸವಿದು ಚಪ್ಪರಿಸುವುದು ಹೆಚ್ಚು ತೃಪ್ತಿಕರವಾಗುತ್ತದೆ. ಸತ್ಕವಿಪ್ರಯೋಗವು ಕಲ್ಲುಸಕ್ಕರೆಯಂತೆ, ಅಥವಾ ಮುರಬ್ಬಾ ತುಂಡಿನಂತೆ, ಬಹುಕಾಲ ಬಾಯಲ್ಲಿರಬೇಕಾದದ್ದು. ಒಳ್ಳೆಯ ಪದ್ಯವನ್ನು ಆಗಾಗ ನೆನಪಿನಿಂದ ತೆಗೆದು ಮನಸ್ಸಿಗೆ ಮೆಲುಕುಮೇವಾಗಿ ಸುತ್ತಿದ್ದರೆ ಆಗ ಅದರ ಸ್ವಾರಸ್ಯವು ಆತ್ಮಕ್ಕೆ ಪೂರ್ತಿಯಾಗಿ ದೊರೆತೀತು. ಹೀಗೆ ಜ್ಞಾಪಕವೂ ಉಚ್ಚಾರಣೆಯೂ ಕಾವ್ಯಾಭ್ಯಾಸಂಗಕ್ಕೆ ಪರಮಸಾಧಕಗಳು.

ಮೈಸೂರಿನಲ್ಲಿ ಮಹಾರಾಜರ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದ ಶ್ರೀಮಾನ್ ಕಾನಕಾನಹಳ್ಳಿಯ ವರದಾಚಾರ್ಯರ ಕಾವ್ಯಪಾಠದ ವೈಖರಿಯನ್ನು ತಾವು ಕೇಳಿರಬಹುದು. ವೇದಾಕ್ಷರವನ್ನು ನುಡಿದು ಕುದುರಿದ ಬಾಯಿ, ಮಧುರವಾದ ಶಾರೀರ, ಸಂಗೀತಪರಿಜ್ಞಾನ, ರಸವಿವೇಚನೆ, ರಸಾನುಭವವನ್ನು ಪ್ರತ್ಯಕ್ಷಗೊಳಿಸುವ ಮುಖಭಂಗಿ—ಇವು ಅವರ ಪಾಠವನ್ನು ಕಿವಿಮನಸ್ಸುಗಳಿಗೆ ಔತಣವನ್ನಾಗಿಸಿದ್ದವು. ಇತರ ತರಗತಿಗಳಲ್ಲಿದ್ದ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಸಹ ತಮ್ಮ ತಮ್ಮ ಪಾಠಗಳನ್ನು ಬಿಟ್ಟು ವರದಾಚಾರ್ಯರ ಕಾವ್ಯವ್ಯಾಖ್ಯಾನವನ್ನು ಕೇಳಲು ಬರುತ್ತಿದ್ದುದುಂಟು. ಅದು ಕಾವ್ಯಬೋಧನೆಗೆ ಆದರ್ಶ.

ಇಂಗ್ಲೆಂಡಿನಲ್ಲಿ ಆಂಗ್ಲ ಕಾವ್ಯೋತ್ಸಾಹಿಗಳು ಈ ತತ್ತ್ವವನ್ನು ಗ್ರಹಿಸಿ ಕಾವ್ಯವಾಚನವನ್ನು ಕಲಿಸಲು ಪಾಠಶಾಲೆಗಳನ್ನೇರ್ಪಡಿಸಿರುತ್ತಾರೆ. ಬೆಂಗಳೂರಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಈ ರೀತಿಯ ಪ್ರಯತ್ನ ನಡಸಿರುವುದನ್ನು ತಾವು ನೋಡಿರಬಹುದು. ನಿಮ್ಮ ಈ ಸಮ್ಮೇಳನದ ಕಾರ್ಯಾಂಶಗಳಲ್ಲಿ ಜೂರ್ಣಿಕಾಪಠನ ಕಾವ್ಯವಾಚನಗಳನ್ನು ಸೇರಿಸಿರುವುದು ತೃಪ್ತಿಕರವಾಗಿದೆ. ಒಂದೆರಡು ಸಂಸ್ಥೆಗಳು ಐಚ್ಛಿಕವಾಗಿ ಇಂಥ ಪ್ರಯತ್ನಗಳನ್ನು ನಡಸಿದರೆ ಸಾಲದು. ಕಾವ್ಯೋಚ್ಚಾರಣೆ ಕಾವ್ಯಜ್ಞಾಪಕಗಳು ಪಾಠಶಾಲೆಗಳ ಪಾಠಪಟ್ಟಿಕೆಗಳಲ್ಲಿ ಯಥೋಚಿತ ಸ್ಥಾನವನ್ನು ಪಡೆದು ಪರೀಕ್ಷಾಂಶಗಳಾಗಬೇಕು. ಹಾಗಾಗುವ ವರೆಗೂ ನಿಮ್ಮ ಸಾಹಿತ್ಯ ಬೋಧನೆಯು ಸಮರ್ಪಕವಾಗದು.

ರಸದೃಷ್ಟಿ ಸೂಕ್ಷ್ಮತೆ

ಕಾವ್ಯಕ್ರಿಯೆಗಳಲ್ಲಿ ಮೊದಲನೆಯದಾದ ಶ್ರವಣಗ್ರಹಣಕ್ಕೆ ಸಂಬಂಧಪಟ್ಟಂತೆ ಇಷ್ಟನ್ನು ಹೇಳಿದ್ದಾಯಿತು. ಉಳಿದ ಇನ್ನೆರಡು ಅರ್ಥವಿಮರ್ಶೆ ರಸಾನುಸಂಧಾನಗಳು.

ಇವು ಸಾಂಗವಾಗಿ ನಡೆಯಬೇಕಾದರೆ ಉಪಾಧ್ಯಾಯ ಪಂಡಿತರುಗಳಿಗೆ ನಿಘಂಟು ವ್ಯಾಕರಣ ಛಂದಸ್ಸು ಅಲಂಕಾರಶಾಸ್ತ್ರಗಳ ಬಲ ಎಷ್ಟಿದ್ದರೂ ಹೆಚ್ಚಾಗದೆಂಬುದು ಸ್ವತಸ್ಸಿದ್ಧವಾದ ವಿಷಯ. ಈ ನಾಲ್ಕು ಸಾಹಿತ್ಯಾಂಗಗಳ ಅಧ್ಯಯನವನ್ನು ಪಂಡಿತರು ಪದೇ ಪದೇ ಪುನರಾವರ್ತನ ಮಾಡುತ್ತಿರಬೇಕಾದದ್ದು ಅವರ ನಿತ್ಯಧರ್ಮವಾಗಿದೆ.

ಹಾಗೆಯೇ ತಮ್ಮ ಕಾವ್ಯಪರಿಚಯವನ್ನು ವಿಸ್ತಾರಪಡಿಸಿಕೊಳ್ಳುವುದೂ ಅವರಿಗೆ ಧರ್ಮವಾಗಿರುತ್ತದೆ. ತಾವು ಪಂಡಿತಪರೀಕ್ಷೆಗಾಗಿ ಓದಿದ ಕಾವ್ಯಭಾಗ, ಅದರ ಜೊತೆಗೆ ತಾವು ಪಾಠ ಹೇಳಬೇಕಾಗಿ ಬಂದ ಕಾವ್ಯಭಾಗ—ಇವಿಷ್ಟನ್ನು ಮಾತ್ರ ಅವರು ವ್ಯಾಸಂಗಮಾಡಿದ್ದರೆ ಸಾಕೆಂದು ಯಾರು ತಾನೆ ತಿಳಿದುಕೊಂಡಿದ್ದಾರು? ಎಲ್ಲ ಬಗೆಯ ಸೌಂದರ್ಯಗಳ ಪರಾಮರ್ಶದಲ್ಲಿಯೂ ನಮ್ಮ ದೃಷ್ಟಿ ಸೂಕ್ಷ್ಮತರ ವಾಗುವುದು ಒಂದು ವಸ್ತುವನ್ನಿನ್ನೊಂದರೊಡನೆ ಹೋಲಿಸಿ ನೋಡುವುದರಿಂದ. ಒಬ್ಬ ಕವಿಯನ್ನಿನ್ನೊಬ್ಬನೊಡನೆ ಹೋಲಿಸಿ, ಒಬ್ಬನ ಒಂದು ಸಂದರ್ಭದ ಕೈವಾಡ ವನ್ನು ಅದೇ ಕವಿಯ ಇನ್ನೊಂದು ಸಂದರ್ಭದ ಕೈವಾಡದೊಡನೆ ಹೋಲಿಸಿ, ಹೀಗೆ ಪರೀಕ್ಷಿಸುವುದರಿಂದ ನಮ್ಮ ರಸಾನುಭವಶಕ್ತಿ ತೀಕ್ಷ್ಣವಾಗುತ್ತದೆ. ಕನ್ನಡದಲ್ಲಿ ಪೂರ್ವದ ಕಾವ್ಯರಾಶಿ ಹೇರಳವಾಗಿದೆ. ಅದರ ಜೊತೆಗೆ ಹೊಸದೂ ಯಥೇಷ್ಟ ಪರಿಮಾಣದಲ್ಲಿ ಬೆಳೆಯುತ್ತಿದೆ. ಈ ವಾಙ್ಮಯ ರಾಶಿಯಲ್ಲಿ ಎಷ್ಟೆಷ್ಟು ವಿಶಾಲ ಭಾಗವನ್ನು ಪಂಡಿತರುಗಳು ಸ್ವಾಧೀನಪಡಿಸಿಕೊಳ್ಳುವರೋ ಅವರು ಬೋಧಿಸುವ ಪಾಠವು ಅಷ್ಟಷ್ಟು ಹೆಚ್ಚು ಸ್ವಾರಸ್ಯಪಡುವುದು ಸಿದ್ಧವಾಗಿದೆ.

ತೋಲನ ಪರೀಕ್ಷೆ

ಆದರೆ ನಾನು ತಮ್ಮಲ್ಲಿ ವಿಶೇಷವಾಗಿ ವಿಜ್ಞಾಪಿಸಬೇಕಾಗಿರುವುದು ಬೇರೊಂದು ವಿಷಯ. ಅದು ಅನ್ಯಭಾಷಾ ವ್ಯಾಸಂಗದ ಕರ್ತವ್ಯತೆಯನ್ನು ಕುರಿತದ್ದು. ಸಾಹಿತ್ಯ ದೃಷ್ಟಿಯಿಂದ ಮಾತನಾಡುವವರಲ್ಲಿ ಒಂದು ಮೂಲತತ್ತ್ವ ಸರ್ವತ್ರ ಅಂಗೀಕೃತ ವಾಗತಕ್ಕದ್ದಿದೆ. ಅದೇನೆಂದರೆ—ಯಾರು ಒಂದೇ ಭಾಷೆಯನ್ನು ಮಾತ್ರ ಬಲ್ಲೆನೆನ್ನು ವರೋ ಅವರಿಗೆ ಆ ಒಂದು ಭಾಷೆ ಸಹ ನಿಜವಾಗಿ ತಿಳಿಯದೆಂಬುದು. ಸಾಹಿತ್ಯದ ಸ್ವಾರಸ್ಯ ಯಥಾವತ್ತಾಗಿ ಅರಿವಿಗೆ ಬರಬೇಕಾದರೆ, ಅದರ ಪಾಠವು ಸಾದೃಶ್ಯ ವೈಲಕ್ಷಣ್ಯಗಳ ಪರೀಕ್ಷೆಯ ಆಧಾರದ ಮೇಲೆ—ತೋಲನ ರೀತಿಯಲ್ಲಿ—ನಡೆಯ ಬೇಕೆಂದು ಈಗತಾನೆ ಅರಿಕೆಮಾಡಿದೆನಷ್ಟೆ. ಈ ತೋಲಕ ದೃಷ್ಟಿಯು ಎರಡು ಬೇರೆಬೇರೆ ಭಾಷೆಗಳ ವಾಙ್ಮಯಗಳ ಸಮೀಕ್ಷೆಯಿಂದ ಪಟುವಾಗುತ್ತದೆ. ಆ ಎರಡು ಭಾಷೆಗಳೂ ವಿಜಾತೀಯಗಳಾಗಿದ್ದಷ್ಟೂ ನಮ್ಮ ದೃಷ್ಟಿಗೆ ಸೂಕ್ಷ್ಮತಾ ಲಾಭ ಹೆಚ್ಚಾಗಿರುತ್ತದೆ.

ಈ ಕಾರಣದಿಂದ ನಮ್ಮ ಕನ್ನಡ ಪಂಡಿತರಿಗೂ ನಮ್ಮ ಸಂಸ್ಕೃತ ಪಂಡಿತರಿಗೂ ಸಹ ಇಂಗ್ಲಿಷ್ ಸಾಹಿತ್ಯದ ಪರಿಚಯವು ಅಷ್ಟಿಷ್ಟಾದರೂ ಇರುವುದು ಅವಶ್ಯವೆಂದು ನಾನು ನಂಬಿದ್ದೇನೆ.

ಕನ್ನಡ ಸಂಸ್ಕೃತಗಳ ಕಾದಾಟ

ಈ ಪ್ರಸಂಗದಲ್ಲಿ ಕನ್ನಡ ಸಂಸ್ಕೃತಗಳಿಗೆ ಉಚಿತವಾದ ಪರಸ್ಪರ ಬಾಂಧವ್ಯ ವನ್ನು ಕುರಿತು ಒಂದು ಮಾತನ್ನಾಡುವುದು ಅಪ್ರಕೃತವೆನಿಸಲಾರದು. ಈ ಎರಡು ಭಾಷೆಗಳಿಗೂ ಅನ್ಯೋನ್ಯ ವೈಷಮ್ಯವು ಎಂದಿಗೂ, ಎಷ್ಟುಮಾತ್ರವೂ, ಸಿದ್ಧಿಸ ಲಾರದು. ಕನ್ನಡದ ಮುಖಾಂತರದಿಂದಲ್ಲದೆ ಸಂಸ್ಕೃತ ವಾಙ್ಮಯದ ಅಂತಸ್ಸಾರವು ಜನಸಾಮಾನ್ಯದ ಕೈಗೆ ದೊರಕಲಾರದು. ಹಾಗೆಯೇ ಸಂಸ್ಕೃತದ ಬೆಂಬಲವಿದ್ದಲ್ಲದೆ ಕನ್ನಡ ಪರಿಪುಷ್ಟವಾಗಿ ಬೆಳೆಯಲಾರದು. ಸಂಸ್ಕೃತವು ಮಳೆಯ ಮೋಡ; ಕನ್ನಡವು ಅದನ್ನು ಹನಿಯಾಗಿಸಿ ನೆಲಕ್ಕೆ ಬರಮಾಡುವ ತಂಗಾಳಿ. ಹೀಗೆ ಅವೆರಡೂ ಅವಿನಾ ಭಾವದಿಂದ ಬಾಳಿ ಮುಂದಕ್ಕೆ ಸಾಗಬೇಕಾಗಿವೆ. ಯಾವ ಒಂದೂ ಇನ್ನೊಂದನ್ನು ಬಿಟ್ಟು ಸಾರ್ಥಕವೆನಿಸುವುದು ಅಸಾಧ್ಯ. ವಸ್ತುಸ್ಥಿತಿ ಹೀಗಿರುವಾಗ, ಸಂಸ್ಕೃ ತೋತ್ಸಾಹಿಗಳೂ ಕರ್ಣಾಟಕೋತ್ಸಾಹಿಗಳೂ ಪರಸ್ಪರ ಸ್ಪರ್ಧಿಗಳಾಗಿ ಬಡಿದಾಡು ವುದು ಉಭಯರಿಗೂ ಅನರ್ಥಕರವೇ ಆಗುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಕನ್ನಡದ ಶಬ್ದಕೋಶವೂ ಲಕ್ಷಣಶಾಸ್ತ್ರಗಳೂ ಬಹುಮಟ್ಟಿಗೆ ಸಂಸ್ಕೃತವನ್ನ ನುಸರಿಸಿವೆಯೆಂಬುದು ಪ್ರಸಿದ್ಧ ಸಂಗತಿ. ಕನ್ನಡ ಪಂಡಿತನಿಗೆ ಸಂಸ್ಕೃತದ ಬಲ ವಿದ್ದಷ್ಟೂ ಅವನ ಕನ್ನಡಪಾಠವು ವೀರ್ಯವತ್ತರವಾಗುವುದು ಸಿದ್ಧವಾಗಿದೆ. ನಮ್ಮ ಕನ್ನಡ ಪಂಡಿತರು ಪ್ರತಿದಿನವೂ ಒಂದಿಷ್ಟು ಸಂಸ್ಕೃತ ಗ್ರಂಥ ವ್ಯಾಸಂಗವನ್ನಿಟ್ಟು ಕೊಳ್ಳುವುದು ಅವರಿಗೆ ಕರ್ತವ್ಯ ಕರ್ಮವಾಗಿದೆ.

ನಮ್ಮ ಸಂಸ್ಕೃತ ಪಂಡಿತರಿಗೆ ಕನ್ನಡ ಸಾಹಿತ್ಯದ ವಿಷಯದಲ್ಲಿ ಅದೇ ತೆರನಾದ ಮಮತೆ ಇನ್ನೂ ಬೆಳೆಯಬೇಕಾಗಿದೆ. ಸಂಸ್ಕೃತ ಪಾಂಡಿತ್ಯವಿರುವ ಮಾತ್ರ ದಿಂದಲೇ ಕನ್ನಡ ಪಾಂಡಿತ್ಯವಿದ್ದಂತಾಯಿತೆನ್ನುವುದು ಕೇವಲ ಭ್ರಾಂತಿಯ ಮಾತು. ಕನ್ನಡಕ್ಕೂ ಒಂದು ಸ್ವತಂತ್ರವಾದ ರೂಢಿಯಿದೆ; ಒಂದು ಬೇರೆ ಮರ್ಯಾದೆಯಿದೆ; ಬೇರೆ ಗತಿ ಬೇರೆ ಧಾಟಿಗಳಿವೆ. ಸಂಸ್ಕೃತದ ಸಂಪ್ರದಾಯ ಶಾಸ್ತ್ರಗಳು ಮಹರ್ಷಿ ಕೃತಗಳಾದರೆ ಕನ್ನಡದ ಬಳಕೆ ಆಯಕಟ್ಟುಗಳು ಮಹಾಜನಸಹಿತಗಳಾದುವು. ಇವೂ ಪ್ರತ್ಯೇಕ ಪ್ರಯತ್ನದಿಂದಲೇ ಕಲಿಯಲಾಗತಕ್ಕುವು. ಇವುಗಳನ್ನು ಕಲಿಯಲು ಸಂಸ್ಕೃತ ಪಂಡಿತರು ಪ್ರಯಾಸಪಡುವುದರಿಂದ ಅವರ ಲೋಕೋಪಯೋಗಿತೆಯ ಸಾಮರ್ಥ್ಯ ಹೆಚ್ಚಾಗುವುದು.

ಎರಡನ್ನೂ ಒಂದು ಪಾಠದಲ್ಲಿ ಸೇರಿಸಿರಿ

ಸಂಸ್ಕೃತ ಕನ್ನಡಗಳ ಪರಸ್ಪರ ಸಂಬಂಧವನ್ನು ಕುರಿತು ನಾನು ಹೇಳಬಯಸುವ ಮಾತು ಇನ್ನೊಂದಿದೆ. ಈ ಎರಡು ಭಾಷೆಗಳನ್ನೂ ಒಂದೇ ವಿಷಯದ ಎರಡು ಅಂಶಗಳೆಂದು ಪರಿಗಣಿಸಿ ಎರಡನ್ನೂ ಒಟ್ಟುಗೂಡಿಸಿ ಪಾಠಹೇಳುವುದು ಅಪೇಕ್ಷಣೀಯವೆಂದೂ, ಅದು ಅಸಾಧ್ಯವಲ್ಲವೆಂದೂ, ನಾನು ಬಹುದಿನದಿಂದ ಅಭಿಪ್ರಾಯವಿಟ್ಟುಕೊಂಡಿದ್ದೇನೆ. ಕನ್ನಡಕ್ಕಂತೂ ಸಂಸ್ಕೃತದ ಸಹಾಯ ಅನಿವಾರ್ಯವಾಗಿದೆ. ಪಂಪ, ರನ್ನ, ರುದ್ರಭಟ್ಟ, ಷಡಕ್ಷರಿ ಮೊದಲಾದ ಪ್ರಾಚೀನ ಕವಿಗಳ ಕಾವ್ಯಗಳನ್ನು ಓದಿ ಆನಂದಿಸಬೇಕೆನ್ನುವವರಿಗೆ ಸಂಸ್ಕೃತಜ್ಞಾನವು ಅವಶ್ಯವಾಗಿ ಬೇಕಾಗುತ್ತದೆ. ಇನ್ನು ಮುಂದೆ ಹೊಸ ವಿಷಯಗಳನ್ನು ಕುರಿತು ಕನ್ನಡದಲ್ಲಿ ನಿಷ್ಕರ್ಷೆಯಾದ ಪದಗಳಿಂದ ಗ್ರಂಥ ಬರೆಯಬೇಕೆನ್ನುವವರಿಗೂ, ನೂತನ ಶಬ್ದಸಾಮಗ್ರಿಯನ್ನು ಹವಣಿಸಿಕೊಳ್ಳಲು, ಸಂಸ್ಕೃತದ ಜ್ಞಾನವು ಅವಶ್ಯವಾಗಿರುತ್ತದೆ. ಈ ಎರಡು ಯೋಚನೆಗಳನ್ನೂ ಒತ್ತಟ್ಟಿಗಿಟ್ಟು ಸಂಸ್ಕೃತದ ಸ್ವತಂತ್ರ ಸಂಪತ್ತನ್ನು ನೋಡಿದರೂ, ಅದು ಸಮಸ್ತ ಭಾರತೀಯರಿಗೂ ಉಪಾದೇಯವಾಗಿರುತ್ತದೆ. ಈ ಕಾರಣಗಳಿಂದ ಸಂಸ್ಕೃತದ ಲಘುಪಾಠಗಳು ಕೆಲವನ್ನು ಕನ್ನಡಪಾಠದ ಅಂಗವಾಗಿ ನಮ್ಮ ಮಾಧ್ಯಮಿಕ ಶಾಲೆಗಳಲ್ಲಿ ಕಲಿಸಬಹುದೆಂದು ನನಗೆ ತೋರುತ್ತದೆ. ಮುಂದೆ ಮುಂದೆ ಪಂಪನನ್ನೂ ನಾಗವರ್ಮನನ್ನೂ ಸೇವಿಸಬೇಕಾದವರಿಗೆ ವಾಲ್ಮೀಕಿರಾಮಾಯಣದ ಒಂದೆರಡು ಸರ್ಗಗಳು, ಅಥವಾ ರಘುವಂಶದ ಒಂದೆರಡು ಸರ್ಗಗಳು, ದುರ್ಭರವಾದ ಹೊರೆಯಾಗಲಾರವು. ಸಂಸ್ಕೃತದ ಶ್ರೇಷ್ಠ ಕಾವ್ಯಗಳನ್ನು ಕನ್ನಡಕ್ಕೆ ಪರಿವರ್ತನೆ ಮಾಡುವುದರಿಂದಲೇ ಸಂಸ್ಕೃತದ ಮಧುವನ್ನು ಕನ್ನಡಿಗರಿಗೆ ದೊರೆಕಿಸುವೆವೆನ್ನುವುದು ಭ್ರಾಂತಿಯ ಮಾತು. ಭಾಷಾಂತರಕರ್ತನ ಬೆರಳಿಗೆ ಸಿಕ್ಕದೆ ನುಣಿಚಿಕೊಳ್ಳುವ ಸೊಗಸುಗಳು, ಇತರ ಭಾಷೆಗಳಲ್ಲಿರುವಂತೆಯೇ, ಸಂಸ್ಕೃತದಲ್ಲಿಯೂ ಅನಂತವಾಗಿರುತ್ತವೆ. ಕೃಷ್ಣಕರ್ಣಾಮೃತದ ಬೆಡಗುಗಳನ್ನೂ ಗೀತಗೋವಿಂದದ ಒಯ್ಯಾರಗಳನ್ನೂ ಕನ್ನಡಕ್ಕೆ ತರ್ಜುಮೆಮಾಡಬಲ್ಲವರಾರು? ಅನೇಕ ಕನ್ನಡ ಕಾವ್ಯಗಳ ಸೊಬಗುಗಳೂ ಹೀಗೆಯೇ ಸಂಸ್ಕೃತಕ್ಕೆ ತರ್ಜುಮೆಯಾಗಲಾರವು. ಸಂಸ್ಕೃತ ಕನ್ನಡಗಳೆರಡನ್ನೂ ಯಮಳರಂತೆ ಭಾವಿಸಿ, ಎರಡನ್ನೂ ಒಟ್ಟುಕೂಡಿಸಿ ಪಾಠಹೇಳುವುದರ ಸಾಧ್ಯಾಸಾಧ್ಯತೆಗಳನ್ನು ತಾವುಗಳು ಸಮಾಲೋಚಿಸಬೇಕೆಂದು ಬೇಡುತ್ತೇನೆ.

ಹಾಗೆಯೇ ಕನ್ನಡ ಪಠ್ಯಗ್ರಂಥಗಳಲ್ಲಿ ಎಷ್ಟು ಭಾಗ ಪ್ರಾಚೀನ ಕಾವ್ಯದ್ದಾಗಿರಬೇಕು ಎಂಬುದೂ ವಿಚಾರಾರ್ಹವಾದ ಪ್ರಶ್ನೆ. ಸಂಸ್ಕೃತ ಜ್ಞಾನಲಾಭದ ದೃಷ್ಟಿಯಿಂದ ನೋಡಿದರೆ, ಪ್ರಾಚೀನ ಕನ್ನಡ ಕವಿಗಳು ಆಧುನಿಕರಿಗಿಂತಲೂ ನಮಗೆ ಹೆಚ್ಚು

ಉಪಕಾರಕರಾಗಿದ್ದಾರೆ. ಪ್ರತ್ಯೇಕವಾಗಿ ಸಂಸ್ಕೃತ ಕಲಿಯದವನು ಪಂಪ ಷಡಕ್ಷರಿಗಳ ಕೃತಿಗಳನ್ನೋದಿದರೆ ಆ ಮೂಲಕವೇ ಒಂದಿಷ್ಟು ಸಂಸ್ಕೃತ ಪರಿಚಯವನ್ನು ಸಂಪಾದಿಸಲಾಗುತ್ತದೆ. ಈ ಲಾಭವು ಉಪೇಕ್ಷಿಸಬಹುದಾದಷ್ಟು ಸಣ್ಣದೇನೂ ಅಲ್ಲ. ಈ ಆರ್ಯಸಂಸ್ಕೃತಿ ಮಹಿಮಾದೃಷ್ಟಿಯಿಂದಲೂ ಕನ್ನಡ ಪ್ರಾಚೀನ ಕಾವ್ಯಗಳ ಪ್ರಾಮುಖ್ಯವನ್ನು ತಗ್ಗಿಸದಿರುವುದು ಯುಕ್ತವೆಂದು ನನಗೆ ತೋರುತ್ತದೆ.

ಪಂಡಿತರಿಗೂ ಇಂಗ್ಲಿಷ್

ಕನ್ನಡ ಸಂಸ್ಕೃತಗಳ ಪರಸ್ಪರಾಪೇಕ್ಷೆಗಳಿಗಿಂತ ಹೆಚ್ಚು ಗಮನವನ್ನು ಕೋರುತ್ತಿರುವ ಅಂಶ ಅವುಗಳಿಗಿರುವ ಇಂಗ್ಲಿಷಿನ ಅಪೇಕ್ಷೆ. ಇದು ಅವೆರಡಕ್ಕೂ ಸಮಾನವಾಗಿ ಅವಶ್ಯವಾದದ್ದು. ನಾನು ಮೇಲೆ ವಿಜ್ಞಾಪಿಸಿದ ಅಸದೃಶಭಾಷಾ ವ್ಯಾಸಂಗದ ಉಪಯೋಗವನ್ನು ಇಂಗ್ಲೆಂಡಿನವರು ಕಂಡುಕೊಂಡು, ಅಲ್ಲಿಯ ಪಾಠ ಪಟ್ಟಿಕೆಗಳಲ್ಲಿ ಆಂಗ್ಲ ಭಾಷೆಯ ಜೊತೆಗೆ ಗ್ರೀಕ್ ಮತ್ತು ಲ್ಯಾಟಿನ್ ಎಂಬ ಪ್ರಾಚೀನ ಭಾಷೆಗಳನ್ನೋ, ಅಥವಾ ಫ್ರೆಂಚ್, ಜರ್ಮನ್ ಮೊದಲಾದ ಸಾಂಪ್ರತಕಾಲದ ಭಾಷೆಗಳನ್ನೋ ಸೇರಿಸಿರುತ್ತಾರೆ. ನಮ್ಮ ದೇಶದಲ್ಲಿ ಅನೇಕ ಕಾರಣಗಳಿಂದ ಈಗ ಪ್ರಚಾರದಲ್ಲಿರುವ ಇಂಗ್ಲೀಷ್ ಭಾಷೆಯು ನಮಗೆ ಸಾಹಿತ್ಯದೃಷ್ಟಿಯಿಂದಲೂ ಅಮೋಘವಾದ ಉಪಕಾರವನ್ನು ಮಾಡಬಲ್ಲದ್ದಾಗಿದೆ. ಅದರ ವಾಙ್ಮಯ ಸಂಪತ್ತಿನ ಎರಡು ಮೂರು ಮುಖ್ಯಾಂಶಗಳು ವಿಶೇಷವಾಗಿ ನಮ್ಮ ಲಕ್ಷ್ಯದಲ್ಲಿರಬೇಕಾದುವು. ಮೊದಲನೆಯದು ಅದರ ಅನುಪಮವಾದ ಕಾವ್ಯಸಮೃದ್ಧಿ. ಸಂಸ್ಕೃತದ ವೈದಿಕ ಮತ್ತು ಪೌರಾಣಿಕ ಕಾವ್ಯಸಂಪತ್ತನ್ನು ವಿನಾಯಿಸಿದರೆ ಪರಿಮಾಣದಲ್ಲಾಗಲಿ ಗುಣದಲ್ಲಾಗಲಿ ಇಂಗ್ಲಿಷಿನ ಕಾವ್ಯಭಂಡಾರಕ್ಕೆ ಸರಿದೂಗುವ ಕಾವ್ಯಸಂಪತ್ತು ಇನ್ನಾವ ಭಾಷೆಯಲ್ಲೂ ಇಲ್ಲವೆಂದು ಬಹು ಭಾಷಾನಿಪುಣರು ಬಹುಮಂದಿ ಹೇಳಿದ್ದಾರೆ. ಎರಡನೆಯದಾಗಿ, ಇಂಗ್ಲಿಷಿನಲ್ಲಿರುವ ವಚನ ಪ್ರಬಂಧರಾಶಿಗೆ ಹೋಲುವಂಥಾ ಸಾಹಿತ್ಯ ಕನ್ನಡದಲ್ಲಿಲ್ಲ; ಸಂಸ್ಕೃತದಲ್ಲಿಯೂ ಇಲ್ಲ. ಸಂಸ್ಕೃತದ ಭಾಷ್ಯಗ್ರಂಥಗಳನ್ನು ಬಿಟ್ಟರೆ ಇಂಗ್ಲಿಷಿನಲ್ಲಿರುವಂಥ ಪ್ರಸನ್ನ ಗಂಭೀರವಾದ ಗದ್ಯಶೈಲಿ ನಮ್ಮಲ್ಲಿ ಇನ್ನೂ ಹುಟ್ಟಬೇಕಾಗಿದೆ. ಮೂರನೆಯದಾಗಿ, ಸಾಂಪ್ರತಲೋಕದ ಮನೋಗತಿಗಳನ್ನು—ಅದರ ಆಶೆಗಳನ್ನು, ಸಂದೇಹಗಳನ್ನು, ಭೀತಿಗಳನ್ನು, ಅದರ ಯತ್ಕಿಂಚಿತ್ ವಿಜಯಗಳನ್ನು, ಅದರ ಪುನಃಪುನಸ್ಸಂಗತಗಳಾದ ಆಶಾಭಂಗಗಳನ್ನು, ಅದರ ಜಿಜ್ಞಾಸಾ ಪರಂಪರೆಗಳನ್ನು—ನಮಗೆ ತೋರಿಸುವ ಕೈಕನ್ನಡಿ ಇಂಗ್ಲಿಷ್ ಸಾಹಿತ್ಯ. ಹೀಗೆ ಉಪಲಭ್ಯವಾಗಿರುವ ಪ್ರಕೃತ ಲೋಕಜ್ಞಾನವು ನಮ್ಮ ಸಾಹಿತ್ಯಕ್ಕೆ ತೀರಾ

ಅವಶ್ಯವಾಗಿದೆ. ನಮ್ಮಲ್ಲಿ ನವೀನ ಸಾಹಿತ್ಯಸೃಷ್ಟಿಗಾಗಿ ಮಾತ್ರವೇ ಇಲ್ಲ, ಈಗಾಗಲೇ ಸಿದ್ಧವಾಗಿರುವ ಸಾಹಿತ್ಯದ ವಿವರಣೆಗಾಗಿಯೂ ನಮಗೆ ಇಂಗ್ಲಿಷ್ ಸಾಹಿತ್ಯದ ಉಪಕಾರವು ಬೇಕಾಗಿದೆ.

ತೂಗಿಸಿ ನೋಡಿ ಬೆಲೆ ಕಟ್ಟಿ

ನಮ್ಮ ವಾಲ್ಮೀಕಿವ್ಯಾಸ ಕಾಳಿದಾಸರುಗಳು ದೊಡ್ಡಕವಿಗಳೆಂಬುದನ್ನು ನಾವೆಲ್ಲ ತಿಳಿದುಕೊಂಡಿದ್ದೇವೆ, ನಿಜ. ಆದರೆ ಆ ದೊಡ್ಡತನವೆಂಥಾದ್ದು? ಅದು ಯಾವ ಮಟ್ಟದ್ದು? ಈ ವಿವರವನ್ನು ಕಾಣಬೇಕಾದರೆ ವಾಲ್ಮೀಕಿಯನ್ನು ಮಿಲ್ಟನಿನೊಡನೆ, ವ್ಯಾಸನನ್ನು ಹೋಮರನೊಡನೆ, ಕಾಳಿದಾಸನನ್ನು ಷೇಕ್ಸ್‌ಪಿಯರಿನೊಡನೆ, ಭರ್ತೃಹರಿಯನ್ನು ವರ್ಡ್ಸ್‌ವರ್ತಿನೊಡನೆ ಹೋಲಿಸಿ ನೋಡಬೇಕು. "ಆ ಕವಿಗಳ ಮನೋಧರ್ಮ ಬೇರೆ, ಅವರ ಜಾತಿಲಕ್ಷಣಗಳು ಬೇರೆ, ಅವರ ಕಾವ್ಯವಸ್ತುಗಳ ಪ್ರಾಗ್ಭೂಮಿಗಳು ಬೇರೆ; ಅವುಗಳಿಗೂ ನಮ್ಮವುಗಳಿಗೂ ಸಾಮ್ಯ ಹೇಗಾದೀತು"—ಎಂದು ವಾದಿಸುವುದು ಸಫಲವಾಗದು. ತತ್ತದ್ದೇಶಿಯವೂ ತತ್ತತ್ಕಾಲೀನವೂ ಆದ ಸಂದರ್ಭಗಳು ಎಲ್ಲ ಕಾವ್ಯಪ್ರಬಂಧಗಳಲ್ಲಿಯೂ ಅಷ್ಟಿಷ್ಟು ಇದ್ದೇ ಇರುತ್ತವೆ. ಅಂಥವುಗಳನ್ನು ವಿನಾಯಿಸಿ, ಸಾರ್ವದೇಶಿಕಗಳೂ ಸಾರ್ವಕಾಲೀನಗಳೂ ಆಗಿ, ಸಮಸ್ತ ಮಾನವಸ್ವಭಾವಕ್ಕೂ ಏಕಪ್ರಕಾರವಾಗಿ ಸಂಬಂಧಪಟ್ಟಿರುವ ಸನ್ನಿವೇಶಗಳನ್ನು ಲಕ್ಷ್ಯಕ್ಕೆ ತಂದುಕೊಂಡು ನೋಡಿದರೆ, ಈ ಆಂಗ್ಲಕವಿ ಭಾರತಕವಿಗಳಲ್ಲಿ ಯಾರು ಯಾರು ಯಾವ ಯಾವ ದರ್ಜೆಗೆ ಹತ್ತುತ್ತಾರೆ? ನಮ್ಮವರೆಲ್ಲರೂ ಅವರೆಲ್ಲರಿಗಿಂತಲೂ ಮೇಲ್ಮಟ್ಟಕ್ಕೇರುವರೆಂದು ನಾನು ಹೇಳಲಾರೆ. ನಮ್ಮ ಸಾಹಿತ್ಯದಲ್ಲಿ ಕೇಳಬರದ ಅನೇಕ ಸೂಕ್ಷ್ಮಧ್ವನಿಗಳೂ, ನಮ್ಮಲ್ಲಿ ಕಾಣಬರದ ಅನೇಕ ಸೂಕ್ಷ್ಮತೇಜಸ್ಸುಗಳೂ ಇಂಗ್ಲಿಷ್ ಕಾವ್ಯದಲ್ಲಿ ಗೋಚರವಾಗುತ್ತವೆ. ಅಲ್ಲಿಯ ವಿದ್ಯುಜ್ಜ್ವಲನೆಯ ವೇಗವೆಂಥದೆಂಬುದನ್ನು ಕಂಡುಕೊಳ್ಳುವುದೇ ನಮಗೆ ಒಂದು ಹೊಸ ದಿವ್ಯದರ್ಶನ.

ಇಂಗ್ಲಿಷ್ ಗದ್ಯ

ಇಂಗ್ಲಿಷ್ ಗದ್ಯಸಾಹಿತ್ಯವು ಹೇಗೆ ನಮಗೆ ವಿಶೇಷ ಆದರಣೀಯವಾದದ್ದೆಂಬುದನ್ನು ಮೇಲೆ ಹೇಳಿದೆ. ಆ ಗದ್ಯದಲ್ಲಿರುವುದು ಕಥೆಕಾದಂಬರಿಗಳು ಮಾತ್ರವೇ ಅಲ್ಲ. ಕನ್ನಡದಲ್ಲಿ ಅದನ್ನನುಸರಿಸಿಕೊಂಡು ಈಚೀಚೆಗೆ ಹುಟ್ಟಿರುವುದು ಒಂದಿಷ್ಟು ಸಣ್ಣ ಕಥೆಗಳ ಸಾಹಿತ್ಯ. ಇಂಗ್ಲಿಷ್ ಮಾತನಾಡುವ ದೇಶಗಳಲ್ಲಿ ಜನಜೀವನದ ಮೇಲೆ ಬಹುಪ್ರಕಾರವಾಗಿ ಪ್ರಭಾವ ಬೀರಿರುವ ದೊಡ್ಡದೊಡ್ಡ ಸಾಮಾಜಿಕ ಕಾದಂಬರಿ

ಗಳಂಥವು ನಮ್ಮಲ್ಲಿ ಇನ್ನೂ ಹುಟ್ಟಬೇಕಾಗಿವೆ. ಶ್ರೀಮಾನ್ ಬಿ. ವೆಂಕಟಾಚಾರ್ಯರು ವಂಗಭಾಷೆಯಿಂದ ತಂದುಕೊಟ್ಟಿರುವ ನಾವೆಲ್ಲುಗಳನ್ನು ಬಿಟ್ಟರೆ, ಆ ಜಾತಿಯ ಪ್ರಬಂಧಗಳು ಕನ್ನಡದಲ್ಲಿ ಮೂರು ನಾಲ್ಕಾದರೂ ಇವೆಯೋ ಇಲ್ಲವೋ ಹೇಳುವುದು ಕಷ್ಟ. ತ್ಯಾಕರೇ, ಡಿಕೆನ್ಸ್, ಸ್ಕಾಟ್, ಗಾಲ್ಸ್‌ವರ್ದಿ, ಹಾರ್ಡಿ—ಇವರುಗಳ ಕಥಾ ನಿರ್ಮಿತಿಗಳೇ ಇಂಗ್ಲಿಷಿನಿಂದ ನಮಗೆ ಅಮೋಘಗಳಾದ ವರಗಳಾಗುತ್ತವೆ. ಅವುಗಳ ಜೊತೆಗೆ ಇತಿಹಾಸ ಲೇಖನಗಳೂ, ತತ್ತ್ವವಿಚಾರ ಗ್ರಂಥಗಳೂ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ ವ್ಯವಹಾರಶಾಸ್ತ್ರ ಮೊದಲಾದ ಸಮಾಜ ವಿಜ್ಞಾನ ಗ್ರಂಥಗಳೂ ಅಸಂಖ್ಯೇಯವಾಗಿವೆ. ಇವನ್ನೆಲ್ಲ ಒತ್ತಟ್ಟಿಗಿಟ್ಟು, "ಎಸ್ಸೇ" (Essay) ಎನ್ನಿಸಿಕೊಂಡಿರುವ ಕೇವಲ ಉಪನ್ಯಾಸ ಪ್ರಬಂಧಗಳನ್ನೇ ನೋಡಿದರೂ ಅವು ಕೂಡ ನಮಗೆ ನವೀನಮಾರ್ಗದರ್ಶಕಗಳಾಗಿವೆ. ಈ ಉಪನ್ಯಾಸಗಳು ಮನುಷ್ಯಬುದ್ಧಿಗೆ ತೋರುವ ಎಲ್ಲ ವಿಷಯಗಳನ್ನೂ ಕುರಿತುವಾಗಿರುತ್ತವೆ. ರೈಲು ಪ್ರಯಾಣ, ಚೆಂಡಾಟ, ರಜಾವಿನೋದ, ಮದುವೆಯ ಸಂದಣಿ, ದಾರಿಯಪಕ್ಕದ ಸತ್ರ, ಚರಮ ಸಂಸ್ಕಾರದಲ್ಲಿಯ ಹಾಸ್ಯಪ್ರಸಂಗ, ಸಂತೆಯಲ್ಲಿನ ಪ್ರಣಯ—ಇಂಥ ಯಾವುದೋ ಒಂದು ಮಾನವಜೀವಿತದ ಲಘುವಾದ ಅಥವಾ ಗಹನವಾದ ತೊಡಕಿನ ಪ್ರಸಂಗವನ್ನೆತ್ತಿ ಪ್ರಬಂಧ ಕುಶಲಿ ಒಂದೆರಡು ಪುಟಗಳನ್ನು ಬರೆದಿಡುತ್ತಾನೆ. ಅದರಲ್ಲಿ ಮಾತಿನ ಭಾರವೇನೂ ಕಾಣುವುದಿಲ್ಲ. ವರ್ಣನೆಯಲ್ಲಿ ಆಡಂಬರವಿರುವುದಿಲ್ಲ. ಎಲ್ಲವೂ ಸಾಮಾನ್ಯವಾಗಿ, ಹಗುರವಾಗಿ, ಸಹಜವಾಗಿರುತ್ತದೆ. ಆದರೂ ಈ ಸಾಮಾನ್ಯತೆಯ ಮೇಲುಹೊದಿಕೆಯ ಕೆಳಗಡೆ ಒಂದು ವಿಶೇಷವಾದ ತತ್ತ್ವ ಚಿಂತನೆಯಿರುತ್ತದೆ. ಇದನ್ನು ನಾವು ನೋಡಿ ಕಲಿಯಬೇಕು.

ನಾನು ಈಗ್ಗೆ ಐದಾರು ವರ್ಷಗಳ ಹಿಂದೆ ಕೆಲವು ವರ್ಷಗಳ ಕಾಲ ಪಂಡಿತ ಪರೀಕ್ಷೆಯಲ್ಲಿ ಒಬ್ಬ ಪರೀಕ್ಷಕನಾಗಿದ್ದೆ. ನಮ್ಮ ಪಂಡಿತರ ಉಪನ್ಯಾಸ ಲೇಖನ ರೀತಿಯನ್ನು ನೋಡುವ ಅವಕಾಶ ಆಗ ನನಗೆ ದೊರೆತಿತ್ತು. ಅಂದಿನಿಂದ ನಮ್ಮ ಪಂಡಿತರಿಗೆ ಪ್ರಬಂಧರಚನೆಯಲ್ಲಿ ನೂತನವಿಧಾನಗಳನ್ನು ತೋರಿಸುವುದು ಅವಶ್ಯವೆಂಬ ಅಭಿಪ್ರಾಯ ನನ್ನ ಮನಸ್ಸಿನಲ್ಲಿ ನಿಂತಿದೆ. ವಿಷಯ ಸಾಮಗ್ರಿಯ ಹವಣಿಕೆ, ಅದನ್ನು ವಿಂಗಡಿಸಿ ಜೋಡಿಸುವುದರಲ್ಲಿ ಒಂದು ಕ್ರಮ, ಒಂದು ಅಚ್ಚುಕಟ್ಟು, ನಿರೂಪಣರೀತಿಯಲ್ಲಿ ಒಂದು ಚಮತ್ಕಾರ, ಅತಿಭಾರವೂ ಅಲ್ಲದೆ ಅತಿಪೇಲವವೂ ಅಲ್ಲದೆ ಸರಳವಾಗಿ ಹರಿಯುವ ವಾಕ್ಸರಣಿ,—ಇವು ಇಂಗ್ಲಿಷ್ ಪ್ರಬಂಧರಚನೆಯ ಉತ್ತಮ ಲಕ್ಷಣಗಳು. ಈ ಲಕ್ಷಣಗಳು ನೂರಾರು ವರ್ಷಗಳ, ನೂರಾರು ಕೈಗಳ, ಪ್ರಯಾಸದಿಂದ ಕೊಂಚಕೊಂಚವಾಗಿ ಬೆಳೆದು ಕ್ರಮಕ್ರಮವಾಗಿ ಉಂಟಾದವು.

ಬರಿಯ ಲಘು ಪ್ರಬಂಧಗಳಲ್ಲಿ ಮಾತ್ರವೇ ಅಲ್ಲ, ದೊಡ್ಡದೊಡ್ಡ ರಾಜ್ಯಶಾಸ್ತ್ರ ಅರ್ಥ ಶಾಸ್ತ್ರ ಗ್ರಂಥಗಳಲ್ಲಿಯೂ ಭೌತಶಾಸ್ತ್ರ ಜೀವಶಾಸ್ತ್ರ ಗ್ರಂಥಗಳಲ್ಲಿಯೂ ಈ ವಾಕ್ಯ ಪರಿಷ್ಕಾರದ ಸೊಗಸು ಇಂಗ್ಲಿಷ್ ಬರೆವಣಿಗೆಯಲ್ಲಿ ಕಾಣಬರುತ್ತದೆ. ಒಂದೊಂದು ವಾಕ್ಯವೂ ಒಂದು ಅಚ್ಚುಕಟ್ಟಾದ ಪೊಟ್ಟಣದಂತೆ, ಒಂದೊಂದು ವಾಕ್ಯ ಸಮುಚ್ಚಯವೂ ಒಂದು ಅಂದವಾಗಿ ಪೇರಿಸಿದ ಸಣ್ಣ ಪೆಟ್ಟಿಗೆಗಳ ಸಾಲಿಸಂತೆ, ನೋಟಕ್ಕೆ ಒಪ್ಪವಾಗಿ ಉಪಯೋಗಕ್ಕೆ ಬೇಗ ದೊರಕುವುದಾಗಿರುತ್ತದೆ. ಈ ವಚನಶೈಲಿಯ ಸೊಬಗೊಂದಕ್ಕೋಸ್ಕರವಾಗಿಯೇ ಆದರೂ ನಾವು ಇಂಗ್ಲಿಷ್ ಸಾಹಿತ್ಯವನ್ನು ಆದರಿಸಬೇಕಾಗಿದೆ.

ಲೋಕಪರಿಜ್ಞಾನ

ಇನ್ನು ಒಂದು ತತ್ತ್ವವನ್ನು ಆಲೋಚಿಸೋಣ. ಸಾಹಿತ್ಯಪಾಠವೇನೂ ಗುಹೆಯೊಳಗಣ ತಪಸ್ಸಲ್ಲ. ಸಾಹಿತ್ಯದ ವಸ್ತು ಲೋಕಜೀವನದಿಂದ ಬಂದದ್ದು ; ಅದರ ಪರಮ ಸಾರ್ಥಕತೆ ಲೋಕಜೀವನದಲ್ಲಿ. ಹೀಗೆ ಸಾಹಿತ್ಯಕ್ಕೂ ಲೋಕಜೀವನಕ್ಕೂ ಅನ್ಯೋನ್ಯಾಶ್ರಿತಭಾವವಿರುವಲ್ಲಿ, ಲೋಕಪರಿಸ್ಥಿತಿಯನ್ನರಿಯದವರು ಹೇಳುವ ಸಾಹಿತ್ಯ ಪಾಠವು ಹೇಗೆ ಕಳೆ ಕಟ್ಟೀತು? ನಿತ್ಯ ನೂತನತೆಯು ಸಜೀವಸಾಹಿತ್ಯದ ಲಕ್ಷಣವೆಂಬುದನ್ನು ನಾವು ಮರೆಯಲಾಗದು. "ಇನ್ನು ಸಾಹಿತ್ಯಸೃಷ್ಟಿ ಮುಗಿದು ಹೋಯಿತು ; ಇಲ್ಲಿಂದ ಮುಂದೆ ಹಳೆಯ ಕಾವ್ಯಗಳೆಷ್ಟೋ ಅಷ್ಟನ್ನೇ ನಾವು ಪಾಠ ಹೇಳಬೇಕಾದದ್ದು"—ಎಂಬ ಕಾಲವು ಎಂದಿಗೂ ಬರಲಾರದು. ಅದು ಬರಬಾರದೆಂಬುದೇ ನಮ್ಮ ಸಂತತಪ್ರಾರ್ಥನೆಯಾಗಿರಬೇಕು ; ಏಕೆಂದರೆ, ಹೊಸತನವೇ ಬಾಳು, ಹಳಸಿಕೆಯೇ ಸಾವು. ಲೋಕದಲ್ಲಿ ಜನರ ಮನೋ ಬುದ್ಧಿಗಳು ಸಂತತವೂ ಬೆಳೆದು ಹೊಸ ಹೊಸ ರೂಪಭಾವಗಳನ್ನು ತಾಳುತ್ತಿರುತ್ತವೆ. ಅದಕ್ಕನುಸಾರವಾಗಿ ಕಾವ್ಯಕಲೆಗಳೂ ಶಾಸ್ತ್ರದರ್ಶನಗಳೂ ಆಗಿಂದಾಗ್ಗೆ ಅಭಿನವ ರೂಪಗಳನ್ನು ಧರಿಸಬೇಕಾಗುತ್ತದೆ. ಹೀಗಿರುವಲ್ಲಿ ಸಾಹಿತಿಗಳಿಗೆ ಯಾವಾಗಲೂ ಎರಡು ಕರ್ತವ್ಯಗಳು ಕಾದಿರುತ್ತವೆ : ಒಂದು, ಹಳೆಯ ಕಾವ್ಯಗಳನ್ನು ಹೊಸ ಭಾವನೆ ಹೊಸ ಜ್ಞಾನಗಳ ಹೊಸ ಬೆಳಕಿನಲ್ಲಿ ಪುನರ್ವಿಮರ್ಶೆಮಾಡಿ ಅವಕ್ಕೆ ಹೊಸದಾಗಿ ಬೆಲೆ ಕಟ್ಟುವುದು ; ಎರಡನೆಯದು, ಹೊಸ ಕಾವ್ಯಗಳನ್ನು ಹೊಸ ಕಾಲದ ದೃಷ್ಟಿಯಿಂದ ನೋಡಿ ಅರ್ಥಮಾಡಿಕೊಳ್ಳುವುದು. ಈ ಎರಡು ಕರ್ತವ್ಯಗಳಿಗೂ ಅವಶ್ಯವಾದದ್ದು ಲೋಕಪರಿಜ್ಞಾನ. ಇದು ನಮಗೆ ಸದ್ಯಕ್ಕೆ ಇಂಗ್ಲಿಷಿನಿಂದ ದೊರಕುವಷ್ಟು ಮಟ್ಟಿಗೆ ಇನ್ನಾವ ಭಾಷೆಯಿಂದಲೂ ದೊರೆಯಲಾರದು.

ಪಂಡಿತರೂ ಹೊಸ ಸಾಹಿತ್ಯವೂ

ಪ್ರಪಂಚದಲ್ಲಿ ಈಚೆಗೆ ಭಾಷಾಶಾಸ್ತ್ರವೆಂಬ ಹೊಸ ಶಾಸ್ತ್ರವೊಂದು ಹುಟ್ಟಿಕೊಂಡಿದೆ. ನಾನಾ ಭಾಷೆಗಳ ವಂಶಾನುಕ್ರಮಗಳು, ಕಾಲಕ್ರಮದಲ್ಲಿ ಅವು ಪಡೆದಿರುವ ಮಾರ್ಪಾಟುಗಳು, ಅವುಗಳ ಪರಸ್ಪರ ಋಣ ಆದಾನಗಳು—ಈ ಮೊದಲಾದವು ಭಾಷಾಶಾಸ್ತ್ರದ ವಿಷಯಗಳು. ಈ ಶಾಸ್ತ್ರವು ನಮ್ಮ ಪಂಡಿತೋಪಾಧ್ಯಾಯರುಗಳಿಗೆ ಅತ್ಯಂತ ಉಪಯುಕ್ತವಾದದ್ದೆಂದು ಹೇಳಬೇಕಾಗಿಲ್ಲ. ಆ ಶಾಸ್ತ್ರವು ಸದ್ಯಕ್ಕೆ ಉಪಲಭ್ಯವಾಗಿರುವುದು ಇಂಗ್ಲಿಷಿನಲ್ಲಿ.

ಈ ನಾನಾ ಕಾರಣಗಳಿಂದ ನಾನು ನಮ್ಮ ಉಪಾಧ್ಯಾಯ ಪಂಡಿತರಿಗೆ ಇಂಗ್ಲಿಷ್ ಭಾಷಾಜ್ಞಾನವು ಅತ್ಯಂತಾವಶ್ಯವೆಂದು ಅಭಿಪ್ರಾಯ ಪಟ್ಟಿದ್ದೇನೆ. ಇಂಟರ್‌ಮೀಡಿಯೆಟ್ ತರಗತಿಯ ವಿದ್ಯಾರ್ಥಿಗಳಲ್ಲಿ ನಿರೀಕ್ಷಿಸುವಷ್ಟರಮಟ್ಟಿನ ಇಂಗ್ಲಿಷ್ ಭಾಷಾ ಪರಿಚಯವಾದರೂ ಪಂಡಿತರಿಗೆ ಇಲ್ಲದಿದ್ದರೆ ಅವರು ತಮ್ಮ ಬೋಧನಕಾರ್ಯವನ್ನು ಸಮರ್ಪಕವಾಗಿ ನೆರವೇರಿಸುವುದು ಅಸಾಧ್ಯವಾಗುವುದು.

ಪಂಡಿತರಿಗೆ ವಿಶ್ವವಿದ್ಯಾಲಯದಲ್ಲಿ ಕೆಲವು ಸ್ಥಾನಗಳನ್ನು ಪ್ರತ್ಯೇಕವಾಗಿರಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದರಲ್ಲಿರುವ ಒಂದು ಕಷ್ಟವನ್ನು ನಿಮ್ಮ ಗಮನಕ್ಕೆ ತರಬೇಕಾಗಿದೆ. ವಿಶ್ವವಿದ್ಯಾಲಯದ ಸಂಸ್ಕೃತ ಕನ್ನಡಗಳ ಶಾಖೆಗಳಲ್ಲಿ ಈಗ ಇರುವ, ಮತ್ತು ಎಂದಾದರೂ ಇರಬಹುದಾದ, ಬೋಧನವಿಷಯಗಳು ಸ್ಥೂಲವಾಗಿ ನಾಲ್ಕು :—(೧) ಪ್ರಾಚೀನ ಸಾಹಿತ್ಯ, (೨) ನವೀನ ಗ್ರಂಥಗಳು, (೩) ಭಾಷಾಂತರೀಕರಣ, (೪) ಪ್ರಬಂಧಲೇಖನ. ಇವುಗಳಲ್ಲಿ ಮೊದಲನೆಯದೊಂದರ ವಿನಾ ಮಿಕ್ಕ ಮೂರೂ ಇಂಗ್ಲಿಷ್ ಜ್ಞಾನವನ್ನಪೇಕ್ಷಿಸತಕ್ಕವು. ನವೀನ ಗ್ರಂಥಗಳು ಸಾಮಾನ್ಯವಾಗಿ ಭೌತವಿಜ್ಞಾನಾದಿ ವಿಷಯಕಗಳಾಗಿ, ಇಂಗ್ಲಿಷಿನಿಂದ ಉದ್ಧರಿಸಿದುವಾಗಿರುತ್ತವೆ; ಅಥವಾ ಪಾಶ್ಚಾತ್ಯ ಸಾಹಿತ್ಯದ ಅನುವಾದಗಳಾಗಿರುತ್ತವೆ. ಉದಾಹರಣೆಗಾಗಿ, ನಾಲ್ಕೈದು ವರ್ಷಗಳ ಕೆಳಗೆ ಇಂಟರ್‌ಮೀಡಿಯೆಟ್ ತರಗತಿಯ ಕನ್ನಡ ಪಠ್ಯಪುಸ್ತಕವಾಗಿದ್ದ ಒಂದು 'ಪ್ರಬಂಧಮಾಲೆ' ಯಲ್ಲಿಯ ಕೆಲವು ವಿಷಯಗಳ ಹೆಸರುಗಳನ್ನು ನೋಡೋಣ :—"ಎಪಿಕ್ಟೆಟಸ್ಸಿನ ನೀತಿಬೋಧೆ", "ಮಾರ್ಕಸ್ ಆರೆಲಿಯಸ್ಸನ ಮನನಗಳು", "ಡೇವಿಡ್ ದೊರೆಯ ಗೀತಗಳು", "ಗಯ್‌ಟೆ ಕವಿಯ ಸಂಭಾಷಣೆಗಳು". ಇಂಥ ವಿಷಯಗಳನ್ನು ಇಂಗ್ಲಿಷ್ ತಿಳಿಯದವರು ಪಾಠ ಹೇಳುವುದು ಹೇಗೆ? ಅಥವಾ ಇಂಥ ವಿಷಯಗಳನ್ನು ಕುರಿತ ಗ್ರಂಥಗಳು ಕನ್ನಡಕ್ಕೆ ಬೇಡವೆ? ಪಾಠವನ್ನು ಮೊಟಕು ಮಾಡೋಣವೆ? ಅಥವಾ ಭಾಷೆಯನ್ನು ಕರಡುಮಾಡೋಣವೆ? ನಮ್ಮ ಪಂಡಿತರು ಇಂಗ್ಲಿಷನ್ನು ಬಲ್ಲವರಾದರೆ ಈ ಕಷ್ಟ ಆಗ ಇರಲಾರದು.

ಪಂಡಿತರ ಜೀವಿಕಾ ಸಮಸ್ಯೆ

ನಮ್ಮ ಪಂಡಿತ ಪರೀಕ್ಷೆಯ ಕ್ರಮವನ್ನು ಪುನರ್ವಿಮರ್ಶೆಮಾಡಿ ಪರಿಷ್ಕಾರಗೊಳಿಸುವುದು ಈಗ ಅವಶ್ಯವೆಂದು ತೋರುತ್ತದೆ. ಈ ಕೆಲಸ ವಿಶ್ವವಿದ್ಯಾಲಯದ ಮೂಲಕ ನಡೆದರೆ, ಪಂಡಿತರಿಗೂ ಗ್ರಾಡ್ಯುಯೇಟ್‌ಗಳಿಗೂ ಈಗ ಇರುವ ಪೋಟಾಪೋಟಿಯು ಅದರಿಂದ ಕೊಂಚಮಟ್ಟಿಗಾದರೂ ನಿವಾರಣೆಯಾಗಬಹುದು. ಒಂದು ಕಡೆ ವಿದ್ಯಾಪ್ರಚಾರದ ಇಲಾಖೆ ತಯಾರು ಮಾಡುವ ಪಂಡಿತರುಗಳು, ಇನ್ನೊಂದು ಕಡೆ ವಿಶ್ವವಿದ್ಯಾಲಯದ ಬಿ.ಎ., ಎಂ.ಎ., ಪಟ್ಟಾಂಚಿತರುಗಳು—ಹೀಗೆ ಎರಡು ಕಕ್ಷಿಗಳೇರ್ಪಡುತ್ತಿದ್ದರೆ ಇವರಿಗೆ ಉದ್ಯೋಗಗಳನ್ನು ಹಂಚುವುದು ಹೇಗೆ? ಲೋಕಪ್ರಯೋಜನ ದೃಷ್ಟಿಯಿಂದ ಇಬ್ಬರಿಗೂ ಸ್ಥಾನಗಳುಂಟು. ಪಂಡಿತರು ಹಳೆಯ ಸಾಹಿತ್ಯವನ್ನೇ ಮುಖ್ಯವಾಗಿ ಎಣಿಸಿ ಅದರಲ್ಲಿ ವಿಶೇಷ ಕೃಷಿಮಾಡಬೇಕಾದವರು; ಬಿ.ಎ., ಎಂ.ಎ., ಗಳು ಹೊಸ ವಿಮರ್ಶನ ಪದ್ಧತಿಯನ್ನು ಪ್ರಚಾರಕ್ಕೆ ತರಬೇಕಾದವರು ಮತ್ತು ಹೊಸ ಸಾಹಿತ್ಯವನ್ನು ರಚಿಸಬಹುದಾದವರು. ಹೀಗೆ ಕರ್ತವ್ಯಗಳನ್ನು ಹಂಚಿಕೊಡುವುದು ಸಾಧ್ಯ. ಆದರೆ ಜೀವಿಕೆಯನ್ನೊದಗಿಸುವುದು ಅಷ್ಟು ಸುಲಭವಲ್ಲ. ಪಂಡಿತ ಪಟ್ಟಾಂಚಿತರು ಕನ್ನಡ ಸಂಸ್ಕೃತ ಸಾಹಿತ್ಯಜ್ಞಾನಗಳ ಜೊತೆಗೆ ಇಂಟರ್‌ಮೀಡಿಯೆಟ್ ತರಗತಿಯ ಇಂಗ್ಲಿಷ್ ಜ್ಞಾನವನ್ನೂ ಸಂಪಾದಿಸಿಕೊಂಡಿದ್ದರೆ ಅಂಥವರನ್ನು ಸರಕಾರದ ಉದ್ಯೋಗ ವಿಚಾರದಲ್ಲಿ ಬಿ.ಎ., ಗಳಿಗೆ ಸಮನೆಂದು ಏಕೆ ಪರಿಗಣಿಸಬಾರದು? ಅಷ್ಟು ಮಟ್ಟಿನ ಇಂಗ್ಲಿಷ್ ಜ್ಞಾನದಿಂದ ಅವರು ಶಿರಸ್ತೆದಾರ್, ಪೋಲೀಸ್ ಇನ್‌ಸ್ಪೆಕ್ಟರ್, ಸಬ್ ರೆಜಿಸ್ಟ್ರಾರ್, ಅಮಲ್ದಾರ್ ಮೊದಲಾದ ಅಧಿಕಾರಿಗಳ ಕರ್ತವ್ಯಗಳನ್ನು ನಿರ್ವಹಿಸಲಾಗುವುದಿಲ್ಲವೆ? ಇಂಥ ಸುಧಾರಣೆಯನ್ನೇನಾದರೂ ಆಲೋಚಿಸಿ, ಪಂಡಿತರಾಗುವವರಿಗೆ ಆರ್ಥಿಕ ಭವಿಷ್ಯವನ್ನು ಆ ಮೂಲಕ ಅಷ್ಟಿಷ್ಟಾದರೂ ಉತ್ತಮಪಡಿಸಿಕೊಡದೆ ಹೋದರೆ ಪಂಡಿತ ಸಂಪ್ರದಾಯವು ಊರ್ಜಿತವಾಗುವ ಆಶೆ ನನಗೆ ತೋರದು. ಪಾಂಡಿತ್ಯಕ್ಕೆ ಕೂಡ ಕಾಲು ಬಲಪಡುವುದು ಹೊಟ್ಟೆಯಿಂದ. ಉಪವಾಸವು ಪಾಂಡಿತ್ಯಕ್ಕೂ ಮೃತ್ಯುವೇ.

ಯಾರಲ್ಲಿ ಮೊರೆ?

ಪ್ರಾಚೀನ ವಿದ್ಯಾ ಪಾಂಡಿತ್ಯಗಳನ್ನು ಉಳಿಸಿ ಊರ್ಜಿತಪಡಿಸಬೇಕೆಂದು ಬದ್ಧಕಂಕಣರಾಗಿರುವವರು ನಮ್ಮ ಸಂಸ್ಥಾನದಲ್ಲಿ ಯಾರಿದ್ದಾರೋ ನನಗೆ ತಿಳಿಯದು. ಸರಕಾರಕ್ಕೆ ನೂರು ಚಿಂತೆಗಳಿರುತ್ತವೆ. ಅವುಗಳ ಪೈಕಿ ಮೊದಲನೆಯ ಹತ್ತರಲ್ಲಾದರೂ ಇದು ಒಂದಾಗಿದ್ದರೆ ನನಗೆ ಅತೃಪ್ತಿಯಿಲ್ಲ. ಆದರೆ ಅಂಥ ನಿರೀಕ್ಷಣೆ ಹೆಚ್ಚಿನ

ದೆಂದೇ ತೋರುತ್ತದೆ. ಅಧಿಕಾರಸ್ಥಾನಗಳಲ್ಲಿರುವವರಿಗೆ ಸಾಹಿತ್ಯದ ಹವ್ಯಾಸಕ್ಕೆ ವ್ಯವಧಾನ ಕಡಮೆ. ಸಾಹಿತ್ಯ ಸಾವಕಾಶವಾದದ್ದು, ಗದ್ದಲವಿಲ್ಲದ್ದು; ಸರಕಾರ ಅವಸರದ್ದು, ಸಡಗರವುಳ್ಳದ್ದು. ಪಾಂಡಿತ್ಯದ ಕೈಯನ್ನು ಯಾರು ಹಿಡಿದಾರು? ಹೀಗೆ ಸಂಘಕಟ್ಟಿ ಕೂಗೆಬ್ಬಿಸಿದರೆ ಯಾರ ಕಟಾಕ್ಷವಾದರೂ ನಿಮ್ಮ ಕಡೆಗೆ ತಿರುಗೀತೇನೋ ಎಂದು ನೀವು ಆಶೆಪಟ್ಟುಕೊಂಡಿರಬಹುದು. ಇಂಥಾ ಚಳವಳಗಳ ಅನುಭವ ನನಗೆ ಸ್ವಲ್ಪ ಉಂಟು. ಅದು ಅಷ್ಟೇನೂ ಪ್ರೋತ್ಸಾಹಕರವಾಗಿಲ್ಲ. ಆದರೆ ನಿಮ್ಮ ಅನುಭವ ಬೇರೆ ವಿಧದ್ದು ಏಕಾಗಬಾರದು?

ಈ ದಿನ ನಮ್ಮ ಸಂಸ್ಥಾನದ ಮಂತ್ರಿಮಂಡಲದ ಸದಸ್ಯರು ರಾಜಮಂತ್ರ ಪ್ರವೀಣ ಶ್ರೀಮಾನ್ ನ್ಯಾಪತಿ ಮಾಧವರಾಯರವರು ಇಲ್ಲಿಗೆ ದಯಮಾಡಿ ಬಂದು, ಈ ಸಮಾರಂಭದಲ್ಲಿ ತಮ್ಮ ಸಹಾನುಭೂತಿಯನ್ನು ತೋರಿ, ಹಿತಕರವೂ ಪ್ರೋತ್ಸಾಹ ಕರವೂ ಆದ ಭಾಷಣವನ್ನು ಅಪ್ಪಣೆಕೊಡಿಸಿರುತ್ತಾರೆ. ಈ ಸಂಗತಿ ಪಂಡಿತ ಮಂಡಲದ ಭವಿಷ್ಯತ್ತಿಗೆ ಶುಭಸೂಚನೆಯೆಂದು ನಾನು ಭಾವಿಸುತ್ತೇನೆ.

ಮೇಲಂತಸ್ತಿನ ಅಧಿಕಾರಿಗಳ ಮಾತು ಹಾಗಿರಲಿ, ಅವರಿಗಿಂತ ಹೆಚ್ಚುಹೆಚ್ಚಾಗಿ ಸ್ಕೂಲು ಹೈಸ್ಕೂಲುಗಳೊಡನೆ ಅನುದಿನದ ಸಂಬಂಧವಿರುವ ಜಿಲ್ಲೆಯ ಮತ್ತು ರೇಂಜಿನ ವಿದ್ಯಾಧಿಕಾರಿಗಳು ಸಾಹಿತ್ಯಾಭಿಮಾನಿಗಳಾಗಿ, ಭಾಷಾಶಿಕ್ಷಣದ ಕಷ್ಟ ನಿಷ್ಠುರಗಳ ವಾಸ್ತವಿಕ ಜ್ಞಾನವನ್ನು ಪಡೆದವರಾದರೆ, ಎಷ್ಟೋ ಉಪಕಾರವಾದೀತು. 'ಸ್ಕೌಟಿಂಗ್' 'ಸ್ಪೋರ್ಟ್ಸ್' ಮೊದಲಾದ ವಿಷಯಗಳಲ್ಲಿ ಅವರು ತೋರಿಸುವಷ್ಟು ಉತ್ಸಾಹವನ್ನಾದರೂ ದೇಶಭಾಷಾ ಭಾಗಕ್ಕೂ ತೋರುವುದಾದರೆ ಕನ್ನಡ ಸಂಸ್ಕೃತಗಳ ಸ್ಥಿತಿ ಮಾತ್ರವೇ ಅಲ್ಲದೆ ನಮ್ಮ ಒಟ್ಟು ವಿದ್ಯಾಭ್ಯಾಸಕ್ರಮವೇ ಉತ್ತಮವಾದೀತು.

ಶಿಕ್ಷಣಕ್ರಮ ಪರಿಷ್ಕರಣೆ

ಈಗ ನಮ್ಮ ವಿದ್ಯಾಪ್ರಚಾರ ಕ್ರಮದಲ್ಲಿ ವೆಚ್ಚವಾಗುತ್ತಿರುವ ದ್ರವ್ಯದಲ್ಲಿಯೂ ಕಾಲಪರಿಶ್ರಮಗಳಲ್ಲಿಯೂ ಬಹುಭಾಗ ನಿರರ್ಥಕವಾಗಿ ಹೋಗುತ್ತಿದೆಯೆಂಬ ಪುಕಾರನ್ನು ಬಹುಮಂದಿ ಕೇಳಿದ್ದಾರೆ. ಈ ವ್ಯರ್ಥ ವೆಚ್ಚವನ್ನು ತಪ್ಪಿಸಿ, ವ್ಯಯವಾದ ಪ್ರತಿಯೊಂದು ಕಾಸೂ, ಪ್ರತಿಯೊಂದು ಗಳಿಗೆಯೂ, ಪ್ರತಿಫಲದಾಯಕವಾಗುವಂತೆ ಮಾಡಬೇಕೆಂದು ಇಲಾಖೆಯಲ್ಲಿ ಪ್ರಯತ್ನ ನಡೆಯುತ್ತಿದೆ. ಆ ವ್ಯರ್ಥತೆಯನ್ನು ಪರಿಹರಿಸುವ ಯತ್ನದಲ್ಲಿ ಕನ್ನಡ ಬೋಧನ ಕ್ರಮವನ್ನು ಪರಿಷ್ಕಾರಗೊಳಿಸುವುದೂ ಒಂದು ಮುಖ್ಯಭಾಗವಾಗಿರಬೇಕು. ವಿದ್ಯೆಯು ವಿಸ್ತಾರವಾಗಿ ಹರಡುವುದೊಂದೇ ಮುಖ್ಯವಲ್ಲ. ಅದು ಸಾರ್ಥಕವಾಗುವಂತೆಯೂ ಹರಡಬೇಕು. ಬರಿಯ ವಿಸ್ತೀರ್ಣ

ಸಾಲದು, ಗುಣವೂ ಇರಬೇಕು. ಗುಣಾಭಿವೃದ್ಧಿಗೆ ಮೊದಲು ಆಗಬೇಕಾದದ್ದು ಶಿಕ್ಷಣ ಪದ್ಧತಿಯ ಪರಿಷ್ಕರಣೆ.

ಕನ್ನಡ ಚೆನ್ನಾದರೆ ಇಂಗ್ಲೀಷ್ ಚೆನ್ನ

ಇನ್ನೊಂದು ದೃಷ್ಟಿಯಿಂದ ಈ ವಿಚಾರವನ್ನು ನೋಡೋಣ. ಈಗ ವಿಶ್ವ ವಿದ್ಯಾಲಯದ ಒಳಗಡೆಯೂ ಹೊರಗಡೆಯೂ ನಮ್ಮ ವಿದ್ಯಾರ್ಥಿಗಳ ಇಂಗ್ಲಿಷ್ ಜ್ಞಾನವು ತಕ್ಕಷ್ಟಿಲ್ಲವೆಂಬ ದೂರು ಹಬ್ಬಿದೆ. ಕನ್ನಡ ಸಂಸ್ಕೃತಗಳ ಪ್ರಾಬಲ್ಯದಿಂದ ಇಂಗ್ಲೀಷಿಗೆ ಕಾಲುಮುರಿಯಿತೆಂದು ಕೆಲವರು ಹೇಳುತ್ತಾರೆ. ಈ ಮಾತು ಶುದ್ಧ ಅಸಂಗತವೆಂದು ನಾನು ತಿಳಿದಿದ್ದೇನೆ. ಇಂಗ್ಲಿಷು ಚೆನ್ನಾಗಿರಬೇಕಾದರೆ ಮೊದಲು ಕನ್ನಡ ಚೆನ್ನಾಗಿರಬೇಕು. ಈ ತತ್ತ್ವವನ್ನು ಸಮಸ್ತರೂ ಗ್ರಹಿಸುವುದು ನಮ್ಮ ವಿದ್ಯಾಪದ್ಧತಿಯಲ್ಲಿ ಮೊಟ್ಟಮೊದಲು ಆಗಬೇಕಾದ ಸುಧಾರಣೆಗಳಲ್ಲೊಂದು. ಲೋಕದಲ್ಲಿ ಭಾಷೆಗಳು ಬೇರೆಬೇರೆಯಾದರೂ ವ್ಯಾಕರಣ ಬುದ್ಧಿಯೆಂಬುದು ಒಂದು. ರೂಪಾಯಿ ಆಣೆ ಪೈಗಳ ಸಂಕಲನ ವ್ಯವಕಲನಾದಿ ಗಣಿತ ಪ್ರಕ್ರಿಯೆಗಳನ್ನು ಬಲ್ಲವನು ಪೌಂಡು ಷಿಲಿಂಗ್ ಪೆನ್ನಿ ಮೊದಲಾದ ನಾಣ್ಯಗಳ, ಅಥವಾ ಅಡಿ ಗಜ ಮೈಲಿ ಮೊದಲಾದ ದೂರಮಾನಗಳ, ಗಣಿತವನ್ನು ಸುಲಭವಾಗಿ ಕಲಿತುಕೊಳ್ಳುವಂತೆ, ಶಬ್ದಸ್ವರೂಪವನ್ನೂ, ಲಿಂಗ ವಚನ ವಿಭಕ್ತಿಗಳ ರೀತಿಯನ್ನೂ, ಕ್ರಿಯಾಪದ ಕಾಲ ರೂಪನಿಷ್ಪತ್ತಿಯನ್ನೂ, ಕರ್ತೃ ಕರ್ಮ ಕ್ರಿಯಾ ಯೋಜನ ವಿವರವನ್ನೂ ಕನ್ನಡದಲ್ಲಿ ಚೆನ್ನಾಗಿ ಕಲಿತುಕೊಂಡವನು ಅದೇ ವ್ಯಾಕರಣ ಸೂತ್ರಗಳನ್ನು ಇಂಗ್ಲಿಷಿಗೆ ಹೊಂದಿಸಿಕೊಳ್ಳುವುದು ಕಷ್ಟವಾಗಲಾರದು. ಹೀಗೆ ಕನ್ನಡದಲ್ಲಿ ಭದ್ರವಾಗಿ ತಳಹದಿ ಕಟ್ಟುವುದು ದೊಡ್ಡ ಕೆಲಸ. ಇಂಗ್ಲಿಷಿನ ಹಿತಚಿಂತಕರು ಕನ್ನಡದಲ್ಲಿ ಭಾಷಾ ಬೋಧನೆಯನ್ನು ಮೊದಲು ಬಲಪಡಿಸಬೇಕು. ಹೀಗೆಂದ ಮೇಲೆ ಇಂಗ್ಲಿಷಿನ ಭದ್ರಸ್ಥಿತಿಗೆ ನಮ್ಮ ಪ್ರಾಥಮಿಕ ಪಾಠಶಾಲೆಗಳ ಬೋಧನಕ್ರಮ, ಅಲ್ಲಿಯ ಉಪಾಧ್ಯಾಯರುಗಳ ಭಾಷಾಜ್ಞಾನ—ಇವು ಅತಿ ಮುಖ್ಯ ವಿಷಯಗಳಾಗುತ್ತವೆ. ಇಂಗ್ಲಿಷಿನ ಕಾರಣದಿಂದಲೇ ಅಲ್ಲ, ಸ್ವತಏವ ಇವು ಮುಖ್ಯ ವಿಷಯಗಳೆಂಬುದನ್ನು ಎಲ್ಲರೂ ಒಪ್ಪಲೇಬೇಕು. ನಮ್ಮಲ್ಲಿ ಮೊದಮೊದಲು ಬಾಲಪಾಠಶಾಲೆಗಳ ಬೋಧಕ ರಾಗಿ ಬಂದವರು ಅಷ್ಟಿಷ್ಟು ಪೂರ್ವಕಾಲದ ಸಂಸ್ಕೃತಿಯನ್ನು ಪಡೆದವರಾಗಿರು ತ್ತಿದ್ದರು. ಅವರಿಗೆ ಮತ್ತಾವ ವಿಶೇಷ ಪಾಂಡಿತ್ಯವಿರದಿದ್ದರೂ, ಸ್ವಲ್ಪ ಅಮರ, ನೂರಾರು ಶ್ಲೋಕಗಳು, ಪ್ರಸಿದ್ಧ ಪುರಾಣಕಥೆಗಳು, ವ್ಯಾಕರಣದ ಮುಖ್ಯಾಂಶ ಗಳು—ಇಷ್ಟಾದರೂ ಜ್ಞಾಪಕದಲ್ಲಿರುತ್ತಿದ್ದವು. ನಲವತ್ತು ವರುಷಗಳ ಹಿಂದೆ ನನಗೆ

ಕನ್ನಡ ಕಲಿಸಿದ ಮಹಾನುಭಾವರಾದ ಚಂದ್ರಶೇಖರಶಾಸ್ತ್ರಿಗಳವರು ವೇದಾಧ್ಯಯನ ಮಾಡಿದವರಾಗಿಯೂ ಸಂಸ್ಕೃತಕಾವ್ಯ ವ್ಯಾಸಂಗಮಾಡಿದವರಾಗಿಯೂ ಇದ್ದರು. ಅವರು "ಗಜವದನ ಹೇರಂಬ ಗಣಪತಿ" ಪದ್ಯವನ್ನು ಪಾಠ ಹೇಳಿದರೂ ಸಂಧಿ, ಸಮಾಸ, ಅವಯವಾರ್ಥ, ಅನ್ವಯ, ಆಕಾಂಕ್ಷೆ ಇವುಗಳನ್ನೆಲ್ಲಾ ಕೂಡಿದಮಟ್ಟಿಗೂ ವಿದ್ಯಾರ್ಥಿಯ ಬಾಯಿಂದಲೇ ಹೊರಡಿಸಿ, ಸಂಸ್ಕೃತ ಸಂಪ್ರದಾಯದಲ್ಲಿ ಕನ್ನಡವನ್ನು ಹೇಳಿಕೊಡುತ್ತಿದ್ದರು. ಅವರ ಕಾವ್ಯವಾಚನಧಾಟಿಯೂ ಹಾಗೆಯೇ ಹೃದಯಂಗಮ ವಾಗಿರುತ್ತಿತ್ತು. ಅಂಥಾ ಉಪಾಧ್ಯಾಯರುಗಳು ಈಗ ವಿರಳರಾಗಿದ್ದಾರೆ. ಉಪಾಧ್ಯಾಯರಿಗಿರುವ ಸಾಹಿತ್ಯಬಲವೇ ಸ್ವಲ್ಪದ್ದಾದ ಮೇಲೆ ವಿದ್ಯಾರ್ಥಿಗಳಿಗೆ ದೊರೆಯುವ ಭಾಷಾಪಾಂಡಿತ್ಯವೆಷ್ಟುಮಟ್ಟಿನದಾದೀತು? ನಮ್ಮ ವಿದ್ಯಾಪ್ರಚಾರದ ಇಲಾಖೆಯವರೂ ವಿಶ್ವವಿದ್ಯಾಲಯದವರೂ ವಿದ್ಯೋತ್ಸಾಹಿಗಳಾದ ಸರ್ವರೂ ಈ ದೃಷ್ಟಿಯಿಂದ ವಿದ್ಯಾಭ್ಯಾಸಕ್ರಮದ ತಳಪಾಯವನ್ನು ಪರಿಶೋಧಿಸಿ, ಬಾಲಪಾಠಶಾಲೆಗಳಲ್ಲಿಯೂ ಮಾಧ್ಯಮಿಕ ಶಾಲೆಗಳಲ್ಲಿಯೂ ಸಾಹಿತ್ಯಕ್ಕೆ ಭದ್ರವಾದ ಹಸ್ತಿಭಾರವನ್ನು ಹಾಕಬೇಕು. ಆಗ ಕನ್ನಡ ಸಂಸ್ಕೃತ ಸಾಹಿತ್ಯಪಾಠಕ್ಕೆ ಹೊಸ ತೇಜಸ್ಸು ಬರುವುದಲ್ಲದೆ ಇಂಗ್ಲಿಷ್ ಪಾಠವೂ ತೃಪ್ತಿಕರವಾಗುವುದು.

ಪಾಂಡಿತ್ಯದ "ಹಕ್ಕು"

ಹೀಗೆ ನಿಮ್ಮ ಮುಂದೆ ಅನೇಕ ದೊಡ್ಡ ಪ್ರಶ್ನೆಗಳು ಕಾದುಕೊಂಡಿವೆ. ಅವು ನಿಮ್ಮ ಉದ್ಯೋಗಕ್ಕೆ ಮಾತ್ರವೇ ಅಲ್ಲದೆ ದೇಶದ ಅಭ್ಯುದಯಕ್ಕೂ ಸಂಬಂಧಪಟ್ಟವು. ಅವುಗಳ ಸಮಾಧಾನವು ಸರಕಾರದ ಮತ್ತು ಮಹಾಜನರ ಸಹಕಾರದಿಂದ ಆಗಬೇಕಾಗಿದೆ.

ಪಂಡಿತವರ್ಗಕ್ಕೂ ಪ್ರಭುವರ್ಗಕ್ಕೂ ಇದುವರೆಗೂ ಅಭ್ಯಾಸವಾಗಿರುವ ಪರಸ್ಪರ ಸಂಬಂಧ ಪೋಷ್ಯಪೋಷಕ ಭಾವದ್ದು. ಪಂಡಿತರು ಯಾಚಕರು, ಪ್ರಭುಗಳು ಅನುಗ್ರಹಕರ್ತರು; ಪಂಡಿತರು ಆಶ್ರಿತರು, ಪ್ರಭುಗಳು ಆಶ್ರಯದಾತರು—ಈ ತೆರದ್ದು ಹಳೆಯ ಸಂಬಂಧ. ಈ ಕಾಲದಲ್ಲಿ ಆ ತೆರದ ಸಂಬಂಧಗಳು ಅಳಿಸಿಹೋಗುತ್ತಿವೆ. ಈಗಿನ ಸಂಬಂಧ ಪರಸ್ಪರ ನ್ಯಾಯಭಾವದ್ದು,—ಉಪಯೋಗ ಪ್ರತಿಮೌಲ್ಯರೂಪದ್ದು. ಸರಕಾರವು ಚಿತ್ತಬಂದರೆ ಅನುಗ್ರಹಿಸಬಹುದು, ಇಲ್ಲದಿದ್ದರೆ ಉಪೇಕ್ಷಿಸಬಹುದು—ಎಂಬ ನೀತಿ ಈ ಕಾಲಕ್ಕೆ ಅನ್ವಯಿಸತಕ್ಕದ್ದಲ್ಲ. ಏಕೆಂದರೆ ಈಗ ಪಂಡಿತರ ಅಸ್ತಿತ್ವವನ್ನುಳಿಸಬೇಕಾದದ್ದು ಸರಕಾರದ ಕೀರ್ತಿಪ್ರತಿಷ್ಠೆಗಳಿಗೋಸ್ಕರವಲ್ಲ, ಪ್ರಜಾ ಪ್ರಯೋಜನಕ್ಕೋಸ್ಕರ. ಹಿಂದೆ ಪಂಡಿತರು ರಾಜಾಸ್ಥಾನಕ್ಕೆ ಒಂದು ಅಲಂಕಾರ; ರಾಜನ ಮುಖೋಲ್ಲಾಸಕ್ಕೆ ಅವರ ಹಾಜರಿ ಅವಶ್ಯ; ರಾಜನ ಗುಣವರ್ಣನೆಯೇ ಅವರ ಕಸಬು.

ಈಗ ಹಾಗಿಲ್ಲ. ಲೋಕಬೋಧನೆ ಈಗ ಅವರ ಕರ್ತವ್ಯ. ದೇಶದ ಪ್ರತಿಯೊಂದು ಉದ್ಯೋಗಕ್ಕೂ ಸಲ್ಲಬೇಕಾದ ಹಕ್ಕುಗಳು ಕೆಲವು ಇರುತ್ತವೆ. ಪಂಡಿತವೃತ್ತಿಯೂ ಅಂಥಾದ್ದೊಂದು ಉದ್ಯೋಗ. ಪೊಲೀಸ್, ಮರಾಮತ್, ವೈದ್ಯ—ಮೊದಲಾದ ಇಲಾಖೆಗಳು ಕೆಟ್ಟರೆ ನಷ್ಟಪಡುವವರು ಹೇಗೆ ಪ್ರಜೆಗಳೋ, ಹಾಗೆಯೇ ಪಂಡಿತ ವೃತ್ತಿಯು ಕೆಟ್ಟರೆ ನಷ್ಟಪಡುವವರು ಪ್ರಜೆಗಳೇ. ಹೀಗಿರುವುದರಿಂದ, ಸರಕಾರಕ್ಕೆ ಮಾತ್ರವಲ್ಲದೆ ಮಹಾಜನರಿಗೂ ಸಹ ನಿಮ್ಮ ಕರ್ತವ್ಯದ ಘನತೆಯೆಂಥದೆಂಬುದನ್ನೂ ನಿಮಗಾಗಬೇಕಾದ ಸೌಕರ್ಯಗಳೇನೆಂಬುದನ್ನೂ ಮನಗಾಣಿಸಿ ಕೊಡುವುದು ನಿಮ್ಮ ಸಂಘದ ಕರ್ತವ್ಯವಾಗಿರುತ್ತದೆ.

ಜನದಲ್ಲಿ ವಿದ್ಯೋತ್ಸಾಹ

ನನ್ನ ಮನಸ್ಸಿಗೆ ತೋರುವ ಒಂದು ಧೈರ್ಯದ ಮಾತಿನಿಂದ ಈ ಉಪನ್ಯಾಸ ವನ್ನು ಮುಗಿಸುತ್ತೇನೆ. ದೇಶದಲ್ಲಿ ಸರ್ವತ್ರ ವಿದ್ಯಾಭಿಲಾಷೆ ಹರಡುತ್ತಿದೆ. ಎಲ್ಲ ಜಾತಿ ಎಲ್ಲ ವರ್ಗಗಳ ಪ್ರಜಾಜನರೂ ಅಕ್ಷರ ವಿದ್ಯೆಯನ್ನಪೇಕ್ಷಿಸುತ್ತಿದ್ದಾರೆ. ಸರಕಾರವೂ ವಿದ್ಯಾಪ್ರಚಾರ ವಿಷಯದಲ್ಲಿ ಹೆಚ್ಚು ಹೆಚ್ಚು ಆಸಕ್ತಿಯನ್ನು ತೋರುತ್ತಿದೆ. ಹೀಗೆ ಅಕ್ಷರಜ್ಞಾನವು ಪ್ರಸರಿಸುತ್ತ ಹೋಗುವುದೆಂಬುದು ನಿಸ್ಸಂದೇಹದ ಸಂಗತಿ. ಅಕ್ಷರ ಜ್ಞಾನದ ಹಿಂದೆಯೇ, ಅದರ ಫಲಿತಾಂಶವಾಗಿಯೇ, ಸಾಹಿತ್ಯಾಭಿರುಚಿಯೂ ಶಾಸ್ತ್ರಕುತೂಹಲವೂ ಹುಟ್ಟಿಬರುತ್ತವೆ. ಈ ಹೊತ್ತು ಓದು ಬರೆಹ ಕಲಿತವನು ನಾಳೆ ಕಥೆ ಕಾವ್ಯಗಳನ್ನು ಓದಬೇಕೆನ್ನುತ್ತಾನೆ; ನಾಳಿದ್ದು ವಿಚಾರಮಾಡ ಹೊರಡುತ್ತಾನೆ. ಈ ಅಕ್ಷರಜ್ಞಾನಮೂಲಕವಾದ ಬುದ್ಧಿವಿಕಸನದಿಂದ ಪಂಡಿತವಿದ್ಯೆಗೆ ಬೆಲೆಯೇರುವುದು ಸ್ವಾಭಾವಿಕವಾಗಿದೆ. ಹೀಗೆ ನಮಗೆ ಹೊಸ ಆಶಾಕಾರಣ ತೋರಿದಂತೆಯೇ ಹೊಸ ಕರ್ತವ್ಯತೆಯೂ ತೋರುತ್ತದೆ. ಅಕ್ಷರಜ್ಞಾನ ಜನಿತವಾದ ಉತ್ಸಾಹವನ್ನು ಸರಿಯಾದ ಕಾಲುವೆಗಳೊಳಕ್ಕೆ ತಿದ್ದಿ ಹರಿಯಿಸಿ ಸಫಲವನ್ನಾಗಿಸುವುದು ನಮ್ಮ ಪಂಡಿತರ ಮತ್ತು ಲೇಖಕರ ಮೇಲಿರುವ ಭಾರ.

ಕನ್ನಡದ ಪುನರುಜ್ಜೀವನ

ಎರಡನೆಯದಾಗಿ, ಈಚೆಗೆ ನಮ್ಮ ದೇಶಾಭಿಮಾನಿ ಸರಕಾರವು ವಿದ್ಯಾಪ್ರಚಾರ ಶಾಖೆಯಲ್ಲಿ ಒಂದು ಅತಿಮಹತ್ತ್ವದ ಮಾರ್ಪಾಟನ್ನು ನಡಸಿದೆ. ಈಗ ಹೈಸ್ಕೂಲು ಗಳಲ್ಲಿ ಪಾಶ್ಚಾತ್ಯವಿಜ್ಞಾನ ಬೋಧನೆಯೆಲ್ಲ ಕನ್ನಡದ ಮೂಲಕ ಆಗಬೇಕಾಗಿದೆ. ಈ ಮಾರ್ಪಾಟು ಕ್ರಮೇಣ ವ್ಯಾಪಿಸಿ ಮುಂದೆ ವಿಶ್ವವಿದ್ಯಾಲಯಕ್ಕೂ ಹರಡ ಬಹುದಾಗಿದೆ. ಆ ಸಂಸ್ಥೆಯೂ ದೇಶಭಾಷೆಯ ಪ್ರಾಧಾನ್ಯವನ್ನಂಗೀಕರಿಸಿ ಗ್ರಂಥ

ಪ್ರಕಟನೆಯ ಮೂಲಕವೂ ಇತರ ವಿಧಗಳಲ್ಲಿಯೂ ಕನ್ನಡದ ಉದ್ಧಾರಕ್ಕಾಗಿ ದುಡಿಯುತ್ತಿದೆ. ಹೀಗೆ ಸರಕಾರದ ವಿದ್ಯಾಪ್ರಚಾರ ಪದ್ಧತಿಯಲ್ಲಿ ಕನ್ನಡದ ಸ್ಥಾನವು ವಿಶಾಲವಾಗಿ ಭದ್ರಪಡುತ್ತಿದೆ. ಇದರ ಜೊತೆಗೆ ವಾರ್ತಾಪತ್ರಿಕೆಗಳೂ ವಿವಿಧ ಸಾಹಿತ್ಯ ಪತ್ರಿಕೆಗಳೂ ಹರಡಿಕೊಂಡು ಕನ್ನಡವನ್ನು ಬೆಳಸುತ್ತಿವೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪ್ರಯತ್ನದಿಂದಲೂ ಎಲ್ಲೆಲ್ಲೂ ಪ್ರವರ್ಧಮಾನವಾಗಿರುವ ಕರ್ಣಾಟಕ ಸಂಘಗಳ ಚಳವಳಗಳಿಂದಲೂ ಜನದಲ್ಲಿ ಕರ್ಣಾಟಕೋತ್ಸಾಹವು ಹಬ್ಬಿ ಹುರಿಯಾಗುತ್ತಿದೆ. ಇದು ಪಂಡಿತವರ್ಗಕ್ಕೆ ಪ್ರೋತ್ಸಾಹಕಾರಕವಾದ ಸಂಗತಿ. ಈ ನಾನಾ ಪ್ರಯತ್ನಗಳನ್ನು ತಾವು ಸಹಾನುಭೂತಿಯಿಂದಲೂ ಸ್ನೇಹದಿಂದಲೂ ನೋಡಿ, ಕನ್ನಡದಲ್ಲಿ ಆಧುನಿಕ ವಿಚಾರ ಸಾಹಿತ್ಯ ಬೆಳೆಯುವಂತೆಯೂ ವಿಜ್ಞಾನ ಬೋಧನೆಗೆ ಕನ್ನಡ ಒದಗಿಬರುವಂತೆಯೂ ಸಹಾಯ ಕೊಡುವುದು ತಮ್ಮಗಳಿಗೆ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ.

ಉತ್ತಮ ಸಾಹಿತ್ಯದಿಂದ ಉತ್ತಮ ರಾಜಕೀಯ

ಮೂರನೆಯದಾಗಿ, ಸರಕಾರಗಳು ಎಲ್ಲೆಲ್ಲೂ ಪ್ರಜಾಯತ್ತವಾಗುತ್ತಿವೆ. ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ರಾಜ್ಯಸೂತ್ರಗಳು ಸಾರ್ವಜನಿಕರಿಗೆ ಹಸ್ತಗತವಾಗುತ್ತಿವೆ. ದೇಶದ ಶಾಸನವ್ಯವಸ್ಥೆಗಳೂ ಆಡಳಿತಗಳೂ ಏರ್ಪಾಟುಗಳೂ ಕೊಂಚ ಕೊಂಚವಾಗಿಯಾದರೂ ಜನಸಾಮಾನ್ಯದ ಅಭಿಪ್ರಾಯವನ್ನು ಅನುಸರಿಸಬೇಕಾಗುತ್ತಿದೆ. ಈ ಮಾರ್ಪಾಟು ಹಿತಕರವಾಗಬೇಕಾದರೆ ಪ್ರಜಾಸಾಮಾನ್ಯದ ಮನೋಬುದ್ಧಿಗಳು ಸುಸಂಸ್ಕೃತಗಳಾಗಿರಬೇಕೆಂಬುದು ಸ್ವತಸ್ಸಿದ್ಧವಾಗಿದೆ. ನಮ್ಮ ದೇಶದ ಜೀವನಕ್ಕೆ ಚಿರಜ್ಯೋತಿಗಳಾಗಿರುವ ಸಾಹಿತ್ಯರತ್ನಗಳನ್ನು ಕಾಣದಿರುವಂಥವರು—ರಾಮನ ಪ್ರತಿಜ್ಞೆಯನ್ನರಿಯದವರು, ಯುಧಿಷ್ಠಿರನ ಸಂಕಟವನ್ನರಿಯದವರು, ನಳನ ಪರೀಕ್ಷೆಯನ್ನರಿಯದವರು, ಹರಿಶ್ಚಂದ್ರನ ಸ್ಥೈರ್ಯವನ್ನರಿಯದವರು—ಇಂಥವರು ಶಾಸನ ಸಭೆಗಳಲ್ಲಿ ಪ್ರಜಾಪ್ರತಿನಿಧಿಗಳಾಗಿ ಬಂದು ಕುಳಿತರೆ, ಅವರಿಂದ ಎಂಥ ಉದಾರ ಶಾಸನಗಳು ನಡೆದಾವು, ಎಂಥ ನಿರ್ಮಲನೀತಿಗಳು ಹೊರಟಾವು ? ಈಗ ಬರುತ್ತಿರುವ ಈ ಹೊಸ ಪ್ರಜಾಧಿಕಾರದ ಪ್ರವಾಹವು ದೇಶೋಪದ್ರವಕಾರಿಯಾಗದೆ ಕಲ್ಯಾಣ ಕಾರಕವಾಗಬೇಕಾದರೆ ಪ್ರಜಾಪ್ರತಿನಿಧಿಗಳು ಮಾತ್ರವೇ ಅಲ್ಲ, ಅವರನ್ನಾರಿಸಿ ಆ ಅಧಿಕಾರಪಟ್ಟವನ್ನು ಕಟ್ಟುವ ಪ್ರಜಾಜನರೂ ಸಹ ನೀತಿಸೂಕ್ಷ್ಮದರ್ಶಿಗಳಾಗಿಯೂ ಉದಾತ್ತಹೃದಯರಾಗಿಯೂ ಇರಬೇಕು. ಈ ಸಂಸ್ಥಿತಿಯನ್ನುಂಟುಮಾಡಬಲ್ಲ ಶಕ್ತಿಯಿರುವುದು ಉತ್ತಮ ಸಾಹಿತ್ಯಕ್ಕೆ. ಕಲ್ಲೆದೆಯನ್ನು ಕರಗಿಸುವ ಅದ್ಭುತವೂ, ಮಣ್ಣಿದೆ

ಯನ್ನು ವಜ್ರವಾಗಿಸುವ ಅದ್ಭುತವೂ ಮಹಾಕಾವ್ಯದ ರಸಕ್ರಿಯೆ. ಈ ಕ್ರಿಯೆ ನಡೆದಲ್ಲದೆ ನಮ್ಮ ಸ್ವಭಾವಗಳು ಪರಿಷ್ಕೃತವಾಗುವ ಬಗೆ ತೋರುವುದಿಲ್ಲ. ಹೀಗೆ ನಮ್ಮ ರಾಜಕೀಯದ ಉತ್ತಮತೆಗೆ ಪರಮ ಸಾಧನವಾದದ್ದು ಸಾಹಿತ್ಯಪ್ರಚಾರ. ಈ ಸಂಗತಿಯಲ್ಲಿಯೂ ಪಂಡಿತ ಲೇಖಕರ ಉತ್ಸಾಹಕ್ಕೆ ಕಾರಣ ಪ್ರತ್ಯಕ್ಷ ಕಾಣುತ್ತದೆ.

ಜಗತ್ತಿನ ವ್ಯಾಧಿಗೆ ಕಾವ್ಯಸಂಜೀವಿನಿ

ಇವೆಲ್ಲಕ್ಕಿಂತ ಮೇಲಿನದಾದ ದೃಷ್ಟಿಯೊಂದಿದೆ. ಅದು ಲೋಕಸಂಸ್ಥಿತಿಯ ದೃಷ್ಟಿ. ಈ ಕ್ಷಣದಲ್ಲಿ ಮಾನವಪ್ರಪಂಚದ ಸ್ಥಿತಿ ಭಯಂಕರವಾಗಿದೆ. ಎಲ್ಲೆಲ್ಲಿಯೂ ಸಂಕ್ಷೋಭೆ; ಎಲ್ಲೆಲ್ಲಿಯೂ ಕ್ರಾಂತಿ. ದೇಶದೇಶಕ್ಕೆ ಕಲಹ; ವರ್ಗವರ್ಗಕ್ಕೆ ಕಲಹ; ಜಾತಿಜಾತಿಗೆ ಕಲಹ. ಯಾರಿಗೂ ಯಾರಲ್ಲಿಯೂ ವಿಶ್ವಾಸವಿಲ್ಲ. ಯಾರಿಗೂ ಯಾವುದರಲ್ಲಿಯೂ ಪೂಜ್ಯ ಬುದ್ಧಿಯಿಲ್ಲ. ಭೂಮಂಡಲವೆಲ್ಲ ಮಾರಿಗುಡಿಯ ಅಂಗಳವಾಗಿದೆ. ಇಂಥಾ ಕಾಲದಲ್ಲಿ ಜನಕ್ಕೆ ಒಂದು ನೆಮ್ಮದಿಯನ್ನು, ಒಂದು ಚಿತ್ತಸ್ವಾಸ್ಥ್ಯವನ್ನು, ಒಂದು ಸಹನೆಯನ್ನು, ಒಂದು ಭರವಸೆಯನ್ನು ತಂದೊದಗಿಸುವುದೇ ಒಂದು ಮಹೋಪಕಾರ. ಮಾನವ ಹೃದಯಾಂತರಾಳದಲ್ಲಿ ಒಂದು ದಿವ್ಯಾಂಶವುಂಟು, ಒಂದು ಅಮೃತಕಣವುಂಟು, ಒಂದು ಧರ್ಮಬೀಜವುಂಟು; ಆ ಅಂತಸ್ಸಂಪತ್ತನ್ನು ಹೊರಕ್ಕೆ ತೆಗೆದಲ್ಲದೆ ಸಂತೋಷ ಶಾಂತಿಗಳಿಲ್ಲ—ಎಂದು ಜನವನ್ನು ಸಾಂತ್ವನಗೊಳಿಸಬಲ್ಲ ವಾಣಿ ಮಹಾ ಕವಿಯದು. ಪರದೈವಶ್ರದ್ಧೆಯನ್ನೂ ಆತ್ಮಸಂಯಮಪೂರ್ವಕವಾದ ಆತ್ಮವಿಶ್ವಾಸವನ್ನೂ ಪುನರುಜ್ಜೀವನಗೊಳಿಸಬಲ್ಲದಿವ್ಯವಾಣಿಯೇ,—ಭಗವಾನ್ ವ್ಯಾಸಮಹರ್ಷಿಗಳು ನಮಗೆ ದೊರಕಿಸಿರುವಂಥ ಸಂಕ್ಲುಬ್ಧ ಲೋಕಸಂದರ್ಶನವೇ— ನಮ್ಮ ಇಂದಿನ ವ್ಯಾಧಿಗೆ ಪರಮ ಸಂಜೀವಿನಿ. ಈ ಔಷಧವನ್ನು ಉಚಿತ ಪ್ರಮಾಣಗಳಲ್ಲಿ ತಕ್ಕ ಅನುಪಾನಗಳಲ್ಲಿ ಒದಗಿಸಿಕೊಡಬಲ್ಲವರು ಉಪಾಧ್ಯಾಯ ಪಂಡಿತರು. ಈ ಉದಾತ್ತವಾದ ಕರ್ತವ್ಯದೃಷ್ಟಿಗಿಂತ ಮಿಗಿಲಾದ ಸ್ಫೂರ್ತಿಸ್ಥಾನವೂ ಉತ್ಸಾಹಹೇತುವೂ ಪಂಡಿತರಿಗೂ ಲೇಖಕರಿಗೂ ಬೋಧಕರಿಗೂ ಇನ್ನೆಲ್ಲಿಯೂ ಇರಲಾರದು. ಮನುಷ್ಯಕುಲದ ಬಹಿರಂಗದ ಪೀಡೆಗಳನ್ನು ಇತರರು ಪರಿಹರಿಸುವವರಾದರೆ ಮನುಷ್ಯನ ಅಂತರಂಗವನ್ನು ಚೊಕ್ಕಟಗೊಳಿಸಿ ಆತ್ಮದ ಸೊಟ್ಟುಗಳನ್ನು ನೆಟ್ಟಗೆಮಾಡುವ ಕೆಲಸ ಸಾಹಿತ್ಯ ಬೋಧಕರದು. ಈ ಒಂದು ಯೋಗದ ಧ್ಯಾನವೇ ಪಂಡಿತರ ಸಮಾಧಾನ ಉತ್ಸಾಹಗಳಿಗೆ ಸಾಕಾದಷ್ಟು ಪರಿಪೋಷಕವೆಂದು ನಾನು ನಂಬಿದ್ದೇನೆ.

ಡಿ. ವಿ. ಗುಂಡಪ್ಪ.

ವಕ್ರೋಕ್ತಿ

ಸಂಸ್ಕೃತ ಸಾಹಿತ್ಯ ವಿಮರ್ಶೆಯಲ್ಲಿ ರಸ, ಅಲಂಕಾರ, ರೀತಿ, ಧ್ವನಿ ಮತ್ತು ವಕ್ರೋಕ್ತಿ ಎಂಬ ಐದು ಪ್ರಸ್ಥಾನಗಳಿವೆ. ಇವುಗಳಲ್ಲಿ 'ರೀತಿ' ಮತ್ತು 'ವಕ್ರೋಕ್ತಿ' ಪ್ರಸ್ಥಾನಗಳು ಒಂದು ದೃಷ್ಟಿಯಿಂದ ಬಹಳ ಮುಖ್ಯವಾದವು. ಮಿಕ್ಕ ಮೂರು ಮಾರ್ಗಗಳ ಪ್ರವರ್ತಕರಿಗೆ ಅನೇಕ ಅರ್ವಾಚೀನರು ಪ್ರಚಾರಕರಾಗಿ ನಿಂತು ಅವರ ಮತಕ್ಕೆ ಗೌರವವನ್ನೂ ಸ್ಥೈರ್ಯವನ್ನೂ ತಂದರು. ಆದರೆ ವಾಮನನೂ ಕುಂತಕನೂ ತಮ್ಮತಮ್ಮ ಮತಗಳನ್ನು ಸಮರ್ಥಿಸುವುದಕ್ಕೆ ಒಬ್ಬಂಟಿಗರಾಗಿ ನಿಲ್ಲಬೇಕಾಯಿತು; ಸುತ್ತು ಮುತ್ತಲೂ ಪ್ರಚಾರ ಹೊಂದುತ್ತಿದ್ದ ಪ್ರತಿಪಕ್ಷಗಳ ವಾದಗಳನ್ನು ಅಸಹಾಯರಾಗಿ ಖಂಡಿಸಬೇಕಾಯಿತು. ಹೀಗಿದ್ದರೂ ಇವರ ಮತಗಳು ಬಹಳ ಮಟ್ಟಿಗೆ ಸಾಹಿತ್ಯವಿಮರ್ಶಕರ ದೃಷ್ಟಿಯನ್ನು ಮಾರ್ಪಡಿಸಿ ಪ್ರಸಿದ್ಧಿಗೆ ಬಂದದ್ದು ನಿಜವಾಗಿಯೂ ಇವುಗಳ ಅಂತಃಸತ್ವವನ್ನು ಸೂಚಿಸುತ್ತದೆ.

ರಾಜಾನಕ ಕುಂತಕನೇ ವಕ್ರೋಕ್ತಿ ಮಾರ್ಗದ ಪ್ರವರ್ತಕನೆನ್ನಬಹುದಾದರೂ ವಕ್ರೋಕ್ತಿ ತತ್ವಕ್ಕೆ ಒಂದು ಇತಿಹಾಸವಿದೆ. ಪ್ರಾಯಶಃ ರಾಮಾಯಣ ಮಹಾಭಾರತಗಳ ಕಾಲದಿಂದಲೂ ಈ ಶಬ್ದವು ಪ್ರಚಾರದಲ್ಲಿದ್ದು ಕಾಲಕ್ರಮೇಣ ಅದರ ಅರ್ಥವು ಬದಲಾಯಿಸುತ್ತ ಬಂದಿರಬೇಕೆಂದು ತೋರುತ್ತದೆ. ಭಾಮಹ, ದಂಡಿ, ವಾಮನ ಇವರ ಗ್ರಂಥಗಳಲ್ಲಿ ದೊರೆಯುವ 'ವಕ್ರೋಕ್ತಿ' ಶಬ್ದದ ಅರ್ಥಕ್ಕೂ ರುದ್ರಟ, ಮಮ್ಮಟ ಮತ್ತು ಆಧುನಿಕರ ಗ್ರಂಥಗಳಲ್ಲಿ ದೊರೆಯುವ ಅರ್ಥಕ್ಕೂ ಬಹಳ ವ್ಯತ್ಯಾಸವು ಕಂಡುಬರುತ್ತದೆ. ಆದ್ದರಿಂದ ಭಾಮಹನಿಂದ ಮೊದಲುಮಾಡಿ ಆಧುನಿಕ ವಿಮರ್ಶಕರ ಕಾಲದ ವರೆಗೂ ಈ ಶಬ್ದದ ಅರ್ಥವು ಹೇಗೆ ಬದಲಾಯಿಸಿತೆಂಬುದನ್ನು ಸಂಕ್ಷೇಪವಾಗಿ ಪರಿಶೀಲಿಸುವುದು ಆವಶ್ಯಕ.

'ವಕ್ರ' ಶಬ್ದಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಈಗಿನ ಹಾಗೆ ಕೆಟ್ಟ ಅರ್ಥವಿರಲಿಲ್ಲ. ಭಾಮಹನು ಈ ಶಬ್ದವನ್ನು ಉಪಯೋಗಿಸಿರುವ ಕಡೆಗಳನ್ನೆಲ್ಲ ಪರಿಶೀಲಿಸಿದರೆ 'ವಕ್ರೋಕ್ತಿ' ಎಂದರೆ ಕಾವ್ಯದ ರಮ್ಯತೆಗೆ ಕಾರಣವಾದ ಒಂದು 'ಉಕ್ತಿಮಾರ್ಗ'ವೆಂದು ತೋರುತ್ತದೆ. ವಕ್ರೋಕ್ತಿಯನ್ನು ಕಾವ್ಯದ ಜೀವವನ್ನಾಗಿ ಪರಿಗಣಿಸುವುದರಿಂದಲೇ ಭಾಮಹನು ಸ್ವಭಾವೋಕ್ತಿಯನ್ನು ನಿರಾಕರಿಸುತ್ತಾನೆ. ವಿಷಯವೇನೇ ಆದರೂ ಅದನ್ನು ಹೇಳುವಿಕೆಯಲ್ಲಿ ಒಂದು ವಿಧವಾದ ಚಮತ್ಕೃತಿಯುಂಟು. ವಿಷಯ

ಗಳನ್ನು ಇದ್ದದ್ದಿದ್ದಹಾಗೆ ಹೇಳಿದರೆ ಯಾರಿಗೆತಾನೇ ರುಚಿಸುತ್ತದೆ? ಆ ಚಮತ್ಕೃತಿಯಿಂದ ವಿಷಯವು ಎಷ್ಟೇ ನೀರಸವಾಗಿದ್ದರೂ ಸಹೃದಯಾಹ್ಲಾದಕವಾಗಿ ಪರಿಣಮಿಸುತ್ತದೆ. ಈ "ಭಣಿತಿ ವೈಚಿತ್ರ್ಯ" ಅಥವಾ "ಉಕ್ತಿ ವೈಚಿತ್ರ್ಯ"ಕ್ಕೆ 'ವಕ್ರೋಕ್ತಿ' ಎಂದು ಹೆಸರು. ಇದರಿಂದಲೇ ಭಾಮಹನು ವೈಚಿತ್ರ್ಯವಿಲ್ಲದ ಹೇತು, ಸೂಕ್ಷ್ಮ, ಲೇಶ ಇತ್ಯಾದಿಗಳನ್ನು ಕಾವ್ಯಾಲಂಕಾರಗಳನ್ನಾಗಿ ಭಾವಿಸುವುದಿಲ್ಲ. ಮತ್ತು ಭಾಮಹನ ಮತಕ್ಕನುಸಾರವಾಗಿ 'ವಕ್ರತೆ'ಯು ಕಾವ್ಯಕ್ಕೆ ಸಾರಭೂತವಾದ ಒಂದು ಆಂತರ ಧರ್ಮ. ಈ ಆಂತರ ಧರ್ಮವು ಎಲ್ಲ ಅಲಂಕಾರಗಳಲ್ಲಿಯೂ ಇರುವುದರಿಂದಲೇ ಅಲಂಕಾರಕ್ಕೆ ಕಾವ್ಯದಲ್ಲಿ ಬಹಳ ಮುಖ್ಯವಾದ ಸ್ಥಾನವು ದೊರೆತಿದೆ. (ಕಾವ್ಯಾಲಂಕಾರ ೫-೬೬—ವಾಚಾಂ ವಕ್ರಾರ್ಥ ಶಬ್ದೋಕ್ತಿರಲಂಕಾರಾಯ ಕಲ್ಪತೇ). ಈ ಅಲಂಕಾರಗಳನ್ನು ಕಾವ್ಯದಲ್ಲಿ ಪ್ರಯೋಗಿಸುವುದರಿಂದ ಕಾವ್ಯವು ಸಂತೋಷವನ್ನುಂಟುಮಾಡುತ್ತದೆ. ಹೀಗೆ ಎಲ್ಲಾ ಅಲಂಕಾರಗಳಿಗೂ 'ವಕ್ರತೆ'ಯನ್ನೇ ಮೂಲಭೂತವಾದ ಜೀವವನ್ನಾಗಿ ಪರಿಗಣಿಸಿ ಈ ವಕ್ರೋಕ್ತಿಯ ಚಮತ್ಕೃತಿಯನ್ನು ಮಿಕ್ಕೆಲ್ಲ ಅಲಂಕಾರಗಳಿಗಿಂತ ವಿಶೇಷವಾಗಿ ಪಡೆದಿರುವ 'ಅತಿಶಯೋಕ್ತಿ'ಯನ್ನು ಅಲಂಕಾರಗಳಲ್ಲಿ ಶ್ರೇಷ್ಠವೆಂದು ಭಾಮಹನು ಭಾವಿಸುತ್ತಾನೆ. [ಕಾವ್ಯಾಲಂಕಾರ—(೨-೮೫:) ಸೈಷಾ ಸರ್ವೈವ ವಕ್ರೋಕ್ತಿಃ ಇತ್ಯಾದಿ].

'ವಕ್ರೋಕ್ತಿ'ಗೆ ಭಾಮಹನು ಕೊಟ್ಟಿರುವಷ್ಟು ಮಹತ್ವವನ್ನು ದಂಡಿಯು ಕೊಡುವುದಿಲ್ಲ. 'ವಕ್ರೋಕ್ತಿ'ಯು ಸಹೃದಯಾಹ್ಲಾದಕವೇನೋ ಹೌದು. ಆದರೆ ಅದೇ ಕಾವ್ಯದ ಜೀವವಲ್ಲ; ಅಲಂಕಾರದ ಸಾರರೂಪವಾದ ಧರ್ಮವಲ್ಲ. ಏಕೆಂದರೆ ವಕ್ರೋಕ್ತಿಗೆ ವಿರುದ್ಧವಾದ ಸ್ವಭಾವೋಕ್ತಿಯೂ ಒಂದು ಅಲಂಕಾರ; ಇದರಿಂದಲೂ ಕಾವ್ಯಕ್ಕೆ ರಮ್ಯತೆಯು ದೊರೆಯುತ್ತದೆ—ಎಂದು ಅವನು ಅಭಿಪ್ರಾಯಪಡುತ್ತಾನೆ. ಇದರಿಂದ ಕಾವ್ಯದಲ್ಲಿ 'ವಕ್ರೋಕ್ತಿ'ಯ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕಡಮೆಮಾಡಿ "ದ್ವಿಧಾ ಭಿನ್ನಂ ಸ್ವಭಾವೋಕ್ತಿರ್ವಕ್ರೋಕ್ತಿರಿತಿ ವಾಙ್ಮಯಮ್" (ಕಾವ್ಯಾದರ್ಶ—೨-೩೬೨) ಎಂದು ಸ್ವಭಾವೋಕ್ತಿಯನ್ನೂ ವಕ್ರೋಕ್ತಿಗೆ ಸಮಾನವನ್ನಾಗಿ ಪರಿಗಣಿಸಿದನು. ಮತ್ತು ದಂಡಿಯು 'ವಕ್ರೋಕ್ತಿ' ಶಬ್ದದ ಅರ್ಥವನ್ನು ಸ್ವಲ್ಪ ಸಂಕುಚಿತಮಾಡಿ "ಅಲಂಕಾರಗಳ ಆಂತರ ಧರ್ಮ"ಕ್ಕೆ ಬದಲು "ಗೊತ್ತಾದ ಕೆಲವು ಅಲಂಕಾರಗಳ ಸಮೂಹಕ್ಕೆ ಸಾಮಾನ್ಯವಾದ ಹೆಸರ"ನ್ನಾಗಿ ಒದಲಾಯಿಸಿದನು. 'ಹೃದಯಂಗಮಾ' ಎಂಬ ಕಾವ್ಯಾದರ್ಶದ ವ್ಯಾಖ್ಯಾನದಲ್ಲಿ ಈ ರೀತಿ ಹೇಳಿದೆ: "ವಕ್ರೋಕ್ತಿ ಶಬ್ದೇನ ಉಪಮಾದಯಃ ಸಂಕೀರ್ಣಪರ್ಯಂತಾಃ ಅಲಂಕಾರಾ ಉಚ್ಯಂತೇ". ಎಂದರೆ ದಂಡಿಯ ಮತಾನುಸಾರವಾಗಿ 'ವಕ್ರೋಕ್ತಿ'ಯು

ಸ್ವಭಾವೋಕ್ತಿಯನ್ನು ಬಿಟ್ಟು ಉಳಿದ ಎಲ್ಲ ಅಲಂಕಾರಗಳ ಸಾಮಾನ್ಯವಾದ ಹೆಸರು ಎಂದು ತೋರುತ್ತದೆ.

'ವಕ್ರೋಕ್ತಿ'ಯನ್ನು ಬೇರೆ ಒಂದು ಅಲಂಕಾರವನ್ನಾಗಿ ಎಣಿಸಿದವರಲ್ಲಿ ವಾಮನನೇ ಮೊದಲನೆಯವನು. ಇವನು 'ವಕ್ರೋಕ್ತಿ'ಯ ಲಕ್ಷಣವನ್ನು "ಸಾದೃಶ್ಯಾಲ್ಲಕ್ಷಣಾ ವಕ್ರೋಕ್ತಿಃ" ಎಂದು ಹೇಳಿ "ಉನ್ಮಿಮೀಲ ಕಮಲಂ ಸರಸೀನಾಂ ಕೈರವಂ ಚ ನಿಮಿಮೀಲ ಮುಹೂರ್ತಾತ್" ಎಂಬ ಶ್ಲೋಕಾರ್ಧವನ್ನು ಉದಾಹರಿಸುತ್ತಾನೆ. ಎರಡು ಪದಾರ್ಥಗಳ ಸಾದೃಶ್ಯದಿಂದ ಒಂದರ ಕ್ರಿಯೆಯನ್ನು ಇನ್ನೊಂದಕ್ಕನ್ವಯಿಸುವ ಉಪಚರಿತ (Secondary) ವಾದ ಪ್ರಯೋಗಕ್ಕೆ 'ವಕ್ರೋಕ್ತಿ' ಎಂದು ಹೆಸರು. ಮೇಲಿನ ಉದಾಹರಣೆಯಲ್ಲಿ ಉನ್ಮೀಲನ (ತೆರೆಯುವಿಕೆ) ನಿಮೀಲನ (ಮುಚ್ಚುವಿಕೆ) ಈ ಎರಡು ಕ್ರಿಯೆಗಳೂ ಕಮಲಕ್ಕೂ ಕೈರವಕ್ಕೂ ಕ್ರಮೇಣ ಅನ್ವಯಿಸುತ್ತವೆ. ಆದರೆ ಇವೆರಡಕ್ಕೂ ರೂಢಿಯಲ್ಲಿ ನೇತ್ರಕರ್ತೃಕವಾಗಿ ಪ್ರಯೋಗವಿದೆ. ನೇತ್ರಕರ್ತೃಕವಾದ ಈ ಉನ್ಮೀಲನ ನಿಮೀಲನ ಕ್ರಿಯೆಗಳನ್ನು ಕಮಲ ಮತ್ತು ಕೈರವಗಳ ಪರವಾಗಿ ಪ್ರಯೋಗಿಸುವುದು ಅಸಂಗತವಾದರೂ ಕಮಲ ಕೈರವಗಳಿಗೂ ನೇತ್ರಗಳಿಗೂ ಇರುವ ಸಾದೃಶ್ಯದಿಂದ ಲಾಕ್ಷಣಿಕವಾಗಿ ಪ್ರಯೋಗಿಸುವುದರಿಂದ ಒಂದು ವಿಧವಾದ ಚಮತ್ಕಾರವು ಉಂಟಾಗಿ ಕಾವ್ಯದ ರಮ್ಯತೆಗೆ ಕಾರಣವಾಗುತ್ತದೆ. ಹೀಗೆಯೇ

ಇಹ ಚ ನಿರಂತರನವಮುಕುಲಪುಲಕಿತಾ ಹರತಿ ಮಾಧವೀ ಹೃದಯಂ |
ಮದಯತಿ ಚ ಕೇಸರಾಣಾಂ ಪರಿಣತಮಧುಗಂಧಿ ನಿಶ್ವಸಿತಂ ||

ಇತ್ಯಾದಿ ಸ್ಥಲಗಳಲ್ಲಿಯೂ 'ವಕ್ರೋಕ್ತಿ' ಎಂಬ ಅಲಂಕಾರವನ್ನು ವಾಮನನು ಲಕ್ಷಿಸುತ್ತಾನೆ. ಹೀಗೆ ವಾಮನನ ಹೊತ್ತಿಗೆ 'ವಕ್ರೋಕ್ತಿ' ಶಬ್ದವು ತನ್ನ ಮೊದಲಿನ ವಿಶಾಲವಾದ 'ಅಲಂಕಾರಗಳ ಆಂತರ ಧರ್ಮ'ವೆಂಬ ಅರ್ಥವನ್ನು ಬಿಟ್ಟು ಕ್ರಮೇಣ ಕೆಲವು ಅಲಂಕಾರಗಳ ಸಾಮಾನ್ಯವಾದ ಹೆಸರಾಗಿ ಪರಿಗಣಿಸಲ್ಪಟ್ಟು ಕಡೆಗೆ ಬೇರೆ ಒಂದು ಅಲಂಕಾರವಾಗಿ ಮಾರ್ಪಟ್ಟಿತು.

ಹೀಗೆಯೇ ರುದ್ರಟನೂ 'ವಕ್ರೋಕ್ತಿ'ಯನ್ನು ಸ್ವತಂತ್ರ ಅಲಂಕಾರವನ್ನಾಗಿ ಎಣಿಸಿದರೂ ಅವನು 'ವಕ್ರೋಕ್ತಿ'ಗೆ ಬೇರೆ ಒಂದು ಲಕ್ಷಣವನ್ನು ಹೇಳಿ 'ವಕ್ರೋಕ್ತಿ'ಯನ್ನು ಒಂದು ಶಬ್ದಾಲಂಕಾರವನ್ನಾಗಿ ಪರಿಗಣಿಸಿದನು. ರುದ್ರಟನ ಮತವನ್ನನುಸರಿಸಿದರೆ 'ವಕ್ರೋಕ್ತಿ'ಯು ಎರಡು ವಿಧ; 'ಶ್ಲೇಷ ವಕ್ರೋಕ್ತಿ' 'ಕಾಕು ವಕ್ರೋಕ್ತಿ' ಎಂದು. ವಕ್ತೃವು ಹೇಳಿದ ಒಂದು ವಿಷಯವನ್ನು ತದಭಿಮತ ವಿರುದ್ಧವಾಗಿ ಬೇರೆ ವಿಧವಾಗಿ ಪದಚ್ಛೇದ ಮಾಡಿ ಬೇರೆ ಅರ್ಥವನ್ನು ಕಲ್ಪಿಸಿ

ಕೊಳ್ಳುವ ಚಮತ್ಕಾರಕ್ಕೆ ಶ್ಲೇಷವಕ್ರೋಕ್ತಿ ಎಂದು ಹೆಸರು. ಸ್ವಾಭಾವಿಕವಾದ ಸ್ವರವನ್ನು ಬಿಟ್ಟು ಬೇರೆ ವಿಧವಾದ ಸ್ವರದಲ್ಲಿ ಹೇಳುವುದರಿಂದ ಎಲ್ಲಿ ಅರ್ಥವು ಬೇರೆಯಾಗುವುದೋ ಅಲ್ಲಿ ಕಾಕುವಕ್ರೋಕ್ತಿ. ಈ ರೀತಿ ರುದ್ರಟನು ವಕ್ರೋಕ್ತಿಯನ್ನು ಒಂದು ಶಬ್ದಾಲಂಕಾರವನ್ನಾಗಿ ಪರಿಗಣಿಸಿ ಅದರ ಎರಡು ಭೇದಗಳಿಗೂ ಲಕ್ಷಣ ಸಹಿತ ಉದಾಹರಣೆಗಳನ್ನು ತನ್ನ ಕಾವ್ಯಾಲಂಕಾರಗ್ರಂಥದಲ್ಲಿ ಕೊಡುತ್ತಾನೆ.

ಹೀಗೆ ವಕ್ರೋಕ್ತಿ ಶಬ್ದದ ಅರ್ಥವು ಬದಲಾಯಿಸುತ್ತಿದ್ದರೂ ಕುಂತಕನು ಪುನಃ ಭಾಮಹನ ಮತವನ್ನು ಸ್ಮರಿಸಿಕೊಂಡು ವಕ್ರೋಕ್ತಿ ಶಬ್ದಕ್ಕೆ ಅದಕ್ಕಿಂತಲೂ ವಿಶಾಲವಾದ ಅರ್ಥವನ್ನು ಕಲ್ಪಿಸಿ ವಕ್ರೋಕ್ತಿ ಮಾರ್ಗವನ್ನು ಸ್ಥಾಪಿಸಿದನು. ಕಾಲಕ್ರಮೇಣ ಮಲಿನವಾಗುತ್ತ ಬಂದಿದ್ದ 'ವಕ್ರೋಕ್ತಿ'ಯ ತೇಜಸ್ಸನ್ನು ಹೆಚ್ಚಿಸಿ ಅದನ್ನೇ ಒಂದು ಸರ್ವಸಮಾನವಾದ ವಿಮರ್ಶನ ಮಾರ್ಗದ ಹೆಸರಾಗುವಂತೆ ಮಾಡಿದನು. ಈ ಕೆಲಸವು ಕುಂತಕನಿಗೆ ಬಹಳ ಕಷ್ಟವಾಗಿದ್ದಿರಬೇಕು. ಏಕೆಂದರೆ, ಕುಂತಕನು ತನ್ನ ಮತದ ತತ್ವವನ್ನು ಹರಡುವುದಕ್ಕಿಂತ ಮುಂಚೆ ಸುಮಾರು ಒಂದು ಒಂದೂವರೆ ಶತಮಾನಗಳಿಂದ ಬೇರೂರಿ ಪ್ರಸಿದ್ಧಿ ಹೊಂದಿ, ಬಹುಮತದಿಂದ ಸ್ವೀಕೃತವಾಗಿದ್ದ 'ಧ್ವನಿ' ಮಾರ್ಗಕ್ಕಿಂತ ತನ್ನ ಮತದಲ್ಲಿ ವೈಶಿಷ್ಟ್ಯವನ್ನು ತೋರಿಸಬೇಕಾಗಿ ಬಂತು. ಇಲ್ಲದಿದ್ದರೆ ಆಗಿನ ವಿದ್ವಾಂಸರು ಧ್ವನಿಮಾರ್ಗಕ್ಕಿಂತ ಬೇರೆಯಾದ ಯಾವ ತತ್ವವನ್ನೂ ಅಂಗೀಕರಿಸುತ್ತಿರಲಿಲ್ಲ. ಆದ್ದರಿಂದ ಕುಂತಕನು ಬಹಳ ಎಚ್ಚರಿಕೆಯಿಂದ ವರ್ತಿಸಬೇಕಾಯಿತು. ಧ್ವನಿ ಮಾರ್ಗವನ್ನು ಸಂಪೂರ್ಣವಾಗಿ ನಿರಾಕರಿಸಿದ್ದರೆ ಅವನಿಗೂ ಮಹಿಮಭಟ್ಟನ ಗ್ರಂಥಕ್ಕಾದ ಅಧಃಪಾತವೇ ಉಂಟಾಗಿ ಅವನ ಮತಕ್ಕೂ ಪ್ರಸಿದ್ಧ ಪ್ರಸ್ಥಾನಗಳ ಸಮೂಹದಿಂದ ಬಹಿಷ್ಕಾರವಾಗುತ್ತಿತ್ತು. ಆದ್ದರಿಂದ ಕುಂತಕನು 'ಧ್ವನಿ' ಮತ್ತು ರಸ ಇವುಗಳ ಪ್ರಾಧಾನ್ಯವನ್ನೂ ಸತ್ಯತೆಯನ್ನೂ ಒಪ್ಪಿಕೊಂಡು ತನ್ನ ಮತವನ್ನು ಪರಿಷ್ಕರಿಸಿದನು. ಇವನು ಮಹಿಮಭಟ್ಟನ ಹಾಗೆ 'ಧ್ವನಿ ಎಂಬುದು ಇಲ್ಲವೇ ಇಲ್ಲ, ಧ್ವನಿ ಧ್ವನಿ ಎಂದು ಯಾವುದನ್ನು ಕರೆಯುತ್ತಿದ್ದಾರೆಯೋ ಅದೆಲ್ಲ ಕಾವ್ಯಾನುಮಿತಿಯೆಂಬ ಅನುಮಾನದ ಒಂದು ಭೇದ ಮಾತ್ರ' ಎಂದು ಸಾರಲಿಲ್ಲ. ಈ ನಿಷ್ಠುರವಾದ ಧ್ವನಿನಿರಾಸಮಾರ್ಗವನ್ನು ಬಿಟ್ಟು ಕುಂತಕನು ಮತ್ತೊಂದು ದಾರಿಯನ್ನು ಹಿಡಿದನು. 'ಧ್ವನಿ' ಎಂಬುದೊಂದಿರಬಹುದು; ಅದನ್ನು ಯಾರೂ ನಿಷೇಧಿಸಿಲ್ಲ. ಆದರೆ ಧ್ವನಿಯೇ ಕಾವ್ಯದ ಜೀವವಲ್ಲ; 'ಧ್ವನಿ'ಯೊಂದನ್ನೇ ಕಾವ್ಯದ ಆತ್ಮವನ್ನಾಗಿ ಪರಿಗಣಿಸುವುದರಿಂದ ಸಹೃದಯರು ಮೆಚ್ಚುವ ಅನೇಕ ಪ್ರಬಂಧಗಳಿಗೆ ಕಾವ್ಯತ್ವವು ಹೋಗುತ್ತದೆ; ಧ್ವನಿಯೂ ಕಾವ್ಯದ ಜೀವ ಹೌದು; ಆದರೆ ರಸ ಅಲಂಕಾರ ರೀತಿಗಳೂ ಕಾವ್ಯದ

ಜೀವವಾಗಬಹುದು; ಅಂತಹ ಕಾವ್ಯಜೀವಿತವಾಗಲು ಅರ್ಹತೆಯುಳ್ಳ ರಸ ಅಲಂಕಾರಾದಿಗಳಿಗೆಲ್ಲ ಒಂದು ವಿಶೇಷವಿದೆ; ಅದೇ 'ವಕ್ರತೆ'; 'ವಕ್ರತೆ'ಯೇ ಕಾವ್ಯದ ಜೀವ; ಧ್ವನಿಯೂ ಒಂದು ವಿಧವಾದ ವಕ್ರತೆ; ರೀತಿ, ರಸ, ಅಲಂಕಾರ, ಎಲ್ಲವೂ ಒಂದೊಂದು ವಿಧವಾದ ವಕ್ರತೆಯಲ್ಲಿ ಪರ್ಯವಸಿತವಾಗುತ್ತವೆ—ಎಂಬುದು ಕುಂತಕನ ಅಭಿಪ್ರಾಯ.

ಕುಂತಕನು ಈ ರೀತಿ ಧ್ವನಿಯ ಸಂಪೂರ್ಣನಿರಾಸಕ್ಕಾಗಿ ಹೊರಡದೇ ಇದ್ದರೂ ಕಡೆಗೂ ಅವನ ಗ್ರಂಥಕ್ಕೆ ಶಿಕ್ಷೆಯು ತಪ್ಪಲೇ ಇಲ್ಲ; ಧ್ವನಿಮತದ ಪ್ರಾಬಲ್ಯವು ಒಟ್ಟಿನಲ್ಲಿ ತನ್ನ ಪ್ರತಾಪವನ್ನು ತೋರಿಸದೆ ಬಿಡಲಿಲ್ಲ. ಇದರಿಂದಲೇ ಕುಂತಕನ ಗ್ರಂಥವು ಸುಮಾರು ೧೩ ನೆಯ ಶತಮಾನದಿಂದ ಬಹಳ ಕಾಲದ ವರೆಗೆ ಪಂಡಿತರಿಗೆ ಸಿಕ್ಕದೆ ಅದರ ಹೆಸರು ಮಾತ್ರ ಕೇಳ ಬರುತ್ತಿತ್ತು. ಈಚೆಗೆ ಡಾ|| ಸುಶೀಲ ಕುಮಾರ್ ದೇ ಅವರು ಈ ಗ್ರಂಥವನ್ನು ಹುಡುಕಿ ಮೊದಲನೆಯ ಮೂರು 'ಉನ್ಮೇಷ'ಗಳನ್ನು ಸಂಪೂರ್ಣವಾಗಿ ಶೋಧಿಸಿ ಕಡೆಯ ಭಾಗಗಳ ಸಂಕ್ಷಿಪ್ತಸಾರದೊಡನೆ ೧೯೨೩ರಲ್ಲಿ ಮುದ್ರಣ ಮಾಡಿಸಿರುತ್ತಾರೆ. ಅಲ್ಲಿಂದೀಚೆಗೆ ಕುಂತಕನ ಗ್ರಂಥವನ್ನು ವ್ಯಾಸಂಗಮಾಡಿ ಅವನ ಕಾವ್ಯತತ್ವವನ್ನು ತಿಳಿಯುವ ಸುಯೋಗ ದೊರಕಿದೆ.

ಕುಂತಕನ ಗ್ರಂಥವು ಸಂಪೂರ್ಣವಾಗಿ ದೊರಕದೆ ಇರುವುದರಿಂದಲೂ ಕಡೆಯ ಭಾಗಗಳು ಶಿಥಿಲವಾಗಿರುವುದರಿಂದಲೂ ಗ್ರಂಥದ ಕೊನೆಯಲ್ಲಿ ಪ್ರಾಯಃ ಇದ್ದಿರಬಹುದಾದ ಕುಂತಕನ ಆತ್ಮಚರಿತವು ನಮಗೆ ಸಿಕ್ಕದೆ ಹೋಗಿದೆ. ಗ್ರಂಥದ ಆದಿಯಲ್ಲಿ ಕುಂತಕನು ತನ್ನ ವಿಷಯವಾಗಿ ಏನನ್ನೂ ಹೇಳಿಕೊಳ್ಳುವುದಿಲ್ಲ. ಈ ಕಾರಣಗಳಿಂದ ಈತನ ಕಾಲವನ್ನು ನಿರ್ಣಯಿಸುವುದು ಬಹಳ ಕಷ್ಟವಾಗಿರುತ್ತದೆ. ಆತನ ಸಮಕಾಲೀನರೋ ಮತ್ತು ಈಚಿನವರೋ ಇವನ ವಿಚಾರವಾಗಿ ಹೇಳುವ ಅಲ್ಪಸ್ವಲ್ಪ ವಿಷಯಗಳನ್ನು ಸಂಗ್ರಹಿಸಿ ಮತ್ತು ಈತನು ಹಿಂದಿನ ಯಾವ ಯಾವ ಗ್ರಂಥಗಳಿಂದ ಶ್ಲೋಕಗಳನ್ನೂ ಮಿಕ್ಕ ಕೆಲವು ವಿಷಯಗಳನ್ನೂ ತೆಗೆದುಕೊಂಡಿರುತ್ತಾನೆ ಎಂಬುದನ್ನು ಪತ್ತೆಮಾಡಿ ಇವನ ಕಾಲವನ್ನು ನಿರ್ಣಯಿಸಬೇಕಾಗಿದೆ. ಕುಂತಕನು ತನ್ನ ಗ್ರಂಥದ ವೃತ್ತಿಭಾಗದಲ್ಲಿ ಅನೇಕ ಕಾವ್ಯ ನಾಟಕ ಅಲಂಕಾರ ಗ್ರಂಥಗಳ ವಾಕ್ಯಗಳನ್ನೂ ಶ್ಲೋಕಗಳನ್ನೂ ಉದಾಹರಣೆಗಾಗಿ ಉದ್ಧರಿಸಿದ್ದರೂ ಗ್ರಂಥಕರ್ತರ ಹೆಸರುಗಳನ್ನು ಮಾತ್ರ ಹೇಳುವುದಿಲ್ಲ. ಈ ರೀತಿಯಾಗಿ ಉದ್ಧರಿಸಲ್ಪಟ್ಟಿರುವ ಗ್ರಂಥಗಳ ಪೈಕಿ ಈತನ ಕಾಲವನ್ನು ನಿರ್ಣಯಿಸಲು ಉಪಯುಕ್ತವಾದವು ಕೆಲವಿವೆ. ರಾಜಶೇಖರನ ನಾಟಕಗಳಿಂದ* ಅನೇಕ ಭಾಗಗಳು ಉದ್ಧರಿ

* ವಿದ್ಧಶಾಲಭಂಜಿಕಾ ಮತ್ತು ಬಾಲರಾಮಾಯಣ.

ಸಲ್ಪಟ್ಟಿವೆ. ಹಾಗೆಯೇ ಧ್ವನಿಕಾರನ ಮಂಗಳಶ್ಲೋಕವು ಕುಂತಕನಿಂದ ಪುನರುದ್ಧರಿಸಲ್ಪಟ್ಟಿದೆ. ಇದರಿಂದ ಕುಂತಕನು ಆನಂದವರ್ಧನ ರಾಜಶೇಖರ ಇವರಿಗಿಂತ ಅರ್ವಾಚೀನನೆಂದು ಧಾರಾಳವಾಗಿ ಹೇಳಬಹುದು. ಎಂದರೆ ಹತ್ತನೆಯ ಶತಮಾನದ ಮೊದಲನೆಯ ಅರ್ಧಕ್ಕಿಂತ ಹಿಂದೆ ಕುಂತಕನು ಇದ್ದಿರಲಾರನು. ಇದು ಕುಂತಕನ ಕಾಲಕ್ಕೆ ಮೇಲಿನ ಅವಧಿ.

ಕುಂತಕನ ವಿಷಯವಾಗಿ ವಿಮರ್ಶೆಮಾಡಲು ಯತ್ನಿಸಿದವರಲ್ಲಿ ಮೊದಲನೆಯವನು ಮಹಿಮಭಟ್ಟ. ಇವನು ಕುಂತಕನ ಗ್ರಂಥವನ್ನು ಪರಾಮರ್ಶಿಸಿ ಅವನ ಮತವನ್ನು ಖಂಡಿಸಿರುತ್ತಾನೆ. ಆದ್ದರಿಂದ ಕುಂತಕನು ಮಹಿಮಭಟ್ಟನಿಗಿಂತ ಹಿಂದಿನವನಾಗಿದ್ದಿರಬೇಕು. ಮಹಿಮಭಟ್ಟನ ಕಾಲವು ಕ್ರಿ. ಶ. ಹನ್ನೊಂದನೆಯ ಶತಮಾನದ ಆದಿಯೆಂದು ನಿರ್ಣಯಿಸಲ್ಪಟ್ಟಿದೆ. ಇದರಿಂದ ಕುಂತಕನು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ತನ್ನ ಗ್ರಂಥವನ್ನು ರಚಿಸಿರಬಹುದೆಂದು ಹೇಳಬಹುದು. ಡಾ|| ಶಂಕರನ್ ಅವರು ಕುಂತಕನು ಸುಮಾರು ೧೦೦೦ ದಿಂದ ೧೦೧೦ ರ ವರೆಗೆ ಪ್ರಸಿದ್ಧನಾಗಿದ್ದಿರಬಹುದೆಂದು ಹೇಳುತ್ತಾರೆ. ಇದು ಸರಿಯೆಂದು ತೋರುತ್ತದೆ. ಈ ನಿರ್ಣಯವನ್ನು ಸಮರ್ಥಿಸಲು ಇನ್ನೊಂದು ಆಧಾರವಿದೆ. ಕುಂತಕನ ಮತವು ಅಭಿನವಗುಪ್ತನಿಂದಲೂ ವಿಮರ್ಶಿಸಲ್ಪಟ್ಟಿದೆ. ಅಭಿನವಗುಪ್ತನು ೯೯೦ ರಿಂದ ೧೦೧೫ ವರೆಗೆ ಪ್ರಸಿದ್ಧನಾಗಿದ್ದನೆಂದು ತೋರುತ್ತದೆ. ಇವರಿಬ್ಬರ ಗ್ರಂಥಗಳನ್ನೂ ಪರಿಶೀಲಿಸಿದರೆ ಒಂದು ವಿಷಯವು ವ್ಯಕ್ತವಾಗುತ್ತದೆ. ಅಭಿನವಗುಪ್ತನೂ ಕುಂತಕನೂ ಸಮಕಾಲೀನರಾಗಿದ್ದರೂ ಕುಂತಕನು ಪ್ರಸಿದ್ಧಿ ಹೊಂದುವ ಹೊತ್ತಿಗೆ ಅಭಿನವಗುಪ್ತನು ವೃದ್ಧನಾಗಿದ್ದಿರಬಹುದೆಂದು ಹೇಳಬಹುದು. ಪ್ರಖ್ಯಾತನಾದ ಅಭಿನವಗುಪ್ತನು ಇನ್ನೂ ಅಲ್ಪವಯಸ್ಕನಾದ ಕುಂತಕನ ನವೀನಮಾರ್ಗದ ವಿಷಯದಲ್ಲಿ ತಿರಸ್ಕಾರಭಾವದಿಂದಲೋ ಎಂಬಂತೆ ಏನೊಂದು ತೀಕ್ಷ್ಣವಾದ ವಿಮರ್ಶೆಯನ್ನೂ ಮಾಡುವುದಿಲ್ಲ. ಇದಕ್ಕೆ ಕುಂತಕನು ಧ್ವನಿಯನ್ನು ಸಂಪೂರ್ಣವಾಗಿ ನಿಷೇಧಿಸದಿದ್ದುದೂ ಒಂದು ಕಾರಣವೆಂದು ತೋರುತ್ತದೆ. ಆದರೂ ಪ್ರವರ್ಧಮಾನನಾದ ಕುಂತಕನು, ತಾತನ ಉಪದೇಶವನ್ನು ತಿರಸ್ಕರಿಸಿ ನವೀನ ಮಾರ್ಗದಲ್ಲಿ ವರ್ತಿಸುವ ಆಧುನಿಕ ಯುವಕನಂತೆ, ಅವನ ಮಾರ್ಗವನ್ನು ಬಿಟ್ಟು ವಕ್ರೋಕ್ತಿ ಮಾರ್ಗದ ಸತ್ವವನ್ನು ಸಮರ್ಥಿಸುತ್ತಾನೆ.

ಕುಂತಕನು ಕಾಶ್ಮೀರದೇಶದವನು. ಇವನಿಗೆ 'ರಾಜಾನಕ' ಎಂಬ ಬಿರುದು ದೊರೆತಿತ್ತು. ಇಷ್ಟು ಹೊರತು ಈತನ ಜೀವನದ ವಿಷಯವಾಗಿ ಇನ್ನಾವ ವಿಚಾರಗಳೂ ತಿಳಿದುಬಂದಿಲ್ಲ.

'ವಕ್ರೋಕ್ತಿ ಜೀವಿತ' ಗ್ರಂಥವು ಸಂಪೂರ್ಣವಾಗಿ ದೊರಕದೆ ಇರುವುದರಿಂದ ಅದು ಎಷ್ಟಿದ್ದಿರ ಬಹುದು ಎಂಬ ವಿಚಾರವಾಗಿ ಒಂದು ವಿವಾದವು ಹುಟ್ಟಿದೆ. ನಾಲ್ಕು ಉನ್ಮೇಷಗಳಿದ್ದುವು; ಕಡೆಯ ಉನ್ಮೇಷದ ಸ್ವಲ್ಪ ಭಾಗಗಳು ಮಾತ್ರ ಹೋಗಿವೆ ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು, ಐದು ಉನ್ಮೇಷಗಳಿದ್ದು ಗ್ರಂಥದ ಕಡೆಯ ಉನ್ಮೇಷವೂ ನಾಲ್ಕನೆಯದರ ಕೆಲವು ಭಾಗಗಳೂ ನಷ್ಟವಾಗಿರಬೇಕೆಂದು ಹೇಳುತ್ತಾರೆ. ಇದನ್ನು ಹೀಗೇ ಎಂದು ತೀರ್ಮಾನಮಾಡುವುದು ಅಸಾಧ್ಯ. ಹೇಗೂ ತೀರ್ಮಾನ ಮಾಡಲು ಆಧಾರಗಳಿಲ್ಲದಿರುವುದರಿಂದ ಈ ಚರ್ಚೆಯು ಅನಾವಶ್ಯಕ. ಅಂತು ಈಗ ಲಬ್ಧವಾಗಿರುವ ಗ್ರಂಥದಲ್ಲಿ ನಾಲ್ಕು ಉನ್ಮೇಷಗಳಿವೆ. ಕಾರಿಕೆ; ಸ್ವನಿರ್ಮಿತವಾದ ವೃತ್ತಿ; ಉದಾಹರಣೆಗಾಗಿ ಇತರ ಗ್ರಂಥಗಳಿಂದ ತೆಗೆದುಕೊಂಡಿರುವ ಶ್ಲೋಕಗಳು—ಎಂದು ಗ್ರಂಥವನ್ನು ಮೂರು ಭಾಗಮಾಡಬಹುದು. ಮೊದಲನೆಯ ಉನ್ಮೇಷದಲ್ಲಿ ಕಾವ್ಯದ ಲಕ್ಷಣ, ಲಕ್ಷಣದ ವಿವರಣೆ ಮತ್ತು ಪರೀಕ್ಷೆ; ಗುಣಗಳು, ರೀತಿಗಳು ಇವುಗಳ ವಿಚಾರವಿದೆ. ಎರಡನೆಯ ಉನ್ಮೇಷದಿಂದ ಮುಂದೆ ಆರು ವಿಧವಾದ ವಕ್ರತೆಗಳ ಲಕ್ಷಣ ಮತ್ತು ಉದಾಹರಣೆಗಳಿವೆ. ಇಲ್ಲಿ ಮಧ್ಯೆಮಧ್ಯೆ ಭಾಮಹ ಮೊದಲಾದ ಹಿಂದಿನ ಗ್ರಂಥಕರ್ತರ ಮತಗಳು ಖಂಡಿಸಲ್ಪಟ್ಟಿವೆ.

ರಾಜಾನಕ ಕುಂತಕನು ಕಾವ್ಯದ ಲಕ್ಷಣವನ್ನು ಈ ರೀತಿ ಹೇಳುತ್ತಾನೆ—

ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ |
ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣಿ ||

'ವಕ್ರೋಕ್ತಿಜೀವಿತ'ದ ಮೊದಲನೆಯ ಉನ್ಮೇಷದಲ್ಲಿ ಈ ಲಕ್ಷಣದ ಪ್ರತಿಯೊಂದು ಪದಕ್ಕೂ ವಿಸ್ತಾರವಾಗಿ ಅರ್ಥವು ಹೇಳಲ್ಪಟ್ಟಿದೆ. ಅದನ್ನು ನಾವು ಈ ರೀತಿ ಸಂಗ್ರಹಿಸಬಹುದು: ವಕ್ರವಾದ (ಎಂದರೆ, ಪ್ರಸಿದ್ಧವಾದ ಮಾರ್ಗವನ್ನು ಬಿಟ್ಟು ನವ್ಯತೆಯಿಂದಲೂ ಸೌಂದರ್ಯದಿಂದಲೂ ಕೂಡಿದ) ಕವಿವ್ಯಾಪಾರಲಬ್ಧವಾದ, ಮತ್ತು ಕಾವ್ಯಜ್ಞರಿಗೆ ಆನಂದವನ್ನುಂಟುಮಾಡತಕ್ಕ ಬಂಧದಲ್ಲಿ (ಎಂದರೆ ವಾಕ್ಯ ಸಮೂಹದಲ್ಲಿ) ವ್ಯವಸ್ಥಿತವಾದ, ಶಬ್ದಾರ್ಥಯುಗಳವೇ ಕಾವ್ಯ. ಈ ಲಕ್ಷಣದಲ್ಲಿ 'ಸಹಿತೌ' ಎಂಬ ಶಬ್ದಕ್ಕೆ ಕುಂತಕನು ಒಂದು ಚಮತ್ಕಾರವಾದ ಅರ್ಥವನ್ನು ಕಲ್ಪಿಸುತ್ತಾನೆ.—"ಸಾಹಿತ್ಯಮನಯೋಃ ಶೋಭಾಶಾಲಿತಾಂಪ್ರತಿ ಕಾಪ್ಯಸೌ ಅನ್ಯೂನಾನತಿರಿಕ್ತತ್ವ ಮನೋಹಾರಿಣ್ಯವಸ್ಥಿತಿಃ | ಅನ್ಯೂನಾನತಿರಿಕ್ತತ್ವ ಮನೋಹಾರಿಣೀ,—ಪರಸ್ಪರ ಸ್ಪರ್ಧಿತ್ವ ರಮಣೀಯಾ ||" ಎಂದರೆ ವಾಚಕವಾದ ಶಬ್ದವು ವಾಚಕಾಂತರದೊಡನೆಯೂ ವಾಚ್ಯವಾದ ಅರ್ಥವು ವಾಚ್ಯಾಂತರದೊಡನೆಯೂ

ರಮಣೀಯತೆಯಲ್ಲಿಯೂ, ಸಮಯಕ್ಕೆ ತಕ್ಕಂತೆ ಇರುವಿಕೆಯಲ್ಲಿಯೂ ಪರಸ್ಪರ ಸ್ಪರ್ಧಿಸುವಂತಿರುವುದು. ಹೀಗೆಯೇ "ಬಂಧೇ ವ್ಯವಸ್ಥಿತೌ" ಎಂಬ ವಿಶೇಷಣವನ್ನೂ ವಿವರಿಸುತ್ತಾ 'ಬಂಧ'ದ ಲಕ್ಷಣವನ್ನು ಹೀಗೆ ಹೇಳುತ್ತಾನೆ—

ವಾಚ್ಯವಾಚಕಸೌಭಾಗ್ಯಲಾವಣ್ಯಪರಿಪೋಷಕಃ |
ವ್ಯಾಪಾರಶಾಲೀ ವಾಕ್ಯಸ್ಯ ವಿನ್ಯಾಸೋ ಬಂಧ ಉಚ್ಯತೇ ||

ಸೌಭಾಗ್ಯ ಮತ್ತು ಲಾವಣ್ಯ ಇವೆರಡೂ ಗುಣಗಳು. (ಇವುಗಳ ವಿಚಾರ ಮುಂದೆ ಬರುತ್ತದೆ.) ಶಬ್ದ ಮತ್ತು ಅರ್ಥಗಳ ಈ ಗುಣಕ್ಕೆ ಪರಿಪೋಷಕವಾದ ಮತ್ತು ಕಾವ್ಯ ಕರಣ ವ್ಯಾಪಾರಯುಕ್ತವಾದ ವಾಕ್ಯದ ಗ್ರಥನಕ್ಕೆ 'ಬಂಧ'ವೆಂದು ಹೆಸರು. ಸುಲಭವಾಗಿ ಹೇಳುವುದಾದರೆ, 'ಬಂಧ'ವೆಂಬ ಶಬ್ದಕ್ಕೆ ಕನ್ನಡದಲ್ಲಿ 'ಪ್ರಬಂಧ' ಎಂದರೂ ಇಂಗ್ಲೀಷಿನಲ್ಲಿ 'Composition' ಎಂದರೂ ಏನರ್ಥವೋ ಅದೇ ಅರ್ಥ.

"ತದ್ವಿದಾಹ್ಲಾದಕಾರಿಣಿ" ಎಂಬುದು "ಬಂಧೇ" ಎನ್ನುವುದಕ್ಕೆ ವಿಶೇಷಣ. ಅದರ ಅರ್ಥ 'ಕಾವ್ಯವನ್ನು ತಿಳಿದವರಿಗೆ ಎಂದರೆ ಸಹೃದಯರಿಗೆ ಸಂತೋಷವನ್ನುಂಟು ಮಾಡುವ' ಎಂದು. 'ತದ್ವಿದಾಹ್ಲಾದಕಾರಿತ್ವ' ಎಂದರೆ—

ವಾಚ್ಯವಾಚಕ ವಕ್ರೋಕ್ತಿ ತ್ರಿತಯಾತಿಶಯೋತ್ತರಮ್ |
ತದ್ವಿದಾಹ್ಲಾದಕಾರಿತ್ವಂ ಕಿಮಪ್ಯಾಮೋದ ಸುಂದರಮ್ ||

ಎಂದು ಹೇಳುತ್ತಾನೆ. ಶಬ್ದ ಅರ್ಥ ವಕ್ರತೆ ಇವೆಲ್ಲಕ್ಕಿಂತ ಬೇರೆಯಾದ ಮತ್ತು ಅತಿಶಯವಾದ, ಅವರ್ಣನೀಯವೂ ಸಹೃದಯ ಸಂವೇದ್ಯವೂ ಆಗಿ 'ರಂಜಕತ್ವ' ಎಂದು ಪ್ರಸಿದ್ಧವಾಗಿರುವ ಗುಣವನ್ನು "ತದ್ವಿದಾಹ್ಲಾದಕಾರಿತ್ವ"ವೆಂದು ಹೇಳ ಬಹುದು. ಇದರಿಂದ ಕುಂತಕನು ಸಹೃದಯರ ಅಭಿಪ್ರಾಯಕ್ಕೆ ಎಷ್ಟು ಬೆಲೆ ಕೊಟ್ಟಿದ್ದ ನೆಂಬುದು ವ್ಯಕ್ತವಾಗುತ್ತದೆ.

ಕಡೆಯಲ್ಲಿ "ವಕ್ರಕವಿವ್ಯಾಪಾರ ಶಾಲಿನಿ" ಎಂಬ ವಿಶೇಷಣದ ಅರ್ಥವನ್ನು ಪರಿಶೀಲಿಸಬಹುದು. ಇದೇ ಕುಂತಕನ ತತ್ವಕ್ಕೆ ಆಧಾರಭೂತವಾದದ್ದು. ಇದೂ 'ಬಂಧೇ' ಎಂಬುದಕ್ಕೆ ವಿಶೇಷಣ. ವಕ್ರ ಎಂದರೆ ಹೃದ್ಯ ಅಥವಾ ಸುಂದರ ಎಂದು ಅರ್ಥ. ಸುಂದರವಾದ ಕವಿವ್ಯಾಪಾರದಿಂದ ಉತ್ಕೃಷ್ಟವಾಗಿದೆ ಎಂದು ಇದರ ಅರ್ಥ.

ಈ 'ವಕ್ರತೆ' ಅಥವಾ ಸೌಂದರ್ಯವು ಕವಿಯ ಮಾತಿನಲ್ಲಿ ಹೇಗೆ ಬರುತ್ತದೆ ಎಂಬ ಪ್ರಶ್ನೆಗೆ ಕುಂತಕನು ಸೂಕ್ಷ್ಮವಾಗಿ ಉತ್ತರವನ್ನು ಸೂಚಿಸುತ್ತಾನೆ. ಕವಿಯ ಪ್ರತಿಭೆಯು ಸಾಮಾನ್ಯಜನರ ಬುದ್ಧಿಗಿಂತ ಅತಿಶಯವಾದ ಶಕ್ತಿಯುಳ್ಳದ್ದು. ಆದ್ದ ರಿಂದಲೇ, ಸಾಮಾನ್ಯರಿಗೆ ಆಗುವ ಅನುಭವಗಳಿಂದ ಅವರು ಗ್ರಹಿಸುವ ವಿಚಾರಗಳಿ ಗಿಂತಲೂ ಗಹನವಾದ ಮತ್ತು ರಮ್ಯವಾದ ವಿಚಾರಗಳನ್ನು ಕವಿಯು ಗ್ರಹಿಸಿ ಅವನ್ನೇ

ಮಿಕ್ಕವರು ಹೇಳುವುದಕ್ಕಿಂತ ರಂಜಕವಾಗಿ ಹೇಳುತ್ತಾನೆ. ಇದೇ ಕವಿಯ ಚಾತುರ್ಯ. ಕವಿಯ ಚಾತುರ್ಯ ಮಾತ್ರವಲ್ಲ—ಎಲ್ಲಾ ಕಲೆಯಲ್ಲಿಯೂ ಹೀಗೆಯೇ.

ಒಟ್ಟಿನಲ್ಲಿ ಕವಿಯ ಮುಖ್ಯವಾದ ಕೆಲಸವು 'ಅಪೂರ್ವ ಮಾರ್ಗಾನುಸರಣ' ಎಂದು ಹೇಳಿದರೆ ತಪ್ಪಾಗಲಾರದು. ಹೇಗೆಂದರೆ ವಿಷಯವು ಎಷ್ಟೇ ನೀರಸವಾಗಿದ್ದರೂ ಅದನ್ನು ಹೇಳುವ ರೀತಿಯಿಂದ ರುಚಿಸುವಂತೆ ಮಾಡಬಹುದು. ಆದರೆ ವಿಷಯವು ಎಷ್ಟೇ ಚೆನ್ನಾಗಿದ್ದರೂ ಅದನ್ನು ಸರಿಯಾಗಿ ಹೇಳದಿದ್ದರೆ ಜನರಿಗೆ ರುಚಿಸದೆ ಹೋಗಬಹುದು. ಆದ್ದರಿಂದ ಯಾವ ವಿಷಯವನ್ನೇ ಆಗಲಿ ಹೇಳುವ ರೀತಿಯಲ್ಲಿ ಒಂದು ವಿಚಿತ್ರ ಮಾರ್ಗಾನುಸರಣವೇ ಕವಿತ್ವದ ತತ್ವ ಎಂದು ಕುಂತಕನು ಅಭಿಪ್ರಾಯ ಪಡುತ್ತಾನೆ. ಈ ಮಾರ್ಗಕ್ಕೆ 'ವಕ್ರಮಾರ್ಗ' ಎಂದು ಹೆಸರಿಡುತ್ತಾನೆ—

"(ವಕ್ರತ್ವಂ ನಾಮ) ಶಾಸ್ತ್ರಾದಿಪ್ರಸಿದ್ಧ ಶಬ್ದಾರ್ಥೋಪನಿಬಂಧವ್ಯತಿರೇಕಿತ್ವಂ." ಅಥವಾ "ಪ್ರಸಿದ್ಧಪ್ರಸ್ಥಾನ ವ್ಯತಿರೇಕಿತ್ವಂ.—"

ಎಂದರೆ, ನಮ್ಮ ಮನಸ್ಸಿನ ಭಾವನೆಗಳನ್ನು ಇತರರಿಗೆ ತಿಳಿಸುವುದಕ್ಕೆ ಸಾಮಾನ್ಯವಾಗಿ ಶಾಸ್ತ್ರದಲ್ಲಿಯೂ ವ್ಯವಹಾರದಲ್ಲಿಯೂ ಯಾವ ಒಂದು ಮಾರ್ಗವನ್ನೂ ಸರಣಿಯನ್ನೂ ಅನುಸರಿಸುತ್ತೇವೋ ಅದಕ್ಕಿಂತ ಬೇರೆಯಾದ ಒಂದು ಅಪೂರ್ವತೆಯಿಂದಲೂ, ಚಮತ್ಕೃತಿ ಮತ್ತು ಆಹ್ಲಾದಕತ್ವದಿಂದಲೂ ಕೂಡಿದ ಒಂದು ಉಕ್ತಿಮಾರ್ಗವೇ 'ವಕ್ರಮಾರ್ಗ'.

ಈ ರೀತಿ 'ವಕ್ರತೆ' ಎಂದರೇನು, ಕಾವ್ಯದಲ್ಲಿ 'ವಕ್ರತೆ'ಯ ಸ್ಥಾನವಾವುದು ಎಂಬೀ ವಿಚಾರಗಳನ್ನು ಚರ್ಚಿಸಿ ಅನಂತರ 'ವಕ್ರತೆ'ಯ ಸೂಕ್ಷ್ಮ ವಿಭಾಗಗಳನ್ನು ಉದಾಹರಣೆಗಳೊಡನೆ ತೋರಿಸಲು ಪ್ರಯತ್ನಿಸುತ್ತಾನೆ. ಈ ಲೆಕ್ಕವಿಲ್ಲದಷ್ಟು ವಿಭಾಗ ಗಳನ್ನೆಲ್ಲ ವಿವರಿಸುವುದು ಅನಾವಶ್ಯಕ. ಮುಖ್ಯವಿಭಾಗಗಳನ್ನು ಮಾತ್ರ ಪರಿಶೀಲಿಸ ಬಹುದು.

'ವಕ್ರತೆ'ಯು ಆರು ವಿಧ: ವರ್ಣವಿನ್ಯಾಸವಕ್ರತೆ, ಪದಪೂರ್ವಾರ್ಧವಕ್ರತೆ, ಪದಪರಾರ್ಧವಕ್ರತೆ, ವಾಕ್ಯವಕ್ರತೆ, ಪ್ರಕರಣವಕ್ರತೆ ಮತ್ತು ಪ್ರಬಂಧವಕ್ರತೆ ಎಂದು. ಈ ಆರು ವಿಧವಾದ ವಕ್ರತೆಯಲ್ಲಿ ಪ್ರಾಚೀನರಿಂದ ಉಕ್ತವಾದ ಅಲಂಕಾರಗಳು, ರೀತಿಗಳು, ರಸ ಮತ್ತು ಧ್ವನಿಭೇದಗಳೆಲ್ಲವೂ ಅಂತರ್ಭವಿಸುತ್ತವೆ.

೧. **ವರ್ಣವಿನ್ಯಾಸವಕ್ರತೆ.**—ಹಿಂದಿನವರು ಶಬ್ದಾಲಂಕಾರವೆಂದು ಯಾವುದನ್ನು ಕರೆಯುತ್ತಾರೆಯೋ ಅದೆಲ್ಲ ವರ್ಣವಿನ್ಯಾಸವಕ್ರತೆಯಲ್ಲಿ ಅಂತರ್ಭಾವವನ್ನು ಹೊಂದುತ್ತದೆ.

೨. **ಪದಪೂರ್ವಾರ್ಧವಕ್ರತೆ.**—ಪದದ ಪೂರ್ವಾರ್ಧ, ಪ್ರಾತಿಪದಿಕ ಅಥವಾ ಧಾತು. ಇವುಗಳ ವಿನ್ಯಾಸದಲ್ಲಿನ ವೈಚಿತ್ರ್ಯಕ್ಕೆ ಪದಪೂರ್ವಾರ್ಧವಕ್ರತೆ ಎಂದು ಹೆಸರು. ಈ ವಕ್ರತೆಯಲ್ಲಿ ರೂಢಿವೈಚಿತ್ರ್ಯವಕ್ರತೆ, ಪರ್ಯಾಯವಕ್ರತೆ, ಉಪಚಾರ ವಕ್ರತೆ, ವಿಶೇಷಣವಕ್ರತೆ ಎಂದು ಮುಂತಾಗಿ ಅನೇಕ ಭೇದಗಳಿವೆ. ಇದರಲ್ಲಿ ಧ್ವನಿ ಮತ್ತು ಗುಣೀ ಭೂತ ವ್ಯಂಗ್ಯಗಳ ಭೇದಗಳೆಲ್ಲವೂ ಅಂತರ್ಭಾವವನ್ನು ಹೊಂದುತ್ತವೆ.

೩. **ಪದಪರಾರ್ಧವಕ್ರತೆ.**—ಪದದ ಪರಾರ್ಧ ಎಂದರೆ ಪ್ರತ್ಯಯ. ಆ ಪ್ರತ್ಯಯವನ್ನು ಆಶ್ರಯಿಸಿರುವ ವಕ್ರತೆಗೆ 'ಪದಪರಾರ್ಧವಕ್ರತೆ'ಯೆಂದು ಹೆಸರು. ರಸಪರಿಪೋಷಕ್ಕೋಸ್ಕರ ಅನುಸರಿಸಿರುವ ಕೆಲವು ವಿಚಿತ್ರವಾದ ಉಕ್ತಿಪ್ರಕಾರಗಳು ಇಲ್ಲಿ ವಿವರಿಸಲ್ಪಟ್ಟಿವೆ.

೪. **ವಾಕ್ಯವಕ್ರತೆ.**—ವಾಕ್ಯವಕ್ರತೆಯಲ್ಲಿ ಸಾವಿರಾರು ಭೇದಗಳಿವೆ. ಇಲ್ಲಿ ಅರ್ಥಾಲಂಕಾರಗಳೆಲ್ಲವೂ ಅಂತರ್ಭವಿಸುತ್ತವೆ.

೫. **ಪ್ರಕರಣವಕ್ರತೆ.**—ವಾಕ್ಯದ ಜೋಡಣೆಯಲ್ಲಿ ಹೇಗೆ 'ವಕ್ರತೆ'ಯು ಸಾಧ್ಯವೋ ಹಾಗೆಯೇ ಒಂದು ಪ್ರಬಂಧದಲ್ಲಿ ಬರುವ ಅನೇಕ ಸನ್ನಿವೇಶಗಳನ್ನು ಚಿತ್ರಿಸುವುದರಲ್ಲಿಯೂ ಒಂದು ವಿಧವಾದ 'ವಕ್ರತೆ'ಯು ಸಾಧ್ಯ. ಭಾಸ, ಕಾಳಿದಾಸ ಮೊದಲಾದ ಮಹಾಕವಿಗಳು ಪುರಾಣಪ್ರಸಿದ್ಧವಾದ ಕಥೆಗಳನ್ನು ಅನುಸರಿಸಿ ಕಾವ್ಯ ನಿರ್ಮಾಣಮಾಡಿದರೂ ಅನೇಕ ಪ್ರಕರಣಗಳನ್ನು ರಸಪರಿಪೋಷಕ್ಕನುಗುಣವಾಗು ವಂತೆ ಮಾರ್ಪಡಿಸಿರುತ್ತಾರೆ.* ಇದೇ ಪ್ರಕರಣ ವಕ್ರತೆ.

೬. **ಪ್ರಬಂಧ ವಕ್ರತೆ.**—ಪ್ರಬಂಧದಲ್ಲಿ ಮೇಲೆ ಹೇಳಿದ ಐದು ವಿಧವಾದ ವಕ್ರತೆಗಳನ್ನು ಆಶ್ರಯಿಸಿ ಕವಿಯು ಚಮತ್ಕಾರವನ್ನೂ ರಸಪರಿಪೋಷವನ್ನೂ ಉಂಟು ಮಾಡಿದ್ದರೂ ಒಟ್ಟಿನಲ್ಲಿ ಆ ಗ್ರಂಥದಿಂದ ಒಂದು ಮಹತ್ತತ್ತ್ವವು ವ್ಯಕ್ತವಾಗುವಂತೆ ಮಾಡಿರುತ್ತಾನೆ. ಎಂದರೆ ಪ್ರಬಂಧದಲ್ಲಿ ಅಲ್ಲಲ್ಲಿ ವರ್ಣನೆಗಳೂ. ವಿಧವಿಧವಾದ ಸನ್ನಿವೇಶಗಳೂ ಶಬ್ದಚಮತ್ಕಾರಗಳೂ ಅರ್ಥಾಲಂಕಾರಗಳೂ ಕಂಡುಬಂದರೂ, ಮತ್ತು ಕಾವ್ಯವು ಸ್ಥೂಲವಾಗಿ ಯಾವುದೋ ಒಂದು ನಾಯಕ ನಾಯಿಕೆಯರ ವ್ಯವಹಾರವಾದರೂ, ಇವೆಲ್ಲವೂ ಕಾವ್ಯದಿಂದ ಒಟ್ಟಿನಲ್ಲಿ ಹೊರಪಡುವ ತತ್ವಕ್ಕೆ ಸಾಧನಗಳು. ಈ ತತ್ವವಿಲ್ಲದಿದ್ದರೆ ಕಾವ್ಯವು ಜೀವನವನ್ನು ಉತ್ತಮಗೊಳಿಸುವುದಕ್ಕೆ ಅರ್ಹವಲ್ಲ. ಆದ್ದರಿಂದ ಅಪ್ರಯೋಜಕ. ಇಂಥ ಉದಾತ್ತತತ್ವ ಅಥವಾ ನೀತಿಯ ಸುಂದರ ಪ್ರತಿಪಾದನೆಯೇ ಪ್ರಬಂಧವಕ್ರತೆ.

---

* ಉದಾತ್ತರಾಘವದಲ್ಲಿ ಮಾಯಾಮೃಗ ವೃತ್ತಾಂತ, ಶಾಕುಂತಲದ ದೂರ್ವಾಸಪ್ರಕರಣ., ಪ್ರತಿಮಾನಾಟಕದ ಪ್ರತಿಮಾಗೃಹ, ಮತ್ತು ದಶರಥನ ಶಾಪದ ಪ್ರಕರಣ ಇತ್ಯಾದಿ.

ಅಂತೂ ಕವಿಗಳು ಕಾವ್ಯದಲ್ಲಿ ಎಷ್ಟು ವಿಧವಾದ ಸಹೃದಯಾಹ್ಲಾದಕವಾದ ಚಮತ್ಕಾರಗಳನ್ನು ಉಂಟುಮಾಡುತ್ತಾರೆಯೋ ಅದೆಲ್ಲವನ್ನೂ ಕುಂತಕನು ಆರು ವಿಧವಾದ ವಕ್ರತೆಗಳಲ್ಲಿ ಅಡಗಿಸಿದ್ದಾನೆ. ಹೀಗೆ ರಸ, ರೀತಿ, ಅಲಂಕಾರ, ಧ್ವನಿ ಇವುಗಳನ್ನು ಆಶ್ರಯಿಸಿ ಉಂಟಾಗುವ ಚಮತ್ಕಾರಗಳೆಲ್ಲವನ್ನೂ ವಕ್ರೋಕ್ತಿ ಯೊಂದರಲ್ಲೇ ಸೇರಿಸುವುದರಲ್ಲಿ ಕುಂತಕನ ಅಭಿಪ್ರಾಯವೇನು? ಕುಂತಕನ ಮತಕ್ಕನುಸಾರವಾಗಿ ಕಾವ್ಯದಲ್ಲಿ ರೀತಿ, ರಸ, ಅಲಂಕಾರ, ಧ್ವನಿ, ಇವುಗಳ ಸ್ಥಾನ ವಾವುದು? ಈ ವಿಚಾರಗಳನ್ನು ಚರ್ಚಿಸಿದರೆ 'ವಕ್ರೋಕ್ತಿ' ಮಾರ್ಗದ ಪರಿಚಯವನ್ನು ತಕ್ಕ ಮಟ್ಟಿಗೆ ಮಾಡಿಕೊಂಡ ಹಾಗಾಗುತ್ತದೆ.

ಮೇಲೆ ಸೂಚಿಸಿರುವಂತೆ ಕುಂತಕನ ಮತಕ್ಕನುಸಾರವಾಗಿ ಅಲಂಕಾರಗಳೆಲ್ಲವೂ ವಾಕ್ಯವಕ್ರತೆಯ ಭೇದಗಳಾಗಿ ಪರಿಣಮಿಸುತ್ತವೆ. ರೀತಿ, ರಸ, ಧ್ವನಿ ಇವುಗಳ ಹಾಗೆ ಅಲಂಕಾರಗಳೂ ಒಂದು ವಿಧವಾದ ವಕ್ರತೆಗೆ ಸಾಧಕವಾಗಿ ಸಹೃದಯರಿಗೆ ಸಂತೋಷವುಂಟಾಗುವಂತೆ ಕಾವ್ಯದ ರಮಣೀಯತೆಗೆ ಕಾರಣವಾಗುತ್ತವೆ. ಇದರಿಂದ ಕಾವ್ಯದಲ್ಲಿ ಅಲಂಕಾರವೇ ಮುಖ್ಯ ಎಂದು ಹೇಳುವ ಆಲಂಕಾರಿಕರ ಮಾತು ಸುಳ್ಳಾಯಿತು. ಬಾಹ್ಯವಾದ ಅಲಂಕಾರಗಳೇ ಕಾವ್ಯದ ಜೀವವೆಂದು ಹೇಳುವುದನ್ನು ಬಿಟ್ಟು ಇವೂ ಕಾವ್ಯದ ರಮಣೀಯತೆಗೆ ಕಾರಣವಾಗುತ್ತವೆ; ಆದರೆ ಆ ರಮಣೀಯತೆಗೆ ಅವುಗಳಿಗೆಲ್ಲಕ್ಕೂ ಮೂಲಭೂತವಾದ ವಕ್ರತೆಯೇ ಕಾರಣ ಎಂದು ಕುಂತಕನು ಅಭಿಪ್ರಾಯಪಡುತ್ತಾನೆ. ಈ ವಿಷಯದಲ್ಲಿ ಭಾಮಹನ ಮತವೂ ಇವನ ಮತವೂ ಒಂದೇ ಎಂದು ಹೇಳಬಹುದು. ಅಲಂಕಾರಗಳ ರಮಣೀಯತೆಗೆ ಮೂಲಭೂತವಾದ ವಕ್ರತೆಯೇ ಕಾರಣವೆಂದು ಪರಿಗಣಿಸುವುದರಿಂದ ಇವನೂ ಭಾಮಹನ ಹಾಗೆಯೇ ಸ್ವಭಾವೋಕ್ತಿಯನ್ನು ಅಲಂಕಾರವೆಂದು ಹೇಳುವುದಿಲ್ಲ.

ಅಲಂಕಾರಗಳ ಪೈಕಿ ಪ್ರೇಯಸ್, ರಸವತ್, ಊರ್ಜಸ್ವಿ, ಸಮಾಹಿತ, ಉದಾತ್ತ ಇವುಗಳ ವಿಚಾರದಲ್ಲಿ ಭಾಮಹನ ಮತವನ್ನು ಖಂಡಿಸಿ ಕುಂತಕನು ಅವೆಲ್ಲ ಅಲಂಕಾರಗಳಲ್ಲವೆಂದು ನಿರ್ಣಯಿಸುತ್ತಾನೆ. ಉಪಮೇಯೋಪಮಾ, ತುಲ್ಯಯೋಗಿತಾ ಇವುಗಳನ್ನು ಉಪಮೆಯಲ್ಲೇ ಸೇರಿಸುತ್ತಾನೆ. ದೀಪಕದ ವಿಚಾರವಾಗಿ ಭಾಮಹನ ಲಕ್ಷಣವನ್ನೂ ವಿಭಾಗವನ್ನೂ ಖಂಡಿಸುತ್ತಾನೆ.

ರೀತಿಯ ವಿಷಯದಲ್ಲಿ ಕುಂತಕನ ಮತವು ಬಹಳ ವಿಚಿತ್ರವಾಗಿದೆ. ಇವನು ರೀತಿಯ ಲಕ್ಷಣವನ್ನೂ ವಿಭಾಗವನ್ನೂ ಎಲ್ಲರಿಗಿಂತಲೂ ವಿಲಕ್ಷಣವಾಗಿ ರಚಿಸುತ್ತಾನೆ. ವೈದರ್ಭೀ ಗೌಡೀಯಾ ಈ ಎರಡು ರೀತಿಗಳಿಗೂ ಭೇದ ಗ್ರಹಣಮಾಡುವುದರಲ್ಲಿ ಇಷ್ಟವಿಲ್ಲದೆ ಭಾಮಹನು ಮೊದಲೇ ಒಂದು ಚರ್ಚೆಯನ್ನು ಪ್ರಾರಂಭಿಸಿ ದೇಶ

ಭೇದಕ್ಕನುಸಾರವಾಗಿ ರೀತಿಭೇದಗಳನ್ನು ಅಂಗೀಕರಿಸುವುದು ಅನ್ಯಾಯವೆಂದು ತನ್ನ ಮತವನ್ನು ಸೂಚಿಸಿದ್ದನು. ಆದರೆ ಅವನ ಮತವು ಊರ್ಜಿತವಾಗದೆ ಪುನಃ ದಂಡಿಯು ಈ ವಿಚಾರವನ್ನು ವಿಮರ್ಶಿಸಿ, "ದೇಶಭೇದಕ್ಕನುಸಾರವಾಗಿ ರೀತಿಭೇದಗಳನ್ನು ಅಂಗೀಕರಿಸುವುದಿಲ್ಲ; ದೇಶದ ಹೆಸರನ್ನು ಉಪಯೋಗಿಸಿ ರೀತಿಗಳಿಗೆ ಹೆಸರಿಟ್ಟಾಕ್ಷಣ ಆಯಾ ದೇಶದವರು ಆಯಾ ರೀತಿಗಳಲ್ಲೇ ಕಾವ್ಯಗಳನ್ನು ರಚಿಸುತ್ತಾರೆ ಎಂದು ಅರ್ಥವಲ್ಲ; ಮೊದಲು ಆ ರೀತಿಗಳು ಆ ದೇಶಗಳಲ್ಲಿ ಬಳಕೆಯಲ್ಲಿದ್ದುದ್ದರಿಂದ ಆ ಹೆಸರು ಬಂದಿರಬಹುದು; ಆದರೆ ನಿಜವಾಗಿಯೂ ರೀತಿಗಳಿಗೆ ಭೇದವು ಅವುಗಳಲ್ಲಿ ಅಡಗಿರುವ ಗುಣಗಳಿಗನುಸಾರವಾಗಿದೆ" ಎಂದು ವಾದಿಸಿ ಪುನಃ ಇದೇ ರೀತಿಗಳನ್ನೇ ಸ್ಥಾಪಿಸಿದನು. ಅನಂತರ ಕುಂತಕನ ಕಾಲದ ವರೆಗೆ ರೀತಿಯ ವಿಚಾರವಾಗಿ ವಿವಾದವಿರಲಿಲ್ಲ. ವೈದರ್ಭೀ ಗೌಡೀಯಾ ಇವುಗಳ ಜತೆಗೆ ಪಾಂಚಾಲೀ ಲಾಟೀ ರೀತಿಗಳು ಸೇರಿಸಲ್ಪಟ್ಟವು. ಕುಂತಕನು ರೀತಿಯ ವಿಚಾರವಾದ ಚರ್ಚೆಯನ್ನು ಪುನಃ ಪ್ರಾರಂಭಿಸಿ ರೀತಿಗಳು ದೇಶಧರ್ಮಗಳಲ್ಲ ಎಂದು ಘೋಷಿಸಿದನು. ರೀತಿಯು ದೇಶ ಧರ್ಮವಲ್ಲದ್ದರಿಂದ ರೀತಿಯ ಹೆಸರನ್ನು ದೇಶದ ಹೆಸರಿಗನುಸಾರವಾಗಿ ಇಡುವುದು ಅನ್ಯಾಯ. ಮತ್ತು ವೈದರ್ಭೀ ರೀತಿಯನ್ನು ಉತ್ತಮವನ್ನಾಗಿ ಅಂಗೀಕರಿಸಿ ಗೌಡೀಯಾ ಪಾಂಚಾಲೀ ರೀತಿಗಳನ್ನು ಮಧ್ಯಮ ಮತ್ತು ಅಧಮವನ್ನಾಗಿ ಪರಿಗಣಿಸುವುದು ತಪ್ಪು. ಉತ್ತಮ ಕಾವ್ಯಲಾಭವೇ ಕವಿಯ ಆಶಯವಾಗಿರುವುದರಿಂದ ಅದನ್ನು ರಚಿಸುವುದಕ್ಕೆ ಅನುಕೂಲಗಳನ್ನು ಕಲ್ಪಿಸುವುದು ಸರಿ; ಮಧ್ಯಮ ಮತ್ತು ಅಧಮ ರೀತಿಗಳು ಹೀಗಿರಬೇಕು ಎಂದು ನಿಯಮಗಳನ್ನು ರಚಿಸುವುದರಲ್ಲಿ ಅರ್ಥವಿಲ್ಲ. ಉತ್ತಮ ಕಾವ್ಯರಚನೆಯೇ ಕವಿಯ ಧ್ಯೇಯ; ಮಧ್ಯಮ ಮತ್ತು ಅಧಮ ರೀತಿಯಲ್ಲಿ ಕಾವ್ಯವನ್ನು ರಚಿಸಿ ಕ್ರಮೇಣ ಉತ್ತಮ ಕಾವ್ಯಗಳನ್ನು ಬರೆಯಲು ಶಕ್ತನಾಗುತ್ತಾನೆ ಎಂಬ ಮತವೂ ತಪ್ಪು. ಈ ರೀತಿ ಚರ್ಚಿಸಿ ಕುಂತಕನು ಮುಂದೆ ಮಮ್ಮಟನಿಂದ ಬರಬೇಕಾಗಿದ್ದ ರೀತಿ ತತ್ವದ ಖಂಡನೆಗೆ ಮುನ್ನುಡಿಯನ್ನು ಬರೆದನು.

ಕುಂತಕನ ಮತದ ಪ್ರಕಾರ ರೀತಿಯು ಕವಿಯ ಸ್ವಭಾವಕ್ಕನುಸಾರವಾಗಿ ಬೇರೆಯಾಗುತ್ತದೆ. ಎಂದರೆ ಅಸಂಖ್ಯಾತರಾದ ಕವಿಗಳ ಸ್ವಭಾವಕ್ಕನುಸಾರವಾಗಿ ಅಸಂಖ್ಯಾತವಾದ ರೀತಿಗಳು ಸಂಭವಿಸುತ್ತವೆಂದು ತಾತ್ಪರ್ಯವಲ್ಲ. ವಸ್ತುತಃ ಅಸಂಖ್ಯಾತವಾದರೂ ರೀತಿಗಳನ್ನು ಕವಿಯ ಮನೋಧರ್ಮ, ಶಕ್ತಿ, ವ್ಯುತ್ಪತ್ತಿ, ಅಭ್ಯಾಸಗಳಿಗನುಗುಣವಾಗಿ ಮೂರು ವಿಧವಾಗಿ ವಿಭಾಗಿಸಬಹುದು. ಈ ಮೂರು ರೀತಿಗಳಲ್ಲಿ ಇದು ಚೆನ್ನಾಗಿದೆ ಇದು ಚೆನ್ನಾಗಿಲ್ಲ ಎಂಬ ಭೇದವಿಲ್ಲ. ಮೂರೂ ಸಕ್ಕರೆ, ಹಾಲು, ಕಬ್ಬು ಇವುಗಳಿದ್ದ ಹಾಗೆ. ಅವುಗಳಿಗೆ ತಾರತಮ್ಯವಿದ್ದರೂ ಇದು

ರುಚಿ, ಇದು ರುಚಿಯಿಲ್ಲ ಎಂದು ಹೇಳುವ ಹಾಗಿಲ್ಲ. ಇಂತಹ ಮೂರು ರೀತಿಗಳಿಗೂ ಸುಕುಮಾರ, ವಿಚಿತ್ರ ಮತ್ತು ಮಿಶ್ರ (ಅಂದರೆ ಮೊದಲಿನ ಎರಡು ರೀತಿಗಳ ಬೆರಕೆ) ಎಂದು ಹೆಸರಿಡುತ್ತಾನೆ. ಈ ಮೂರು ರೀತಿಗಳಿಗೂ ಸ್ವರೂಪದಾಯಕಗಳಾಗಿ ನಾಲ್ಕು ಗುಣಗಳಿವೆ. ಅವು ಯಾವುವೆಂದರೆ, ಮಾಧುರ್ಯ, ಪ್ರಸಾದ, ಲಾವಣ್ಯ, ಮತ್ತು ಆಭಿಜಾತ್ಯ. ಇವು ವಿಶೇಷ ಗುಣಗಳು. ಈ ಗುಣಗಳು ಒಂದೊಂದು ರೀತಿಗೆ ಅನ್ವಯಿಸುವಾಗ ಒಂದೊಂದು ಅರ್ಥವನ್ನು ಕೊಡುತ್ತವೆ. ಎಂದರೆ ಮಾಧುರ್ಯಗುಣವು ಮೂರು ರೀತಿಗಳಲ್ಲಿದ್ದರೂ ಸುಕುಮಾರರೀತಿಗೆ ಅನ್ವಯಿಸುವಾಗ ಒಂದರ್ಥವನ್ನೂ ವಿಚಿತ್ರರೀತಿಗೆ ಅನ್ವಯಿಸುವಾಗ ಮತ್ತೊಂದು ಅರ್ಥವನ್ನೂ ಮಿಶ್ರರೀತಿಗೆ ಅನ್ವಯಿಸುವಾಗ ಬೇರೊಂದು ಅರ್ಥವನ್ನೂ ಕೊಡುತ್ತದೆ. ಈ ನಾಲ್ಕು ಗುಣಗಳಲ್ಲದೆ ಸಾಧಾರಣ ಗುಣಗಳೆಂಬುದಾಗಿ ಸೌಭಾಗ್ಯ ಮತ್ತು ಔಚಿತ್ಯ ಇವೆರಡನ್ನೂ ವಿವರಿಸುತ್ತಾನೆ. ಈ ಸಾಧಾರಣ ಗುಣಗಳಿಗೂ ವಿಶೇಷ ಗುಣಗಳಿಗೂ ಭೇದವು ಅವನಿಗೇ ಗೊತ್ತಿರಬೇಕು.

ಕುಂತಕನಿಗೆ ರಸ ಮತ್ತು ಧ್ವನಿಗಳ ತತ್ವವು ತಿಳಿದಿದ್ದರೂ ಅವನು ಅವುಗಳಿಗೆ ಮಿಕ್ಕವರು ಕೊಟ್ಟ ಉತ್ಕೃಷ್ಟಸ್ಥಾನವನ್ನು ಕೊಡಲಿಲ್ಲ. ಅವನಿಗೆ ಇವೂ ವಕ್ರತೆಯ ಪ್ರಕಾರಗಳು ಅಥವಾ ಭೇದಗಳು ಮಾತ್ರ. ಆದರೂ ಅಲಂಕಾರಕ್ಕಿಂತ ರಸದ ಉತ್ಕರ್ಷವನ್ನು ಒಪ್ಪಿಯೋ ಏನೋ ರಸಕ್ಕೆ ಸುಕುಮಾರ ಮತ್ತು ವಿಚಿತ್ರರೀತಿಗಳಲ್ಲಿ ಒಂದು ವಿಶೇಷವಾದ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತಾನೆ. ಈ ಪ್ರಾಮುಖ್ಯತೆಯು ಧ್ವನಿಗೂ ಇಲ್ಲ. ಧ್ವನಿಯ ಅನೇಕ ವಿಧವಾದ ಭೇದಗಳು ವಕ್ರತೆಯ ಭೇದಗಳಲ್ಲಿ ಅಂತರ್ಭಾವವನ್ನು ಹೊಂದುತ್ತವೆ.

ಕುಂತಕನ ಮತವನ್ನು ವಿಮರ್ಶಿಸಿ ಬೆಲೆಕಟ್ಟುವುದು ಬಹಳ ಕಷ್ಟವಾದ ಕೆಲಸ. ಒಂದು ಕಡೆ ಅವನ ವಿಚಿತ್ರವಾದ ವಕ್ರೋಕ್ತಿತತ್ವವು ಸಂಪೂರ್ಣವಾಗಿ ಖಂಡಿಸಲ್ಪಟ್ಟಿದೆ; ಮಹಿಮಭಟ್ಟ, ವಿಶ್ವನಾಥ, ಮೊದಲಾದವರು ಈ 'ವಕ್ರೋಕ್ತಿ'ಯು ತಲೆಯೆತ್ತದ ಹಾಗೆ ಮಾಡಲು ಪ್ರಯತ್ನಪಟ್ಟಿದ್ದಾರೆ. ಇನ್ನೊಂದುಕಡೆ ಧ್ವನಿ ಮತಕ್ಕೆ ಸಂಪೂರ್ಣ ಸಮ್ಮತಿಯನ್ನು ಕೊಡದ ಕೆಲವರೂ, ಮಮ್ಮಟ, ರುಯ್ಯಕ ಮುಂತಾದವರೂ ಇವನ ಮತದ ಮುಖ್ಯ ತತ್ವವಾದ 'ವಕ್ರೋಕ್ತಿ'ಯನ್ನು ತಳ್ಳಿದರೂ ಮಿಕ್ಕ ಬಹಳ ವಿಚಾರಗಳಲ್ಲಿ ಇವನನ್ನು ಅನುಸರಿಸಿ ಇವನ ಮತವನ್ನು ಒಪ್ಪಿರುತ್ತಾರೆ. ಅಲಂಕಾರಗಳ ವಿಚಾರವಾಗಿ ಧ್ವನಿಮಾರ್ಗದ ಪ್ರವರ್ತಕರ ಅಭಿಪ್ರಾಯಗಳನ್ನು ಒಪ್ಪದೆ ಕುಂತಕನ ಮತವನ್ನು ಸ್ವೀಕರಿಸಿರುತ್ತಾರೆ. ಒಟ್ಟಿನಲ್ಲಿ ಕಾವ್ಯವಿಮರ್ಶೆಯಲ್ಲಿ ಕುಂತಕನ ಮತವನ್ನು ಯಾರೂ ಒಪ್ಪದಿರುವಹಾಗಿಲ್ಲ. ರಸಿಕ ಶಿರೋಮಣಿಗಳಲ್ಲಿ

ಕುಂತಕನೊಬ್ಬನೆಂಬುದು ಸರ್ವಸಮ್ಮತವಾದ ವಿಷಯ. ಅವನ ಗ್ರಂಥದಲ್ಲಿ ಉದಾಹರಣೆಗಾಗಿ ತೆಗೆದುಕೊಂಡ ಕೆಲವು ಶ್ಲೋಕಗಳ ವಿಮರ್ಶೆಯನ್ನೋದಿದರೆ ಸಾಕು, ಈ ವಿಚಾರವು ವ್ಯಕ್ತವಾಗುತ್ತದೆ.

ಸೂಕ್ಷ್ಮವಾಗಿ ಪರಿಶೀಲಿಸಿದರೆ ಕುಂತಕನ ವಕ್ರೋಕ್ತಿ ತತ್ವವು ಇವರೆಲ್ಲರೂ ಹೇಳುವಷ್ಟು ವಿಚಿತ್ರವಾಗಿ ತೋರುವುದಿಲ್ಲ. ಈ ಮಾರ್ಗವನ್ನು ಉಪದೇಶಿಸುವುದರಲ್ಲಿ ಕುಂತಕನ ಆಶಯವನ್ನು ಗಮನಿಸಿದರೆ ಆಗ ನಾವು ಅದರ ಬೆಲೆಯನ್ನು ತಿಳಿಯಬಹುದು. ಅಲಂಕಾರ ಮಾರ್ಗದವರು ಅಲಂಕಾರಗಳ ಬೆಲೆಯನ್ನು ಕೊಂಡಾಡುತ್ತಾ ಅಲಂಕಾರಗಳೇ ಕಾವ್ಯದ ಜೀವವೆಂದು ವಾದಿಸುತ್ತಿದ್ದರು; ರಸ ರೀತಿ ಇವೆಲ್ಲವನ್ನೂ ಅಲಂಕಾರಗಳಲ್ಲಿಯೇ ಸಂಗ್ರಹಿಸುತ್ತಿದ್ದರು. ಕಾವ್ಯನಿರ್ಮಾಣವನ್ನು ಹೂವಿನ ಮಾಲೆಯನ್ನು ಕಟ್ಟುವಿಕೆಗೂ, ಕವಿಯನ್ನು ಹೂವನ್ನು ಕಟ್ಟುವವನಿಗೂ, ಅಲಂಕಾರಗಳನ್ನು ಹೂವುಗಳಿಗೂ ಹೋಲಿಸಿ, ಕವಿಯ ಕೆಲಸವು ಈ ಪುಷ್ಪರೂಪವಾದ ಅಲಂಕಾರಗಳನ್ನು ಆಯ್ದು ಯಾವ ಯಾವ ಹೂವನ್ನು ಯಾವ ಯಾವ ಜಾಗದಲ್ಲಿಟ್ಟು ಕಟ್ಟಿದರೆ ಚೆನ್ನಾಗುತ್ತೋ ಹಾಗೆ ಕಟ್ಟುವುದರಲ್ಲಿ ಮಾತ್ರ ಎಂದು ಹೇಳುತ್ತಿದ್ದರು. ಇದೊಂದು ವಾದ. ಇನ್ನೊಂದು ಕಡೆ ರಸವೇ ಕಾವ್ಯದ ಜೀವವೆಂದು ಇನ್ನು ಕೆಲವರು ಹೇಳುತ್ತಿದ್ದರು. ಈ ರಸೋತ್ಪತ್ತಿಗೆ ಕಾರಣವಾದ ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳನ್ನು ಕಾವ್ಯದಲ್ಲಿ ಸರಿಯಾಗಿ ಔಚಿತ್ಯದಿಂದ ಪ್ರಯೋಗಿಸುವುದು ಕವಿಯ ಕೆಲಸವೆಂದು ಇವರ ಭಾವನೆ. ಮತ್ತೊಬ್ಬರು ರೀತಿಯೇ ಕಾವ್ಯದ ಆತ್ಮ; ವಿಷಯ ಹೇಗಾದರೂ ಇರಲಿ, ಸರಿಯಾದ ರೀತಿಯಲ್ಲಿ (ವೈದರ್ಭೀ ರೀತಿಯಲ್ಲಿ) ಅದನ್ನು ಕವಿಯು ಹೇಳಬೇಕು. ಮಾಧುರ್ಯ, ಓಜಸ್ಸು, ಪ್ರಸಾದ, ಸಮತೆ, ಇತ್ಯಾದಿ ಹತ್ತು ಗುಣಗಳೂ ಕಾವ್ಯದಲ್ಲಿ ತುಂಬಿಲ್ಲದಿದ್ದರೆ ಅದು ಕಾವ್ಯವೇ ಅಲ್ಲ. ಅಲಂಕಾರಗಳೆಲ್ಲವೂ ಕಾವ್ಯಕ್ಕೆ ಹೆಚ್ಚು ಮೆಚ್ಚುಗೆಯನ್ನು ಸಂಪಾದಿಸಬಹುದು. ಆದರೆ ಗುಣವಿಶಿಷ್ಟವಾದ ಪದ ರಚನೆಯೇ ಜೀವ ಎಂದು ಇವರ ಅಭಿಪ್ರಾಯ. ಹೀಗೆಯೇ ಧ್ವನಿಮಾರ್ಗದ ಪ್ರವರ್ತಕರೂ ಕೂಡ ಮಿಕ್ಕ ಮಾರ್ಗಗಳ ತತ್ವವನ್ನು ಖಂಡಿಸಿ 'ಧ್ವನಿ' ಅಥವಾ ವ್ಯಂಗ್ಯವೇ ಕಾವ್ಯದಲ್ಲಿ ಸಾರಭೂತವಾದದ್ದು ಎಂದು ಸಾರುವುದಕ್ಕೆ ಮೊದಲು ಮಾಡುತ್ತಿದ್ದರು.

ಹೀಗೆ ಒಂದು ಮಾರ್ಗದವರು ಇನ್ನೊಂದು ಮಾರ್ಗದವರ ಮತವನ್ನು ಖಂಡಿಸಿ ತಮ್ಮ ಅಭಿಪ್ರಾಯವನ್ನು ಸ್ಥಿರಪಡಿಸುತ್ತಿದ್ದರೂ, ಸಂಪೂರ್ಣವಾಗಿ ಯಾರೊಬ್ಬರೂ ಮಿಕ್ಕವರ ಮತಗಳನ್ನು ತೊಡೆದುಹಾಕಿ ಸ್ಥಿರವಾದ ಒಂದು ಕಾವ್ಯತತ್ವವನ್ನು ಪ್ರಚುರಪಡಿಸಲು ಸಾಧ್ಯವಾಗಲಿಲ್ಲ. ಪ್ರತಿಯೊಂದು ಮಾರ್ಗದಲ್ಲಿಯೂ ಸ್ವಲ್ಪಸ್ವಲ್ಪ ಸತ್ವವಿದ್ದದ್ದರಿಂದ ಏಕಮುಖತೆಯು ಸಾಧ್ಯವಾಗಲಿಲ್ಲ. ಆನೆಯನ್ನು ನೋಡಲು

ಹೋದ ಕುರುಡರ ಹಾಗೆ ಒಬ್ಬೊಬ್ಬರೂ ಸತ್ಯದ ಒಂದೊಂದು ಅಂಶವನ್ನು ತಿಳಿದುಕೊಂಡು ಮಿಕ್ಕವರೊಡನೆ ವಾದಿಸುತ್ತಿದ್ದರು. ಇದೆಲ್ಲವನ್ನೂ ನೋಡಿ ಕುಂತಕನು ಈ ಮತಗಳೆಲ್ಲವನ್ನೂ ಒಟ್ಟುಗೂಡಿಸಿ, ಪ್ರತಿಯೊಂದು ಅಂಶದ ಪ್ರಭಾವ ವನ್ನೂ ಅರಿತು ಒಂದು ವಿಶಾಲವಾದ, ಎಲ್ಲ ತತ್ವಗಳ ಸತ್ವವನ್ನೂ ಒಳಗೊಂಡ ಕಾವ್ಯತತ್ವವನ್ನು ಪ್ರಕಾಶಪಡಿಸಲು ಪ್ರಯತ್ನಪಟ್ಟನು. ಕುಂತಕನಿಗೆ ಅಲಂಕಾರ, ರಸ, ರೀತಿ, ಧ್ವನಿ ಇವೆಲ್ಲದರ ಬೆಲೆಯೂ ಗೊತ್ತು. ಇವೆಲ್ಲ ಕಾವ್ಯದ ರಮ್ಯತೆಗೆ ಕಾರಣವೆಂಬುದೂ ಗೊತ್ತು. ಆದರೆ ಇವೆಲ್ಲಕ್ಕೂ ಸಾಧಾರಣ ಧರ್ಮವನ್ನು ಹುಡುಕಿ ಅದನ್ನು ಪ್ರಕಾಶಪಡಿಸಬೇಕೆಂಬುದು ಅವನ ಆಶಯ. ಇವೆಲ್ಲವನ್ನೂ ಬಿಟ್ಟು ವಕ್ರೋಕ್ತಿ ಎಂಬ ಒಂದು ಹೊಸ ಪದಾರ್ಥವನ್ನು ಕಂಡುಹಿಡಿದು ಅದೇ ಕಾವ್ಯದ ಜೀವ, ಇವೆಲ್ಲ ಅಲ್ಲ, ಎಂದು ಅವನು ಹೇಳುವುದಿಲ್ಲ. ಆದ್ದರಿಂದ ಇವನ ವಕ್ರೋಕ್ತಿ ಮತವು ಮಿಕ್ಕ ಮಾರ್ಗಗಳ ಸಮುಚ್ಚಯವಿದ್ದ ಹಾಗೆ; ತಿರುಳಾದ ಎಲ್ಲ ಅಂಶಗಳ ಸಂಗ್ರಹವಿದ್ದ ಹಾಗೆ. ಈ ರೀತಿ ಗ್ರಹಿಸುವುದರಿಂದ ಕುಂತಕನ ವಕ್ರೋಕ್ತಿ ಮಾರ್ಗಕ್ಕೆ ಹೆಚ್ಚಾದ ಬೆಲೆ ಕಟ್ಟಬಹುದು. ಮಿಕ್ಕ ಮಾರ್ಗಗಳ ಆಂಶಿಕ ಸತ್ಯತೆಯನ್ನು ಒಪ್ಪುವುದಕ್ಕಿಂತ ಈ ಮಾರ್ಗದ ಏಕೀಕರಣ ತತ್ಪರತೆಯನ್ನು ಮೆಚ್ಚಬಹುದು.

ಕುಂತಕನ ವಿಮರ್ಶನ ದೃಷ್ಟಿಯು ಮಿಕ್ಕವರ ಅಭಿಪ್ರಾಯಕ್ಕೆ ವಿರುದ್ಧವಾಗಿಲ್ಲ ವೆಂಬುದಕ್ಕೆ ಇನ್ನೊಂದು ಕಾರಣವಿದೆ. ಮಮ್ಮಟ, ಭಾಮಹ, ಆನಂದವರ್ಧನ, ವಿಶ್ವನಾಥ ಮೊದಲಾದ ವಿಮರ್ಶಕರು ಒಳ್ಳೆಯ ಕಾವ್ಯವೆಂದು ಯಾವುದನ್ನು ಹೊಗಳು ತ್ತಾರೆಯೋ ಅದನ್ನು ಕುಂತಕನೂ ಒಳ್ಳೆಯದೆಂದು ಹೊಗಳುತ್ತಾನೆ. ಅವರು ದುಷ್ಟವೆಂದು ಹೇಳುವ ಅನೇಕ ಕಾವ್ಯಗಳನ್ನು ಇವನೂ ದುಷ್ಟವೆಂದು ನಿರಾಕರಿಸು ತ್ತಾನೆ. ಆದ್ದರಿಂದ ಕುಂತಕನ ವಿಮರ್ಶೆಯನ್ನು ಸಹೃದಯವಿರುದ್ಧವೆಂದು ತಳ್ಳಲು ಸಾಧ್ಯವಿಲ್ಲ. ಮತ್ತು ಕುಂತಕನು ಕವಿಯ ಮನಸ್ಸನ್ನು ಅರಿತು ವಿಮರ್ಶೆಯ ನಿಯಮ ಗಳನ್ನು ರಚಿಸುತ್ತಾನೆ. ಕವಿಯ ಕಷ್ಟವನ್ನು ತಿಳಿಯದೆ ಎಂತಹ ಕಾವ್ಯವನ್ನು ರಚಿಸಿದರೂ ದುಷ್ಟವೆಂದು ಹೇಳಿ ದೋಷಗ್ರಹಣಮಾಡುವ ವಿಮರ್ಶಕರನೇಕರಿದ್ದಾರೆ. ಇಂತಹ ಕಠಿಣಮನಸ್ಕರಾದ ವಿಮರ್ಶಕರ ಕಬ್ಬಿಣದ ಕಟ್ಟುಗಳಂತಿರುವ ನಿಯಮ ಗಳನ್ನು ಅನುಸರಿಸಿ ಕಾವ್ಯವನ್ನು ರಚಿಸಲು ಅಸಾಧ್ಯವಾದುದರಿಂದಲೇ ಆಧುನಿಕರು ಆ ನಿಯಮಗಳನ್ನು ಉಲ್ಲಂಘಿಸಿ ಹಿಂದಿನವರೊಡನೆ ಜಗಳವಾಡುತ್ತಿದ್ದಾರೆ. ಇದನ್ನೆಲ್ಲ ತಪ್ಪಿಸುವುದೂ ಕುಂತಕನ ಉದ್ದೇಶ. ಅದರಿಂದಲೇ ಮಿಕ್ಕ ವಿಮರ್ಶಕರಿಗಿಂತ ಕುಂತಕನು ಕವಿಗೆ ಹೆಚ್ಚು ಸಹಾನುಭೂತಿಯನ್ನು ತೋರಿಸಿ ಅವನಿಗೆ ಹೆಚ್ಚು ಸ್ವಾತಂತ್ರ್ಯವನ್ನು ಕೊಡುತ್ತಾನೆ. ರಸ, ಅಲಂಕಾರ, ಧ್ವನಿ ಇವುಗಳೆಲ್ಲವನ್ನೂ

ಒಳಗೊಂಡ ವಕ್ರತೆಯನ್ನೇ ಕಾವ್ಯದ ಜೀವವನ್ನಾಗಿ ಪರಿಗಣಿಸುವುದರಿಂದ ಕವಿ ವ್ಯಾಪಾರಕ್ಕೆ ಮೊದಲಿಗಿಂತ ವಿಶಾಲವಾದ ಅವಧಿಯನ್ನು ಏರ್ಪಡಿಸಿದ ಹಾಗಾಯಿತು. ಕುಂತಕನ ಲಕ್ಷಣವನ್ನು ಅನುಸರಿಸಿ ಕಾವ್ಯವನ್ನು ರಚಿಸುವುದು ಮೊದಲಿಗಿಂತಲೂ ಸುಲಭ. ಹೀಗೆಂದ ಮಾತ್ರಕ್ಕೆ' ಕುಂತಕನ ಕಾವ್ಯಲಕ್ಷಣವು ಕಾವ್ಯದ ಉನ್ನತ ಸ್ಥಾನವನ್ನು ತೆಗೆದುಹಾಕಿ ಅದರ ರಚನೆಯನ್ನು ಸುಲಭಸಾಧ್ಯವನ್ನಾಗಿ ಮಾಡಿ ಅದರ ಮೊದಲಿನ ಬೆಲೆಯನ್ನು ಕಡಿಮೆಮಾಡಿದಂತಾಗಲಿಲ್ಲ. ಕವಿಯ ಪ್ರತಿಭೆಗೆ ಮೊದಲಿದ್ದ ಸಂಕುಚಿತವಾದ ಅವಧಿಯನ್ನು ಸ್ವಲ್ಪ ವಿಸ್ತಾರಮಾಡಿದ ಮಾತ್ರಕ್ಕೆ ಕಾವ್ಯದ ಮಹತ್ವಕ್ಕೆ ಕುಂದು ಬರಲು ಕಾರಣವಿಲ್ಲ. ಇದನ್ನು ಕುಂತಕನೂ ಬಹು ಸ್ವಾರಸ್ಯವಾಗಿ ಸೂಚಿಸುತ್ತಾನೆ. 'ವಕ್ರತೆ' ಎಂದರೆ ಪ್ರಾಕೃತವಾದ ನೀರಸವಾದ ಮಾರ್ಗದ ಬದಲಾವಣೆ. ಈ ಬದಲಾವಣೆಯು ಎರಡು ವಿಧವಾಗಿರಬಹುದು. ಒಂದೊಂದು ಸಲ ವಕ್ರತೆಯು ಸಹೃದಯರ ಮೆಚ್ಚಿಕೆಗೆ ಪಾತ್ರವಾಗಬಹುದು. ಒಂದೊಂದು ಸಲ ಆಗದಿರಬಹುದು. ನಾವು ಶುಕ್ಲಪಕ್ಷದ ಚಂದ್ರನ ಕೊಂಕಾದ ಬಿಂಬವನ್ನು ನೋಡಿ ಆನಂದಪಡಬಹುದು; ಆದರೆ ಅದೇ ರೀತಿ ಕೊಂಕಾದ ನಾಯಿಯ ಬಾಲವನ್ನು ವರ್ಣಿಸಿ ಹೊಗಳುವುದಿಲ್ಲ. ವಕ್ರತೆಯೂ ಹೀಗೆಯೇ. ಎಲ್ಲಾ ವಿಧದಲ್ಲಿಯೂ ಪ್ರಸಿದ್ಧವಾದ ಮಾರ್ಗವನ್ನು ಬಿಟ್ಟು ವ್ಯತಿರಿಕ್ತವಾಗಿ ವರ್ತಿಸುವವನನ್ನು ಹುಚ್ಚನೆಂದು ಕರೆಯುತ್ತಾರೆ. ಆದಕಾರಣ ಕುಂತಕನು ಸಹೃದಯಾಹ್ಲಾದಕವಾದ ವಕ್ರತೆಯನ್ನೇ ಕಾವ್ಯದ ಆತ್ಮವನ್ನಾಗಿ ಪರಿಗಣಿಸುತ್ತಾನೆ. ಇದರಿಂದ ಧ್ವನಿಮಾರ್ಗದವರು ಕಾವ್ಯವಿಮರ್ಶೆಯಲ್ಲಿ ಸಹೃದಯರ ಅನುಭವಕ್ಕೆ ಹೇಗೆ ಬೆಲೆ ಕೊಡುತ್ತಾರೆಯೋ ಅದೇ ರೀತಿ ಕುಂತಕನೂ ಕೂಡ ಸಹೃದಯರ ಅನುಭವವನ್ನು ಪ್ರಮಾಣವನ್ನಾಗಿ ಸ್ವೀಕರಿಸುತ್ತಾನೆ.

'ವಕ್ರೋಕ್ತಿ ಜೀವಿತ'ವನ್ನೋದಿದವರಿಗೆಲ್ಲ ಅದರ ಶೈಲಿಯು ಒಪ್ಪಿದೆ. ವೃತ್ತಿಯಂತೂ ಬಹಳ ಚೆನ್ನಾಗಿದೆ. ಇಷ್ಟು ಒಳ್ಳೆಯ ಶೈಲಿಯಲ್ಲಿ ಬರೆಯಲು ಶಕ್ತನಾದ ಕುಂತಕನು ಒಂದು ಗದ್ಯಕಾವ್ಯವನ್ನಾದರೂ ಬರೆಯಲಿಲ್ಲವಲ್ಲ ಎನ್ನಿಸುತ್ತದೆ. ಅಥವಾ ಬರೆದನೋ ಏನೋ! ಯಾರಿಗೆ ಗೊತ್ತು? ಸಂಸ್ಕೃತ ಸಾಹಿತ್ಯದ ಎಷ್ಟೋ ಅಮೂಲ್ಯ ರತ್ನಗಳು ಮಾಯವಾಗಿರುವಂತೆ ಅದೂ ಮಾಯವಾಗಿರಬಹುದು. ಇದುವರೆಗೆ ಈ 'ವಕ್ರೋಕ್ತಿ ಜೀವಿತ' ಗ್ರಂಥವೂ ಸಿಕ್ಕದೆ ಸುಮ್ಮನೆ ಅಲ್ಲಿ ಇಲ್ಲಿ ಕುಂತಕನ ಹೆಸರು ಮಾತ್ರ ಕೇಳಿಬರುತ್ತಿರಲಿಲ್ಲವೆ?

"ವಕ್ರಾನುರಂಜನೀಮುಕ್ತಿಂ ಚಂಚೂಮಿವ ಪುಟೇ ವಹನ್ ।
ಕುಂತಕಃ ಕ್ರೀಡತಿ ಸುಖಂ ಕೀರ್ತಿಸ್ಫಟಿಕ ಪಂಜರೇ" ॥

ಎಸ್. ವಿ. ಶ್ರೀನಿವಾಸ ರಾಘವಾಚಾರ್.

'ಅರವಿಂದ'

"ಕೈ-ಲಾ-ಸಾ-ಧಿ-ಪ-ತಿ . . . . ಜಯಾ . . . . ಜಯಾ-, ಕೈ-ಲಾ-ಸಾ-ಧಿ-ಪ-ತಿ, ಜೈ ಗೌರೀಶಂಕರ . . . . ಕಾಶಿ ವಿಶ್ವನಾಥ . . . ."

"ಮುಂದಕ್ಕೆ ಹೋಗಿಬಾಪ್ಪ!"

"ತಾಯಿಾ, ಭಿಕ್ಷ . . . ."

"ಎಷ್ಟು ಹೊತ್ತಿಗೋ ಬರೋದು? ಎಲ್ಲರಿಗೂ ಊಟವಾಯಿತು."

". . . . ಕೈ-ಲಾ-ಸಾ-ಧಿ-ಪ-ತೇ . . . . ಜಯಾ . . . ."

"ಒಳ್ಳೇ ಮೊಂಡರು, ಕೊಟ್ಟ ಸಾಲ ಇವರಿಗೆ! ಹೋಗು ಎಂದರೂ ಹೋಗುವುದಿಲ್ಲ" ಎಂದು ಲೊಟಗುಟ್ಟುತ್ತಾ ಬಂದು ಒಬ್ಬಾಕೆ ಅಕ್ಕಿ ಹಾಕಿ, ಒಳಗೆ ಹೋಗುವಾಗ ಅಂಗಳದ ಕಡೆ ಬಾಗಿಲು ಹಾಕಿದ್ದುದನ್ನು ನೋಡಿ, "ಇದೇನು ಇವತ್ತು ಇಷ್ಟು ಹೊತ್ತಾದರೂ ಗುಂಡಮ್ಮ ಮನೆಗೆ ಬಂದಿಲ್ಲ" ಎಂದುಕೊಂಡಳು.

ಗುಂಡಮ್ಮ ವಾಸ್ತವವಾಗಿ ಒಳಗೇ ಇದ್ದಳು. ಮನೆಯಲ್ಲಿ ಇಲ್ಲವೆಂದುಕೊಂಡಾಕೆ ಬಾಗಿಲನ್ನು ತಳ್ಳಿ ನೋಡಿದ್ದರೆ ನಿಜಾಂಶವು ಗೊತ್ತಾಗುತ್ತಿತ್ತು. ಆದರೆ ಅವಳಿಗೆ ಹಾಗೆ ನೋಡಬೇಕಾದ ಪ್ರಮೇಯವಿರಲಿಲ್ಲ. ಗುಂಡಮ್ಮ ಒಳಗಿದ್ದು ಬಾಗಿಲು ಮುಚ್ಚುವುದೆಂದರೆ ಯಾರ ಮನಸ್ಸಿಗೂ ಹೊಳೆಯದ ವಿಷಯ ಅದು. ಆ ವಠಾರದಲ್ಲಿದ್ದ ಹತ್ತು ಸಂಸಾರಗಳಲ್ಲಿ ದೊಡ್ಡವರು ಚಿಕ್ಕವರಾದಿಯಾಗಿ ಎಲ್ಲರಿಗೂ ಗುಂಡಮ್ಮನ ಸ್ವಭಾವ ಮನವರಿಕೆಯಾಗಿತ್ತು. ಮನೆಯಲ್ಲಿದ್ದರೆ ಬಾಗಿಲು ತೆಗೆದಿರುವುದು, ಹೊರಗೆ ಹೋದರೆ ಬಾಗಿಲು ಮುಂದಕ್ಕೆ ಹಾಕಿಕೊಂಡು ಹೋಗುವುದು, ಅಷ್ಟೆ!

ಆ ಬಾಗಿಲು ಬೀಗವನ್ನು ಕಂಡದ್ದೇ ಇಲ್ಲ! ಅದಕ್ಕೆ ಎರಡು ಕಾರಣ. ಅಷ್ಟು ಜನಗಳ ನಡುವೆ ಇದ್ದ ತನ್ನ ಮನೆಗೆ ಯಾರೂ ಕಳ್ಳತನಕ್ಕೆ ಬರುವುದಿಲ್ಲ. ಒಂದುವೇಳೆ ಬಂದರೂ, ಅಲ್ಲಿದ್ದ ಎರಡು ಒಡಕು ಪಾತ್ರೆ, ಮುರುಕು ಮರ, ಒಂದು ಹರಕು ಸೀರೆ, ಇವುಗಳ ವಿಷಯ ಗುಂಡಮ್ಮನನ್ನು ಎಂದೂ ಬಾಧಿಸಿದಂತೆ ತೋರಲಿಲ್ಲ.

ಗುಂಡಮ್ಮ ಒಂಟಿಯಾಗಿದ್ದರೂ, ಅವಳ ಜೀವನ ಒಂಟಿಯಾಗಿರಲಿಲ್ಲ. ನೆರೆಹೊರೆಯವರ . . . . ಅಷ್ಟೇ ಏಕೆ, ಊರಿನ ಬಹುಜನರ ಕಷ್ಟಸುಖಗಳೊಡನೆ ಅದು ಮಿಳಿತವಾಗಿದ್ದಿತು. ಮದುವೆಯಿಂದ ಮಸಣದವರೆಗೆ ಗುಂಡಮ್ಮನಿಲ್ಲದ ಜಾಗವಿಲ್ಲ. ಅವಳಿಗೆ ಯಾವಾಗಲೂ ಬಿಡುವಿಲ್ಲ. ಇವತ್ತು ಅವರ ಮನೆಯಲ್ಲಿ ಮದುವೆ; ಹಪ್ಪಳ, ಸಂಡಿಗೆ, ಚಕ್ಕುಲಿಹಿಟ್ಟು ಮೊದಲಾದುವೆಲ್ಲಾ ಆಗಬೇಕು; ಅಣಿಮಾಡುವುದಕ್ಕೆ ಮೊದಲಾದರೆ,

ಬೀಗರು ಹೊರಟುಹೋಗುವವರೆಗೂ ಅವಳಿಗೆ ಒಂದುಕ್ಷಣ ಪುರುಸೊತ್ತಿಲ್ಲ. ತನ್ನ ಮನೆಯ ಕೆಲಸದಂತೆ ಶ್ರದ್ಧೆಯಿಂದ ಮಾಡುವುದು ಅವಳ ಸ್ವಭಾವ. ಮದುವೆ ಮುಗಿದರೆ ಮನೆಯುವರಿಗೆ ಬಿಡುವು. ಆದರೆ ಗುಂಡಮ್ಮನಿಗಿಲ್ಲ! ಆ ವೇಳೆಗೆ ಮತ್ತೊಂದು ಮದುವೆಯೋ ಮುಂಜಿಯೋ ಏನಾದರೂ ಒಂದು ಸಿದ್ಧವಾಗಿರುತ್ತಿತ್ತು. ಅವಳ ಮುರುಕು ಮನೆಯಲ್ಲಿ ಎಷ್ಟು ಮದುವೆ ಮುಂಜಿಗಳ ಹಪ್ಪಳ ಸಂಡಿಗೆಗಳು ತಯಾರಾಗಿದ್ದುವೋ ದೇವರೇ ಬಲ್ಲ!

ನಾನು ಗುಂಡಮ್ಮನನ್ನು ಮೊದಲು ನೋಡಿದ್ದು ನಮ್ಮ ಸಂಬಂಧಿಗಳೊಬ್ಬರ ಮನೆಯಲ್ಲಿ. ಅವರ ಮಗಳು ಖಾಯಿಲೆಯಾಗಿ ಆಸ್ಪತ್ರೆಯಲ್ಲಿದ್ದಳು. ಮನೆಯಲ್ಲಿ ಇನ್ನಾರೂ ಹೆಂಗಸರಿಲ್ಲ. ಯಜಮಾನಿ ಮನೆಗೆಲಸಗಳನ್ನು ಮುಗಿಸಿ ಇತರ ಮಕ್ಕಳು, ಕೋರ್ಟು ಕಛೇರಿಗಳಿಗೆ ಹೋಗುವವರು, ಇವರನ್ನೆಲ್ಲಾ ಸುದಾರಿಸಿ ಆಸ್ಪತ್ರೆಗೆ ತಿರುಗುವುದೆಂದರೆ ಅಸಾಧ್ಯವೇ ಸರಿ. ಆ ಸಮಯದಲ್ಲಿ ಗುಂಡಮ್ಮ ಅವರಿಗೆ ಮಾಡಿದ ಸಹಾಯ ಎಂದಿಗೂ ಮರೆಯುವಂತಹುದಲ್ಲ. ಹಗಲೂ ರಾತ್ರಿ, ಆಸ್ಪತ್ರೆಗೆ ಹಾಲು ಕಾಫಿ ಗಂಜಿ ಮೊದಲಾದುವನ್ನು ಹೊತ್ತು ಅಲೆಯುವುದು, ರಾತ್ರಿ ಅಲ್ಲೇ ಮಲಗಿದ್ದು ಮಧ್ಯಾಹ್ನ ಹುಡುಗಿಗೆ ಆಹಾರವನ್ನು ಕೊಟ್ಟಮೇಲೆ ೧೨ ಗಂಟೆ ಮಟಮಟ ಬಿಸಿಲಿನಲ್ಲಿ, ಒಂದೂವರೆ ಮೈಲಿ ದೂರವಿದ್ದ ಮನೆಗೆ ಬರುವುದು, ಸ್ನಾನಮಾಡಿ ಆಗ ಒಂದಿಷ್ಟು ಅನ್ನ ಬೇಯಿಸಿಕೊಂಡು, ಒಂದಿಷ್ಟು ಉಪ್ಪಿನಕಾಯಿ, ಮಜ್ಜಿಗೆ ಹಾಕಿಕೊಂಡು ಊಟಮಾಡುವುದು. (ಮನೆಯವರು ಬೇರೆ ಜನವಾದ್ದರಿಂದ ಗುಂಡಮ್ಮ ಅವರ ಮನೆಯಲ್ಲಿ ಊಟಮಾಡುತ್ತಿರಲಿಲ್ಲ.) ಸಾಮಾನ್ಯವಾಗಿ ಗುಂಡಮ್ಮ ಬಳಕೆಯಾಗಿ ಓಡಾಡುತ್ತಿದ್ದುದು ಅವಳ ಸ್ವಜನಗಳಿಗಿಂತ ಇತರ ಜನರಲ್ಲೇ ಹೆಚ್ಚಾಗಿತ್ತು. ಆದರಿಂದ ಮದುವೆ ಮುಂಜಿಗಳಾಗಿ ಮನೆಯುವರೆಲ್ಲಾ ಪಂಚಭಕ್ಷ್ಯ ಪರಮಾನ್ನ ಉಂಡರೂ ಗುಂಡಮ್ಮನ ಪಾಲಿಗೆ ಮಾತ್ರ ಗೊಜ್ಜು ಅನ್ನವೇ ಆಗುತ್ತಿತ್ತು.

ಊಟವಾದ ಮೇಲೆ ಒಂದು ಘಳಿಗೆ ಸುದಾರಿಸಿಕೊಂಡು ಪುನಃ ಕಾಫಿ ತೆಗೆದುಕೊಂಡು ಹೋದರೆ, ನಾಳೆ ಮಧ್ಯಾಹ್ನವೇ ಊಟಕ್ಕೆ ಬರುತ್ತಿದ್ದುದು. ಅದುವರೆಗೂ ಆ ಪ್ರಾಣಿ ಬಾಯಿಗೆ ಒಂದು ತೊಟ್ಟು ನೀರೂ ಸಹ ಹಾಕುವಂತಿರಲಿಲ್ಲ.

ಈ ದಿನಚರಿ ಸುಮಾರು ಮೂರು ತಿಂಗಳು ನಡೆದಿರಬಹುದು. ಹುಡುಗಿಗೆ ಹುಷಾರಾಗಿ ಮನೆಗೆ ಬಂದ ದಿನ ತಾಯಿಗಿಂತಲೂ ಗುಂಡಮ್ಮನೇ ಹೆಚ್ಚಾಗಿ ಸಂತೋಷಪಟ್ಟು, ತನ್ನ ಶ್ರಮವು ಈಗ ಸಾರ್ಥಕವಾಯಿತೆಂದು ದೇವರನ್ನು ಕೊಂಡಾಡುತ್ತ, ಹೊತ್ತ ಹೊರೆಯನ್ನು ಇಳುಕಿದಂತೆ ನಿರಾತಂಕವಾಗಿ ತನ್ನ ಮನೆಗೆ ಹೋಗಿ ರಾಶಿಯಾಗಿ ಬಿದ್ದಿದ್ದ ಧೂಳನ್ನು ಗುಡಿಸಿಹಾಕಿ, ಆರಾಮವಾಗಿ ಮಲಗಿಕೊಂಡು ಕಣ್ಣು ತುಂಬ ನಿದ್ರೆಮಾಡಿದಳು.

ನಾನು ಎರಡು ಮೂರು ದಿವಸ, ಪೇಟೆ ಕಡೆ ಹೋಗಿ ಹಿಂದಿರುಗಿ ಬರುತ್ತಿರುವಾಗ ದಾರಿಯಲ್ಲಿ, ತಡಪು ಸೀರೆಯನ್ನು ಸುತ್ತಿ, ಉದ್ದವಾಗಿ ಮುಸುಕು ಹಾಕಿಕೊಂಡು ಆಸ್ಪತ್ರೆಯಿಂದ ಮನೆಗೆ ಬರುತ್ತಿರುವ ಗುಂಡಮ್ಮನನ್ನು ನೋಡಿದ್ದೆ. ಉರಿಬಿಸಿಲು, ಕೆಳಗಡೆ ಕಾದು ಅಂಟುತ್ತಿರುವ ಟಾರು ರಸ್ತೆ. ಬರಿಯಕಾಲಿನಲ್ಲಿ, ಬೆವರು ಹರಿಸುತ್ತ ನಡೆದುಬರುತ್ತಿದ್ದರೂ, ಅವಳ ಮುಖದಲ್ಲಿ ಮುಗುಳು ನಗೆಯು ಮಾತ್ರ ಮರೆಯಾಗಿರಲಿಲ್ಲ. ನಾನು ಗಾಡಿಯನ್ನು ನಿಲ್ಲಿಸಿ "ಹೇಗಿದ್ದಾಳೆ ಗುಂಡಮ್ಮ ನಿಮ್ಮ ಮಗಳು ?" ಎಂದು ಕೇಳಿದೆ. ಗುಂಡಮ್ಮ ನಗುತ್ತ "ನೀನೂ ಹಾಗೇ ಕೇಳುತ್ತೀಯಾ? ಮನೆಗೆ ಹೋದರೆ ಅವಳ ಅಪ್ಪ ಅಮ್ಮ ಹಾಗೇ ಕೇಳುತ್ತಾರೆ. ಪುಣ್ಯಾತ್ಮರ ಮಗು ಎಲ್ಲಿಯಾದರೂ ಚೆನ್ನಾಗಿರಲಿ ; ನನ್ನ ಹೆಸರು ಯಾಕೆ ಹೇಳುತ್ತೀರಿ ?—ಅಂತ ನಾನು. ನಿತ್ಯವೂ ಇದೇ ಚರ್ಚೆ ಮನೆಯಲ್ಲಿ." ಎಂದು ಹೇಳಿದಳು. 'ಮನೆ' ಎಂದರೆ ಅವರ ಮನೆ. ಗುಂಡಮ್ಮ ಯಾರ ಮನೆಯಲ್ಲಿದ್ದರೂ ಅದು ತನ್ನ ಮನೆಯಂತೆಯೇ ತಿಳಿದು ನಡೆಯುತ್ತಿದ್ದಳು. ಆದ್ದರಿಂದ ಅವಳ ಮಾತಿನಲ್ಲೂ ಅದೇ ವ್ಯಕ್ತವಾಗುತ್ತಿತ್ತು. ಇನ್ನು ಅಲ್ಲಿ ಅವಳ ಸಹಾಯದ ಆವಶ್ಯಕತೆ ಏನೂ ಇಲ್ಲದೆ ತನ್ನ ಮನೆಗೆ ಹೋಗಬೇಕಾಗುವ ವರೆಗೆ ಅವಳಿಗೆ ತನ್ನ ಆ ಮನೆಯ ನೆನಪೇ ಆಗುತ್ತಿರಲಿಲ್ಲ.

ಈ ವಿಶೇಷ ಗುಣಗಳನ್ನು ನೋಡಿ ನಾನು ಗುಂಡಮ್ಮನ ವಿಚಾರದಲ್ಲಿ ಗೌರವವನ್ನಿಟ್ಟಿದ್ದೆ. ಅಲ್ಲಿಂದ ಮುಂದೆ ಗುಂಡಮ್ಮ ನಮ್ಮ ಮನೆಗೆ ಬಂದುಹೋಗುವುದು ಹೆಚ್ಚಾಯಿತು. ಏನೂ ಕೆಲಸವಿಲ್ಲದಿದ್ದರೂ, ಆ ಬೀದಿಗೆ ಬಂದರೆ ಗುಂಡಮ್ಮ ನಮ್ಮ ಮನೆಗೆ ಬಾರದೆ ಹೋಗುತ್ತಿರಲಿಲ್ಲ. ಬಂದು ಅಲ್ಲಿ ಇಲ್ಲಿಯ ಮಾತುಗಳನ್ನು ಆಡುತ್ತ ಕುಳಿತಿದ್ದು, ಇದ್ದ ಏನಾದರೂ ಹಣ್ಣುಹಂಪಲನ್ನು ಕೊಟ್ಟರೆ ಎಷ್ಟೋ ಸಂತೋಷದಿಂದ ಬಾಯಿಗೆ ಹಾಕಿಕೊಂಡು ಹೋಗುತ್ತಿದ್ದಳು. ಸಾಮಾನ್ಯವಾಗಿ ಸ್ನೇಹ ವಿಶ್ವಾಸಗಳು ಏಕಮುಖವಾಗಿ ನಡೆದುಬರುವುದಿಲ್ಲ. ಅದರಿಂದಲೇ ನಾನು ಅವಳಲ್ಲಿ ಇಟ್ಟಿದ್ದಂತೆಯೇ ಗುಂಡಮ್ಮ ನನ್ನಲ್ಲಿ ಹೆಚ್ಚು ಆತ್ಮೀಯತೆಯನ್ನು ತೋರಿಸುತ್ತ, ತನಗೆ ಬೇಸರವಾದಾಗ, ಅಥವಾ ಮನಸ್ಸು ಏನಾದರೂ ನೊಂದಾಗ ನನ್ನನ್ನು ಹುಡುಕಿಕೊಂಡು ಬರುತ್ತಿದ್ದಳೆಂದು ಕಾಣುತ್ತದೆ. ಆ ಸಮಯಗಳಲ್ಲಿ ಅವಳು ಆಡಿದ ಕೆಲವು ಮಾತುಗಳಿಂದ ಅವಳ ಹಿಂದಿನ ಜೀವನದ ವಿಚಾರವನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೆ.

ಒಂದು ದಿನ ಅವಳು ನಮ್ಮ ಮನೆಗೆ ಬಂದಾಗ ನಾನು, "ಗುಂಡಮ್ಮ ಈ ಸಲ ಮದುವೆ ಮನೆಗಳೆಲ್ಲಾ ನಿಮ್ಮ ಓಡಾಟವಿಲ್ಲದೆ ಬಿಮ್ಮೆನ್ನುತ್ತಿತ್ತು. ಎರಡು ಮೂರು ಕಡೆಗಳಲ್ಲಿ 'ಗುಂಡಮ್ಮ ಖಾಯಿಲೆಮನೆಗೆ ಒಪ್ಪಿಕೊಂಡು ನಮಗೆ ಕೈಕೊಟ್ಟಳು.

ನಮ್ಮ ಮೇಲೆ ವಿಶ್ವಾಸ ಕಡಿಮೆಯಾಯಿತು' ಎಂದು ನನ್ನ ಸಂಗಡ ದೂರಿದರು. ಲಗ್ನಕಾಲದಲ್ಲಿ (ನಾಲ್ಕು ಕಾಸು ಸಂಪಾದನೆಯಾಗುವಂಥ ಕಾಲದಲ್ಲಿ) ನಿಮಗೆ ಅದು ಗಂಟುಬಿದ್ದಿತು" ಎಂದು ಹೇಳಿದೆ.

"ಒಳ್ಳೆಯದಾಯಿತು. ನಾನು ಹೋಗದೇ ಮದುವೆಯೇನು ನಿಂತುಹೋಯಿತೆ? ದುಡ್ಡು ಕೊಟ್ಟರೆ ಮೈಸೂರಿನಲ್ಲಿ ಕೆಲಸದವರಿಗೇನು ಕಮ್ಮಿ? ಮದುವೆ ಮನೆಗೆಂದರೆ ಯಾರಾದರೂ ಮಾಡುತ್ತಾರೆ. ಖಾಯಿಲೆ ಕಸಾಲೆ ಎಂದರೆ ಯಾರು ಸಿದ್ಧವಾಗಿ ಬರುತ್ತಾರೆ? ಇಷ್ಟಕ್ಕೂ ನಾನೇನು ಧರ್ಮಕ್ಕೆ ಮಾಡಿದೆನೆ? ಅಲ್ಲಿ ಬರುವ ದುಡ್ಡು ಇಲ್ಲೇ ಬಂದುಹೋಯಿತು. ಗುಂಡಮ್ಮನ ವಿಶ್ವಾಸ ಅವರಿಗೂ ಗೊತ್ತಿಲ್ಲದೇ ಇಲ್ಲ. ಮದುವೆಗೆ ಬರಲಿಲ್ಲವೆಂತ ಸಿಟ್ಟಿಗೆ ಹಾಗೆ ಹೇಳಿದಾರೆ. ನೀನು ಹೇಳು, ಮನುಷ್ಯರ ವಿಶ್ವಾಸವನ್ನು ಒರೆಹಚ್ಚಿ ನೋಡುವುದು ಕಷ್ಟದಲ್ಲೋ, ಸುಖದಲ್ಲೋ? ಸಂತೋಷ ಕಾಲದಲ್ಲಿ ನಗುತ್ತ ಓಡಾಡುತ್ತ ಉಂಡು, ತಿಂದು, ಕೈಗೆಬಂದ ಕೆಲಸವನ್ನು ಮಾಡಿದರೆ ಮಾತ್ರ ವಿಶ್ವಾಸವೇ? ಅದರಿಂದ ಅವರು ವಿಶ್ವಾಸದ ಆಳವನ್ನು ಅಳೆದು, ನಾನು ದೂರವಾದೆನೆಂದು ಭಾವಿಸಿದರೆ ಅದಕ್ಕೆ ನಾನೇನುಮಾಡಲಿ? ಅವರ ಸಂತೋಷ" ಎಂದು ಹೇಳಿ ಗುಂಡಮ್ಮ ನಕ್ಕಳು.

ಗುಂಡಮ್ಮ "ನಾನೇನು ಧರ್ಮಕ್ಕೆ ಮಾಡಿದೆನೆ?" ಎಂದು ಹೇಳಿದರೂ ಅವಳ ಮನಸ್ಸಿನಲ್ಲಿ ದುಡ್ಡಿಗೆ ಹೆಚ್ಚು ಪ್ರಾಧಾನ್ಯವಿಲ್ಲವೆಂಬುದು ನನಗೆ ಗೊತ್ತು. ಕೈಲಿ ಒಂದು ಕಾಸೂ ಇಲ್ಲದೆ, "ನಾಳೆ"ಯ ಯೋಚನೆಯೇ ಇಲ್ಲದೆ ಅವಳಷ್ಟು ನಿರಾಶವಾಗಿ, ಸುಖವಾಗಿ ಇದ್ದವರನ್ನು ನಾನು ಇದುವರೆಗೂ ನೋಡಿಲ್ಲ. ಪ್ರಪಂಚ ದಲ್ಲಿ ಅನುಭವಿಸುವ ಅನೇಕ ಸುಖಗಳಿಗೆ ಆವಶ್ಯಕವಾದ ದುಡ್ಡಿನ ವಿಚಾರದಲ್ಲಿ ಆತಂಕವಿಲ್ಲದೆ, ಶ್ರದ್ಧೆಯಿಲ್ಲದೆ, ಅವಳಂತೆ ಇರುವವರೂ ಬಹಳ ವಿರಳವೇ! ಅವಳ ಸ್ವಭಾವ ಸಾಮಾನ್ಯವಾದ ಇತರ ಜನಗಳಿಗಿಂತ ವಿಚಿತ್ರವಾಗಿತ್ತು. ಅವಳು ಮಾಡಿದ ಶ್ರಮಕ್ಕಾಗಿ ಯಾರಾದರೂ ದುಡ್ಡುಕೊಟ್ಟರೆ ಸ್ವಲ್ಪವೂ ಸಂಕೋಚದ ಸೋಂಕಿಲ್ಲದೆ ತೆಗೆದುಕೊಳ್ಳುತ್ತಿದ್ದಳು. ಕೊಡದಿದ್ದರೆ ಅದರ ಯೋಚನೆಯನ್ನೇ ಮಾಡುತ್ತಿರಲಿಲ್ಲ. ತಾನು ಮಾಡಬೇಕಾದ ಕೆಲಸವನ್ನು ಮಾಡಿದ್ದಾಯಿತೆಂದು ತಿಳಿದುಕೊಂಡು ಸುಮ್ಮ ನಿದ್ದುಬಿಡುತ್ತಿದ್ದಳು.

"ಗುಂಡಮ್ಮ ಯಾವಾಗಲೂ ಹೀಗಿರಲಿಲ್ಲ. ಒಂದಾನೊಂದು ಕಾಲದಲ್ಲಿ ಇತರರು ಒಂದು ಆಣೆ ತೆಗೆದುಕೊಳ್ಳುವ ಜಾಗದಲ್ಲಿ ನಾಲ್ಕು ಆಣೆ ತೆಗೆದುಕೊಳ್ಳುತ್ತಿದ್ದಳು. ಈ ವೈರಾಗ್ಯವೆಲ್ಲಾ ಹೊಸದಾಗಿ ಬಂದದ್ದು" ಎಂದು ಕೆಲವರು ಹಳಬರು, ಅಂದರೆ ಗುಂಡಮ್ಮನನ್ನು ನನಗಿಂತ ಮೊದಲಿನಿಂದ ಕಂಡವರು, ಹೇಳುತ್ತಾರೆ. ಅದೂ ನಿಜವಿರ

ಬಹುದು. ಮತ್ತು ಅದಕ್ಕೆ ತಕ್ಕ ಕಾರಣವೂ ಇದ್ದಿರಬಹುದು. ಅದನ್ನು ಹೇಳಬೇಕಾದರೆ ಗುಂಡಮ್ಮನ ಹಿಂದಿನ ವಿಚಾರವನ್ನು ಸ್ವಲ್ಪ ಹೇಳಬೇಕಾಗುತ್ತದೆ.

* * * * *

ಗುಂಡಮ್ಮ ಅವಳ ತಾಯಿತಂದೆಗಳಿಗೆ ಒಬ್ಬಳೇ ಮಗಳು. ಅವರು ಶ್ರೀಮಂತರಲ್ಲದಿದ್ದರೂ ಹೊಟ್ಟೆ ಬಟ್ಟೆಗಳ ಮಟ್ಟಿಗೆ ಅನುಕೂಲವಾಗಿಯೇ ಇದ್ದರು. ಗುಂಡಮ್ಮನ ಬಾಲ್ಯವು ಬಹಳ ಸುಖವಾಗಿ ಕಳೆಯಿತು. ಜೊತೆಗೆ ಬೇರೆ ಒಬ್ಬರಿಲ್ಲದೆ ಮನೆಗೆ ಒಬ್ಬಳಾಗಿಯೇ ಬೆಳೆದ ಅವಳಿಗೆ ಮುಂದಿನ ಸುಖದ ಕಲ್ಪನೆಯನ್ನು ಹೆಣೆಯುವುದರಲ್ಲಿಯೇ ಹೆಚ್ಚು ಹೊತ್ತು ಕಳೆಯುತ್ತಿತ್ತು. (ಆಗ ಈಗಿನಂತೆ ಶಾಲೆ ಕಾಲೇಜುಗಳ ಕಾಲವಲ್ಲವೆಂಬುದನ್ನು ನಾವು ಮರೆಯುವಂತಿಲ್ಲ.) ಗುಂಡಮ್ಮನಿಗೆ ಮದುವೆಯಾದಾಗ ೧೨ ವರ್ಷ. ಹುಡುಗ ಅದೇ ಊರಿನವನಾದರೂ, ನೆರೆಯೂರಿನಲ್ಲಿ ತನ್ನ ಸೋದರ ಮಾವನ ಮನೆಯಲ್ಲಿರುತ್ತಿದ್ದ. ಅವನು ಊರಿಗೆ ಬಂದಾಗ ಅವಳಿಗೆ ಹಬ್ಬ! ಜೊತೆಯವರಿಲ್ಲದೆ ಬಳಲುತ್ತಿದ್ದ ಚೇತನವು ನವಚೈತನ್ಯದಿಂದ ಮಿಡಿಯುತ್ತಿತ್ತು. ಆ ವರ್ಷ ಅವಳಿಗೆ ಒಬ್ಬ ತಮ್ಮನೂ ಹುಟ್ಟಿದ. ಗುಂಡಮ್ಮನ ಸಂತೋಷಕ್ಕೆ ಪಾರವೇ ಇಲ್ಲ. ತಾಯಿತಂದೆಗಳಿಗೂ ಹಾಗೆಯೇ. ಮಗಳು ಗಂಡನ ಚಿಂತೆಗೆ ಗುರಿಯಾಗುವ ವೇಳೆಗೆ ಮಗ ಹುಟ್ಟಿದ್ದು ಸಂತೋಷವೇ! ಆದರೆ ಆ ಸಂತೋಷ ಕುಡಿಯಿಡುತ್ತಿರುವಾಗಲೇ ಗುಂಡಮ್ಮನ ಗಂಡ ತೀರಿಹೋದ ವರ್ತಮಾನವು ಸಿಡಿಲಿನಂತೆ ಬಂದು ಅದು ಮೊಳಕೆಯಲ್ಲಿಯೇ ಸೀದುಹೋಯಿತು.

ಗುಂಡಮ್ಮನಿಗೆ ತನ್ನ ಸ್ಥಿತಿಯನ್ನು ಪೂರ್ಣವಾಗಿ ಅರಿಯುವಷ್ಟು ಪ್ರಪಂಚ ಜ್ಞಾನ ಬಂದಿರಲಿಲ್ಲ. ಅವಳಿಗೆ ಆಗಾಗ ದುಃಖವಾಗುತ್ತಿದ್ದರೂ, ಮನೆಯಲ್ಲಿ ಅಂಬೆಗಾಲಿಕ್ಕುತ್ತಿದ್ದ ಮಗು ಬೇಗ ಅದನ್ನು ಮರೆಸಿಬಿಡುತ್ತಿತ್ತು. ಹೀಗೆ ಐದಾರು ವರ್ಷಗಳು ಕಳೆದಿರಬಹುದು. ಆಗ ಗುಂಡಮ್ಮನ ತಾಯಿತಂದೆಗಳು ಜೀವನ ಸಾಗರದಲ್ಲಿ ಅವಳನ್ನು ಆ ಮಗುವಿನೊಂದಿಗೆ ತೇಲಿಬಿಟ್ಟು ತಾವು ಕಣ್ಮರೆಯಾದರು.

ಗುಂಡಮ್ಮ ನಿಜವಾಗಿ ಕಣ್ಣು ತೆರೆದದ್ದು ಆಗ. ಕಷ್ಟದಲ್ಲಿ ಮುಳುಗಿದ್ದರೂ, ಅದರ ಕಾವು ತಗಲಿದ್ದೂ ಆಗಲೇ! ಊರು ತುಂಬ ಕಂಡ ಜನಗಳೇ; ಮನೆಯಲ್ಲಿ ತಿನ್ನುವುದಕ್ಕೆ ಇರದಿದ್ದರೂ, ಕಂಡವರ ಮನೆಗೆ ಹೋಗುವುದು ಅವಮಾನ. ಬದುಕಿ ಬಾಳಿದ ಊರಿನಲ್ಲಿ ಭಿಕ್ಷೆ ಬೇಡುವುದೇ? ಇಂಥಾ ಕಷ್ಟವೇ ಅವಳಿಗೆ ಎದೆಗಾರಿಕೆಯನ್ನು ಕೊಟ್ಟಿರಬೇಕು! ಅವಳು ಒಬ್ಬಳೇ ಆಗಿದ್ದರೆ ಅದರ ಮಾತೇ ಬೇರೆ. ಜೊತೆಗೆ ಹುಡುಗ ಬೇರೆ. ಅವನನ್ನು ದೊಡ್ಡವನನ್ನಾಗಿ ಮಾಡುವ ಭಾರವನ್ನು ತಾಯಿತಂದೆಗಳು ಹೊರಿಸಿ ಹೊರಟುಹೋಗಿದ್ದಾರೆ. ಪ್ರಪಂಚವನ್ನು ಕಾಣದ ಹುಡುಗಿ ಬರಿಯ ಕೈಲಿ

ಮೈಸೂರಿಗೆ ಬಂದು ತಮ್ಮನನ್ನು ಮುಂದಕ್ಕೆ ತರುವ ಭಾರವನ್ನು ಹೊತ್ತು ಸ್ವಾರ್ಥವನ್ನೆಲ್ಲಾ ಮರೆತು ತನ್ನ ಮೇಲೆ ಬಿದ್ದ ಜವಾಬ್ದಾರಿಯನ್ನು ನಿರ್ವಹಿಸಲು ನಿಂತಳು. ಆ ವರ್ಷಗಳಲ್ಲಿ ಅವಳು ಪಡೆದ ಜೀವನದ ಕಟುತರವಾದ ಅನುಭವವೇ ಈಗ ನಾವು ಅವಳಲ್ಲಿ ನೋಡುತ್ತಿರುವ ತಾಳ್ಮೆ, ಯಾವಾಗಲೂ ಮಾಸದ ನಗು, ಇವುಗಳಿಗೆ ಕಾರಣವಾಗಿರಬೇಕು. ಆ ವಿಚಾರವಾಗಿ ಮಾತುಬಂದಾಗ ಗುಂಡಮ್ಮ ಒಂದು ದಿನ, "ನೋಡು, ಆ ಮೊದಲಿನ ದಿನಗಳನ್ನು ನೆನೆಯಬಾರದು. ಹತ್ತು ಮನೆಗೆ ಕೆಲಸಕ್ಕಾಗಿ ತಿರುಗುತ್ತಿದ್ದೆ. ಒಬ್ಬೊಬ್ಬರ ಸ್ವಭಾವ ಒಂದೊಂದು ರೀತಿ. ಬರಬರುತ್ತ ನನಗೆ ದೂಷಣೆಗೂ ಹೊಗಳಿಕೆಗೂ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಕೆಲಸವೊಂದೇ ನನ್ನ ಗುರಿ! ಎಷ್ಟು ಕಷ್ಟಪಟ್ಟಿದ್ದರೂ ಮನೆಗೆ ಬಂದು ಅವನನ್ನು ನೋಡಿದ ಕೂಡಲೇ ಎಲ್ಲವೂ ಮರೆತುಹೋಗುತ್ತಿತ್ತು. ನನಗೆ ಪ್ರಪಂಚವೆಂದರೆ ಅವನೇ ಆಗಿದ್ದ. ಎಷ್ಟೋ ಸಲ ಮೂರು ಮೂರುದಿನ ಊಟವಿಲ್ಲದೆ, ಅವನಿಗೆ ಮಟ್ಟಿಗೆ ತಿಂಡಿ ತರಲು ಸಾಧ್ಯವಾಗುತ್ತಿತ್ತು. ಆದರೆ ಕಾಲವು ಎಂದಿಗೂ ಒಂದೇ ಸಮನಾಗಿರುವುದಿಲ್ಲ. ನನಗೂ ಹೆಚ್ಚು ಜನಗಳ ಪರಿಚಯವಾಯಿತು. ನನಗೆ ನನ್ನ ರಟ್ಟೆಯೇ ದಿಕ್ಕಾಯಿತು. ಕೂಲಿ ನಾಲಿ ಮಾಡಿ ಅದರಲ್ಲೇ ಹೊಟ್ಟೆ, ಬಟ್ಟೆ, ಅವನಿಗೆ ವಿದ್ಯ, ಬುದ್ಧಿ, ಮುಂಜಿ, ಮದುವೆ ಎಲ್ಲಾ ಮಾಡಿ ಆಯಿತು. ಒಂದು ದಿವಸವೂ ಕಷ್ಟ ಕಾಣಲಿಲ್ಲ. ಅದು ಏನು ಉತ್ಸಾಹವೋ ಕೆಲಸ ಮಾಡುವುದಕ್ಕೆ! ಎಷ್ಟು ಸಂಪಾದಿಸಿದರೂ ಸಾಲದು. ಅವನಿಗಾಗಿ ನನ್ನ ಜೀವವನ್ನೇ ಕೊಟ್ಟರೂ ತೃಪ್ತಿಯಾಗದು. ಅವನೂ ಹಾಗೇ ಇದ್ದ. ಬಹಳ ಒಳ್ಳೆ ಹುಡುಗ, ಒಂದು ದಿವಸ ಮಾತ್ರ—ಅದೂ ಸಹವಾಸದೋಷ ಅನ್ನಿ! ನಾನು ಪುಸ್ತಕಕ್ಕೆಂದು ಕೊಟ್ಟದುಡ್ಡಿನಲ್ಲಿ ಹೋಟಲಿಗೆ ಹೋಗಿ ತಿಂಡಿ ತಿಂದು, ನಾಟಕ ನೋಡಿ, ಪುಸ್ತಕವಿಲ್ಲದೆ ಕ್ಲಾಸಿನಲ್ಲಿ ಹಿಂದಾದನಂತೆ. ಆ ವಿಚಾರ ನನಗೆ ತಿಳಿದಾಗ ಎಷ್ಟು ದುಃಖವಾಯಿತು, ಗೊತ್ತೇ? ಅವನನ್ನು 'ಹೀಗೆ ಏಕೆಮಾಡಿದೆ?' ಎಂದು ಕೇಳುವುದಕ್ಕೆ ಕೂಡ ನನ್ನಲ್ಲಿ ಶಕ್ತಿ ಉಳಿಯಲಿಲ್ಲ. ನಾನು ಕಟ್ಟಿದ್ದ ಆದರ್ಶದ ಚಿತ್ರವೆಲ್ಲಾ ಒಂದೇ ಸಲಕ್ಕೆ ಚೂರು ಚೂರಾಗಿ ಬಿದ್ದುಹೋಯಿತು. ಮೂರು ದಿವಸ ಒಂದೇಸಮ ಅನ್ನ ನೀರಿಲ್ಲದೆ—ಕೆಲಸಕ್ಕೂ ಹೋಗದೆ ಸಂಕಟಪಟ್ಟೆ. ಕೊನೆಗೆ ಆ ಹುಡುಗ ನನ್ನ ಸಂಕಟವನ್ನು ನೋಡಿ ಅಳುತ್ತಾ, 'ಅಕ್ಕಾ, ನಾನು ಮಾಡಿದ್ದು ತಪ್ಪು, ಇದೇ ಮೊದಲು, ಇದೇ ಕೊನೆ—ಇನ್ನು ಮುಂದೆ ಹೀಗೆಂದಿಗೂ ಮಾಡುವುದಿಲ್ಲ' ಎಂದು ಹೇಳಿದ. ಅಲ್ಲ ಏನು ಹುಚ್ಚು! ನಾನು ಅವನಿಗಾಗಿ ಕಷ್ಟಪಡುತೀನಿ ಅಂತ, ನವಚೈತನ್ಯದಿಂದ ತುಂಬಿದ ಒಂದು ಜೀವ ನನ್ನ ಇಷ್ಟದಂತೆಯೇ ನಡೆಯಬೇಕೆಂದು ಬಯಸುವುದು ಯಾವ ನ್ಯಾಯ? ಆಗ ಸಂಕಟಪಟ್ಟದ್ದು ನೆನೆದರೆ ಈಗ ನನಗೇ ನಗು ಬರುತ್ತೆ.

ನನ್ನ ಜೀವನವೆಲ್ಲಾ ಹುಚ್ಚು ಹುಚ್ಚೇ ಅನ್ನು. ಆಗ ಅವನೇ ಪ್ರಪಂಚವೆಲ್ಲಾ ಆಗಿದ್ದ. ಈಗ ಅವನು ದೂರವಾದ ಮೇಲೆ ಪ್ರಪಂಚವೆಲ್ಲಾ ನನ್ನದೆ ಆಗಿದೆ" ಎಂದಳು.

"ಅವನಿಗಾಗಿ ಇಲ್ಲಿ ಇದ್ದು ಹಲುಬುತ್ತೀರಿ. ಅವನ ಬಳಿ ಹೋಗಿ ಇರಬಾರದೆ? ಸಂಪಾದಿಸುವ ಕಾಲದಲ್ಲಿ ನೀವು ಹೋದರೆ ಅನ್ನ ಹಾಕಲಾರನೆ? ಒಳ್ಳೆಯವನು ಎಂದು ಹೊಗಳುತ್ತೀರಿ. ಮುಪ್ಪಿನ ಕಾಲದಲ್ಲಿ ನಾಲ್ಕು ದಿವಸ ನಾರಾಯಣ, ಕೃಷ್ಣ ಎನ್ನುತ್ತಾ ಇದ್ದುಕೊಂಡಿರದೆ ಈ ಕಷ್ಟ ಎಲ್ಲಿಯ ವರೆಗೆ ಗುಂಡಮ್ಮ?" ಎಂದು ಕೇಳಿದೆ.

"ಕಷ್ಟವೇನು ಬಂತು? ನಿಮಗೆ ಹಾಗೆ ತೋರುತ್ತೆ. ಅವನೇನೋ ಕರೆಯುತ್ತಲೆ ಇದಾನೆ, 'ಬಾ, ಅಕ್ಕ ನಾವು ಕುಡಿದ ಗಂಜಿ ನಿನಗೂ ಹಾಕುತ್ತೇವೆ, ನೀನು ನಮಗೆ ಭಾರವೇ' ಎನ್ನುತ್ತಾನೆ. ನನಗೇ ಹೋಗಲು ಇಷ್ಟವಿಲ್ಲ. ಅವನಿಗೆ ಕೆಲಸವಾಗಿ ಬೇರೆ ಸಂಸಾರ ಹೂಡಿದಾಗ ನನಗೆ ಒಂದೇ ಸಲಕ್ಕೆ ಮುಪ್ಪು ಬಂದಂತಾಯಿತು. ಯಾತಕ್ಕೂ ಕೆಲಸಕ್ಕೆ ಬಾರದಂತೆ ತೋರಿತು ನನ್ನ ಜೀವ. ಇಷ್ಟು ದಿನವೂ ಕಷ್ಟಪಟ್ಟಾಯಿತು. ಈಗ ಒಂದು ತುತ್ತು ಅನ್ನಕ್ಕಾಗಿ ಮತ್ತೊಬ್ಬರ ಆಶ್ರಯದಲ್ಲಿರಲೇ? ಅಂತಹ ಹೋಗಲೇ ಬೇಕಾದ ಕಾಲ ಬಂದಾಗ ಹೋದರಾಯಿತು ಎಂದುಕೊಂಡೆ. ಈಗ ನನಗೇನು ಆಗಬೇಕಾಗಿದೆ? ಎಲ್ಲಿದ್ದರೆ ಅಲ್ಲೇ ಮನೆ. ಆ ಗುಡಿಸಲಿಗೆ ಒಂದು ರೂಪಾಯಿ ಕೊಡುವುದೂ ದಂಡವೇ. ಏನೋ ಕೈಕಾಲು ಗಟ್ಟಿಯಾಗಿರುವವರೆಗೂ ಸರಿ. ಒಂದು ತಲೆನೋವು ಮೂಗುನೋವು ಬಂದರೆ ಕಾಲುನೀಡಿಕೊಂಡು ಇನ್ನೊಬ್ಬರಿಗೆ ಮುಜಗರ ವಾಗದಂತೆ ಮಲಗಿಕೊಳ್ಳುವುದಕ್ಕೆ ಇರಲಿ ಎಂದು ಅದನ್ನು ಇಟ್ಟುಕೊಂಡಿದ್ದೇನೆ ಅಷ್ಟೆ" ಎಂದು ಹೇಳಿದಳು. ಆಕೆ ಆಡುತ್ತಿದ್ದ ಒಂದೊಂದು ಮಾತೂ ಒಂದೊಂದು ಅನುಭವದ ಮುದ್ದೆಯಂತೆ. "ಅವಳು ಯಾವುದಕ್ಕೂ ವ್ಯಸನಪಡದವಳಂತೆ ಹಗುರ ವಾಗಿ ಮಾತಾಡುತ್ತಿದ್ದರೂ, ಅವಳ ಮನಸ್ಸಿನಲ್ಲಿ ವ್ಯಥೆಯಿಲ್ಲವೇ? ಈ ಸ್ನೇಹ ಶೂನ್ಯ ಜೀವನದಲ್ಲಿ ಬೇಸರವಿಲ್ಲವೇ?" ಎಂಬ ಪ್ರಶ್ನೆ ಆಗಾಗ ನನಗೆ ಬರುತ್ತಿತ್ತು.

ನಾನು ನೋಡುವಾಗ್ಗೆ ಆಕೆಗೆ ವಯಸ್ಸು ಐವತ್ತರ ಮೇಲಾಗಿತ್ತು. ಅವಳನ್ನು ಬಹುವಚನದಲ್ಲಿ ಮಾತಾಡಿಸಿದರೆ ಆಕೆಗೆ ಸಿಟ್ಟು ಬರುತ್ತಿತ್ತು. "ನೀವು ದೊಡ್ಡವರು, ನಿಮ್ಮನ್ನು ಹೇಗೆ ಬಾ, ಹೋಗು, ಎನ್ನುವುದು?" ಎಂದು ಕೇಳಿದರೆ, "ನಿಮ್ಮ ಅಜ್ಜಿ ಎಷ್ಟು ದೊಡ್ಡವರು? ಅವರನ್ನು ಬಾ ಎನ್ನುವುದಿಲ್ಲವೆ? ನನ್ನನ್ನು ಏಕೆ ಹಾಗೇ ತಿಳಿದುಕೊಳ್ಳಬಾರದು! ನೀನಾದರೂ ಹಾಗೆ ಕರೆದರೆ ನನಗೆ ಸಮಾಧಾನವಾಗುತ್ತೆ" ಎಂದು ಹೇಳುತ್ತಿದ್ದಳು. ಆಗ ನನಗೆ ಏನು ಹೇಳುವುದಕ್ಕೂ ತೋರುತ್ತಿರಲಿಲ್ಲ. ಆಕೆ ಅನೇಕಸಲ ಆ ಮಾತನ್ನು ಒತ್ತಿ ಹೇಳಿದ್ದರ ಮೇಲೆ, ಈಗೀಗ ಸ್ವಲ್ಪ ಪ್ರಯತ್ನಪಟ್ಟರೂ ಪೂರ್ತಿಯಾಗಿ ಬಹುವಚನ ಪ್ರಯೋಗಹೋಗಿಲ್ಲ.

* * * * *

ಒಂದು ದಿನ ಸಾಯಂಕಾಲವಾಗಿತ್ತು. ನಾನು ಏನೋ ಕೆಲಸಮಾಡುತ್ತಿದ್ದೆ. ಆಗ ಗುಂಡಮ್ಮ ಬಂದು ಕೂಗಿದಳು. ಅವಳ ಮುಖ ಪೆಚ್ಚಾಗಿತ್ತು. "ಏನು ಗುಂಡಮ್ಮ?" ಎಂದು ಕೇಳಿದೆ.

"ಏನೂ ಇಲ್ಲ, ಇಲ್ಲೇ ನಾಗಮ್ಮನ ಮನೆಗೆ ಬಂದಿದ್ದೆ. ಹಾಗೆ ನೋಡಿಕೊಂಡು ಹೋಗೋಣವೆಂದು ಬಂದೆ."

"ಹೌದು; ನಾಗಮ್ಮ, 'ಗುಂಡಮ್ಮ ಯಾಕೋ ಬರಲೇ ಇಲ್ಲ. ಅವತ್ತು ಅವಸರದಲ್ಲಿ ಹೊರಟುಹೋದರು. ಬಾಗಿನ ಸಹ ಕೊಟ್ಟಿಲ್ಲ. ಬೋರನ ಸಂಗಡ ಹೇಳಿ ಕಳುಹಿಸಬೇಕು' ಎಂದಿದ್ದಳು."

"ಬಾಗಿನ ಎಲ್ಲಿ ಹೋಗುತ್ತೆ ಹೇಳು! ಇನ್ನೆಂಟು ದಿನವಾದರೂ ನಾನು ಹೋದ ದಿನ ಬರುತ್ತಿತ್ತು. ನೀನು ಆ ಸಲ ಮಗುವಿನ ಹುಟ್ಟಿದಹಬ್ಬ ಮಾಡಿದಾಗ ಒಂದು ತಿಂಗಳಾದ ಮೇಲೆ ನಾನು ಊರಿಂದ ಬಂದಾಗ ಮಡಿಯಲ್ಲಿ ಮುಚ್ಚಿಟ್ಟಿದ್ದು ಕೊಡ ಲಿಲ್ಲವೇ? ಲಾಡು ಸ್ವಲ್ಪ ವಾಸನೆಬಂದಿತ್ತು. ಆದರೂ ನೀನು ಅಷ್ಟು ವಿಶ್ವಾಸದಿಂದ ಇಟ್ಟಿದ್ದೆಯಲ್ಲ ಎಂದು ಒಂದು ಕಾಳೂ ಬಿಡದೆ ತಿಂದೆ. ಮುಖ್ಯ, ವಿಶ್ವಾಸ ಎಲ್ಲಕ್ಕಿಂತ ದೊಡ್ಡದು . . . ".

"ಕೂತುಕೊಳ್ಳಿ ಗುಂಡಮ್ಮ, ನಿಂತೇ ಇದ್ದೀರಲ್ಲ. ನಾಗಮ್ಮ ಜಾಣೆ, ಚಿಕ್ಕವಳಾದರೂ ತುಂಬಾ ತಿಳಿವಳಿಕೆ. ಅವತ್ತು ಬಹಳ ವಿತರಣೆಯಾಗಿ ಮಾಡಿದಳು."

"ಹೌದು, ನಾನೂ ಅವಳಿಗೆ ಹಾಗೇ ಹೇಳಿದೆ. ಇಷ್ಟಾದರೂ ಅವಳ ಮನಸ್ಸಿಗೆ ಸಮಾಧಾನವಿಲ್ಲ. ಸಂಸಾರ ಎಂದ ಮೇಲೆ ಏನಾದರೂ ಇರುತ್ತಲ್ಲ. 'ನಮಗೆಲ್ಲ ಏನು ಮಾಡುವುದಕ್ಕೆ ಬರುತ್ತೆ' ಎಂದು ಪೇಚಾಡಿದಳು."

"ಕಾರಣ?"

"ಅವತ್ತು ಸುಣ್ಣವೋ ಏನೋ ಸಿಕ್ಕಲಿಲ್ಲವಂತೆ. 'ಏನು ಅಣಿಮಾಡಿದೀಯೋ ಒಂದಿಷ್ಟು ಸುಣ್ಣಕ್ಕೆ ಗತಿಯಿಲ್ಲ ಈ ಮನೆಯಲ್ಲಿ' ಎಂದು ಅವಳ ಯಜಮಾನರು ಕೂಗಾಡಿದರು. ಪಾಪ, ಹುಡುಗಿ ಒಬ್ಬಳೇ ಬಹಳ ಉತ್ಸಾಹದಿಂದ ಒಂದು ತಿಂಗಳಿಂದ ಇದಕ್ಕೆ ಸಿದ್ಧಮಾಡಿದ್ದಳು. ಒಂದು ಮಡಕೆಯ ತುಂಬ ಕೆನೆಯ ಹಾಗಿದ್ದ ಸುಣ್ಣ ಸೋಸಿ ತುಂಬಿಟ್ಟಿದ್ದಳು. ಪಾಪ, ಅವಳೇ ಎಲ್ಲಕ್ಕೂ ಓಡಾಡಬೇಕು. ಕೊಡುವುದು ಸ್ವಲ್ಪ ತಡವಾಯಿತು. ಗಂಡಸರು ಅಷ್ಟೆಲ್ಲಾ ಎಲ್ಲಿ ನೋಡುತ್ತಾರೆ? ಬೇಗ ಕೈಗೆ ಸಿಕ್ಕಲಿಲ್ಲವೆಂದು ಹಾಗಂದಿರಬಹುದು. ಅಷ್ಟು ಜನರ ಎದುರಿಗೆ ಹಾಗಂದುಬಿಟ್ಟರಲ್ಲ ಎಂದು ಅವಳಿಗೆ! ನಾನೂ ಎಷ್ಟೋ ಸಮಾಧಾನ ಹೇಳಿದೆ. 'ನಿನಗೆ ಆ ಮಾತಿನಿಂದ ನೋವಾಗಿದೆ ಎಂದು ತಿಳಿದರೆ ನಿನ್ನ ಯಜಮಾನರು ಇನ್ನೂ ಹೆಚ್ಚು ಆದರಿಸಿ

ಸಮಾಧಾನಮಾಡುತ್ತಾರೆ. ಹಾಗೆ ಅಂದಮಾತ್ರಕ್ಕೆ ಅವಮಾನವೇನು ಹೇಳು. ಏನೋ ಸಿಟ್ಟಿನ ಭರದಲ್ಲಿ ಆಡಿದ ಮಾತು' ಎಂದೆ. ಪ್ರೀತಿಯಿಂದ ಸಮಾಧಾನ ಮಾಡುವವರೊಬ್ಬರಿದ್ದರೆ, ಅನ್ನಿಸಿಕೊಳ್ಳುವುದೂ ಒಂದು ತರಹ ಸುಖವೇ ಅಲ್ಲವೇ ?" ಎಂದು ನನ್ನ ಕೇಳಿದಳು. ನಾನು ಆ ಮಾತಿಗೆ ಏನು ಹೇಳಲಿ? "ಇರಬಹುದು" ಎಂದೆ.

ಎಂದೂ ಇಲ್ಲದ ಗುಂಡಮ್ಮ ಆ ಮಾತು ಹೇಳುತ್ತ ಕಣ್ಣೀರು ತುಂಬಿದುದ್ದನ್ನು ನೋಡಿ ನನಗೆ ಹೇಗೆಹೇಗೋ ಆಯಿತು. "ಗುಂಡಮ್ಮ, ಇವತ್ತು ಯಾಕೋ ನಿಮ್ಮ ಮನಸ್ಸು ಸರಿಯಾಗಿರುವಂತಿಲ್ಲ. ನಿಮ್ಮ ತಮ್ಮ ಹುಷಾರಾಗಿದಾನೋ ಇಲ್ಲವೋ ? ಏನಾದರೂ ಕಾಗದ ಬಂತೆ ? " ಎಂದು ಕೇಳಿದೆ.

"ನೋಡಿದೆಯಾ, ಬುಡಕ್ಕೇ ಕೊಡಲಿ ಹಾಕಿದೆ. ಬುದ್ಧಿವಂತರ ಲಕ್ಷಣವೇ ಹೀಗೆ. ಈಗ ಮೂರು ದಿನದಲ್ಲಿ ಶೀನು ಬಂದಿದ್ದನಂತೆ. ಒಂದು ದಿನ ಅವರ ಮಾವನ ಮನೆಯಲ್ಲಿ ಇದ್ದು ಹೊರಟುಹೋದನಂತೆ. ಊರಿಗೆ ಹೋದ ಮೇಲೆ, 'ನನಗೆ ನಿನ್ನನ್ನು ನೋಡಬೇಕೆಂದು ಬಹಳ ಆಸೆಯಿತ್ತು. ಒಂದು ಘಳಿಗೆಯೂ ಪುರುಸೊತ್ತಾಗಲಿಲ್ಲ, ಬರಲಿಲ್ಲವೆಂದು ಏನೂ ತಿಳಿದುಕೊಳ್ಳಬೇಡ. ಇನ್ನೊಂದುಸಲ ಬರುತ್ತೇನೆ' ಎಂದು ಕಾಗದ ಬರೆದಿದ್ದಾನೆ. ಬೆಳಗ್ಯೆ ಕಾಗದ ಬಂದಾಗಿನಿಂದಲೂ ಒಂದೂ ಬೇಡವಾಗಿದೆ. ಒಲೆಯನ್ನು ಸಹ ಹೊತ್ತಿಸಲಿಲ್ಲ. ಹೊತ್ತುಹೋದ್ದೇ ಗೊತ್ತಾಗಲಿಲ್ಲ. ಸುಮ್ಮನೆ ಹೆಂಚು, ಗಳು, ಎಣಿಸುತ್ತ ಕೂತಿದ್ದೆ. ನಾಗಮ್ಮನ ಮನೆ ಆಳು ಬಂದು ಕೂಗಿದ. ಆಗ ಎದ್ದು ಮುಖ ತೊಳೆದುಕೊಂಡು, ಒಂದು ಲೋಟ ನೀರು ಕುಡಿದವಳೆ ಈ ಕಡೆ ಬಂದುಬಿಟ್ಟೆ" ಎಂದರು.

ನನಗೆ ಆಕೆಯನ್ನು ನೋಡಿ ತುಂಬ ವ್ಯಥೆಯಾಯಿತು. ಸಮಾಧಾನಕ್ಕಾಗಿ, "ಗುಂಡಮ್ಮ ನೀವು ಎಲ್ಲರಿಗೂ ವಿವೇಕ ಹೇಳುವವರು, ಹೀಗೆ ಮಾಡಬಹುದೇ ? ಏನೋ, ಏನು ಕೆಲಸವಿತ್ತೋ, ಹಾಗೇ ಹೊರಟುಹೋಗಿರಬಹುದು. ಅಷ್ಟಕ್ಕೆ ಇಷ್ಟು ನೊಂದುಕೊಳ್ಳುವುದೇ ? ನೋಡಿ, ಹೋದವಾರ ನನ್ನ ತಂಗಿ ಮೋಟಾರಿನಲ್ಲಿ ಬಂದಿದ್ದಳಂತೆ; ಅಲ್ಲೇ ಯಾರೋ ಸ್ನೇಹಿತರ ಮನೆಯಲ್ಲಿ ರಾತ್ರಿ ಇದ್ದು ಬೆಳಗ್ಯೆ ಅಷ್ಟು ಹೊತ್ತಿಗೇ ಹೊರಟುಹೋದಳಂತೆ. ಆಮೇಲೆ ನನಗೆ ಗೊತ್ತಾಯಿತು. ಮೋಟಾರಿತ್ತು. ಹಾಗೇ ಒಂದುಕ್ಷಣ ಈ ಕಡೆ ಬಂದು ಇಣಿಕಿ ನೋಡಿಕೊಂಡು ಹೋಗಬಾರದಾಗಿತ್ತೆ ಎಂದುಕೊಂಡೆ ಅಷ್ಟೆ. ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೋತಾ ಹೋದರೆ ಹೇಗಾಗುತ್ತೆ ಹೇಳಿ ? "

"ಏನೋಮ್ಮ, ನೀವು ಸರಿಸರಿಯಾಗಿ ಬದುಕುವವರು, ಹಾಗೇ ಅಂದುಕೊಳ್ಳ ಬಹುದು. ನನಗೆ ಹಾಗನ್ನಿಸುವುದೇ ? ನಾನೂ ಎಲ್ಲರಂತೆ ಇದ್ದಿದ್ದರೆ ನನ್ನ ತಮ್ಮ

ಹೀಗೇಕೆ ಮಾಡುತ್ತಿದ್ದ? ಅತ್ತೆ ಮನೆಗೆ ಹೋದರೆ ಅಳಿಯ ಬಂದನೆಂದು ತುಂಬಾ ಉಪಚಾರಮಾಡುತ್ತಾರೆ. ನನ್ನ ಮನೇಲಿ ಏನಿದೆ? ಕಾಫಿಪುಡಿ ಸಕ್ಕರೆ ತೆಗೆದುಕೊಂಡು ಬಂದರೆ ಕಾಫಿ ಮಾಡಿ ನಿನಗೂ ಕೊಟ್ಟು ನಾನೂ ಕುಡಿಯುತ್ತೇನೆ ಎನ್ನ ಬೇಕಾಗಿತ್ತು. ಏನೋ ಹಾಳುಪಾಪಿ ಅಳುಕುಮನಸ್ಸು; ಎಷ್ಟು ಬುದ್ಧಿ ಹೇಳಿದರೂ ಅದರ ದಾರಿ ಅದು ಬಿಡುವುದಿಲ್ಲ. ಆದರೇನು? ನಾನು ಗುಂಡಲ್ಲವೇ? ಯಾವುದಕ್ಕೂ ಜಗ್ಗುವುದಿಲ್ಲ. ಅದಕ್ಕೇ ನಾನು ಆ ಹೆಸರಿಟ್ಟುಕೊಂಡದ್ದು! ಏನೋ ಹೇಳುತ್ತಾರಲ್ಲ 'ಗೋರ್ಕಲ್ಲ ಮೇಲೆ ಮಳೆಗರೆದರೆ' ಅಂತ, ಹಾಗೆ! ಕಷ್ಟಸುಖ ಯಾವುದು ಬಂದರೂ ಬಹಳ ಹೊತ್ತು ನಿಲ್ಲುವುದಿಲ್ಲ. ಕಲ್ಲಿನ ಮೇಲೆ ಬಿದ್ದ ನೀರಿನ ಹಾಗೆ! ಒಂದುಕ್ಷಣ ನೆನಸಿ ಕೊಚ್ಚಿ ಹೋಗುತ್ತದೆ. ಅಷ್ಟೆ! ನಾಳೆ ಇಷ್ಟು ಹೊತ್ತಿಗೆ ನನ್ನ ಸಮಾನವಿಲ್ಲವೆಂದು ಹಪ್ಪಳವೋ, ಸಂಡಿಗೆಯೋ ಮಾಡುತ್ತ ಸಮಾಧಾನವಾಗಿದ್ದು ಬಿಡುತ್ತೇನೆ" ಎಂದು ಹೇಳಿ ಕಣ್ಣೊರಸಿಕೊಂಡಳು.

ಗುಂಡಮ್ಮ ಹೆಸರು ಬದಲಾಯಿಸಿಕೊಂಡ ವಿಚಾರ ನನಗೆ ಗೊತ್ತಿತ್ತು. ಅವಳ ಹೆಸರು 'ಅರವಿಂದ'. ಗುಂಡಮ್ಮ ಕುರೂಪಿಯೇನಲ್ಲ. ಈ ವಯಸ್ಸಿನಲ್ಲಿ ಇಷ್ಟು ತಾಪತ್ರಯಗಳಲ್ಲಿ ಇರುವಾಗಲೇ ತಕ್ಕಮಟ್ಟಿಗೆ ನೋಡಲು ಚೆನ್ನಾಗಿದ್ದಾಳೆ. ಚಿಕ್ಕ ತನದಲ್ಲಿ ಇನ್ನೂ ಲಕ್ಷಣವಾಗಿದ್ದಳೆಂದು ಅವಳನ್ನು ಈಗ ನೋಡುವ ಯಾರಾದರೂ ಸುಲಭವಾಗಿ ಊಹಿಸಬಹುದು. ತಾಯಿತಂದೆಗಳು ತಮ್ಮ ಒಂದೇ ಮಗುವನ್ನು ಮುದ್ದಿನಿಂದ 'ಅರವಿಂದ' ಎಂದು ಕೂಗುತ್ತಿದ್ದರು. ಅವಳು ಮೈಸೂರಿಗೆ ಬಂದ ತರು ಣದಲ್ಲಿ ಯಾರೋ ಅವಳನ್ನು "ಮಾಡುವುದು ಕೂಲಿ, ಹೆಸರು ಮಾತ್ರ 'ಅರವಿಂದ' " ಎಂದು ಆಡಿಕೊಂಡರಂತೆ. ಅದು ಅವಳ ಕಿವಿಗೂ ಬಿದ್ದಿತು. ಗುಂಡಮ್ಮ ಅವರ ಮೇಲೆ ಕೋಪಿಸಿಕೊಳ್ಳಲಿಲ್ಲ, 'ಅದೂ ನ್ಯಾಯವೇ' ಎಂದುಕೊಂಡಳು. ಚೆನ್ನಾಗಿರುವ ಹೆಸರು, ಕೂಲಿ ಕೆಲಸ, ಎರಡೂ ಜೊತೆಯಲ್ಲಿ ಶೋಭಿಸುವುದಿಲ್ಲ. ಯಾವುದನ್ನಾದರೂ ಒಂದನ್ನು ಬಿಡಬೇಕು. ಗುಂಡಮ್ಮ ಆಗ ಇದ್ದ ಸ್ಥಿತಿಯಲ್ಲಿ ಯಾವುದನ್ನು ಬಿಡಬೇಕೆಂದು ಹೆಚ್ಚು ಯೋಚನೆಮಾಡಬೇಕಾಗಿರಲಿಲ್ಲ. ಹೆಸರು ಬದಲಾಯಿಸುವುದೇ ಸುಲಭವೆಂದು ಕೊಂಡು, ಆಗಿನಿಂದ ಮುಂದೆ ತಾನು ಹೋದ ಕಡೆಯಲ್ಲೆಲ್ಲಾ 'ಗುಂಡಮ್ಮ'ನೆಂದು ಹೇಳಿಕೊಳ್ಳುತ್ತಾ ಬಂದಳಂತೆ.

ಈ ವಿಚಾರವನ್ನು ಅವಳೇ ಒಂದು ದಿನ ಏನೋ ಮಾತು ಬಂದಾಗ ಹೇಳಿ ದ್ದಳು. ಈಗಲೂ ಆ ಹೆಸರು ನೆನಪಾದ ಕೂಡಲೆ ಗುಂಡಮ್ಮನಿಗೆ ಹೊಸ ಶಕ್ತಿ ಬಂದಂತಾಗಿ ನಗು ಮುಖದಿಂದ ಎದ್ದು, "ನಾನು ಹೋಗುತ್ತೀನಮ್ಮ, ಹೊತ್ತಾ ಯಿತು" ಎಂದಳು.

ನಾಸು, "ಗುಂಡಮ್ಮ ಏನಾದರೂ ಸ್ವಲ್ಪ ಫಲಾಹಾರ ಮಾಡಿಕೊಂಡು ಹೋಗಿ, ಬೆಳಗಿನಿಂದ ಊಟವಿಲ್ಲ" ಎಂದು ಹೇಳಿದೆ.

"ಏನೂ ಬೇಡಮ್ಮ, ನಾಳೆ ಊಟ ಆಗುತ್ತೆ. ಈಗ ನಾಗಮ್ಮ ಕೊಟ್ಟಿದಾಳಲ್ಲ ಅದನ್ನೇ ಅಷ್ಟು ಬಾಯಿಗೆ ಹಾಕಿಕೊಳ್ಳುತ್ತೇನೆ" ಎಂದು ಹೇಳಿ ಹೊರಟುಹೋದಳು.

ಗುಂಡಮ್ಮ ಹಾಗೇ ಕತ್ತಲೆಯಲ್ಲಿ ಮರೆಯಾದಳು. ನಾಸು ಬಹಳ ಹೊತ್ತಿನ ವರೆಗೆ ಆ ಕಡೆಯೇ ನೋಡುತ್ತ, ಜೀವನದ ಸುಖದುಃಖಗಳ ಕುಲುಮೆಯಲ್ಲಿ ಕರಗಿ ತಿಳಿಯಾದ ಮನಸ್ಸನ್ನೂ, ಆ ಅನುಭವದ ಬೆಳಕನ್ನು ಪ್ರತಿಬಿಂಬಿಸುತ್ತಿದ್ದ ಅವಳ ಮುಖವನ್ನೂ ನೆನೆಯುತ್ತಿದ್ದೆ.

"ವಾಣಿ"

ಶ್ರೀನಾಥ

(ಒಂದು ಕವಿಕಥೆ)

ಶ್ರೀನಾಥನು ತನ್ನ ಸಮಕಾಲೀನರಾದ ತೆಲುಗು ಕವಿಗಳನ್ನೆಲ್ಲ ಮೀರಿಸಿದ ಮಹಾಕವಿ; ತೆಲುಗಿನಲ್ಲಿ ಭಾರತವನ್ನು ರಚಿಸಿ 'ಕವಿತ್ರಯ'ವೆಂದು ಪ್ರಸಿದ್ಧರಾಗಿರುವ ನನ್ನಯಭಟ್ಟ, ತಿಕ್ಕನ ಸೋಮಯಾಜಿ, ಯೆಱ್ಱಪ್ರೆಗಡರಿಗೆ ಸಮಜೋಡಿ. ಇವನ ಕಾಲ ಕ್ರಿ. ಶ. ೧೩೬೫–೧೪೪೦. ತೆಲುಗು ಸಂಸ್ಕೃತಗಳೆರಡರಲ್ಲಿಯೂ ಈತನಿಗೆ ಅಸಾಧಾರಣವಾದ ಪಾಂಡಿತ್ಯ. ಆದ್ದರಿಂದಲೇ ಈತನು ವಿದ್ವದೌಷಧವೆನಿಸಿದ ನೈಷಧವನ್ನೂ ಉಕ್ಕಿನ ಉಂಡೆಗೆ ಹೋಲಿಸಲ್ಪಟ್ಟಿರುವ ಕಾಶೀಖಂಡವನ್ನೂ ಸುಲಭವಾಗಿ ತೆಲುಗಿಸಿ ಕವಿಸಾರ್ವಭೌಮನೆನಿಸಿಕೊಂಡನು. ಈತನು ಕೃಷ್ಣಾ ಜಿಲ್ಲೆಯ ಕಾಲಪಟ್ಟಣವೆಂಬ ಒಂದು ಸಣ್ಣ ಗ್ರಾಮದಲ್ಲಿ ಜನಿಸಿ ತನ್ನ ತಾತನಾದ ಕಮಲನಾಭಾಮಾತ್ಯನ ಪೋಷಣೆಯಲ್ಲಿ ಬೆಳೆದು ಉಭಯ ಭಾಷಾಸಾಹಿತ್ಯಗಳನ್ನೂ ಅಭ್ಯಾಸಮಾಡಿದನು. ಈತನು ಸಹಜಕವಿ. ಬಾಲ್ಯದಲ್ಲಿಯೇ ಈತನಿಗೆ ಕವಿತಾಶಕ್ತಿ ಲಭಿಸಿದಂತೆ ತೋರುತ್ತದೆ. ಚಿಕ್ಕಹುಡುಗನಾಗಿದ್ದಾಗಲೇ ಮರುತ್ತರಾಯಚರಿತ್ರೆ ಯೆಂಬ ಕಾವ್ಯವನ್ನು ಬರೆದನಂತೆ! ಯೌವನ ಪ್ರಾದುರ್ಭಾವ ಸಮಯದಲ್ಲಿ ಶಾಲೀವಾಹನ ಸಪ್ತಶತಿಯನ್ನೂ ತುಂಬುಯೌವನದಲ್ಲಿ ಆಂಧ್ರನೈಷಧವನ್ನೂ ಪ್ರೌಢ ವಯಸ್ಸಿನಲ್ಲಿ ಭೀಮಖಂಡವನ್ನೂ ವಾರ್ಧಕ್ಯ ಸಮೀಪಿಸುವ ಮೊದಲೇ ಕಾಶೀ ಖಂಡವನ್ನೂ ಬರೆದನಂತೆ! ಇವಲ್ಲದೆ ನಿಗಮಾರ್ಥಸಾರಸಂಗ್ರಹ, ಪಂಡಿತಾರಾಧ್ಯ ಚರಿತೆ, ಪಲ್ನಾಟಿವೀರಚರಿತೆ, ವೀಧೀನಾಟಕ ಎಂಬ ಗ್ರಂಥಗಳನ್ನೂ ಬರೆದಿರುವಂತೆ ತೋರುತ್ತದೆ. ಈತನ ನೈಷಧವು ಬಹಳ ಶ್ರೇಷ್ಠವಾಗಿದ್ದು ಆಂಧ್ರ ಪಂಚಮಹಾ ಕಾವ್ಯಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಕೆಲವು ಸಂದರ್ಭಗಳಲ್ಲಿ ಮೂಲ ಗ್ರಂಥಕ್ಕಿಂತ ಭಾಷಾಂತರವೇ ಶ್ರೇಷ್ಠವಾಗಿದೆಯೆಂಬುದು ವಿದ್ವಾಂಸರ ಮತ. 'ಶ್ರೀ ಹರ್ಷನಿಗೊಬ್ಬ ಶ್ರೀನಾಥ' ಎಂದು ಹೇಳುವುದು ವಾಡಿಕೆಯಾಗಿದೆ. ಅವನ ವಿಚಾರವಾಗಿ ಹಲವು ಕಥೆಗಳು ಪ್ರಚಾರದಲ್ಲಿವೆ. ಶ್ರೀನಾಥನೇ ತನ್ನ ಅನುಭವಗಳನ್ನು ಹಲವು ಬಿಡಿ ಪದ್ಯಗಳಲ್ಲಿ ವರ್ಣಿಸಿದ್ದಾನೆ. ಆ ಪದ್ಯಗಳು ಚಾಟು ಶ್ಲೋಕಗಳಂತೆ ತೆಲುಗು ದೇಶದಲ್ಲಿ ಪ್ರಚಾರಗೊಂಡಿವೆ. ಅವುಗಳಲ್ಲಿ ಕೆಲವನ್ನು ಮುಂದೆ ಕೊಟ್ಟಿದೆ. ಈಗಿನ ಕರ್ನೂಲು ಜಿಲ್ಲೆಗೆ ರೇನಾಡೆಂದು ಹೆಸರು. ಈ ರೇನಾಡಿಗೆ ಶ್ರೀನಾಥನು

ಹೋದಾಗ ಅಲ್ಲಿ ಯಾರೋ ಅವನಿಗೆ ಜೋಳದ ಅನ್ನವನ್ನು ಬಡಿಸಿದ್ದಾರೆ; ಭೋಜನ ರಸಿಕನೂ, ಭೋಗಲಾಲಸನೂ ಆದ ಶ್ರೀನಾಥನಿಗೆ ಅದು ಹಾಲಾಹಲಕ್ಕಿಂತಲೂ ಕಠಿನವಾಗಿ ಕಂಡಿತಂತೆ! ಅದನ್ನು ಕುರಿತು ಈ ಪದ್ಯವನ್ನು ನುಡಿದಿದ್ದಾನೆ:—

ಗರಳಮು ಮ್ರಿಂಗಿ ತಿನಂಚುಂ
ಬುರಹರ ಗರ್ವಿಂಪಬೋಕು ಪೋಪೋಪೋ ನೀ
ಬಿರುದಿಂಕಗಾನವಚ್ಚೆಡಿ
ಮೆಱಿಸೆಡಿ ರೇನಾಟಿ ಜೊನ್ನಮೆದುಕುಲು ತಿನುಮಾ||

(ಓ ಪುರಹರ, ಗರಳವನ್ನು ನುಂಗಿದೆನೆಂದು ಗರ್ವಿಸಬೇಡ. ಈ ರೇನಾಡಿನ ಜೋಳದ ಅಗುಳುಗಳನ್ನು ತಿಂದರೆ ನಿನ್ನ ಯೋಗ್ಯತೆ ತಿಳಿಯುತ್ತದೆ.)

ರೇನಾಡೇ ಅಲ್ಲದೆ ಪಲ್ನಾಡೂ ಶ್ರೀನಾಥನ ಟೀಕೆಗೆ ಒಳಗಾಗಿದೆ. ಗುಂಟೂರು ಜಿಲ್ಲೆಯ ಪಶ್ಚಿಮಭಾಗಕ್ಕೆ ಪಲ್ನಾಡೆಂದು ಹೆಸರು. ಇಲ್ಲಿ ಜಲಕ್ಷಾಮ ಹೆಚ್ಚು; ಜನರು ಬಡವರು, ಒರಟರು. ಇಂಥಾ ದೇಶದಲ್ಲಿ ಈ ರಸಿಕಶಿಖಾಮಣಿಗೆ ಆದ ರೋಪಚಾರಗಳು ಹೇಗೆ ನಡೆದಾವು? ಇಲ್ಲಿನ ಜನರ ದಾರಿದ್ರ್ಯ ಒರಟುತನಗಳನ್ನು ಕವಿಯು ಹಲವು ಪದ್ಯಗಳಲ್ಲಿ ವರ್ಣಿಸಿದ್ದಾನೆ. ತಾನು ಒಂದುಸಲ ಇಳಿದುಕೊಂಡಿದ್ದ ಪುರೋಹಿತನ ಮನೆಯ ವರ್ಣನೆ ಇದು:—

ದೋಸೆಡು ಕೊಂಪಲೋ ಪಸುಲ ತ್ರೊಕ್ಕಿಡಿ ಮಂಚಮು ದೂಡರೇಣಮುನ್
ಬಾಸಿನ ವಂಟಕಂಬು ಪಸಿಬಾಲುರ ಶೌಚಮು ವಿಸ್ತರಾಕುಲುನ್
ಮಾಸಿನ ಗುಡ್ಡಲುನ್ ತಲಕು ಮಾಸಿನ ಮುಂಡಲು ವಂಟಕುಂಡಲುನ್
ರಾಸೆಡು ಕಟ್ಟೆಲುಂ ದಲಪರಾದು ಪುರೋಹಿತಲಿಂಟಿಕೃತ್ಯಮುಲ್

(ಬೊಗಸೆಯಷ್ಟು 'ಕೊಂಪೆ'ಯಲ್ಲಿ ದನಗಳ ತುಳಿದಾಟ, ಒಂದು ಮಂಚ, ಕರುವಿನ ಸೆಗಣಿ, ಹಳಸಿದ ತಂಗಳು, ಚಿಕ್ಕಮಕ್ಕಳ ಶೌಚ, ಊಟದೆಲೆಗಳು,* ಮಾಸಿದ ಬಟ್ಟೆಗಳು, ತಲೆಮಾಸಿದ ಮುಂಡೆಯರು, ಅಡಿಗೆಯ ಮಡಕೆಗಳು, ರಾಸಿಗಟ್ಟಲೆ ಸೌದೆ—ಈ ಪಲ್ನಾಡಿನ ಪುರೋಹಿತರ ಮನೆಯ ಕೃತ್ಯಗಳನ್ನು ನೆನೆಸಿಕೊಳ್ಳಲೂ ಬಾರದು.)

ರಸಿಕಡು ಪೋವಡು ಪಲ್ನಾ
ಡೆಸಗಂಗಾ ರಂಭಯೈನ ನೇಕುಲೆ ವಡುಕುನ್
ವಸುಧೇಶುಡೈನ ದುನ್ನುನು
ಗುಸುಮಾಸ್ತ್ರುಂಡೈನ ಜೊನ್ನ ಕೂಡೇ ಕುಡುಚುನ್

* ಪಲ್ನಾಡಿನ ಹಳ್ಳಿಗಳಲ್ಲಿ ಊರಿನ ಒಕ್ಕಲಿಗರಿಗೆ ಉತ್ಸವಕಾಲಗಳಲ್ಲಿ ಬೇಕಾಗುವಷ್ಟು ಊಟದೆಲೆಗಳನ್ನು ಪುರೋಹಿತರೇ ಹಚ್ಚಿಕೊಡಬೇಕಂತೆ. ಅದಕ್ಕಾಗಿ ಅವರ ಮನೆಯಲ್ಲಿ ರಾಸಿ ಗಟ್ಟಲೆ ಎಲೆ ಬಿದ್ದಿರುತ್ತದೆ.

(ರಸಿಕನು ಪಲ್ನಾಡಿಗೆ ಹೋಗನು. ಏಕೆಂದರೆ ಅಲ್ಲಿ ರಂಭೆಯಾದರೂ ರಾಟೆ ಹಿಡಿದು ನೂಲಬೇಕು. ವಸುಧೇಶನೇ ಆದರೂ ನೇಗಿಲುಹಿಡಿದು ಉಳಬೇಕು. ಕುಸುಮಾಸ್ತ್ರನೇ ಆದರೂ ಜೋಳದ ಕೂಳನ್ನೇ ತಿನ್ನಬೇಕು.)

ಪಲ್ನಾಡಿನಲ್ಲಿ ಒಂದು ಸಲ ದಾರಿ ನಡೆಯುತ್ತಿದ್ದಾಗ ದಾಹವಾಗಿ ನೀರು ಸಿಕ್ಕದೆ ಕಷ್ಟಪಟ್ಟ ಶ್ರೀನಾಥನು ನೀರಿಗಾಗಿ ಆ ಗಂಗಾಧರನನ್ನು ಬೇಡಿದ ರೀತಿ ಇದು:—

ಸಿರಿ ಗಲವಾನಿಕಿ ಜೆಲ್ಲುನು
ದರುಣುಲು ಪದಿಯಾರು ವೇಲದಗ ಪೆಂಡ್ಲಾಡನ್
ದಿರಿಪೆಮುನಕಿದ್ದರಾಂಡ್ರ್ರಾ
ಪರಮೇಶಾ ಗಂಗ ವಿಡುಮು ಪಾರ್ವತಿ ಚಾಲುನ್ ||

(ಸಿರಿಯುಳ್ಳವನು ಹದಿನಾರು ಸಾವಿರ ತರುಣಿಯರನ್ನು ಮದುವೆಯಾದರೂ ಸಲ್ಲುತ್ತದೆ. 'ತಿರುಪೆ' ಯವನಿಗೆ ಇಬ್ಬರು ಹೆಂಡಿರೆ? ಪರಮೇಶ್ವರಾ, ನಿನಗೆ ಪಾರ್ವತಿಯೊಬ್ಬಳು ಸಾಕು; ಗಂಗೆಯನ್ನು ಬಿಟ್ಟುಬಿಡು.)

ಶ್ರೀನಾಥನು ಮಹಾ ಶಿವಭಕ್ತ. 'ಕಾಂಶೀಖಂಡ,' 'ಶಿವರಾತ್ರಿ ಮಾಹಾತ್ಮ್ಯ' 'ಹರವಿಲಾಸ' ಎಂಬ ಶೈವಗ್ರಂಥಗಳನ್ನು ರಚಿಸಿದವನು. ಆದರೆ ಈ ಪದ್ಯದಲ್ಲಿ ಅವನು ಶಿವನನ್ನು ಪ್ರಾರ್ಥಿಸಿರುವ ರೀತಿಯಲ್ಲಿ ಒಂದು ಔದ್ಧತ್ಯವಿದೆ. ಇನ್ನೊಂದು ಸಲ ಶ್ರೀನಾಥನು ಬಹಳ ಬೇಸರಗೊಂಡು ಪಲ್ನಾಡನ್ನು ಹೀಗೆ ಬೈದಿದ್ದಾನೆ:

ಅಂಗಡಿ ಯೂರಲೇದು ವರಿಯನ್ನಮು ಲೇದು ಶುಚಿತ್ವಮೇಮಿ ಲೇ
ದಂಗನಲಿಂಪುಗಾರು ಪ್ರಿಯಮೈನ ವನಂಬುಲು ಲೇವು ನೀಟಿಕೈ
ಭಂಗಪಡಂಗ ಬಾಲ್ಪಡು ಕೃಪಾಪರುಲೆವ್ವರು ಲೇರು ದಾತಲೆ
ನ್ನಂಗನು ಸುನ್ನ ಗಾನ ಪಲ್ನಾಟಿಕಿ ಕಾಟಿಕಿ ಪೋವ ನೇಟಿಕಿನ್

(ಊರಲ್ಲಿ ಒಂದು ಅಂಗಡಿಯಿಲ್ಲ. ನೆಲ್ಲಕ್ಕಿಯ ಅನ್ನವಿಲ್ಲ. ಶುಚಿತ್ವವು ಎಷ್ಟು ಮಾತ್ರವೂ ಇಲ್ಲ. ಅಂಗನೆಯರಲ್ಲಿ ಇಂಪಿಲ್ಲ. ಪ್ರಿಯವಾದ ಉದ್ಯಾನಗಳಿಲ್ಲ. ನೀರಿಗಾಗಿ ಭಂಗಪಟ್ಟರೆ ಸಹಾಯಮಾಡುವ ಕೃಪಾಪರರು ಯಾರೂ ಇಲ್ಲ. ದಾತರು ಸೊನ್ನೆ. ಇಂಥಾ ಪಲ್ನಾಡಿಗೆ, ಸ್ಮಶಾನಕ್ಕೆ, ಏಕೆ ಹೋಗಬೇಕು?)

ಕನ್ನಡ ದೇಶವೂ ಶ್ರೀನಾಥನ ಗಮನಕ್ಕೆ ಬಂದಿದೆ. ವಿಜಯನಗರದ ಪ್ರೌಢ ದೇವರಾಯನ ಸಂದರ್ಶನಾರ್ಥವಾಗಿ ಬಂದ ಶ್ರೀನಾಥನಿಗೆ ಎಷ್ಟುದಿನಗಳಾದರೂ ರಾಜದರ್ಶನ ಲಭಿಸಲಿಲ್ಲ. ಆಗ ಬೇಸರಗೊಂಡು ಶ್ರೀನಾಥನು ಈ ಪದ್ಯವನ್ನು ಹೇಳಿದ್ದಾನೆ:

ಕುಲ್ಲಾಯುಂಚಿತಿ ಗೋಕ ಸುಟ್ಟಿತಿ ಮಹಾಕೂರ್ಪಾಸಮು ನ್ದೊಡಿತಿನ್
ವೆಲ್ಲುಲ್ಲಿನ್ ತಿಲಪಿಷ್ಟಮುನ್ ಪಿಸಿಕಿತಿನ್ ವಿಶ್ವಸ್ತ ವಡ್ಡಿಂಪಗಾ
ಸಲ್ಲಾನಂಬಲಿ ದ್ರಾವಿತಿನ್ ರುಚುಲು ದೋಸಂಬಂಚು ಬೋನಾಡಿತಿನ್
ದಲ್ಲೀ ಕನ್ನಡರಾಜ್ಯಲಕ್ಷ್ಮಿ ದಯಲೇದಾ ನೇನು ಶ್ರೀನಾಥುಡನ್.

(ಕುಲಾವಿಯನ್ನಿಟ್ಟುಕೊಂಡೆ; ಸೀರೆ (ರುಮಾಲು)ಯನ್ನು ತಲೆಗೆ ಸುತ್ತಿದೆ. ಈ ದೊಡ್ಡ ಕುಪ್ಪಸ (ನಿಲುವಂಗಿ)ವನ್ನು ತೊಟ್ಟುಕೊಂಡೆ. ಬೆಳ್ಳುಳ್ಳಿ ಎಳ್ಳುಗಳ ಚಟ್ಣಿಯನ್ನು ತಿನ್ನಲಾರದೆ ಕೈಲಿ ಹಿಸಿಕಿ ಬಿಸಾಟೆ. ತಣ್ಣನೆಯ ಗಂಜಿಯನ್ನು ಕುಡಿದೆ. ರುಚಿಗಳು ದೋಷವೆಂದೆಣಿಸಿ ಬಿಟ್ಟುಬಿಟ್ಟೆ. ತಾಯಿ, ಕನ್ನಡ ರಾಜ್ಯಲಕ್ಷ್ಮೀ, ಇಷ್ಟಾದರೂ ನಿನಗೆ ದಯೆ ಬರಲಿಲ್ಲವೆ? ನಾನು ಶ್ರೀನಾಥ.)

ಆ ಮೇಲೆ ಶ್ರೀನಾಥನಿಗೆ ರಾಜಸಂದರ್ಶನವು ಲಭಿಸಿದುದೇ ಅಲ್ಲದೆ ಅರಸನಿಂದ ಕನಕಾಭಿಷೇಕವೇ ನಡೆಯಿತಂತೆ!

ನೆಲ್ಲೂರು ಜಿಲ್ಲೆಯ ಒಂದು ಭಾಗಕ್ಕೆ ಹಿಂದೆ ರಾವುಸಿಂಗಭೂಪಾಲನು ದೊರೆಯಾಗಿದ್ದನು. ಈತನು ಮಹಾ ಪ್ರಾಜ್ಞನಾಗಿದ್ದುದಲ್ಲದೆ, ತನ್ನ ಆಸ್ಥಾನದಲ್ಲಿ ಹಲವರು ವಿದ್ವಾಂಸರನ್ನು ಪೋಷಿಸುತ್ತಿದ್ದನು. ಈತನಿಗೆ 'ಸರ್ವಜ್ಞ'ನೆಂಬ ಒಂದು ಬಿರುದು ಕೂಡ ಇತ್ತು. ಈತನ ಬಳಿಗೆ ಶ್ರೀನಾಥನು ತನ್ನ ಆಶ್ರಯದಾತನಾದ ವೇಮಭೂಪಾಲನ ರಾಯಭಾರಿಯಾಗಿ ಹೋಗಬೇಕಾಯಿತು. ಅಲ್ಲಿ ತನಗೆ ಗೌರವ ಬಂದೀತೋ ಬಾರದೋ ಎಂಬ ಶಂಕೆಯಿಂದ ಶ್ರೀನಾಥನು ಶಾರದೆಯನ್ನು ಹೀಗೆ ಪ್ರಾರ್ಥಿಸಿದನಂತೆ:

ದೀನಾರಟಂಕಾಲ ದೀರ್ಥಮಾಡಿಂಚಿತಿ
ದಕ್ಷಿಣಾಧೀಶು ಮುತ್ಯಾಲ ಶಾಲ.
ಪಲುಕುದೋಡೈತಾಂಧ್ರಭಾಷಾಮಹಾಕಾವ್ಯ
ನೈಷಧಗ್ರಂಥಸಂದರ್ಭಮುನಕು.
ಪಗುಲಗೊಟ್ಟಿಂಚಿತುದ್ಭಟವಿವಾದಪ್ರೌಢಿ
ಗೌಡಡಿಂಡಿಮಭಟ್ಟು ಕಂಚು ಢಕ್ಕ
ಚಂದ್ರಭೂಷಕ್ರಿಯಾಶಕ್ತಿರಾಯಲಯೊದ್ದ
ಪಾದುಕೊಲ್ಪಿತಿ ಸಾರ್ವಭೌಮಬಿರುದ
ಮೆಟುಲುಮೆಪ್ಪಿಂಚೆದೋನನ್ನು ನಿಂಕಮಾದ
ರಾವುಸಿಂಗಮಹೀಪಾಲು ಧೀವಿಶಾಲು
ನಿಂಡುಕೊಲುವುನ ನೆಲಕೊನಿಯುಂಡಿ ನೀವು
ಸರಸಸದ್ಗುಣನಿಕುರುಂಬ ಶಾರದಾಂಬ ||

(ದಕ್ಷಿಣಾಧೀಶನ ಮುತ್ತಿನ ಓಲಗಶಾಲೆಯಲ್ಲಿ ನನಗೆ ದೀನಾರ ಟಂಕಗಳಿಂದ ಅಭಿಷೇಕ ಮಾಡಿಸಿದೆ. ಆಂಧ್ರಭಾಷೆಯಲ್ಲಿ ನೈಷಧವೆಂಬ ಮಹಾಕಾವ್ಯವನ್ನು ಬರೆಯಲು ಸಹಾಯಮಾಡಿದೆ. ಗೌಡದೇಶದ ಡಿಂಡಿಮಭಟ್ಟನನ್ನು ಪ್ರೌಢವಾದ ವಾಗ್ವಾದದಲ್ಲಿ ಸೋಲಿಸಿ ಅವನ ಕಂಚಿನ ಢಕ್ಕೆಯನ್ನು ಒಡೆದುಹಾಕಿಸಲು ಸಹಾಯಮಾಡಿದೆ. ಚಂದ್ರಭೂಷ ಕ್ರಿಯಾಶಕ್ತಿರಾಯರ ಆಸ್ಥಾನದಲ್ಲಿ ನನಗೆ ಕವಿಸಾರ್ವಭೌಮನೆಂಬ ಬಿರುದನ್ನು ಕೊಡಿಸಿದೆ. ಓ ಶಾರದಾಂಬೆ, ಸದ್ಗುಣನಿಕುರುಂಬೆ, ಇನ್ನು ಮಹಾಧೀಶಾಲಿಯಾದ ರಾವುಸಿಂಗಮಹೀಪಾಲನ ಒಡ್ಡೋಲಗದಲ್ಲಿ ನೀನು ಹೇಗೆ ಗೌರವವನ್ನು ಉಳಿಸುವೆಯೋ !).

ಈ ಪ್ರಾರ್ಥನೆಯಲ್ಲಿಯೇ ಶ್ರೀನಾಥನು ತನ್ನ ಹಿಂದಿನ ವೈಭವವನ್ನೆಲ್ಲ ವರ್ಣಿಸಿದ್ದಾನೆ.

ಒಂದು ಸಲ ರಾಜಮಹೇಂದ್ರಕ್ಕೆ ಹೋಗಿದ್ದಾಗ ಅಲ್ಲಿನ ಪಂಡಿತರು ಶ್ರೀನಾಥನನ್ನು ಅಪಹಾಸ್ಯಮಾಡಿದರಂತೆ. ಕೂಡಲೆ ಆಗ್ರಹೋದಗ್ರನಾದ ಶ್ರೀನಾಥನು ತನ್ನ ಆಶುಕವಿತೆಯ ಖಡ್ಗಧಾರೆಯನ್ನು ಅವರ ಮೇಲೆ ಬೀಸಿದನು. ಅವನು,

ಬೋಧಮಲ್ಪಂಬು ಗರ್ವಮಭ್ಯುನ್ನತಂಬು
ಶಾಂತಿ ನಿಪ್ಪಚ್ಚರಂಬು ಮಚ್ಚರಮು ಘನಮು
ಕೂಪಮಂಡೂಕಮುಲ ಬೋಲೆ ಕೊಂಚಮೆಱುಗಿ
ಪಂಡಿತಂಮನ್ಯುಲೈನ ವೈತಂಡಿಕುಲಕು

ಎಂದು ಬಹಳ ಉಗ್ರವಾಗಿ ನುಡಿದು ಅವರ ಬಾಯಿ ಮುಚ್ಚಿದನಂತೆ.

(ಬಾವಿಯೊಳಗಿನ ಕಪ್ಪೆಗಳಂತೆ ಕೊಂಚ ತಿಳಿದು ಪಂಡಿತಂಮನ್ಯರಾದ ಈ ವಿತಂಡಾವಾದಿಗಳಿಗೆ ಜ್ಞಾನ ಕೊಂಚ; ಗರ್ವ ಹೆಚ್ಚು. ಶಾಂತಿ ಸೊನ್ನೆ; ಮತ್ಸರ ಹೆಚ್ಚು.)

ಹೀಗೆ ಭೋಗೈಕಲಾಲಸನಾಗಿ, ರಸಿಕನಾಗಿ, ಶ್ರೀಮಂತನಾಗಿ, ರಾಜಸನ್ಮಾನಿತನಾಗಿ ಬದುಕಿದ ಶ್ರೀನಾಥನಿಗೂ ಕಷ್ಟ ತಪ್ಪಲಿಲ್ಲ. ರಾಜಮಹೇಂದ್ರವು ನಾಶವಾಯಿತು. ಅಲ್ಲಿನ ದೊರೆ ಪದಭ್ರಷ್ಟನಾದನು. ಶ್ರೀನಾಥನಿಗೆ ಇನ್ನಾವ ರಾಜನ ಆಶ್ರಯವೂ ಸಿಕ್ಕಲಿಲ್ಲ. ಯತ್ನವಿಲ್ಲದೆ ಕೃಷ್ಣಾತೀರದಲ್ಲಿ ಬೊಡ್ಡುಪಲ್ಲಿಯೆಂಬ ಗ್ರಾಮವನ್ನು ಶ್ರೀನಾಥನನು ಗುತ್ತಿಗೆಗೆ ತೆಗೆದುಕೊಂಡನು. ಆದರೆ ದುರ್ದೈವದಿಂದ ಆ ವರ್ಷ ಪ್ರವಾಹ ಹೆಚ್ಚಾಗಿ ಬಂದು ಇಡಿಸಿದ್ದ ಬೆಳೆ ಹಾಳಾಯಿತು. ಗುತ್ತಿಗೆಯ ಹಣ ಸಲ್ಲಿಸಲು ಅಸಾಧ್ಯವಾಯಿತು. ಗಜಪತಿರಾಜರು ಸುಮ್ಮನೆ ಬಿಡುವವರಲ್ಲ. ಗುತ್ತಿಗೆಯನ್ನು ಕೊಡದ ಈ ಕವಿರಾಜನಿಗೆ ಕೋಳಹಾಕಿ, ಗುಂಡುಹೊರಿಸಿ, ಮೆರವಣಿಗೆ ಮಾಡಿ ಅವಮಾನಪಡಿಸಿದರು. ಆಗ "ಕರ್ಣಾಟಕಕ್ಷಿತಿಪಾಲಮೌಕ್ತಿಕ ಸಭಾಗಾರಾಂತರಾ

ಕಲ್ಪಿತಸ್ವರ್ಣಸ್ನಾನ ಜಗತ್ಪ್ರಸಿದ್ಧ ಕವಿ'' ರಾಜನಾದ ಶ್ರೀನಾಥನು ತನ್ನ ಪೂರ್ವ ಸ್ಥಿತಿಯನ್ನು ನೆನೆಸಿಕೊಂಡು ಅತ್ತಿದ್ದಾನೆ—

ಕವಿರಾಜು ಕಂಠಂಬು ಕೌಗಿಲಿಂಚೆನು ಗದಾ
ಪುರವೀಧಿನೆದುರೇಗ ಬೊಗಡ ದಂಡ
ಸಾರ್ವಭೌಮುನಿ ಭುಜಾಸ್ತಂಭಮೆಕ್ಕೆನು ಗದಾ
ನಗರಿ ವಾಕಿಟನುಂಡು ನಲ್ಲ ಗುಂಡು
ವೀರಭದ್ರಾರೆಡ್ಡಿ ವಿದ್ವಾಂಸು ಮುಂಜೇತ
ವಿಯ್ಯಮಂದೆನು ಗದಾ ವೆದುರು ಗೊಡಿಯ
ಆಂಧ್ರನೈಷಧಕರ್ತ ಯಂಘ್ರಿಯುಗ್ಮಂಬುನ
ದಗಿಲಿ ಯುಂಡೆನು ಗದಾ ನಿಗಳಯುಗಮು
ಕೃಷ್ಣವೇಣಮ್ಮ ಗೊನಿಪೋಯೆನಿಂತಫಲಮು
ಬಿಲಬಿಲಾಕ್ಷುಲುದಿನಿಪೋಯೆ ದಿಲಲುಪೆಸಲು
ಬೊಡ್ಡುಪಲ್ಲೆನುಗೊಡ್ಡೇರಿ ಮೋಸಪೋತಿ
ನೆಟ್ಟುಚೆಲ್ಲಿಂತು ಡಂಕಂಬುಲೇಡುನೂರ್ಲು ?

(ಕವಿರಾಜನ ಕೊರಳಿಗೂ ಅಪಮಾನಕರವಾದ ಈ ದಂಡೆಯು ಬಿತ್ತಲ್ಲವೆ? ಕವಿ ಸಾರ್ವಭೌಮನಾದ ನನ್ನ ಭುಜದ ಮೇಲೆ ಈ ಊರು ಬಾಗಿಲಿನ ಕರಿಯಗುಂಡನ್ನು ಎತ್ತಿದರಲ್ಲವೆ? ವೀರಭದ್ರಾರೆಡ್ಡಿಯ ವಿದ್ವಾಂಸನ ಮುಂಗೈಗೆ ಬಿದಿರಿನ ಕೋಳವನ್ನು ಹಾಕಿದರು. ಆಂಧ್ರನೈಷಧಕರ್ತನ ಅಂಘ್ರಿಯುಗ್ಮಕ್ಕೆ ಸಂಕೋಲೆ ತಗಲಿಸಿದರು. ಕೃಷ್ಣವೇಣಮ್ಮನು (ನದಿ) ಕೊಂಚ ಫಲವನ್ನು ಕೊಂಡುಹೋದಳು. ಇಲಿಗಳು, ಕ್ರಿಮಿಕೀಟಗಳು ಕೊಂಚ ತಿಂದುಹಾಕಿದುವು. ಬೊಡ್ಡುಪಲ್ಲಿ ಎಂಬ ಈ ಕುಗ್ರಾಮಕ್ಕೆ ಬಂದು ಮೋಸಹೋದೆ. ಏಳುನೂರು ಟಂಕಗಳನ್ನು ಕಂದಾಯಕ್ಕಾಗಿ ನಾನು ಹೇಗೆ ಸಲ್ಲಿಸಲಿ?) ಹೀಗೆ ಕಂದಾಯವನ್ನು ಕೊಡಲಾರದೆ ಗಜಪತಿರಾಜರ ಕಾಟಕ್ಕೆ ಈಡಾಗಿ ಬಹಳ ರಿಕ್ತಾವಸ್ಥೆಯಲ್ಲಿಯೇ ತನ್ನ ವೃದ್ಧಾಪ್ಯವನ್ನು ಕಳೆದು ದಿವಂಗತ ನಾದನು. ತನ್ನ ಅವಸಾನಕಾಲದಲ್ಲಿಯೂ ಶ್ರೀನಾಥನು ತನ್ನ ಆತ್ಮಪ್ರತ್ಯಯವನ್ನು ಬಿಡಲಿಲ್ಲ. ಕೊನೆಗಾಲದಲ್ಲಿ ಶ್ರೀನಾಥನು ಹೇಳಿದ ಪದ್ಯವಿದು :

ಕಾಶಿಕಾ ವಿಶ್ವೇಶು ಗಲಿಸೆ ವೀರಾರೆಡ್ಡಿ
ರತ್ನಾಂಬರಂಬುಲೇ ರಾಯಡಿಚ್ಚು
ರಂಭಗೂಡೆ ದೆನುಂಗುರಾಯರಾಹುತ್ತುಂಡು
ಕಸ್ತೂರಿಕೇರಾಜು ಪ್ರಸ್ತುತಿಂತು
ಸ್ವರ್ಗಸ್ಥುಡಯ್ಯೆ ವಿಸ್ಸನಮಂತ್ರಿ ಮಱಿ ಹೇಮ
ಪಾತ್ರಾನ್ನಮೆವ್ವನಿ ಪಂಕ್ತಿ ಗಲದು.

ಕೈಲಾಸಗಿರಿ ಬಂಡೆ ಮೈಲಾರುವಿಭುಡೇಗಿ
ದಿನವೆಚ್ಚ ಮೇ ರಾಜು ತೀರ್ಪಗಲದು.
ಭಾಸ್ಕರುಡು ಮುನ್ನೆ ದೇವುನಿ ಪಾಲಿಕರಿಗೆ
ಗಲಿಯುಗಂಬುನ ನಿಕ ನುಂಡಗಷ್ಟಮನುಚು
ದಿವಿಜಕವಿವರು ಗುಂಡಿಯಲ್ ದಿಗ್ಗುರನಗ
ನರುಗುಚುನ್ನಾಡು ಶ್ರೀನಾಥುಡಮರಪುರಿಕಿ.

(ವೀರಾರೆಡ್ಡಿಯು ಕಾಶೀವಿಶ್ವೇಶ್ವರನನ್ನು ಸೇರಿಬಿಟ್ಟ. ಇನ್ನು ರತ್ನಾಂಬರಗಳನ್ನು ಯಾವ ರಾಯನು ಕೊಡುತ್ತಾನೆ? ತೆನುಗುರಾಯನು ರಂಭೆಯನ್ನು ಕೂಡಿದ. ಕಸ್ತೂರಿಗಾಗಿ ಇನ್ನು ಯಾವ ರಾಜನನ್ನು ಹೊಗಳಲಿ? ವಿಸ್ಸನಮಂತ್ರಿ ಸ್ವರ್ಗಸ್ಥನಾದ. ಇನ್ನು ಹೇಮಪಾತ್ರಾನ್ನವು ಯಾರ ಪಂಕ್ತಿಯಲ್ಲಿ ಲಭಿಸೀತು? ಮೈಲಾರವಿಭುವು ಕೈಲಾಸಗಿರಿಯನ್ನು ಹತ್ತಿದನು. ಇನ್ನು ದಿನವೆಚ್ಚವನ್ನು ಯಾವ ರಾಜನು ತೀರಿಸಬಲ್ಲನು? ಭಾಸ್ಕರನು ಮೊದಲೆ ದೇವರ ಬಳಿಗೆ ಸೇರಿದನು. ಆದ್ದರಿಂದ ಇನ್ನು ಕಲಿಯುಗದಲ್ಲಿರುವುದು ಕಷ್ಟವೆಂದು ಯೋಚಿಸಿ ಶ್ರೀನಾಥನು ಅಮರಪುರಿಗೆ ಹೋಗುತ್ತಿದ್ದಾನೆ. ದೇವಕವಿಯ (ಶುಕ್ರನ) ಎದೆ ಹೊಡೆದುಕೊಳ್ಳುತ್ತಿದೆ.)

'ಇನ್ನು ಶ್ರೀನಾಥನು ಸ್ವರ್ಗಕ್ಕೆ ಬರುವನಲ್ಲಾ' ಎಂದು ದೇವಕವಿಯ (ಶುಕ್ರನ) ಗುಂಡಿಗೆಯು 'ದಿಗ್ಗ್' ಎಂದಿತಂತೆ!

ಕೆ. ವೆಂಕಟರಾಮಪ್ಪ.

ಕಾವ್ಯಾವಲೋಕನ

ಭಾರತಮಾರ್ಗ—ಅನುವಾದಕರು: ಗುರುರಾಜ ಭೀ. ಜೋಶಿ, ಎಂ.ಎ., ಬಿ.ಟಿ.; ಕ್ರೌನ್ ಅಷ್ಟಪುಟಗಳು ೪೧೩; ಪ್ರಕಾಶಕರು: ಮನೋಹರ ಗ್ರಂಥಮಾಲೆ, ಬೆಲೆ ರೂ. ೨-೪-೦.

ಈ ಗ್ರಂಥವು ಶ್ರೀಮಾನ್ ಇ. ಎಂ. ಫಾರ್ಸ್ಟರ್ ಅವರ "ದಿ ಪ್ಯಾಸೇಜ್ ಟು ಇಂಡಿಯ" ಎಂಬ ಇಂಗ್ಲಿಷ್ ಕಾದಂಬರಿಯ ಕನ್ನಡ ಅನುವಾದ.

ಈ ಬೃಹತ್ಕಾದಂಬರಿಯ ಹೊಟ್ಟೆಯಲ್ಲಿ ಹುದುಗಿರುವ ಕಥಾವಸ್ತು ಅತ್ಯಲ್ಪ:

ಅಝೀಜನೆಂಬವನು ವೈದ್ಯವೃತ್ತಿಯಿಂದ ಜೀವನವನ್ನು ಸಾಗಿಸುತ್ತಿರುವ ಭಾವಜೀವಿ. ಅವನು ತನ್ನ ಯೋಗ್ಯತೆಗೆ ತಕ್ಕ ಪುರಸ್ಕಾರವಿಲ್ಲದೆ, ಹೊಟ್ಟೆಯಲ್ಲಿನ ಸಿಟ್ಟು ರಟ್ಟೆಯಲ್ಲಿ ಇಲ್ಲದೆ, ಒಳಗೊಳಗೇ ಕುದಿಯುತ್ತಿದ್ದಾನೆ. ಹಿಂದೂದೇಶವನ್ನು ನೋಡಬೇಕೆಂದು ಆಗತಾನೆ ಕಾಲಿಟ್ಟಿರುವ ಮಿಸೆಸ್ ಮೂರ್ ಮತ್ತು ಮಿಸ್ ಅಡೀಲಾ ಎಂಬ ಸ್ತ್ರೀಯರು ಇವನಿಗೆ ಪರಿಚಿತರಾಗುತ್ತಾರೆ. ಇವರಿಬ್ಬರದೂ ಮುಚ್ಚುಮರೆಯಿಲ್ಲದ ಸರಳಸ್ವಭಾವ. ಅವರ ಮನಸ್ಸು ಇನ್ನೂ ಆಂಗ್ಲೋ ಇಂಡಿಯನರ ಕ್ಲಬ್ಬು ಜೀವನದಿಂದ ಕದಡಿ ಕೆಸರಾಗಿಲ್ಲ. ಅಝೀಜನೊಡನೆ ಆದ ಪರಿಚಯವು ಸ್ನೇಹವಾಗಿ ಪರಿಣಮಿಸುತ್ತದೆ. ಸ್ನೇಹದ ಭರದಲ್ಲಿ ಅವರನ್ನು ಅವನು ಮಾರವಾರದ ಗುಹೆಗಳನ್ನು ನೋಡಲು ಆಹ್ವಾನಿಸುತ್ತಾನೆ. ಅವನ ಚಲನವಲನಗಳು ಅಡೀಲಾಳ ಪ್ರೇಮಪಾತ್ರರೋನಿಗೆ ಸರಿಬೀಳುವುದಿಲ್ಲ. ಆದರೂ ತನ್ನ ತಾಯಿ ಮೂರಳಿಗೂ, ತನ್ನ ಪ್ರೇಮಪಾತ್ರಳಾದ ಅಡೀಲಾಳಿಗೂ ಮನನೋಯುವುದೇನೊ ಎಂಬ ಹೆದರಿಕೆಯಿಂದ ಅವರ ಕಾರ್ಯಕ್ರಮಗಳಿಗೆ ವಿಘ್ನವನ್ನು ತರುವುದಿಲ್ಲ. ಗುಹೆಗಳನ್ನು ನೋಡುತ್ತಾ ಇರುವಾಗ ಕಾರಣಾಂತರದಿಂದ ಅಡೀಲಾ ಉದ್ವಿಗ್ನಮಾನಸಳಾಗಿ ಅಝೀಜನು ತನ್ನ ಮಾನಭಂಗಮಾಡಲು ಯತ್ನಿಸಿದನೆಂಬ ಭಾವನೆ ಅವಳ ಮನಸ್ಸಿಗೆ ಹೇಗೋ ಬರುತ್ತದೆ. ಈ ಪ್ರವಾದವು ಕಾಡುಕಿಚ್ಚಿನಂತೆ ಹರಡಿ ಇದರ ಫಲವಾಗಿ ಅಝೀಜನು ಸೆರೆಮನೆಗೆ ಸೇರುತ್ತಾನೆ. ಫೀಲ್ಡಿಂಗನೆಂಬ ಸರಕಾರಿ ಕಾಲೇಜೊಂದರ ಪ್ರಿನ್ಸಿಪಾಲನ ಸತತಪ್ರಯತ್ನದಿಂದಲೂ, ಅದಕ್ಕಿಂತಲೂ ಮುಖ್ಯವಾಗಿ ಅಡೀಲಾ ಕಟ್ಟಕಡೆಯಲ್ಲಿ ತನ್ನ ಆಪಾದನೆಯನ್ನು ಹಿಂದಕ್ಕೆ ತೆಗೆದುಕೊಂಡುದರಿಂದಲೂ, ಕಡೆಗೆ ಅಝೀಜನು ತಪ್ಪಿತಸ್ಥನಲ್ಲವೆಂದು ಬಿಡುಗಡೆಯಾದರೂ ಅಝೀಜನಿಗೆ ಅಂಟಿದ ಕಳಂಕವು ಅವನ ಜೀವನಾಂತದವರೆಗೂ ತಪ್ಪುವುದೇ ಇಲ್ಲ. ಇದರಿಂದ ಪ್ರಕ್ಷುಭಿತವಾದ ಅವನ ಮನಸ್ಸು ಆಂಗ್ಲ ಜನಾಂಗವನ್ನೇ ದ್ವೇಷಿಸುವಷ್ಟು ದೂರ ಹೋಗುತ್ತದೆ. ಕಡೆಗೆ ಅವನು ಆಂಗ್ಲರ ಸೇವಾವೃತ್ತಿಗೇ ಶರಣುಹೊಡೆದು ದೇಶೀಯ ಸಂಸ್ಥಾನವೊಂದರಲ್ಲಿ ಅಧಿಕಾರವನ್ನು ಪಡೆದು ತನ್ನ ಜೀವನದ ಉಳಿದಭಾಗವನ್ನು ಸವೆಸುತ್ತಾನೆ.

ಕಥೆಯು ಹಾಸುಹೊಕ್ಕಾಗಿ ಸೇರಿರುವುದು ಹಿಂದೂದೇಶದ ರಾಜಕೀಯ ಜೀವನ. ಅಲ್ಲಲ್ಲಿ ಹಿಂದೂ ಮುಸಲ್ಮಾನರ ಸಮಾಜಜೀವನವೂ, ಆಂಗ್ಲೋ ಇಂಡಿಯನರ ಕೃತಕ ಸಮಾಜಜೀವನವೂ ಮಾರ್ಮಿಕವಾಗಿ ಚಿತ್ರಿತವಾಗಿವೆ. ಆದರೆ ಸಮಾಜಜೀವನ

ಕ್ಕಿಂತಲೂ ರಾಜಕೀಯ ಜೀವನಕ್ಕೇ ಪ್ರಾಶಸ್ತ್ಯ ಹೆಚ್ಚು. ಅಲ್ಲದೆ ಫಾರ್ಸ್ಟರ್ ಅವರು ಹಿಂದೂಗಳ ಸಮಾಜಜೀವಿತವನ್ನು ಸರಿಯಾಗಿ ಅರಿತುಕೊಂಡಂತೆ ಕಾಣುವುದಿಲ್ಲ. ಅವರ ದೃಷ್ಟಿ ಈ ಭಾಗದಲ್ಲಿ ಹೊರನೋಟದಲ್ಲಿಯೇ ವಿರಾಮವಾಗಿದೆಯೆಂದು ಹೇಳ ಬಹುದು. ಕೃಷ್ಣಾಷ್ಟಮಿಯ ಅವರ ತುಲನೆಯೇ ಸಾಕು ಈ ಮಾತಿನ ಸಾರ್ಥಕತೆಗೆ.

ಹಿಂದೂ ದೇಶಕ್ಕೆ ಬರುವ ಆಂಗ್ಲ ಅಧಿಕಾರಿಗಳೆಲ್ಲಾ ರಾಜಕೀಯ ಧುರೀಣ ರೇನೂ ಅಲ್ಲ. ಅವರೆಲ್ಲರ ಸಂಸ್ಕೃತಿಯೂ ಬಹು ಉನ್ನತವಾದುದೆಂದೂ ಹೇಳುವಂತಿಲ್ಲ. ಅಲ್ಲದೆ, ಇಲ್ಲಿಗೆ ಬಂದು ಕೆಲವು ದಿನಗಳು ಜೀವನಪಥವನ್ನು ನಡೆಯುವುದರೊಳಗಾಗಿ ಅವರ ಮನಃಪ್ರವೃತ್ತಿಯು ಬದಲಾಯಿಸಿ ಹೋಗುತ್ತದೆ. 'ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ' ಎನ್ನುವಂತೆ ತಮ್ಮ ಹಿಂದಿನವರ ಅಡ್ಡಮಾರ್ಗವನ್ನೇ ಅವರೂ ಅನುಸರಿಸಿ, ತಾವು ಮೇಲು, ಉಳಿದವರು ಕೀಳು ಎಂಬ ಕೀಳುತತ್ವವೊಂದು ಅವರಲ್ಲಿ ಒಡಮೂಡುತ್ತದೆ. ಜನಸಾಮಾನ್ಯರ ವಿಚಾರದಲ್ಲಿ ಅವರಿಗಿರುವ ಅಸಡ್ಡೆ ಒತ್ತಟ್ಟಿಗಿರಲಿ, ರಾಜ ಮಹಾರಾಜರುಗಳು ಕೂಡ ತಮಗೆ ಸರಿಸಮಾನಸ್ಕಂಧರಲ್ಲವೆಂಬ ಅವಿಚಾರ ಅವರ ತಲೆಯಲ್ಲಿ ಅಂಕುರಿಸುತ್ತದೆ. ಅವರು ಹಾಡಿದ್ದಕ್ಕೆಲ್ಲಾ ತಾಳಹಾಕುವ ಲಾಂಗೂಲಚಾಲಕರು ಬೇರೆ ಅವರಿಗೆ ದೊರೆತ ಮೇಲೆ ಕೇಳುವುದಿನ್ನೇನು? ಅದರಲ್ಲಿಯೂ ಪುರುಷರಿಗಿಂತ ಸ್ತ್ರೀಯರ ಪ್ರತಿಷ್ಠೆ ಅತಿಶಯ. "ಹಃಹಃ, ನರೇಂದ್ರ ಸಭೆಗೆ ನಾಯಿ ಕರೆದುಕೊಂಡು ಹೋಗುವುದೆಂದರೆ ನರೇಂದ್ರರನ್ನು ಕರೆದುಕೊಂಡು ಹೋದಂತೆಯೇ" ಎಂದು ಬಿದ್ದು ಬಿದ್ದು ನಗುವ ಡೆರೆಕ್ಕಳನ್ನು ಕಂಡು ನಮ್ಮ ಮನಸ್ಸು ಹೇಸಿಕೊಳ್ಳುತ್ತದೆ. ಕಾದಂಬರಿಯಲ್ಲಿ ಚಿತ್ರಿತವಾಗಿರುವ ಆಂಗ್ಲೋ ಇಂಡಿಯನ್ನರ ಕೃತಕವಾದ ಕ್ಲಬ್ಬುಜೀವನ ಜುಗುಪ್ಸಾವಹವಾಗಿದೆ.

ಫಾರ್ಸ್ಟರ್ ಅವರಿಗೆ ಭಾರತೀಯರ ವಿಷಯವಾಗಿ ಅನುಕಂಪವಿದೆ. ಹಿಂದೀಯ ರಲ್ಲಿ ಹಲವು ಲೋಪದೋಷಗಳಿವೆ, ಕುಂದುಕೊರತೆಗಳಿವೆ, ಎಂಬುದನ್ನು ಅವರೂ ಒಪ್ಪುತ್ತಾರೆ. ಆದರೆ ಈ ಬಗೆಯಾದ ಕುಂದುಕೊರತೆಗಳು ಭಾರತೀಯರಿಗಾಗಿಯೇ ಮೀಸಲಾದವುಗಳೇನೂ ಅಲ್ಲ. ಮನುಷ್ಯ ಸಾಮಾನ್ಯವಾದ ಹಲವು ಕುಂದುಕೊರತೆ ಗಳು ಆಂಗ್ಲೋ ಇಂಡಿಯನ್ನರಲ್ಲಿಯೂ ಇವೆ. ಹಿಂದೀಯರು ಹಿಸುಣಿ ನುಡಿಗಳನ್ನು ಹರಡುವ ಹವ್ಯಾಸಕ್ಕೆ ಬಿದ್ದು ಆಂಗ್ಲ ಅಧಿಕಾರಿಯೊಬ್ಬನು ಸಿಗರೇಟುಕೇಳಿದ್ದನ್ನು ಊರಲ್ಲೆಲ್ಲಾ ಹರಹಿ ಹಬ್ಬಿದರೆ ಆಂಗ್ಲ ಅಧಿಕಾರಿಗಳು ತಮ್ಮ ಕೈಕೆಳಗಿನ ಹಿಂದೂ ಅಧಿಕಾರಿಗಳ ವಿಚಾರವಾಗಿ ಪರಸ್ಪರ ಹಿಸುಣಿಹಬ್ಬಿಸುವ ದಂಧೆಯನ್ನು ನಡೆಸು ತ್ತಾರೆ. ಹಿಂದೀಯರು ಮುಖಸ್ತುತಿ ಮಾಡಿದರೆ, ಆಂಗ್ಲೊ ಇಂಡಿಯನ್ನರು ಬಾಯಿ ಯಲ್ಲೊಂದು, ಹೊಟ್ಟೆಯಲ್ಲೊಂದು ತೋರುತ್ತಾರೆ. ಅಲ್ಪ ವಿಷಯವನ್ನು ಭೂತಕನ್ನ

ಡಿಯ ಅಡಿಯಲ್ಲಿಟ್ಟು ನೋಡುವ ಚಟ ಇಬ್ಬರಿಗೂ ಸರಿಸಮಾನ. ಹಿಂದೀಯರಲ್ಲಿರುವ ಲೋಪದೋಷಗಳು ಅಧಿಕಸಂಖ್ಯಾತವಾಗಿರಬಹುದು ಅಷ್ಟೆ. ಡಾ|| ಪನ್ನಾಲಾಲ ನಂತಹವರು ಸ್ವಜನದ್ರೋಹಿಗಳಾಗಿರಬಹುದು. ನವಾಬನಂತಹರು ಇಂಗ್ಲಿಷರ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಅವರ ಶಹಬಾಸ್‌ಗಿರಿಗಾಗಿ ಬಾಯಿ ಚಪ್ಪರಿಸುತ್ತಿರ ಬಹುದು. ಎಲ್ಲರ ಜೀವನದಲ್ಲಿಯೂ ಕೃತಕತೆಯು ತುಂಬಿರಬಹುದು. ಇದು ಅನಿವಾರ್ಯ. ಸ್ವಾತಂತ್ರ್ಯಪ್ರೇಮಿಯಾದ ಅಝೀಜನು ತನಗೆ ನ್ಯಾಯವೆಂದು ತೋರಿದುದನ್ನು ನಿರ್ಭಯದಿಂದ ಅನುಸರಿಸಬೇಕೆಂಬ ಉತ್ಕಟೇಚ್ಛೆಯುಳ್ಳವನಾಗಿರುವನಾದರೂ ಹಾಗೆ ನಡೆಯಲಾರ. ತನ್ನ ಸಮಾಜಸಂಪ್ರದಾಯಕ್ಕೆ ತಕ್ಕಂತೆ ಹಲ್ಲು ಉಜ್ಜಿಕೊಳ್ಳದೆಯೇ ಹೋಗಿ ತನ್ನ ಮೇಲಧಿಕಾರಿಯನ್ನು ಕಾಣುವೆನೆಂದು ತನ್ನ ಸ್ನೇಹಿತರೆದುರು ಕೊಚ್ಚಿ ಹೋದ ಅಝೀಜ ಆ ಕಾರ್ಯವನ್ನು ನೆರವೇರಿಸಿಕೊಂಡೇ ಅಧಿಕಾರಿಯ ಮನೆಗೆ ಹೋಗುವನು. "ಬಳ್ಳಿಯ ಕುಡಿಯಂತಿದ್ದ ಅವನ ಸೂಕ್ಷ್ಮ ಭಾವನೆಗಳು ಕ್ಯಾಲೆಂಡರನ ಕುಡಿಚಿವುಟುವ ಬಿರುಸುಕೈಗೆ ಹೆದರಿ ಮುದುಡಿಕೊಂಡುವು." ಹ್ಯಾಟುಬೂಟು ಧರಿಸಿ ದವನಿಗೆ ಸಿಕ್ಕುವ ಗೌರವ ಪುರಸ್ಕಾರಗಳು ದೇಶೀಯ ಉಡುಪನ್ನು ಧರಿಸಿದವನಿಗೆ ಇಲ್ಲದುದನ್ನು ಕಂಡೇ ಅಝೀಜನು ಪಾಶ್ಚಾತ್ಯ ವೇಷಭೂಷಣನಾಗುವನು. ನ್ಯಾಯ ವಾದ ತೀರ್ಪನ್ನು ನಿರ್ಭಯದಿಂದ ನೀಡುವ ಉತ್ಕಟೇಚ್ಛೆಯಿದ್ದರೂ ಮ್ಯಾಜಿಸ್ಟ್ರೇಟ್ ದಾಸನು ಹಿಂದುಮುಂದು ನೋಡಬೇಕಾಗುವುದು. ಇದಕ್ಕೆಲ್ಲಾ ಮೂಲಕಾರಣ ರಾಜಕೀಯ ಪರಿಸ್ಥಿತಿ. ಭಾರತದ ರಾಷ್ಟ್ರಜೀವನವೆಂದರೆ "ಭಯ, ಕುತಂತ್ರ, ಹಿಂದೆ ನಿಂತು ಆಡಿಸುವುದು—ಇವುಗಳ ಹಾಸುಹೊಕ್ಕು" ಎಂಬುದಾಗಿ ಫಾರ್ಸ್ಟರ್ ಅವರ ಭಾವನೆ. "ದಾಸ್ಯದಲ್ಲಿರುವ ಜನಾಂಗಕ್ಕೆ ಇದಕ್ಕೂ ಬೇರೆ ಕಲ್ಪಿಸುವುದೇ ಸಾಧ್ಯವಿಲ್ಲ" ವೆಂದು ಅಝೀಜನ ಬಾಯಲ್ಲಿ ಹೇಳಿಸಿದ್ದಾರೆ. ಇದರ ಪರಿಣಾಮವೆಂದರೆ ಸ್ವಾತಂತ್ರ್ಯ ಪ್ರೇಮದಿಂದ ಕಳಕಳಿಸುತ್ತಿದ್ದ ಭಾವಜೀವಿ ಅಝೀಜನಂತಹನೂ ಕೂಡ ಕಟ್ಟಕಡೆಗೆ "ಅವರು ನನ್ನ ದಂಧೆಯನ್ನು ಸಸೂತ್ರವಾಗಿ ಸಾಗಗೊಟ್ಟು ಆಫೀಸಿನಲ್ಲಿ ನನಗೆ ಇಲ್ಲದ ಕಿರಿಕಿರಿ ಮಾಡದಿದ್ದರೆ ಸಾಕು; ನನಗೆ ಇದಕ್ಕೂ ಹೆಚ್ಚಿಗೆ ಏನೂ ಬೇಡ; ಆ ಚಂದ್ರಾರ್ಕವಾಗಿ ನಮ್ಮ ಮೇಲೆ ಅವರೇ ಬಾಳಲಿ; ಯಾರು ಬೇಡವೆನ್ನುವವರು" ಎಂಬ ಮಟ್ಟಕ್ಕಿಳಿದು ಬರುತ್ತಾನೆ.

ಈ ಬಗೆಯಾದ ರೋಗಕ್ಕೆ ಮದ್ದಿಲ್ಲವೆ? ಫಾರ್ಸ್ಟರ್ ಅವರ ಅಭಿಪ್ರಾಯದಂತೆ ಮದ್ದಿಲ್ಲ. ಭಾರತವು ಒಂದು ರಾಷ್ಟ್ರವಲ್ಲ; ಆಂಗ್ಲರು ಆಳುವವರಾಗಿ ಭಾರತೀಯರು ಆಳಲ್ಪಡುವವರಾಗಿರುವವರೆಗೂ, ಅವರವರಿಗೆ ಸಮಾನಭಾವನೆ ಗೆಳೆತನಗಳು ಅಸಾಧ್ಯ. ಆದರೆ ಕಾದಂಬರಿಯ ಕೊನೆಯಲ್ಲಿ ಫೀಲ್ಡಿಂಗ್ ಮತ್ತು ಅಝೀಜನು ಗೆಳೆಯರಾದರು. ಆದರೆ

ಅದೆಂತಹ ಗೆಳೆತನ? ಅವರು ಏರಿದ್ದ ಚತುಷ್ಪಾದಿಗಳಿಗೂ ಗೊತ್ತು ಅದು ಅಸಾಧ್ಯ ವೆಂದು. "ನೆಲ, ಮುಗಿಲು, ಗುಡ್ಡ, ಕೆರೆ, ಗುಡಿ, ಅರಮನೆ, ಒಟ್ಟು ಅವರ ಕಣ್ಣಿಗೆ ಕಂಡದ್ದೆಲ್ಲಾ ಒಂದೇ ದನಿಯಿಂದ 'ಬೇಡ, ಇನ್ನೂ ಹೊತ್ತು ಬಂದಿಲ್ಲ' ಎಂದು ಕೂಗಿ ಹೇಳಿದು"ವಂತೆ. ರಾಜಕೀಯವು ಹೀಗಿರುವಂತೆಯೇ ಇರುವವರೆಗೂ ಗೆಳೆತನವಲ್ಲ ದಿದ್ದರೆ ಸೌಹಾರ್ದವಾದರೂ ಇಬ್ಬಣದವರಲ್ಲಿ ನೆಲಸಬೇಕಾದರೆ ಅಝೀಜನು ಹೇಳುವಂತೆ "ಮಮತೆ . . . ಇನ್ನೂ ಹೆಚ್ಚು ಮಮತೆ . . . ಅದಕ್ಕೂ ಹೆಚ್ಚು ಮಮತೆ . . . ತೋರಬೇಕು. ನಮ್ಮನ್ನು ಮುಂದಕ್ಕೆ ನಡೆಯಿಸಲು ಅದೊಂದೇ ಆಶಾಕಿರಣ ಉಳಿದಿದೆ." ಫೀಲ್ಡಿಂಗನಂತೆ ಸಮರಸವಾಗಿ ಹಿಂದೀಯರೊಡನೆ ಬೆರೆತು ಅವರಲ್ಲಿಯೇ ತಾವೊಬ್ಬರೆಂಬ ಭಾವನೆ ಬರಬೇಕು.

'ಭಾರತ ಮಾರ್ಗ'ವನ್ನು ಆದ್ಯಂತವಾಗಿ ಓದಿದ ಮೇಲೆ ಕೆಲವು ಸಂದೇಹಗಳು ಎದ್ದು ನಿಲ್ಲುತ್ತವೆ. (೧) ಅಡೀಲಾ ಗುಹೆಗೆ ಹೋಗಿದ್ದಾಗ ಅಲ್ಲಿ ಏನು ನಡೆಯಿತು? ಅಝೀಜನ ಮೇಲೆ ಹೊರಿಸಿದ ತಪ್ಪಿಗೆ ಆಧಾರವೇನು? ಪ್ರತಿಧ್ವನಿಯ ಸೂಚನೆ ಸಮರ್ಪಕವಾಗಿರುವಂತೆ ತೋರುವುದಿಲ್ಲ. ಮಾರ್ಗದರ್ಶಕನಾದ ಆಳು ತಪ್ಪುದಾರಿಗೆ ಬಿದ್ದಿರಬಹುದೆಂದು ಹೇಳುವುದಕ್ಕೂ ತಕ್ಕಷ್ಟು ನಿದರ್ಶನಗಳಿಲ್ಲ. ಈ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ಅಡೀಲಾ ವಿಶ್ವಾಸಘಾತುಕಳಾಗಿರಬಹುದೆಂಬ ಮುನ್ನುಡಿಯ ಮಾತೂ ನಮಗೆ ಸಮರ್ಪಕವಾಗಿ ತೋರುತ್ತಿಲ್ಲ. (೨) ಅಝೀಜನು ತಪ್ಪಿತಸ್ಥನಲ್ಲವೆಂದು ನಿಷ್ಕೃಷ್ಟವಾಗಿ ಅರಿತಿದ್ದ ಮಿಸೆಸ್ ಮೂರಳು ಆ ವಿಚಾರವನ್ನು ತನ್ನ ಮಗನೊಂದಿಗೆ ಬಾಯಿಬಿಟ್ಟು ಹೇಳಿಬಿಡಬಾರದಿತ್ತೇಕೆ? ಇದರಿಂದ ಮುಂದೆ ನಡೆಯಬಹುದಾಗಿದ್ದ ಅನರ್ಥ ಪರಂಪರೆಗಳೆಲ್ಲಾ ತಪ್ಪಿಹೋಗಬಹುದಾಗಿತ್ತಲ್ಲವೆ? ಆಂಗ್ಲ ಶಿಷ್ಟಾಚಾರಕ್ಕೆ ಈ ಬಗೆಯ ಆಚರಣೆ ವಿರುದ್ಧವೆ? (೩) ಅಝೀಜನ ಪಾತ್ರ ಜೀವಕಳೆಯಿಂದ ತುಂಬಿ ತುಳುಕುತ್ತಿದೆ. ಕಥಾ ನಾಯಕನಾದ ಆತನು ಹಿಂದೀಯರ ಪ್ರತಿನಿಧಿ ಸ್ವರೂಪನಾದವನು. ಅವನು ಕಡೆ ಕಡೆಯಲ್ಲಿ ಫೀಲ್ಡಿಂಗನೊಡನೆ ನಡೆದು ಕೊಳ್ಳುವ ರೀತಿ ಬಹಳ ಅಸಮರ್ಪಕವಾಗಿದೆ. ಅಝೀಜನು ಬಹಳ ದುಡುಕು ಸ್ವಭಾವ ದವನು ನಿಜ. ಆದರೆ ಫೀಲ್ಡಿಂಗನಿಂದ ಅಗಾಧವಾದ ಉಪಕೃತಿಯನ್ನು ಹೊಂದಿ ಹಲವು ಕಾಲ ಅವನೊಡನೆ ಗೆಳೆಯನಂತೆ ವರ್ತಿಸಿದವನು ದೀರ್ಘದ್ವೇಷಿಯಾಗಿ ಪರಿಣಮಿಸಿ, ಅವನ ಕಾಗದಗಳನ್ನು ಸಹ ಬಿಚ್ಚಿನೋಡದಷ್ಟು ಕೃತಘ್ನನಾಗುವುದೂ, ಇದಿರಿಗೆ ಬಂದು ತನ್ನ ಮೈತ್ರಿಯನ್ನು ಕಾತರತೆಯಿಂದ ತೋರುತ್ತಿರುವಾಗಲೂ ಒರಟುತನದಿಂದ ನಡೆದು ಕೊಳ್ಳುವುದೂ ಸರಿಯಾಗಬಹುದೆ? (೪) ಪ್ರೊ. ಗೋಡಬೋಲೆಯ ಜೀವನಚಿತ್ರ ಬಹಳ ಅಸಮರ್ಪಕವಾಗಿ ಚಿತ್ರಿತವಾಗಿದೆ. ಅದು ಅಸಂಭವದ ಅತಿರೇಕವಿರಬಹುದು

ದೇನೊ ಎನ್ನಿಸುತ್ತದೆ. ಫಾರ್ಸ್ಟರ್ ಅವರು ಹಿಂದೂ ಸಮಾಜವನ್ನಷ್ಟೇ ಏಕೆ, ಹಿಂದೂ ವ್ಯಕ್ತಿಗಳನ್ನೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಹೇಳಬಹುದು.

ಕಡೆಯದಾಗಿ, ಭಾಷಾಂತರದ ವಿಚಾರದಲ್ಲಿ ಒಂದು ಮಾತು. ಇಂಗ್ಲಿಷ್ ಕಥೆಯಲ್ಲಿನ ಓಟ ಕನ್ನಡಸರಣಿಯಲ್ಲಿ ಕಂಡುಬರುತ್ತಾ ಇಲ್ಲ. ಅತ್ಯಲ್ಪಕಾಲದಲ್ಲಿ ಇಂತಹ ದೊಡ್ಡ ಗ್ರಂಥವನ್ನು ಭಾಷಾಂತರಿಸುವುದೆಂದರೆ ಸಾಮಾನ್ಯ ಕಾರ್ಯವಲ್ಲ. 'ಭಾರತಮಾರ್ಗ'ದ ಶೈಲಿಯಲ್ಲಿ ಎಡವಿಕೆ ಮುಗ್ಗರಿಕೆಗಳು ಕಂಡುಬರುತ್ತಾ ಇದ್ದರೆ ಅದು ಭಾಷಾಂತರವೆಂಬ ಕಲೆಗೇ ಸ್ವಭಾವಸಿದ್ಧವಾದುದೆಂದು ಹೇಳಿಬಿಡಬಹುದೋ ಏನೋ!

ತ. ಸು. ಶಾಮರಾಯ.

ನನ್ನ ದೇವರು ಮತ್ತು ಇತರ ಕಥೆಗಳು—ಲೇಖಕರು: ಶ್ರೀಮಾನ್ ಕೆ. ವಿ. ಪುಟ್ಟಪ್ಪ, ಎಂ.ಎ.; ಪ್ರಕಾಶಕರು: ಕಾವ್ಯಾಲಯ, ಶಿವಮೊಗ್ಗ; ಪುಟಗಳು ಕ್ರೌನ್ ೮. vi + ೧೦೭; ಬೆಲೆ, ಉತ್ತಮ ಪ್ರತಿ, ರೂ. ೧-೪-೦; ಸಾಮಾನ್ಯ ಪ್ರತಿ, ೧೨ ಆಣೆ.

ಈ ಸಂಗ್ರಹದಲ್ಲಿ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಬರೆದ ಎಂಟು ಸಣ್ಣ ಕಥೆಗಳಿವೆ. ಸಂಗ್ರಹದ ಮೊದಲ ಕಥೆಯಾದ 'ನನ್ನ ದೇವರು' ಕಲಾದೃಷ್ಟಿಯಿಂದ ಅತ್ಯುತ್ತಮವಾದ ಕಥೆ. ಈ ಕಥೆಯಲ್ಲಿ ಬರುವ, ಪತಿಯನ್ನು ಕಳೆದುಕೊಂಡು ರಾಗೋದ್ವಿಗ್ನಳಾದ ಅಭಾಗಿನಿ ನಾದಿನಿಯನ್ನಾಗಲಿ, ಅವಳನ್ನು ಶಾಶ್ವತವೂ ಅನಂತವೂ ಆದ ಪ್ರಣಯದ ತತ್ತ್ವೋಪದೇಶಗಳಿಂದ ಸಂತವಿಸಿ ಸುಸ್ಥಿರಮನಸ್ಕಳನ್ನಾಗಿ ಮಾಡಿದ ಅವಳ ಭಾವನವರನ್ನಾಗಲಿ ನಾವು ಮರೆಯುವಂತಿಲ್ಲ. ಗಹನವಾದ ವಿಷಯ, ಲಲಿತವಾದ ಶೈಲಿ, ಇದರ ಮೇಲೆ ಕವಿಸಹಜವಾದ ರಸನಿರೂಪಣೆ ಈ ಎಲ್ಲ ಗುಣವಿಶೇಷದಿಂದ ಈ ಕಥೆ ಅತ್ಯುತ್ತಮವಾದ ಒಂದು ಗದ್ಯಾತ್ಮಕ ಭಾವಗೀತೆಯಂತಿದೆ.

'ಔದಾರ್ಯ' ಇನ್ನೊಂದು ಉತ್ತಮವಾದ ಕಥೆ. ತಾನು ಮದುವೆಯಾದ ಎರಡನೆಯ ಹೆಂಡತಿ ಬೇರೊಬ್ಬನಲ್ಲಿ ದುಷ್ಟಸಂಬಂಧವನ್ನು ಬೆಳೆಸಿರುವಳೆಂಬುದು ತನಗೆ ಗೊತ್ತಾದರೂ ಅವಳ ಮೇಲಣ ಪ್ರೇಮ ಎಳ್ಳಷ್ಟಾದರೂ ಕದಲದ ರೀತಿಯಲ್ಲಿ ಆಕೆಯೊಂದಿಗೆ ವ್ಯವಹರಿಸಿ ಆ ವಿಷಯದಲ್ಲಿ ಅನ್ಯಾದೃಶವಾದ 'ಔದಾರ್ಯ'ವನ್ನು ಪ್ರಕಟಪಡಿಸಿಯೂ ದುರಂತಕ್ಕೀಡಾದ ಡೇವಿಡ್ ಮಾಸ್ತರ ಪ್ರಣಯವೃತ್ತ ಇಲ್ಲಿ ಒಂದು ವಿಚಿತ್ರ ರೀತಿಯಲ್ಲಿ ನಿರೂಪಿತವಾಗಿದೆ. ಡೇವಿಡ್ ಮಾಸ್ತರ 'ಔದಾರ್ಯ' ನಿಜವಾಗಿಯೂ 'ಕಡಿದು ಓಡಿಹೋಗುವ ನಾಗರಹಾವಿನ ಹೆಡೆಯಲ್ಲಿ ಸೊಬಗನ್ನು ಕಾಣುವ ಔದಾರ್ಯ'!

'ಸಾಲದ ಮಗು 'ವಿನಲ್ಲಿ ಚಿಕ್ಕಂದಿನಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾದ ಹಸುಮಗು ಸುಬ್ಬ ತಂದೆಯ ಮುನ್ನೂರು ರೂಪಾಯಿ ಸಾಲದ ತೀರ್ಮಾನಕ್ಕಾಗಿ ಗೌಡರ ಮನೆಯಲ್ಲಿ ಜೀತದ ಆಳಾಗಿ ಅವರ ಕೋಪದ ಬೈಗಳನ್ನೂ-ಛಡಿಯ ಏಟುಗಳನ್ನೂ ಸಹಿಸಿಕೊಂಡು ದುಡಿಯಲಾರದೆ ದುಡಿಯುತ್ತಿದ್ದು ಒಂದು ಸಲ ಗೌಡರ ಅಪ್ಪಣೆಯಂತೆ ಮಳೆಗಾಲದ ನಡುರಾತ್ರಿಯ ಕಗ್ಗತ್ತಲೆಯಲ್ಲಿ ಗದ್ದೆಯಲ್ಲಿದ್ದ ಮೀನಿನ ಕೂಣಿಯನ್ನು ಹುಡುಕಲೆಂದು ಹೋಗಿ ಕೃಷ್ಣಸರ್ಪಕ್ಕೆ ತುತ್ತಾಗಿ ಮಡಿದ ವಿಷಯ 'ಭಯಂಕರ ಭಯಾನಕ 'ವಾಗಿ ಚಿತ್ರಿತವಾಗಿದೆ. ಕಥೆಯ ಕೊನೆಯಲ್ಲಿ ಹಾವುಕಚ್ಚಿ ಸತ್ತುಬಿದ್ದಿದ್ದ ತಬ್ಬಲಿಯನ್ನು ನೋಡಿಯೂ "ಅಂತೂ ಮುನ್ನೂರು ರೂಪಾಯಿ ಮನೆಗೆ ಬಂತು" ಎನ್ನುವ ಗೌಡರ ಮಾತು ವ್ಯಂಗ್ಯಪೂರ್ಣವಾಗಿದೆ.

'ಮೀನಾಕ್ಷಿಯ ಮನೇ ಮೇಷ್ಟರು' 'ನೋಡುವುದಕ್ಕೆ ಅರಸಿಕ ದರಿದ್ರನಂತಿದ್ದರೂ ಅಂತರಂಗದಲ್ಲಿ ರಸಿಕ ಶ್ರೀಮಂತರಾಗಿದ್ದ' ಮೇಷ್ಟರೊಬ್ಬರ ಯೌವನ ಸಹಜವಾದ ಪ್ರಣಯೋನ್ಮುಖ ಚಿತ್ತವೃತ್ತಿಯನ್ನು ಚಿತ್ರಿಸುವ ಒಂದು ರಮ್ಯ ಕಥೆ.

'ಧನ್ವಂತರಿಯ ಚಿಕಿತ್ಸೆ' ಇಂದಿನ ರೈತನ ದಾರಿದ್ರ್ಯವನ್ನೂ ಅದರ ನಿವಾರಣೋಪಾಯವನ್ನೂ ಪ್ರತಿಪಾದಿಸಿರುವ ವಿಶ್ವಾಮಿತ್ರ ಪರಶುರಾಮಾದಿ ಪುರಾಣಿಕ ಪಾತ್ರಗಳನ್ನೊಳಗೊಂಡ ಒಂದು ಕಾಲ್ಪನಿಕ ಕಥೆ. ವಸ್ತು ಕಾಲ್ಪನಿಕವಾದುದಾದರೂ ವಾಸ್ತವ ಜಗತ್ತಿನ ಪರಿಸ್ಥಿತಿಯ ವಿವರಣೆಯಿರುವುದರಿಂದ ಮನೋಜ್ಞವಾಗಿದೆ.

'ವೈರಾಗ್ಯದ ಮಹಿಮೆ' ಧರ್ಮದ ಹೆಸರಿನಲ್ಲಿ ನಡೆಯುವ ಅಸಹ್ಯ ಅತ್ಯಾಚಾರಗಳನ್ನು ಮಾರ್ಮಿಕವಾಗಿ ಚಿತ್ರಿಸಿರುವ ಒಂದು ಕಥೆ. ಕಥೆಯ ಆವರಣ ವಂಗದೇಶದ ಸಮಾಜವಾದರೂ ನಮಗೆ ಅಪರಿಚಿತವೆನ್ನುವಷ್ಟು ವಿಜಾತೀಯವೇನಾಗಿಲ್ಲದುದರಿಂದ ಕಥೆ ಹೃದ್ಯವಾಗಿದೆ.

ಈ ಸಂಗ್ರಹದ ಮೂರು ಮತ್ತು ಐದನೆಯ ಕಥೆಗಳಾದ 'ಆದರ್ಶಸಾಧನೆ' ಮತ್ತು 'ಗಂಟು' ಅಥವಾ 'ಗುಪ್ತಧನ' ಇವು ಮೇಲಿನ ಕಥೆಗಳಷ್ಟು ಉತ್ತಮವಾಗಿಲ್ಲ. ಇವೆರಡರಲ್ಲೂ ಸಣ್ಣಕಥೆಯ ಲಕ್ಷಣಗಳು ಕಡಮೆಯಾಗಿ ಹರಟೆಯ ಜಾತಿಗೆ ಸೇರಬಹುದಾದ ಪ್ರಬಂಧದ ಲಕ್ಷಣಗಳೇ ಹೆಚ್ಚಾಗಿವೆ. ಇವುಗಳನ್ನು ಬಿಟ್ಟರೆ ಉಳಿದ ಆರೂ ಉತ್ತಮವರ್ಗಕ್ಕೆ ಸೇರಿದ ಕಥೆಗಳು. ಶ್ರೀಯುತ ಪುಟ್ಟಪ್ಪನವರು ತಮ್ಮದೇ ಆದ ಒಂದು 'ಕಥನ ಪದ್ಧತಿ 'ಯನ್ನು ಬೆಳೆಸಿಕೊಂಡಿದ್ದಾರೆ. ಕಥೆಯ ವಸ್ತು, ಪಾತ್ರ, ಶೈಲಿ ಯಾವುದನ್ನು ನೋಡಿದರೂ ಅಲ್ಲಿ ಅವರನ್ನು ನಾವು ಗುರುತಿಸಬಹುದು. ಅಂತಹ ಒಂದು ವಿಶಿಷ್ಟ ರೀತಿಯ ಸ್ವತಂತ್ರ ಮಾರ್ಗದಲ್ಲಿ ಬೆಳೆದ ಅವರ ಕಥನಪದ್ಧತಿಗೆ "ನನ್ನ ದೇವರು ಮತ್ತು ಇತರ ಕಥೆಗಳು" ಸಾಕ್ಷಿಯೆಂಬಂತಿವೆ.

ಎಸ್. ವಿ. ಪರಮೇಶ್ವರಭಟ್ಟ.

ನಿರಾಭರಣಸುಂದರಿ—ಲೇಖಕರು: ಶ್ರೀಮಾನ್ ದ. ರಾ. ಬೇಂದ್ರೆ, ಎಂ.ಎ.; ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ; ಕ್ರೌನ್ ಅ. ೩೨+೧೪೩; ಬೆಲೆ, ೧ ರೂ,

ಈ ಗ್ರಂಥವನ್ನು ಮೂರು ಭಾಗವಾಗಿ ವಿಂಗಡಿಸಬಹುದು: ಹರಟೆಗಳು, ನಗೆಹಾಡುಗಳು, ಮತ್ತು ಕತೆಗಳು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹರಟೆಗಳಿಗೆ ಸರಿಯಾದ ಸ್ಥಾನ ದೊರೆತಿಲ್ಲ. ಉತ್ತಮವಾದ ಸ್ಥಾನವನ್ನು ಪಡೆಯಲು ಯೋಗ್ಯವಾದ ಹರಟೆಗಳೂ ಹೆಚ್ಚಾಗಿ ಹುಟ್ಟಿಲ್ಲ. ಈ ಆತಂಕವನ್ನು ಶ್ರೀಮಾನ್ ಬೇಂದ್ರೆಯವರ ಈ ಗ್ರಂಥವು ಸ್ವಲ್ಪ ಮಟ್ಟಿಗೆ ಹೋಗಲಾಡಿಸುತ್ತದೆ. ಇಲ್ಲಿ ಒಟ್ಟು ಎಂಟು ಹರಟೆಗಳಿವೆ. ಮಾನಪತ್ರಗಳನ್ನು ಕೊಡುವುದು ನಮ್ಮಲ್ಲಿ ಅನೂಚಾನವಾಗಿ ಬಂದ ಸಂಪ್ರದಾಯವೆಂಬುದನ್ನು ಮೊದಲನೆಯದೂ, ಕಸಬರಿಗೆಯು ದೇವರಿಗೆ ಸಮನೆಂದು ಎರಡನೆಯದೂ, ಉಗುಳುವುದು ನಾಟ್ಯಕಲೆ ರಾಜಕೀಯ ಚಳುವಳಿ ವೇದ ಇವೆಲ್ಲಕ್ಕೂ ಸಂಬಂಧವಿದೆಯೆಂಬುದನ್ನು ಮೂರನೆಯದೂ, ಹಾಸ್ಯಮಯವಾಗಿ ತಿಳಿಯಪಡಿಸುತ್ತವೆ. 'ನನ್ನ ಅವತಾರ'ವೆಂಬುದು ಪ್ರಮಾಣಪೂರ್ವಕವಾಗಿ 'ನಾನು ಅವತಾರಿ' ಎಂಬುದನ್ನು ಸ್ಥಿರಪಡಿಸುತ್ತದೆ. ಈಗ ಸಾಹಿತ್ಯಪ್ರಪಂಚದಲ್ಲಿ ವಿಮರ್ಶೆಗಳ ಹೆಚ್ಚು ಭಾಗ ಹೇಗೆ ಹೊಗಳುಭಟ್ಟರ ಕೆಲಸವನ್ನು ಮಾಡುತ್ತದೆಯೆಂಬುದನ್ನು "ವಿಮರ್ಶೆಯನ್ನು ಹೇಗೆ ಮಾಡಬೇಕು?" ಎಂಬುದು ವಿವರಿಸುತ್ತದೆ. "ಸಾರ್ವಭೌಮ-ನಿರಂತರ-ವರ್ಷಾ-ಭವಿಷ್ಯ" ಎಂಬುದು ಪತ್ರಿಕೆಗಳಲ್ಲಿ ಬರುವ ವಾರಭವಿಷ್ಯ ಮಾಸಭವಿಷ್ಯ ವರ್ಷಭವಿಷ್ಯಗಳನ್ನು ವ್ಯಂಗ್ಯವಾಗಿ ಹಾಸ್ಯಮಾಡುತ್ತದೆ. 'ಹಸ್ತಸಾಮುದ್ರಿಕದ ಪ್ರಥಮ ಪಾಠಗಳು' ಎಂಬುದೂ ಇದೇ ರೀತಿಯದು.

ಈ ಹರಟೆಗಳೆಲ್ಲಕ್ಕಿಂತ "ಸಾವಿನ ಕೂಡ ಸರಸ" ಎಂಬುದು ಚೆನ್ನಾಗಿದೆ. ಅದು ನಿಜವಾಗಿಯೂ ಉತ್ತಮವಾದ ಹರಟೆ. ಇತರ ಹರಟೆಗಳು ಈ ಮಟ್ಟಕ್ಕೆ ಬರುವುದಿಲ್ಲ. ಹರಟೆಗಳಲ್ಲಿ ಒಂದು ಸ್ವಾಭಾವಿಕವಾದ ಆತ್ಮೀಯತೆಯು ಕಂಡುಬರಬೇಕು. ತನ್ನ ಅನುಭವದಲ್ಲಿ ಬಂದ, ಹೋದ, ಖೇದ ಮೋದ ಜನಕಗಳಾದ ಸನ್ನಿವೇಶಗಳನ್ನು ಬರಹದ ಮೂಲಕ ಇತರರ ಅನುಭವಕ್ಕೆ ಲೇಖಕನು ತಂದರೆ ಅದು ಹರಟೆಯಾಗುತ್ತದೆ. ಈ ಕೆಲಸವನ್ನು 'ಸಾವಿನ ಕೂಡ ಸರಸ'ವು ಮನೋಹರವಾಗಿ ಮಾಡುತ್ತದೆ. ಈ ಹರಟೆಯಲ್ಲಿ 'ಗುದ್ದಿದರೆ ಸಾಯುವ ನಾನು ಹಿಂಸಾಮಾರ್ಗದ ಜಾತಿ ವೈರಿಯಾಗಿದ್ದೆ' ಎನ್ನುವ ಒಬ್ಬನ ಜೀವನವು ಚಿತ್ರಿತವಾಗಿದೆ. ಅವನಿಗಾದ ಬೇನೆ, ಅದರ ನಿವಾರಣೆಗಾಗಿ ಮಾಡಿದ ಉಪಾಯಗಳು, ವೈದ್ಯರ ಮತ್ತು ಔಷಧಿಗಳ ವಿಫಲತೆ, ಆತ್ಮಹತ್ಯ ಪ್ರಯತ್ನ,

ಅದರ ವಿಫಲತೆ, ಇವುಗಳನ್ನೆಲ್ಲಾ ಹಾಸ್ಯರಸಭರಿತವಾಗಿಯೂ, ಹೃದಯಂಗಮ ವಾಗಿಯೂ ಈ ಹರಟೆಯು ವಿವರಿಸುತ್ತದೆ.

ಪುಸ್ತಕದ ಎರಡನೆಯ ಭಾಗದಲ್ಲಿ ನಾಲ್ಕು ನಗೆಹಾಡುಗಳೂ ಎರಡು ಅಣಕ ವಾಡುಗಳೂ ಇವೆ. ಈ ಪದ್ಯಗಳನ್ನು ನೋಡಿ—

ಕಸಪೊರಕೆ ! ಕಸಪೊರಕೆ
ಧ್ವಜವೆತ್ತಿ ಮೇಲಕ್ಕೆ
ಹೊರಟಿಹುದು ಈ ಜಗದ ಶುದ್ಧಿಕರಣಕ್ಕೆ
(ಕಸಪೊರಕೆ)

ನಾಡ ಸಂರಕ್ಷಣೆಗೆ ತೋಪು ಇರದಿರಲು
ನಾಡಿಗೊಂದಿರಬೇಕು ಬಯ್ಯುವಾ ಮುದುಕಿ,
ಊರ ಸಂರಕ್ಷಣೆಗೆ ನಾಯಿ ಇರದಿರಲು
ಊರಿಗೊಂದಿರಬೇಕು ಬಾಯ್ಬಡಕ ಮುದುಕಿ,
ಕೇರಿಯನ್ನೆಚ್ಚರಿಸೆ ಗಂಟೆಯಿರದಿರಲು
ಕೇರಿಗೊಂದಿರಬೇಕು ಕೆಮ್ಮುವಾ ಮುದುಕಿ,
ಮನೆಮನೆಗೆ—ಪ್ಲೇಗಾಗಿ—ದೀಪವಿರದಿರಲು
ಮನೆಗೊಂದು ಇರಬೇಕು ಸಾಯದಾ ಮುದುಕಿ !
(ಮುದುಕಿ)

ಇವು ನಾವು ಓದಿ, ನಗಬೇಕಾದ ಪದ್ಯಗಳು. ನಾವು ನಕ್ಕರೆ ಪದ್ಯಗಳು ತಮ್ಮ ಕೆಲಸ ಮಾಡಿದಂತೆ.

ಅಣಕವಾಡುಗಳಲ್ಲಿ ಶ್ರೀಮಾನ್ ಬೇಂದ್ರೆಯವರು ತಮ್ಮ ಪ್ರಸಿದ್ಧವಾದ "ಹಕ್ಕಿ ಹಾರುತಿದೆ" ಎಂಬ ಕವನವನ್ನೂ ಗೋಪಾಲದಾಸರ "ವರದಾ, ಕಾಂಚೀ ವರದಾ" ಎಂಬ ಕೀರ್ತನೆಯನ್ನೂ ಅಣಕಿಸಿದ್ದಾರೆ. ಮೊದಲನೆಯದು 'ಬೆಕ್ಕು ಹಾರುತಿದೆ' ಎಂದೂ ಎರಡನೆಯದು 'ಒರದಾ, ತಗಣಿ ಒರದಾ' ಎಂದೂ ಮಾರ್ಪಾಟಾಗಿವೆ. ಹಕ್ಕಿ ಹಾರುವುದನ್ನು ಬೆಕ್ಕು ಹಾರಿ ಅಣಕಿಸಲಿ ; ಹಿಡಿದು ತಿನ್ನಲಿ. ಆದರೆ 'ತಗಣಿ ಒರದು' ಕಂಚಿಯ ವರದನನ್ನು ಅಣಕಿಸುವುದು ಏಕೋ ಅಸಹ್ಯ ವೆನಿಸುತ್ತದೆ. ಪ್ರಾಚೀನ ಸಂಪ್ರದಾಯದಲ್ಲಿ ಗೌರವವುಳ್ಳ ಮತಧರ್ಮ ಪಕ್ಷಪಾತಿಗಳಿಗೆ ಮನಸ್ಸಿನಲ್ಲಿ ಕಿಚ್ಚೇಳುತ್ತದೆ.

ಇನ್ನು ಪುಸ್ತಕದ ಕೊನೆಯ ಭಾಗದಲ್ಲಿ ಏಳು ಕತೆಗಳಿವೆ. ಬಾಲ್ಯಸ್ನೇಹವು ಎಷ್ಟು ನಿರ್ಮಲವಾದುದು, ಅದಕ್ಕೆ ಭಂಗಬಂದರೆ ಏನು ಅನಾಹುತವಾಗುತ್ತದೆ ಎಂಬುದನ್ನು—ಪಾಲಾಪೂ ಎಂಬ ಕಥೆಯಲ್ಲಿ—ಪ್ರಹ್ಲಾದ ಮತ್ತು ರಾಮು ಇವರ

ಸ್ನೇಹದ ಕತೆಯಲ್ಲಿ ಕಾಣಬಹುದು. 'ಹಿರಿದ ಕತ್ತಿ'ಯು ಮುದುಕರ ಮದುವೆಯ ಚಟವನ್ನೂ, 'ಮಗುವಿನ ಕರೆ'ಯು ತಾಯಿಯು ಮಗುವಿನ ಮೇಲಿನ ಪ್ರೇಮದಿಂದ ಆತ್ಮಹತ್ಯ ಪ್ರಯತ್ನವನ್ನು ತ್ಯಜಿಸಿದ ಬಗೆಯನ್ನೂ ಚಿತ್ರಿಸುತ್ತವೆ. ಇನ್ನು ಈ ಗ್ರಂಥಕ್ಕೆ ಹೆಸರು ಕೊಟ್ಟ 'ನಿರಾಭರಣಸುಂದರಿ'. ಮುನ್ನುಡಿಯಲ್ಲಿ ಶ್ರೀಮಾನ್ ಮಹಿಷಿಯವರು "ನಿರಾಭರಣಸುಂದರಿ ಬೇಂದ್ರೆಯವರು ಬರೆದದ್ದಲ್ಲ. ಅದರ ಲೇಖಕರು ಅಂಬಿಕಾತನಯದತ್ತರು. ಇದು ಕವಿಯು ಬರೆದ ಕತೆ" ಎಂದು ಹೇಳಿದ್ದಾರೆ. "ಪದ್ಮನು ಚಿತ್ರಗಾರ; ನಾಗಶ್ರೀಯು ಕವಯಿತ್ರಿ. ನಿರಾಭರಣಸುಂದರಿಯ ನಗ್ನ ಚಿತ್ರದ ಜನ್ಮವೇ ಸನ್ನಿವೇಶ. ಈ ಕಲಾಕೃತಿಯ ಬಗ್ಗೆ ರಸಿಕದಂಪತಿಗಳ ಚರ್ಚೆಯೇ ಸಂಭಾಷಣೆ." ಇಷ್ಟೂ ಸೇರಿ ಈ ಕತೆಯಾಗಿದೆ. ಇದೇ ಈ ಗ್ರಂಥದಲ್ಲೆಲ್ಲಾ ಅತ್ಯುತ್ತಮವಾದ ಭಾಗವೆಂಬುದನ್ನು ತೋರಿಸುವುದಕ್ಕೆಂಬಂತೆ ಪುಸ್ತಕಕ್ಕೆ 'ನಿರಾಭರಣ ಸುಂದರಿ' ಎಂದು ಹೆಸರು ಕೊಟ್ಟಿದ್ದಾರೆ.

ಮಿಕ್ಕ ಮೂರು ಕತೆಗಳು ಕತೆ ಬರೆಯುವ ಕಲೆಯಲ್ಲಿ ಈಗತಾನೆ ಕೈ ಇಟ್ಟಿರುವ ಯುವಕನ ಕೈವಾಡದಂತೆ ಕಂಡುಬರುತ್ತದೆ. ಅವು ಲೇಖಕರೇ ಹೇಳಿರುವಂತೆ ಎಂದೋ ಬರೆದವುಗಳಿರಬೇಕು.

ಗ್ರಂಥಪ್ರಕಾಶನ ವಿಷಯದಲ್ಲಿ ಒಂದು ಮಾತು. ಈ ರೀತಿ ಹರಟೆ, ನಗೆಹಾಡು, ಕತೆಗಳೆಲ್ಲವನ್ನು ಸೇರಿಸಿ ಮೇಲೋಗರ ಗ್ರಂಥವನ್ನಾಗಿ ಮುದ್ರಿಸಿರುವುದರ ಔಚಿತ್ಯವೇನು? ಅದರಲ್ಲಿಯೂ ಒಂದು ಹಾಸ್ಯವಿದೆಯಲ್ಲವೇ?

ಜಿ. ವೆಂ.

ಸಾದರ ಸ್ವೀಕಾರ

೧. **ನಾಗವರ್ಮಕೃತ ಕಾವ್ಯಾವಲೋಕನಂ**—ಸಂಪಾದಕರು : ಮ|| ಗಳಾದ ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಚ್. ಆರ್. ರಂಗಸ್ವಾಮಿ ಐಯಂಗಾರ್, ಎಂ.ಎ.; ಪ್ರಕಾಶಕರು : ಓರಿಯಂಟಲ್ ಲೈಬ್ರರಿ, ಮೈಸೂರು ; ಡೆ. ಅ. LXXIX + ೨೪೮ ; ಬೆಲೆ, ರೂ. ೧-೮-೦.

೨. **ನಾಗವರ್ಮಕೃತ ಕಾವ್ಯಾವಲೋಕನಂ**—ಸಂಪಾದಕರು : ಶ್ರೀ|| ಗಳಾದ ಶಿ. ಶಿ. ಬಸವನಾಳ, ಎಂ.ಎ. ಮತ್ತು ಕೇಪು ಶಂಕರನಾರಾಯಣ ; ಪ್ರಕಾಶಕರು : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ; ಡೆ. ಅ. ೧೦+೩೫೨+೨೬ ; ಬೆಲೆ, ರೂ. ೨-೪-೦.

೩. **History of Kannada Literature** (Readership Lectures)—by Prakthana Vimarsa Vichakshana Mahamahopadhyaya Rao Bahadur R. Narasimhacharya, M.A., M.R.A.S.; ಪ್ರಕಾಶಕರು : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಡೆ. ಅ. ೮+೮೫ ; ಬೆಲೆ, ರೂ. ೧-೦-೦.

೪. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ; ಪ್ರಕಾಶಕರು : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಕ್ರೌನ್. ಅ. ೧೨+೩೦೨ ; ಬೆಲೆ, ೧೨ ಆಣೆ.

೫. **ಗರುಡಗಂಬದ ದಾಸಯ್ಯ**—ಲೇಖಕರು : ಶ್ರೀಮಾನ್ ಗೊರೂರು ರಾಮಸ್ವಾಮಯ್ಯಂಗಾರ್ ; ಪ್ರಕಾಶಕರು : ಸರಸ್ವತೀ ಪುಸ್ತಕಭಂಡಾರ, ಮಂಡ್ಯ ; ಕ್ರೌನ್ ಅ. ೧೬+೨೦೩ ; ಬೆಲೆ, ರೂ. ೧-೦-೦.

೬. **ಪ್ರಬಂಧಪ್ರಕಾಶ**—ಲೇಖಕರು : ಶ್ರೀಮಾನ್ ಮ|| ಶ್ರೀ ದೇಶಪಾಂಡೆ, ಎಂ.ಎ.; ಎಸ್.ಟಿ.ಸಿ. ; ಪ್ರಕಾಶಕರು : ದೇಶಪಾಂಡೆ ಮನೋಹರರಾಯರು, ಅಥಣಿ ; ಕ್ರೌನ್ ಅ. ೬+೨೨೨+೪ ; ಬೆಲೆ, ರೂ. ೧-೦-೦.

೭. **ನಿರಾಭರಣ ಸುಂದರಿ**—ಲೇಖಕರು : ಶ್ರೀಮಾನ್ ದ. ರಾ. ಬೇಂದ್ರೆ, ಎಂ.ಎ.; ಪ್ರಕಾಶಕರು : ಮನೋಹರಗ್ರಂಥ ಪ್ರಕಾಶನಸಮಿತಿ, ಧಾರವಾಡ ; ಕ್ರೌನ್ ಅ. ೧೪೩ ; ಬೆಲೆ, ರೂ. ೧-೦-೦.

೮. **ಕಂಸವಹೋ** (ಪ್ರಾಕೃತ)—ಸಂಪಾದಕರು : ಶ್ರೀಮಾನ್ ಎ. ಎನ್. ಉಪಾಧ್ಯೆ, ಎಂ.ಎ., ಡಿ.ಲಿಟ್., ಕೊಲ್ಲಾಪುರ ; ಪ್ರಕಾಶಕರು : ಹಿಂದೀ ಗ್ರಂಥರತ್ನಾಕರ ಕಾರ್ಯಾಲಯ, ಬೊಂಬಾಯಿ ; ಕ್ರೌನ್ ಅ. ೨೧೩ ; ಬೆಲೆ ?

೯. **ಬೆಳ್ಳಿಯ ಹಬ್ಬ** (ಏಕಾಂಕಗಳು)—ಲೇಖಕರು ಮತ್ತು ಪ್ರಕಾಶಕರು : ಶ್ರೀಮಾನ್ ಎನ್. ಕೆ. ಕುಲಕರ್ಣಿ, ಎಂ.ಎ., ಬಿ.ಟಿ., ಧಾರವಾಡ ; ಕ್ರೌನ್ ಅ. ೩+೭೨ ; ಬೆಲೆ, ೮ ಆಣೆ.



ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು
ಮೈಸೂರು ಸಂಸ್ಥಾನದ ಹೊಸ ಮಹಾರಾಜರವರು.
ಮೈಸೂರು ವಿಶ್ವವಿದ್ಯಾನಿಲಯದ ಹೊಸ ಛಾನ್ಸೆಲರವರು

(ಪಡಿಯಚ್ಚು ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳು ದಯವಿಟ್ಟು ಕೊಟ್ಟದ್ದು)

ವಸ್ತುಕೋಶ

ಈಗ ಶ್ರೀ ಜಯಚಾಮರಾಜ ವೊಡೆಯರ್ ಬಹದ್ದೂರರವರು ನಮ್ಮನ್ನು ಆಳುವ ಮಹಾಸ್ವಾಮಿಗಳಾಗಿದ್ದಾರೆ; ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸೆಲರವರಾಗಿದ್ದಾರೆ. ಮೈಸೂರು ಸಂಸ್ಥಾನವು ಅವರನ್ನು ಎಷ್ಟು ಮಮತೆಯಿಂದ ನಮ್ಮ ಅರಸರು ಎಂದು ಹೇಳಿಕೊಳ್ಳುತ್ತದೆಯೋ ಅಷ್ಟೇ ಮಮತೆಯಿಂದ ಪ್ರಾಯಶಃ ಅದಕ್ಕಿಂತ ಹೆಚ್ಚಾಗಿ, ವಿಶ್ವವಿದ್ಯಾನಿಲಯವು ನಮ್ಮ ಛಾನ್ಸೆಲರು ಎಂದು ಒಂದು ಕ್ಷಮ್ಯವಾದ ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ. ಅವರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡಿದವರು; ಅದರ ಗುಣದೋಷಗಳನ್ನು ಅನುಭವದಿಂದ ತಿಳಿದವರು; ವಿದ್ಯಾರ್ಥಿಗಳೊಡನೆಯೂ ಉಪಾಧ್ಯಾಯರವರೊಡನೆಯೂ ವಿಶ್ವಾಸದಿಂದ ಕಲೆತು ಅವರ ಕಷ್ಟಸುಖಗಳನ್ನು ಬಲ್ಲವರು. ಮೊನ್ನೆತಾನೆ ಪದವೀದಾನೋತ್ಸವದಲ್ಲಿ ಶ್ರೀ ಅಮರನಾಥ ಝಾ ಅವರು ಹೇಳಿದಂತೆ ಅವರು ಪ್ರಪಂಚದ ವಿಶ್ವವಿದ್ಯಾನಿಲಯಗಳ ಛಾನ್ಸೆಲರುಗಳಲ್ಲೆಲ್ಲಾ ವಯಸ್ಸಿನಲ್ಲಿ ಅತ್ಯಂತ ಕಿರಿಯವರು. ಆದರೆ ವಯಸ್ಸೇನು ಮಾಡುತ್ತದೆ? ವಯಸ್ಸು ಕಿರಿದಾದರೆ ಗುಣಕ್ಕೆ ಮತ್ಸರವೇ?

ರಾಜಭಕ್ತಿ ಸಮರ್ಪಣೆ

ಅವರು ವಿದ್ಯಾಬುದ್ಧಿ ನಯವಿನಯ ತೇಜೋಗಾಂಭೀರ್ಯಾದಿ ರಾಜಗುಣಗಣಗಳಿಂದ ವಿರಾಜಮಾನರಾಗಿದ್ದಾರೆ. ನಮ್ಮ ದೇಶದಲ್ಲೂ ದೇಶಾಂತರಗಳಲ್ಲೂ ಸಂಚಾರಮಾಡಿ ವಿಸ್ತಾರವಾದ ಅನುಭವವನ್ನು ಗಳಿಸಿದವರಾಗಿದ್ದಾರೆ. ಗುರುಹಿರಿಯರ ಜೊತೆಯಲ್ಲಿದ್ದು ಅವರ ಆಶೀರ್ವಾದ ಅನುಗ್ರಹಗಳನ್ನು ಪಡೆದು ರಾಜ್ಯಪದ್ಧತಿ ಸರ್ಕಾರ ವ್ಯವಹಾರಾದಿಗಳಲ್ಲಿ ಶಿಕ್ಷಣಹೊಂದಿದವರಾಗಿದ್ದಾರೆ. ಪ್ರಜಾವತ್ಸಲರೂ ಲೋಕಪ್ರಿಯರೂ ಆಗಿದ್ದಾರೆ. ಒಟ್ಟಿನ ಮೇಲೆ, ಶ್ರೀ ನಾಲ್ವಡಿ ಕೃಷ್ಣರಾಜ ವೊಡೆಯರವರಂಥ ರಾಜರ್ಷಿಗಳನಂತರ ಸಿಂಹಾಸನಾಧೀಶ್ವರರಾಗಲು ಎಲ್ಲ ವಿಧದಿಂದಲೂ, ಎಲ್ಲ ದೃಷ್ಟಿಯಿಂದಲೂ, ಅವರಿಗೆ ಅನುರೂಪರಾದವರಾಗಿದ್ದಾರೆ. ಇದನ್ನು ಅವರ ಪ್ರಜೆಗಳೆಲ್ಲರೂ ಒಮ್ಮನಸ್ಸಿನಿಂದ ಒಪ್ಪಿ, ಏಕಮುಖವಾಗಿ ಆಡುತ್ತಿದ್ದಾರೆ. ಆದ್ದರಿಂದ ಮುಂದೆ ರಾಜ ಪ್ರಜೆಗಳಲ್ಲಿ, ಹಿಂದಿನಂತೆಯೇ ಸ್ನೇಹಭಕ್ತಿ ವಾತ್ಸಲ್ಯಗಳಿದ್ದು, ಬೆಳೆದು, ದೇಶವು ಅಭಿವೃದ್ಧಿಯನ್ನೈದುವುದೆಂದು ನಾವು ನಂಬಬಹುದಾಗಿದೆ; ಇದು ನಮ್ಮೆಲ್ಲರ ಪುಣ್ಯ. ಈ ಪುಣ್ಯವನ್ನು ಸರ್ವೇಶ್ವರನು ಸದಾಕಾಲ ಕರುಣಿಸಲಿ!

***

ಕಳೆದ ಆಗಸ್ಟ್ ೨೯ ನೆಯ ತಾರೀಖಿನ ದಿನ ಮೈಸೂರಿನ ಅರಮನೆಯಲ್ಲಿ "ಖರೀತಾ ದರ್ಬಾರು" ನಡೆಯಿತು. ಮೈಸೂರಿನ ರೆಸಿಡೆಂಟರಾದ ಲೆಫ್ಟನೆಂಟ್ ಕರ್ನಲ್ ಡಿ. ಎಚ್. ಗಾರ್ಡನ್ ಅವರು ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳಾಗಿ ದಯಮಾಡಿದ್ದು ಶ್ರೀ ಜಯಚಾಮರಾಜ ವೊಡೆಯರವರು ಮೈಸೂರು ಸಿಂಹಾಸನಾಧಿಪತಿಗಳೆಂಬ ಬಗ್ಗೆ ಇಂಡಿಯ ಚಕ್ರವರ್ತಿಗಳ ಒಪ್ಪಿಗೆಯನ್ನು ತಿಳಿಸಿ ಶ್ರೀಮನ್ಮಹಾರಾಜರವರನ್ನು ಅಭಿನಂದಿಸಿದರು. ಅಂದು ಅವರು ಮಾಡಿದ ಭಾಷಣದ ಸಾರಾಂಶವಿದು :—

ಖರೀತಾ ದರ್ಬಾರು : ರೆಸಿಡೆಂಟರವರ ಭಾಷಣ

"ಮೈಸೂರು ಸಂಸ್ಥಾನದ ಉನ್ನತಾಧಿಕಾರಿಗಳೂ, ಸರದಾರರೂ, ಸರ್ಕಾರಿ ಉದ್ಯೋಗಸ್ಥರೂ ಖಾಸಗಿ ದೊಡ್ಡ ಮನುಷ್ಯರೂ ನೆರೆದಿರುವ ತಮ್ಮ ಈ ದರ್ಬಾರಿನಲ್ಲಿ, ಇಂಡಿಯಾ ಚಕ್ರವರ್ತಿಗಳು ತಮ್ಮ ಸಿಂಹಾಸನಾಧಿಕಾರವನ್ನು ಅಂಗೀಕರಿಸಿರುವರೆಂಬ ಸಂಗತಿಯನ್ನು ಘನಹೊಂದಿದ ವೈಸ್‌ರಾಯರವರ ಪರವಾಗಿ ಬಿನ್ನವಿಸುತ್ತೇನೆ.

"ಈಗ್ಗೆ ಇಪ್ಪತ್ತೊಂದು ವರ್ಷಗಳ ಕೆಳಗೆ ತಾವು ಜನ್ಮವೆತ್ತಿದಾಗ ತಮಗೆ 'ಜಯ' ಎಂಬ ಶುಭನಾಮಕರಣವನ್ನು ಮಾಡಲಾಯಿತು. ಆ ಹೆಸರನ್ನು ತಮಗೆ ಇಟ್ಟದ್ದು, ಬ್ರಿಟಿಷ್ ಚಕ್ರಾಧಿಪತ್ಯವೂ ಅದರ ಮಿತ್ರಮಂಡಲಿಯೂ ನಾಲ್ಕು ವರ್ಷ ಘೋರವಾಗಿ ಹೋರಾಡಿ ಜಯವನ್ನು ಪಡೆದ ಕಾಲದಲ್ಲಿ. ಈಗ ಮತ್ತೊಂದು ಸಾರಿ ಬ್ರಿಟಿಷ್ ಚಕ್ರಾಧಿಪತ್ಯವು ನಾಗರಿಕತೆಯನ್ನೂ, ಸ್ವತಂತ್ರ ಜನರು ಜೀವನದ ಉಚ್ಚಾದರ್ಶಗಳೆಂದುಕೊಂಡಿರುವ—ಜೀವವನ್ನಾದರೂ ತೆತ್ತು ಉಳಿಸಿಕೊಳ್ಳಬೇಕೆನ್ನುವ—ವಸ್ತುಪರಿಸ್ಥಿತಿಗಳನ್ನೂ ಕಾಪಾಡಿಕೊಳ್ಳಲು ಹೋರಾಡುತ್ತಿದೆ. ಅಂಥ ಸ್ವತಂತ್ರ ಜನರಲ್ಲಿ ಮೈಸೂರು ಸಂಸ್ಥಾನವು ಮುಂದೆ ನಿಂತಿದೆ. ಈ ಯುದ್ಧಕಾಲದಲ್ಲಿ ಮತ್ತೆ ತಮ್ಮ ಜೀವಮಾನದ ಒಂದು ದೊಡ್ಡ ಸಂಗತಿ ಜರುಗಿದೆ. ಮೈಸೂರಿನಲ್ಲಿ ಹೀಗೆ ಜಯಪ್ರಾಪ್ತವಾದ ಶುಭವು ಜಗತ್ತಿನ ಸ್ವತಂತ್ರ ಜನಕ್ಕೆಲ್ಲಾ ಜಯಸೂಚಕವಾಗಿರುವುದೆಂಬುದರಲ್ಲಿ ಸಂದೇಹವಿಲ್ಲ.

"ಮೈಸೂರಿನ ಒಡೆಯರುಗಳು ೧೩೯೯ ರಿಂದ ಎಂದರೆ ಸುಮಾರು ಐದುವರೆ ಶತಮಾನಗಳಿಂದ ರಾಜ್ಯವಾಳುತ್ತಿದ್ದಾರೆ. ಆಳಿದ ಮಹಾಸ್ವಾಮಿಯವರು ಅವರಲ್ಲಿ ಅತ್ಯಂತ ಘನತೆವೆತ್ತವರಾಗಿದ್ದರು. ತಾವು ಆ ಮಹಾರಾಜ ಪಂಕ್ತಿಗೆ ಸೇರಿದ್ದೀರಿ; ಆದ್ದರಿಂದ ತಮ್ಮ ಜವಾಬುದಾರಿಯು ಗುರುತರವಾದದ್ದಾಗಿದೆ.—ಅದರಲ್ಲಿ ಸದವಕಾಶವೂ ತುಂಬ ಇದೆ. ತಾವು, ತಮ್ಮ ಕಣ್ಣುಮುಂದೆ ಇದುವರೆಗೆ ವಿರಾಜಮಾನವಾಗಿದ್ದ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂದು ಎಷ್ಟು ಶ್ರದ್ಧಾದರಗಳುಳ್ಳವರಾಗಿ

ದ್ದೀರೆಂಬುದನ್ನು ನಾನು ಚೆನ್ನಾಗಿ ಬಲ್ಲೆ ; ತಾವು ಅದರಲ್ಲಿ ಸಂತತವಾಗಿ ಪ್ರಯತ್ನ ಪಡುತ್ತೀರೆಂಬುದರಲ್ಲಿ ಸಂದೇಹವಿಲ್ಲ. ಆಳಿದ ಮಹಾಸ್ವಾಮಿಯವರ ಕಾಲದಲ್ಲಿ ಪ್ರಪಂಚದ ಮಿಕ್ಕೆಡೆಗಳಲ್ಲಿ ಹೇಗೋ ಹಾಗೆ ಮೈಸೂರಿನಲ್ಲಿಯೂ ಅನೇಕ ಬದಲಾವಣೆಗಳು ಆದವು. ಈ ಬದಲಾವಣೆಗಳು ಬಹು ಮಹತ್ವದವಾದರೂ ಇನ್ನೂ ಆಗಬೇಕಾದ ಕಾರ್ಯ ಬಹಳವಾಗಿದೆ. ಅವರು ನಡಸಿ ನಿಂತ ಕಾರ್ಯವನ್ನು ತಾವು ಮುಂದುವರಿಸಬೇಕಾಗಿದೆ. ಸೃಷ್ಟಿಯಲ್ಲಿ ಯಾವುದೂ ನಿಂತಲ್ಲಿ ನಿಲ್ಲುವುದಿಲ್ಲ—ಇಲ್ಲವೇ ಮುಂದುವರಿಯಬೇಕು, ಇಲ್ಲವೇ ಹಿಂದಕ್ಕೆ ಸರಿಯಬೇಕು. ಇವುಗಳ ಮಧ್ಯದ ಸ್ಥಿತಿಯಿಲ್ಲ. ಮೈಸೂರು ಮುಂದುವರಿಯುತ್ತಿದೆ, ಮುಂದುವರಿಯುತ್ತ ಹೋಗುತ್ತದೆ; ಅದನ್ನು ನಡಸಿಕೊಂಡು ಹೋಗುವುದು ತಮ್ಮ ಕರ್ತವ್ಯವಾಗಿದೆ.

"ಪ್ರಪಂಚದಲ್ಲಿ ಎಲ್ಲೆಲ್ಲೂ ಆರ್ಥಿಕ ಅಭ್ಯುದಯವು ಆಧ್ಯಾತ್ಮಿಕ ಅಭಿವೃದ್ಧಿಯನ್ನು ಮೆಟ್ಟಿ ಮುಂದೆ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ನ್ಯಾಯಸತ್ಯಗಳ ಧಾರ್ಮಿಕಶಕ್ತಿಯು ಮೇಲಾಗಿ ಅಧರ್ಮಕ್ಕೆ ಪರಾಜಯವಾಗಿಯೆ ಆಗುವುದೆಂದು ನಮಗೆ ಭರವಸೆ ಇದೆ.

"ಮೈಸೂರಿನಲ್ಲಿ ಕಳೆದ ಅರ್ಧ ಶತಮಾನದಿಂದ ಕಂಡು ಬಂದಿರುವ ಸಂಪದಭಿವೃದ್ಧಿಯು ನ್ಯಾಯವಾಗಿ ಹೆಮ್ಮೆಪಡಬಹುದಂಥಾದ್ದಾಗಿದೆ; ಇತರರಿಗೆ ಇದು ದೊಡ್ಡ ಮೇಲ್ಪಂಕ್ತಿಯಾಗಿದೆ. ಆದರೆ ಈ ಸಂಪದಭಿವೃದ್ಧಿಯ ಜೊತೆಜೊತೆಯಲ್ಲಿಯೇ ಸಂಸ್ಥಾನದ ಧಾರ್ಮಿಕ ಉನ್ನತಿಯೂ ಬೆಳೆದುಕೊಂಡು ಬಂದಿರುವುದು ಶ್ಲಾಘ್ಯವಾಗಿದೆ. ಇದಕ್ಕೆ ಕೀರ್ತಿಯು ಆಳಿದ ಮಹಾಸ್ವಾಮಿಯವರಿಗೆ ಸಲ್ಲತಕ್ಕದ್ದಾಗಿದೆ. ಈ ಸಂಸ್ಥಾನವು ತನ್ನ ಪ್ರಾಚ್ಯ ಮತ್ತು ಪಾಶ್ಚಾತ್ಯ ವಿದ್ಯಾಪೀಠಗಳಿಗೂ, ಕಲೆಗಳಿಗೆ ಕೊಡುತ್ತಿರುವ ಪ್ರೋತ್ಸಾಹಕ್ಕೂ, ಪ್ರಸಿದ್ಧಿ ಪಡೆದಿದೆ. ಅದರ ನಗರಗಳೂ ಉದ್ಯಾನವನಗಳೂ ಅನೇಕಾನೇಕ ಪ್ರಕೃತಿಗತ ಅದ್ಭುತಗಳೂ ಸೌಂದರ್ಯದ ನೆಲೆವೀಡೆಂದು ಹಳ್ಳಿಯ ಗೌಡನೂ ನೋಡಿ ಸಂತೋಷಪಡುವಂತಾಗಿದೆ.

"ಇಷ್ಟೆಲ್ಲಾ ಆದದ್ದು ಏತರಿಂದ ಎಂದು ತಾವು ಒಂದು ಕ್ಷಣ ಯೋಚಿಸಿಕೊಂಡು ನೋಡಬೇಕು. ಇದು ಆಳಿದ ಮಹಾಸ್ವಾಮಿಯವರಿಗೂ ಅವರ ಸರ್ಕಾರಕ್ಕೂ ಇದ್ದ ಅಪೂರ್ವ ಬಾಂಧವ್ಯದ ಫಲವೆಂಬುದರಲ್ಲಿ ನನಗೆ ಸಂದೇಹ ತೋರದು. ಅವರು ತಮ್ಮ ಸರ್ಕಾರದ ಅಧಿಕಾರಿಗಳ ಹಲವು ಸಲಹೆ ಸೂಚನೆಗಳನ್ನು ಸಮನ್ವಯಗೊಳಿಸಿ ಅವುಗಳನ್ನು ವಿಸ್ತಾರವೂ ಫಲವತ್ತೂ ಆದ ಮಾರ್ಗಗಳಿಗೆ ತಿರುಗಿಸಿ ಕೊಟ್ಟರು. ಅವರ ಸರ್ಕಾರವು ಈಗ ತಮ್ಮದಾಗಿ, ಪ್ರಜೆಗಳಿಗೋಸ್ಕರ ಪ್ರಜೆಗಳ ಸೇವಕರಂತೆ ಕೆಲಸಮಾಡುತ್ತ ಬರುತ್ತದೆ.

" ತಾವು ಆಳಿದ ಮಹಾಸ್ವಾಮಿಯವರ ಉದಾತ್ತವಾದ ಉದಾಹರಣೆಯನ್ನು ತಮ್ಮ ಮುಂದೆ ಇಟ್ಟುಕೊಂಡಿರುತ್ತೀರಿ. ಅವರನ್ನು ಚೆನ್ನಾಗಿ ಅರಿತುಕೊಂಡು ಅವರೊಡನೆ ಪಡೆದ ಆತ್ಮೀಯ ಮೈತ್ರಿಯನ್ನು ತಮ್ಮ ಹೃದಯದಲ್ಲಿಟ್ಟುಕೊಂಡಿದ್ದೀರಿ. ತಮ್ಮ ಪುರೋದೃಷ್ಟಿಯು ವಿಶಾಲವಾದದ್ದೂ ಸಂಸ್ಕೃತಿಪೂರ್ಣವೂ ಆಗಿದೆ. ಆದ್ದರಿಂದ ತಾವು ತಮ್ಮ ಸಂಸ್ಥಾನವನ್ನೂ ಸರ್ಕಾರವನ್ನೂ ನಿಜವಾದ ಅಭ್ಯುದಯ ಮಾರ್ಗದಲ್ಲಿ ನಡಸಿ ಆಳಿದ ಮಹಾಸ್ವಾಮಿಯವರಂತೆ ಪ್ರಜೆಗಳಿಗೆ ತಂದೆಯೆನ್ನಿಸಿಕೊಳ್ಳುವ ಉಚ್ಚಸ್ಥಾನವನ್ನು ಅಲಂಕರಿಸುತ್ತೀರೆಂಬುದನ್ನು ನಾನು ಅರಿತಿದ್ದೇನೆ. ಚಕ್ರವರ್ತಿಗಳ ವಿಷಯದಲ್ಲಿನ ಭಕ್ತಿವಿಶ್ವಾಸಗಳು ಒಡೆಯರ ಅರಸುಮನೆತನಕ್ಕೆ ಸಂಪ್ರದಾಯವಾಗಿ ನಡೆದುಬಂದಿವೆ; ಈ ಸಂಪ್ರದಾಯವನ್ನು ತಾವು ನಡಸಿಕೊಂಡು ಬರುವಿರೆಂದು ನಾನು ಬಲ್ಲೆ. ಇನ್ನು, ತಾವು ಪಟ್ಟಕ್ಕೆ ಬಂದದ್ದಕ್ಕಾಗಿ ತಮಗೆ ನನ್ನ ಹೃತ್ಪೂರ್ವಕವಾದ ಅಭಿನಂದನಗಳನ್ನು ಸಮರ್ಪಿಸುತ್ತೇನೆ; ಮತ್ತು ಸದಾ ತಮಗೆ ಶುಭವನ್ನು ಕೋರುತ್ತಿರುತ್ತೇನೆ."

ಇವು ಮೈಸೂರಿನಲ್ಲಿ ಅಭಿಮಾನವನ್ನಿಟ್ಟು, ಅದರ ಬಹುಮುಖವಾದ ಮುನ್ನಡೆಯನ್ನು ನೋಡಿ ಸಂತೋಷಪಟ್ಟು, ವಿಶ್ವಾಸದಿಂದಲೂ ಗೌರವದಿಂದಲೂ ಆಡಿದ ಹಿರಿಯರ ನುಡಿಗಳು; ಪಥ್ಯವೂ ಸತ್ಯವೂ ಪ್ರಿಯವೂ ಆದ ಮಾತುಗಳು. ಅವುಗಳಿಂದ ಕೀರ್ತಿಶೇಷರಾದ ಮಹಾಪ್ರಭುಗಳಲ್ಲಿದ್ದ ಗೌರವವು ಎಷ್ಟು ವ್ಯಕ್ತವಾಗುತ್ತದೆಯೋ ಅಷ್ಟೇ ವಿಶ್ವಾಸವೂ ಭರವಸೆಯೂ ಇಂದಿನ ಆಳುವ ಮಹಾಸ್ವಾಮಿಗಳಲ್ಲಿಯೂ ವ್ಯಕ್ತವಾಗುತ್ತವೆ.

ನಾವೂ ಬ್ರಿಟಿಷ್ ಸರ್ಕಾರದ ಉನ್ನತಾಧಿಕಾರಿಗಳೊಡನೆ, ಮಹಾಸ್ವಾಮಿಯವರ ಅಖಂಡ ಪ್ರಜಾಕೋಟಿಯೊಡನೆ, ಒಂದಾಗಿ ನಮ್ಮ ರಾಜಭಕ್ತಿಪುರಸ್ಸರವಾದ ಅಭಿನಂದನಗಳನ್ನು ಸಮರ್ಪಿಸಿ, ಶ್ರೀಮಹಾರಾಜ ಜಯಚಾಮರಾಜ ಒಡೆಯರವರಿಗೆ ಭಗವಂತನು ಆಯುರಾರೋಗ್ಯಾದಿ ಸಕಲಭಾಗ್ಯಗಳನ್ನು ದಯಪಾಲಿಸಲೆಂದೂ ಅವರ ಆಳಿಕೆಯಲ್ಲಿ ಮೈಸೂರೂ ಕನ್ನಡವೂ ಮತ್ತೂ ಮುಂದಕ್ಕೆ ಬರಲೆಂದೂ ಪ್ರಾರ್ಥಿಸುತ್ತೇವೆ.

***

ಪಟ್ಟಾಭಿಷೇಕ ಪ್ರಸಿದ್ಧಿ ಪತ್ರಿಕೆ

ಶ್ರೀಮತ್ಸಮಸ್ತ ಭೂಮಂಡಲಮಂಡನಾಯಮಾನ ನಿಖಿಲದೇಶಾವತಂಸ ಕರ್ನಾಟಕ ಜನಪದಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರಮಹಾಸಂಸ್ಥಾನ

ಮಧ್ಯದೇದೀಪ್ಯಮಾನಾವಿಕಲ ಕಲಾನಿಧಿ ಕುಲಕ್ರಮಾಗತರಾಜ ಕ್ಷಿತಿಪಾಲಪ್ರಮುಖ ನಿಖಿಲರಾಜಾಧಿರಾಜ ಮಹಾರಾಜ ಚಕ್ರವರ್ತಿಮಂಡಲಾನುಭೂತದಿವ್ಯರತ್ನ ಸಿಂಹಾ ಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರ ನರಪತಿ ಬಿರುದುಂತೆಂಬರಗಂಡ ಲೋಕೈಕವೀರ ಯದುಕುಲಪಯಃಪಾರಾವಾರ ಕಲಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡ ಭೇರುಂಡ ಧರಣೀವರಾಹ ಹನೂಮದ್ಗರುಡ ಕಂಠೀರವಾದ್ಯನೇಕಬಿರುದಾಂಕಿತ ಶ್ರೀಮನ್ಮಹಾರಾಜ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದರ್‌ರವರ ಸಹೋದರರಾದ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದ ರ್ರವರ ಧರ್ಮಪತ್ನೀ ಯುವರಾಣಿ ಕೆಂಪುಚೆಲುವಾಜಮ್ಮಣ್ಣೀಯವರ ಗರ್ಭ ಸುಧಾಂಬುಧಿ ರಾಕಾಸುಧಾಕರಾಯಮಾನ ಶ್ರೀಮಚ್ಚಾಮುಂಡಿಕಾಂಬಾವರಪ್ರಸಾ ದೋದ್ಭವರಾದ ಆತ್ರೇಯಸಗೋತ್ರ ಆಶ್ವಲಾಯನಸೂತ್ರ ಋಕ್ಶಾಖಾನುವರ್ತಿ ಗಳಾದ ಶ್ರೀಮನ್ಮಹೀಶೂರಪುರವರಾಧೀಶ ಶ್ರೀ ಜಯಚಾಮರಾಜ ಒಡೆಯರ್ ಬಹದ್ದರ್ರವರು ಶಾಲೀವಾಹನ ಶಕ ೧೮೪೧ನೇ ಸಿದ್ಧಾರ್ಥಿನಾಮ ಸಂವತ್ಸರದ ಆಷಾಢ ಬಹುಳ ಪಂಚಮೀ ಅನಂತರ ಷಷ್ಠೀ ಶುಕ್ರವಾರ ಉತ್ತರಾಭಾದ್ರಪದಾ ನಕ್ಷತ್ರ ಮೀನರಾಶಿ ಧನುರ್ಲಗ್ನದಲ್ಲಿ ಅವತರಿಸಿ, ಶಕ ೧೮೬೨ನೇ ವಿಕ್ರಮನಾಮ ಸಂವತ್ಸರದ ಭಾದ್ರಪದ ಶುದ್ಧ ಸಪ್ತಮೀ ರವಿವಾರ (ಸ೯ ೧೯೪೦ ನೇ ಇಸವಿ ಸೆಪ್ಟೆಂಬರ್ ತಾರೀಖು ೮) ಅನೂರಾಧಾ ನಕ್ಷತ್ರ ಹಗಲು ೧೦|| ಘಂಟೆ ತುಲಾ ಲಗ್ನದ ವೃಷಭಾಂಶ ವೈರಾಜ ಮುಹೂರ್ತದಲ್ಲಿ ರತ್ನಸಿಂಹಾಸನಾರೂಢರಾಗಿ ಪಟ್ಟಾಭಿಷಿಕ್ತ ರಾಗಿರುತ್ತಾರೆಂದು ಇದರಿಂದ ಸಮಸ್ತ ಪ್ರಜೆಗಳಿಗೂ ತಿಳಿಯಪಡಿಸಿರುತ್ತೆ.

ಶ್ರೀಮನ್ಮಹಾರಾಜರವರು ಪಟ್ಟಾಭಿಷೇಕ ಸಮಯದಲ್ಲಿ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ದಯಪಾಲಿಸಿದ ಸಂದೇಶ

ಮೈಸೂರು ಅರಮನೆ,
೮ನೆಯ ಸೆಪ್ಟೆಂಬರ್, ೧೯೪೦

ನನ್ನ ಪ್ರೀತಿಪಾತ್ರರಾದ ಪ್ರಜೆಗಳೆ,

ಪೂಜ್ಯರಾದ ನಮ್ಮ ದೊಡ್ಡಪ್ಪನವರು ಕೀರ್ತಿಶೇಷರಾದ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರಲ್ಲಿ ಗೌರವವನ್ನೂ ಪ್ರೇಮವನ್ನೂ ತೋರಿ, ಶ್ರೀಮಂತರಿಂದಲೂ, ಬಡವರಿಂದಲೂ, ಉನ್ನತಸ್ಥಾನದವರಿಂದಲೂ, ಸಾಮಾನ್ಯ ರಿಂದಲೂ, ಸಂಸ್ಥಾನದ ಎಲ್ಲಾ ಕಡೆಗಳಿಂದ ಬಂದು ಸುರಿದ ಅಸಂಖ್ಯಾತ ನಿದರ್ಶನ

ಗಳಿಂದ ನನ್ನ ಹೃದಯ ಗಾಢವಾಗಿ ತಟ್ಟಿಹೋಗಿದೆ. ಅವರುಗಳೂ ನಾನೂ ಪಟ್ಟಿರುವ ನಷ್ಟ ಎಂತಹುದೆಂದು ಅವು ಸಾಕ್ಷ್ಯವೊದಗಿಸಿ, ನನಗೂ ನನ್ನ ಮನೆತನದ ಕುಟುಂಬ ವರ್ಗಕ್ಕೂ ಬಹಳವಾಗಿ ಮನಸ್ಸಮಾಧಾನವನ್ನು ತಂದಿವೆ; ಮತ್ತು ನಾನು ವಹಿಸಿ ಕೊಳ್ಳುತ್ತಿರುವ ಮಹತ್ಕಾರ್ಯದಲ್ಲಿ ನನಗೆ ಧೈರ್ಯವನ್ನು ಕೊಡುವ ಬೆಂಬಲದ ಆಧಾರವಾಗಿವೆ.

ಮೈಸೂರು ಸಿಂಹಾಸನಕ್ಕೆ ಅನುಕ್ರಮವಾಗಿ ನಾನು ಬರುವುದರಲ್ಲಿ ಮಹಾನು ಭಾವರಾದ ರಾಜಶ್ರೇಷ್ಠರನ್ನು ಹಿಂಬಾಲಿಸುತ್ತಿದ್ದೇನೆ. ಅವರು ನಿಮ್ಮೆಲ್ಲರಲ್ಲೂ ಪ್ರೇಮವಿಟ್ಟಿದ್ದರು; ತಮ್ಮ ದೈವಭಕ್ತಿಯಿಂದ, ತಮ್ಮ ಸುಜ್ಞಾನದಿಂದ, ತಮ್ಮ ಕೃಪಾಪ್ರಸನ್ನತೆಯಿಂದ, ತಮ್ಮ ವಿನಯದಿಂದ, ತಮ್ಮ ಕರ್ತವ್ಯನಿಷ್ಠತೆಯಿಂದ, ತಮ್ಮ ರಾಜಗಾಂಭೀರ್ಯದಿಂದ, ರಾಜ್ಯಭಾರಮಹಿಮೆಯಿಂದ, ನಿಮ್ಮೆಲ್ಲರ ಪ್ರೇಮವನ್ನು ಆಕರ್ಷಿಸಿದ್ದರು.

ಅವರ ನೆನಪು ಎಂದೆಂದಿಗೂ ನಮ್ಮಲ್ಲಿ ನಿಲ್ಲುವುದು. ಈಗ ಅದು ಅವರ ನಷ್ಟದ ಪೂರ್ಣಾಘಾತವನ್ನು, ನಮ್ಮ ಬಾಳಿನಲ್ಲಿ ಅವರು ಬಿಟ್ಟ ದೊಡ್ಡ ಕೊರತೆಯನ್ನು, ಅನುಭವಿಸುತ್ತಿರುವ ನಮಗೆ ದುಸ್ಸಹವಾಗಿರುವುದು. ವರ್ಷಗಳು ಕಳೆದಂತೆಲ್ಲಾ, ಅವರು ನಮಗೆ ಏನಾಗಿದ್ದರು ಆ ಅರ್ಥವನ್ನೆಲ್ಲಾ ಬೆಲೆಗಂಡು ತಿಳಿದಂತೆಲ್ಲಾ, ಅವರ ಬಾಳಿನಿಂದ ನಮ್ಮ ಬಾಳನ್ನು ನಾವು ತಿದ್ದುವುದನ್ನು ಕಲಿತಂತೆಲ್ಲಾ, ಆ ನೆನಪು ನಮಗೆ ಸವಿಯಾದ ನೆನಪಾಗಿ ಬೆಳೆಯುವುದು.

ಈಗ ನಾವು ಅವರ ಮಹತ್ಪ್ರಯತ್ನವನ್ನು ಈಡೇರಿಸುವುದಕ್ಕಾಗಿ ನಮ್ಮನ್ನು ಅರ್ಪಣಮಾಡಿಕೊಳ್ಳಬೇಕಾಗಿದೆ. ಒಂದು ದೊಡ್ಡ ಕುಟುಂಬದ ಭಾವನೆಯಲ್ಲಿ ನಮ್ಮನ್ನು ಮುಡಿಪುಕಟ್ಟಿಕೊಳ್ಳುವುದಾದರೆ, ನಾವು ಅದನ್ನು ಈಡೇರಿಸುವುದರಲ್ಲಿ ಕೃತಾರ್ಥರಾಗಬಲ್ಲೆವು. ಈ ಕಾಲದಲ್ಲಿ ಲೋಕ ಎಡರುತೊಡರುಗಳಿಂದ ತುಂಬಿ ಹೋಗಿದೆ; ಈ ಕಷ್ಟಗಳನ್ನು ಒಕ್ಕಟ್ಟಿನಿಂದಲೂ, ಸ್ವಾರ್ಥತ್ಯಾಗದಿಂದಲೂ ಎದುರಿಸಿ ದರೆ ಮಾತ್ರ ನಾವು ಗೆದ್ದುಕೊಂಡು ಈಚೆಗೆ ಬರಬಹುದು. ಈ ಭಾವನೆಯಲ್ಲಿ ನಾನು ನನ್ನ ಹಿರಿಯರ ಸಿಂಹಾಸನವನ್ನೇರುವ ಈ ವ್ರತಸಮಾರಂಭವನ್ನು, ನನ್ನನ್ನೂ ನನ್ನ ಜೀವಮಾನವನ್ನೂ, ನನ್ನ ಸಕಲ ಸರ್ವಸ್ವವನ್ನೂ ಮೈಸೂರು ಸಂಸ್ಥಾನದ ಜನರ ಸೇವೆಗಾಗಿ ಸಮರ್ಪಣ ದೀಕ್ಷೆಯೆಂಬುದಾಗಿ ಎಣಿಸುತ್ತೇನೆ. ಇದರಲ್ಲಿ ನನ್ನೊಬ್ಬನ ಪ್ರಯತ್ನವೊಂದೇ ಜಯಶಾಲಿಯಾಗಲಾರದೆಂದು ನಾನು ಚೆನ್ನಾಗಿ ಅರಿತಿದ್ದೇನೆ. ನಿಮ್ಮ ನೆರವು, ನಿಮ್ಮ ಸಹಕಾರ, ನಿಮ್ಮ ನಂಬಿಕೆ, ನಿಮ್ಮ ಪ್ರೇಮ ನನಗೆ ಬೇಕು.

ನನ್ನ ವಶಕ್ಕೆ ಒಪ್ಪಿಸಿರುವ ಪವಿತ್ರ ಕರ್ತವ್ಯದ ನಿರ್ವಹಣೆಯಲ್ಲಿ ಬೆಳಕನ್ನೂ, ಶಕ್ತಿಯನ್ನೂ ಭಗವಂತನು ನನಗೆ ಅನುಗ್ರಹಿಸಲಿ; ಮತ್ತು ಆತನ ವರಪ್ರಸಾದಗಳು ಯಥೇಷ್ಟವಾಗಿ ಮೈಸೂರು ಸಂಸ್ಥಾನದ ಪ್ರತಿಯೊಂದು ಮನೆಯಲ್ಲಿಯೂ ತೊಟ್ಟಿಯಲ್ಲಿಯೂ ಹೊಕ್ಕು ನೆಲಸಿ ಹೊಳೆದು ಬೆಳಗಲಿ.

ಶ್ರೀ ಜಯಚಾಮರಾಜ ಒಡೆಯರ್.

***

ಶ್ರೀಮರ್ ಮಹಾರಾಜ ಜಯಚಾಮರಾಜ ವೊಡೆಯರವರ ಪಟ್ಟಾಭಿಷೇಕದ ವರ್ಣನೆಯೂ ವಿವರಗಳೂ ಅನೇಕ ಕನ್ನಡ ಇಂಗ್ಲಿಷ್ ಪತ್ರಿಕೆಗಳಲ್ಲಿ ಗದ್ಯವಾಗಿ, ಪದ್ಯವಾಗಿ ಬಂದಿವೆ. ೧೧-೧೦-೧೯೪೦ರ 'ಕನ್ನಡ ನುಡಿ'ಯಲ್ಲಿ ಶ್ರೀಮರ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ತಮ್ಮ ಕವಿಸಹಜವಾದ, ಸರಳವಾದ, ಸುಂದರವಾದ, ಭಕ್ತಿಭಾವಪೂರಿತವಾದ ಮಾತುಗಳಲ್ಲಿ 'ದೊರೆಗಳ ಪಟ್ಟಾಭಿಷೇಕ'ವನ್ನು ವರ್ಣಿಸಿದ್ದಾರೆ. ಅವರ ಆ ಲೇಖನದಿಂದ ಮುಂದೆ ಕೆಲವು ಭಾಗಗಳನ್ನು ಎತ್ತಿ ಬರೆದಿದ್ದೇವೆ:—

ದೊರೆಗಳ ಪಟ್ಟಾಭಿಷೇಕ

"ಮೈಸೂರ ಅರಮನೆಯಲ್ಲಿ ರಾಜರಾದ ಮಹನೀಯರಿಗೆ ಕಾಲಲ್ಲಿ ಒಂದು ಚಿನ್ನದ ಸರಪಳಿಯನ್ನು ತೊಡಿಸುವ ಸಂಪ್ರದಾಯವಿದೆ. ಸಿಂಹಪೀಠದಿಂದ ಇಳಿದು ಅಂತಃಪುರಕ್ಕೆ ಬಿಜಮಾಡಿಸುವ ಮಹಾಸ್ವಾಮಿಯವರನ್ನು ನೋಡಿದ ಕೆಲವರಿಗೆ ಅವರ ಪಾದಕ್ಕೆ ಹಾಕಿದ್ದ ಈ ಸರಪಳಿ ಅರಸರ ಅಲಂಕಾರದಲ್ಲಿ ಬಹುಮುಖ್ಯವಾದ ಒಂದು ಭಾಗವೆಂದು ಕಂಡಿತು. ಅದರ ಅರ್ಥವಾದರೂ ಏನು? ಮೊದಲಿನ ಮಾತಾಗಿ, ರಾಜರಲ್ಲಿರುವ ದೈವಶಕ್ತಿಯನ್ನು ರಾಜ್ಯದ ಲಕ್ಷ್ಮಿ ಒಪ್ಪಿಕೊಂಡಿದ್ದಾಳೆನ್ನುವುದು ಇದರ ಅರ್ಥ. ಉಳಿದವರು ಲಕ್ಷ್ಮಿಯನ್ನು ಪೂಜಿಸಬೇಕು: ಅವರಿಗೆ ಹೊನ್ನು ಕಾಲಿಗೆ ತೊಡವಲ್ಲ. ಆದರೆ ರಾಜ್ಯ ರಾಜರನ್ನು ಪೂಜಿಸುತ್ತದೆ. ಆ ರಾಜ್ಯದ ಲಾಂಛನವಾಗಿ ಹೊನ್ನು ಅವರ ಕಾಲಿಗೆ ತೊಡವಾಗುತ್ತದೆ. ಎರಡನೆಯ ಮಾತಾಗಿ, ಉಳಿದವರು ಹೊನ್ನನ್ನು ತಮ್ಮ ಪ್ರಭುವಾಗಿ ಮಾಡಿಕೊಳ್ಳುತ್ತಾರೆ. ರಾಜರು ಹೀಗೆ ಮಾಡುವುದಾಗದು. ಹೊನ್ನು ಅವರಿಗೆ ಸೇವೆಮಾಡುತ್ತದೆ. ಸಾಮಾನ್ಯರ ಜೀವನದಲ್ಲಿ ಪ್ರಭುತ್ವ ಮಾಡುವ ಹೊನ್ನಿನ ಮೇಲೆ ಪ್ರಭುತ್ವ ಮಾಡಬೇಕು ರಾಜರು. ರಾಜರು ರಾಜರಾಗಿದ್ದರೆ ಹೊನ್ನು ಅವರ ದಾಸ್ಯದಲ್ಲಿರುತ್ತದೆ. ಮೂರನೆಯ ಮಾತಾಗಿ, ಈ ಸರಪಳಿ ಭೂಷಣಕ್ಕಿಂತ ಹೆಚ್ಚಾಗಿ ಒಂದು ಬಂಧನ. ಪ್ರಭುವಾದವರಿಗೆ ಅದು ತಾವು ಒಪ್ಪಿಕೊಂಡಿರುವ ಒಂದು ಬಂಧನದ ಲಾಂಛನವೆಂದು ಕಾಣಬೇಕು.

ಉಳಿದವರಿಗೆ ಇಲ್ಲದ ಒಂದು ತೊಡರು ತನ್ನ ಕಾಲಿಗೆ ಬಿದ್ದಿತು ಎಂದೇ ರಾಜರಿಗೆ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ರಾಜರ ಪದವಿ ಪುಣ್ಯದ ಪ್ರತಿಫಲವಾಗಿ ಬರುವ ತೊಡರು. ನನ್ನನ್ನು ಬಿಟ್ಟು ಹೋದೀಯೆ ಎಂದು ತಾಯ ಕಾಲಿಗೆ ತೊಡರುವ ಮಗುವಿನಂತೆ, ನನ್ನನ್ನು ಅಗಲೀಯೆ ಎಂದು ಇನಿಯನಿಗೆ ತೋಳಬಂಧನವನ್ನು ಮಾಡುವ ಪ್ರೇಯಸಿಯಂತೆ, ನನ್ನ ಕೈ ಬಿಟ್ಟೀಯೆ ಎಂದು ಭಗವಂತನ ಕಾಲಿಗೆ ತೆಕ್ಕೆ ಹಾಕುವ ಭಕ್ತನಂತೆ, ಐಶ್ವರ್ಯ ರಾಜರ ಕಾಲಿಗೆ ತೊಡರಿಕೊಳ್ಳುತ್ತದೆ. ಅರಸರು ಉಳಿದ ಪುಣ್ಯವಂತರಂತೆ ಅಥವಾ ಅದಕ್ಕೆ ಸ್ವಲ್ಪ ಹೆಚ್ಚಿನ ಪುಣ್ಯವಂತರಂತೆ ಅಲ್ಲ. ಉಳಿದವರು ನಿಶ್ಚಿಂತೆಯಿಂದ ತಮ್ಮ ಬಾಳನ್ನು ಸಾಗಿಸಬಹುದು. ಅರಸರಿಗೆ ಈ ಸುಲಭ ಜೀವನವಿಲ್ಲ. ದಿನಬೆಳಗೂ ಹಗಲುರಾತ್ರಿಯೂ ಒಂದು ರಾಷ್ಟ್ರದ ಕ್ಷೇಮವನ್ನು ಚಿಂತಿಸುತ್ತ ಅವರು ತಮ್ಮ ದೇಹವನ್ನು ಕ್ಲೇಶಪಡಿಸಬೇಕು: ಮನಸ್ಸನ್ನು ಕ್ಷೋಭೆ ಪಡಿಸಬೇಕು. ಒಡೆಯರ ಕಾಲಿನಲ್ಲಿ ಚಿನ್ನದ ಸರಪಳಿ ಇದಿಷ್ಟರ ಲಾಂಛನ; ಅವರು ಒಪ್ಪಿಕೊಂಡಿರುವ ಹಿರಿದಾದ ಕೆಲಸದ ನೆನಪಿನ ಕುರುಹು.

ಹಿಂದೆ ಆಳಿದ ಅರಸರಿಗೆ ಇರದೆ ಇದ್ದ ಅನೇಕ ತೊಡಕುಗಳು ಈಗಿನ ಅರಸರ ಬಾಳಿನಲ್ಲಿ ಎದುರಿಗೆ ಒರುತ್ತಿವೆ. ಈ ಯುಗ ಕ್ಷೋಭೆಯ ಯುಗವಾಗಿ ಬಿಟ್ಟಿದೆ. ಯೂರೋಪಿನಂಥ ಖಂಡದಲ್ಲಿ ಒಂದು ಘೋರ ಸಂಗ್ರಾಮ. ಏಷ್ಯಾದ ಪೂರ್ವ ದಿಗಂತದಲ್ಲಿ ಅದರದೊಂದು ಪ್ರತಿ. ಎಲ್ಲ ನಾಡಿನಲ್ಲೂ ಜನರಲ್ಲಿ ಪಕ್ಷಗಳು: ಹಣವುಳ್ಳವರು ಹಣವಿಲ್ಲದವರು ಎಂದು; ಒಂದು ಮತದವರು ಇನ್ನೊಂದು ಮತದವರು ಎಂದು; ಒಂದು ಧರ್ಮದವರು ಇನ್ನೊಂದು ಧರ್ಮದವರು ಎಂದು; ಒಂದು ಕುಲದವರು ಇನ್ನೊಂದು ಕುಲದವರು ಎಂದು. ಈ ಪಕ್ಷಗಳು ಕಾದಾಡುತ್ತಿವೆ. ಇದರಲ್ಲಿ ನಮ್ಮ ಕಾಲ ಶಾಂತಿಯನ್ನು ಕಾಣದು. ಹೊಡೆದಾಟವಿಲ್ಲದೆ ಸುಖವಿಲ್ಲವೆಂದು ಈ ತಲೆಮಾರಿನ ಜನ ನಿಶ್ಚಯಮಾಡಿಕೊಂಡಿರುವಂತೆ ಕಾಣುತ್ತದೆ. ನಮ್ಮ ದೇಶವಾದರೂ ಇಂಥ ಸಮಸ್ಯೆಗಳಿಂದ ತೊಂದರೆಪಡದೆ ಇಲ್ಲ. ಪರದೇಶದ ಸ್ಥಿತಿಗತಿಯನ್ನು ನೋಡಿಯೋ, ನೋಡದ ಸಂದರ್ಭದಲ್ಲಿ ಪುಸ್ತಕಗಳಲ್ಲಿ ಓದಿಯೋ, ನಮ್ಮಲ್ಲಿ ಅನೇಕರು ಅಲ್ಲಿರುವುದು ಚೆನ್ನಾಗಿದೆ ಇಲ್ಲಿರುವುದು ಚೆನ್ನಾಗಿಲ್ಲ ಎಂಬಷ್ಟೇ ಒಂದು ತತ್ತ್ವವನ್ನು ಮುಖ್ಯವಾಗಿ ಮಾಡಿಕೊಂಡು ದೇಶದ ಬಾಳುವೆಯನ್ನು ತಿದ್ದಲು ಯತ್ನಮಾಡುತ್ತ ಇದ್ದಾರೆ. ಇದು ಬರಿಯ ರಾಜಕೀಯದ ಮಾತಲ್ಲ, ಎಲ್ಲ ವಿಷಯದಲ್ಲೂ ಅನ್ವಯಿಸುತ್ತದೆ. ಇದಿಷ್ಟಕ್ಕೂ ಮುಖ್ಯಕಾರಣವೇನಂದರೆ, ನಾವು ಸುಖವಾಗಿಲ್ಲ ಎಂದು ತೋರಿ ಹೊರಗೆ ಜನ ಸುಖ ವಾಗಿದ್ದಾರೆ ಎಂದು ತಿಳಿದಿರುವುದು. ಆದರೆ ನಿಜದಲ್ಲಿ ಹೊರಗಿನವರೂ ಸುಖವನ್ನು ಕಂಡಿಲ್ಲ, ಸುಖವನ್ನು ಅರಸುತ್ತಿದ್ದಾರೆ. ಭರತವರ್ಷದಲ್ಲಿ ಜನ ಇದನ್ನೇ ಮಾಡುತ್ತಿದ್ದಾರೆ.

ಸುಖವನ್ನು ಅರಸುವುದರಲ್ಲಿ ಹೊರಗಿನವರು ತಮ್ಮ ತಮ್ಮ ದೇಶದ ಸ್ಥಿತಿಗತಿಗಳನ್ನು ತಮ್ಮ ಕಷ್ಟಗಳ ನಿವಾರಣೆಯನ್ನು ಕುರಿತು ಸ್ವತಂತ್ರವಾಗಿ ಯೋಚಿಸುತ್ತ ಇರಲಾಗಿ ನಮ್ಮವರು ತಮ್ಮ ಸ್ಥಿತಿಗತಿಗಳನ್ನು ವಿಚಾರಮಾಡದೆ ಹೊರಗಿನ ಯಾವುದೋ ನಿವಾರಣೋಪಾಯವನ್ನು ನಾವೂ ಅನುಸರಿಸಬೇಕೆಂದು ಯತ್ನಮಾಡುತ್ತಿದ್ದಾರೆ. ಉದಾಹರಣೆಗಾಗಿ: ನಮ್ಮಲ್ಲಿ ಅನೇಕರು ಪ್ರಜಾಪ್ರೇಮವೆನ್ನುವುದು ಪಾಶ್ಚಾತ್ಯ ತತ್ತ್ವವೆಂದು ತಿಳಿದಿದ್ದೇವೆ. ಸತ್ಯವಾಗಿ ಪ್ರಜಾಪ್ರೇಮವೆನ್ನುವುದೇ ನಮ್ಮ ಸಂಪ್ರದಾಯದ ಭಾವನೆ. **ಅರಸಿಂಗಂ ಪ್ರಜೆಯೆ ದೈವಂ** ಎಂದು ಹೇಳಿದ ಮಾತು ಪಾಶ್ಚಾತ್ಯರಾಜ್ಯಶಾಸ್ತ್ರದ್ದಲ್ಲ. ಇದಾದರೂ ಆಧುನಿಕವಾಯಿತು. ಪ್ರಾಚೀನವಾದ ರಾಜನೀತಿಯಲ್ಲಿ ಯಾವ ಭಾವನೆ ಇತ್ತೆಂದು ತಿಳಿಯುವುದಕ್ಕೆ ದಶರಥನು ತನ್ನ ಕುಮಾರನಿಗೆ ಉಪದೇಶಿಸಿದ ಮಾತನ್ನು ನಿದರ್ಶನವಾಗಿ ಹೇಳಬಹುದು. "........ವಿನಯದಲ್ಲಿ ನಿಲ್ಲು; ಸದಾ ಜಿತೇಂದ್ರಿಯನಾಗಿರು; ಕಾಮಕ್ರೋಧ ಸಮುತ್ಥವಾದ ವ್ಯಸನಗಳನ್ನು ತ್ಯಜಿಸು. ಜನರಿಗೆ ಕಂಡಂತೆ ಹೇಗೆ ನಡೆಯುವೆಯೋ ಕಾಣದಂತೆಯೂ ಹಾಗೆಯೇ ನಡೆಯುವವನಾಗು. ಅಮಾತ್ಯರು ಮೊದಲಾಗಿ ದೇಶವನ್ನೆಲ್ಲ ಅನುರಂಜಿಸು. ಯಾರು ಸಂತುಷ್ಟರಾದ ಅನುರಾಗವುಳ್ಳ ಪ್ರಜೆಯೊಡನೆ ಮೇದಿನಿಯನ್ನು ಪಾಲಿಸುವನೋ ಆತನ ಮಿತ್ರರು ಆನಂದಿಸುತ್ತಾರೆ. ಆದ್ದರಿಂದ ನೀನೂ ಹೀಗೆ ಆತ್ಮನಿಯಮನ ಮಾಡಿಕೊಂಡು ಹೀಗೆಯೇ ನಡೆದುಕೊ.'' ಪ್ರಕೃತಿಯ ಎಂದರೆ ಪ್ರಜೆಯ ಅನುರಂಜನೆ ರಾಜನ ಮುಖ್ಯ ಕರ್ತವ್ಯ! ಮನುವಿನಿಂದ ಮೊದಲಾಗಿ ದಶರಥ ರಾಮಚಂದ್ರರಿಂದ ಅನುಷ್ಠಿತವಾದ ಈ ಧರ್ಮ ಬಾಳುವೆವೆಂಬ ಎಲ್ಲ ರಾಷ್ಟ್ರಗಳಲ್ಲಿ ಪ್ರಭುಗಳಿಂದ ಅನುಷ್ಠಿತವಾಗಿದೆ. ಜನದ ಬಾಳು ಈಗಿರುವುದಕ್ಕಿಂತ ಚೆನ್ನಾಗಿ ಆಗಬೇಕಾದರೆ ಅದಕ್ಕೆ ದಾರಿಯಾವುದೆನ್ನುವುದನ್ನು ನಮ್ಮ ದೇಶದ ನಾಯಕರು ನಮ್ಮ ಸಂಸ್ಕೃತಿ ನಮ್ಮ ಧರ್ಮ ನಮ್ಮ ಸಂಪ್ರದಾಯಗಳ ದೃಷ್ಟಿಯಿಂದ ವಿವೇಚಿಸಬೇಕಾಗಿದೆ. ಇನ್ನು ಬರುವ ಕಾಲದಲ್ಲಿ ಇಂಥ ವಿವೇಚನೆಯಿಂದ ನಮ್ಮ ಬದುಕು ಪರಿಷ್ಕೃತವಾಗಿ ಸುಂದರವೂ ಸುಖದಾಯಕವೂ ಆಗಬೇಕಾಗಿದೆ. ಅದಕ್ಕೆ ದಾರಿ ತೋರಿಸುವವರಾಗಿ ನಾಯಕರಾಗಿ ನಿಲ್ಲುವ ಹಿರಿಯ ಭಾರ ನಮ್ಮ ಅರಸರನ್ನು ಸೇರಿದೆ.''

***

ಇದೇ ಅಕ್ಟೋಬರ್ ತಿಂಗಳು ಹದಿನಾಲ್ಕನೆಯ ತಾರೀಖಿನ ದಿನ ಮೈಸೂರು ನಗರದ ಜಗನ್ಮೋಹನ ಬಂಗಲೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಈ ವರ್ಷದ ಪದವೀದಾನೋತ್ಸವ ಸಮಾರಂಭವು ನೆರವೇರಿತು. ಛಾನ್ಸಲರವರಾದ ಶ್ರೀ

ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು ಮೊದಲು ಸಾರಿ ಅದರ ಅಧ್ಯಕ್ಷತೆ ವಹಿಸಿ ಜಯಶೀಲರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಶಸ್ತಿಗಳನ್ನೂ ಪದಕಗಳನ್ನೂ ಬಹುಮಾನಗಳನ್ನೂ ದಯಪಾಲಿಸಿದರು. ಆ ಉತ್ಸವದಲ್ಲಿ ಹಿಂದಿನ ಸಂದರ್ಭ ಸನ್ನಿವೇಶಗಳನ್ನು ನೆನೆದು ಪ್ರತಿಯೊಬ್ಬ ಸಭಿಕರ ಹೃದಯವೂ ಶೋಕದಿಂದ ಸಂತಪ್ತವಾಗಿದ್ದರೂ, ಮಳೆ ಬಂದು ನಿಂತಮೇಲೆ ಬೆಳಗುವ ಬಿಸಿಲಿನಂತೆ ಒಂದು ಹೊಸ ಸಂತೋಷ, ಸಂಭ್ರಮ, ಸಂತೃಪ್ತಿ ಇವು ತುಂಬಿದ್ದುವು. ತಾವು ಹುಟ್ಟುವುದಕ್ಕೆ ಮುಂಚೆಯೇ ಜನ್ಮವೆತ್ತಿ ಬೆಳೆದುಕೊಂಡು ಬಂದಿದ್ದ ವಿದ್ಯಾಸೌಧವನ್ನು ಮೆಟ್ಟಲುಮೆಟ್ಟಲಾಗಿ ಹತ್ತಿ ಒಳಗೆಲ್ಲಾ ಓಡಾಡಿ, ನೋಡಿ, ಮೇಲಕ್ಕೆ ಬಂದು, ಅದರ ಕಿರೀಟವಾಗಿ, ಅದರ ಶಿರೋರತ್ನವಾಗಿ, ನಿಂತು ವಿದ್ಯಾಪ್ರಶಸ್ತಿಯನ್ನು ವಿತರಣ ಮಾಡುವುದು ಒಂದು ಅಪೂರ್ವಗೌರವದ, ದೊಡ್ಡ ಹೆಮ್ಮೆಯ, ವಿಷಯ. ಈ ಭಾಗ್ಯವನ್ನು ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಹುಕಾಲ ಅನುಗ್ರಹಿಸಿರಲಿ ಎಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಈ ವರ್ಷದ ಪದವೀದಾನೋತ್ಸವ ಸಮಾರಂಭ

ಅಂದು ಅಲಹಾಬಾದ್ ವಿಶ್ವವಿದ್ಯಾನಿಲಯದ ವೈಸ್ ಛಾನ್ಸೆಲರವರಾದ ಶ್ರೀಮಾನ್ ಅಮರನಾಥ ಝಾ ಅವರು ಉಪದೇಶ ಭಾಷಣಮಾಡಿದರು. "ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತ ನಿಶ್ಚಯಃ" "ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂಬ ಗೀತಾ ಪ್ರಚೋದನೆಯು, ಉಪನಿಷದುಕ್ತಿಯು, ಅವರ ಭಾಷಣದ ಸಾರಾಂಶವಾಗಿತ್ತೆಂದು ಹೇಳಿದರೆ ತಪ್ಪಾಗದು. ಹೆಚ್ಚಿನ ವಿವರಗಳನ್ನು ಸಾಧ್ಯವಾದರೆ, ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಈ ವರ್ಷ, ಮೈಸೂರು ವಿಶ್ವವಿದ್ಯಾಲಯದ ಪದವೀದಾನೋತ್ಸವದಲ್ಲಿ ಮುಂದೆ ಹೇಳುವಂತೆ ೩೪ ಬಂಗಾರದ ಪದಕಗಳೂ ೧೩ ಬಹುಮಾನಗಳೂ ಕೊಡಲ್ಪಟ್ಟುವು.—

೧. ಪದಕಗಳು

ಎಂ. ಎ.

ಪದಕಗಳ ಹೆಸರುಗಳು :	ಪಡೆದವರ ಹೆಸರುಗಳು :
	ಶ್ರೀಗಳಾದ
೧. ಸರ್ ಹ್ಯೂಡೇಲಿ ಮೆಮೋರಿಯಲ್ ಪದಕ....	ಎಸ್. ಲಕ್ಷ್ಮೀನರಸಿಂಹನ್.
೨. ಸವೀಸಂ ರಾಮಾನುಜಾಚಾರ್ಯರ ಪದಕ....	ಜಿ. ಸೀತಾರಾಮಯ್ಯ.
೩. ಕೇಣಿ ಸಿದ್ದಪ್ಪನವರ ಪದಕ	ಎಂ. ಹನುಮಂತರಾವ್.

ಬಿ.ಎ. (ಆನರ್ಸ್)

೪. ನವೀನಂ ರಾಮಾನುಜಾಚಾರ್ಯರ ಪದಕ .... ಬಿ. ಎನ್. ನಂಜುಂಡಯ್ಯ.
೫. ಪೂರ್ಣಕೃಷ್ಣರಾಯರ ಪದಕ .... ಬಿ. ಎನ್. ನಂಜುಂಡಯ್ಯ.
೬. ಮೊದಲನೆಯ ವೈಸ್ ಛಾನ್ಸಲರ್ ಹೆಚ್.
ವಿ. ನಂಜುಂಡಯ್ಯನವರ ಪದಕ .... (೧) ಟಿ. ಎಸ್. ಶಾಮರಾವ್,
(೨) ಸಿ. ಮಾರ್ಕಂಡೇಯಶರ್ಮ.
೭. ಪೂರ್ಣಕೃಷ್ಣರಾಯರ ಪದಕ .... ಕೆ. ನರಸಿಂಹಮೂರ್ತಿ.
೮. ಕ್ಯಾಂಡಿ ಪದಕ .... ಎಂ. ಎಸ್. ನಾರಾಯಣಸ್ವಾಮಿ.
೯. ಭಾಭಾ ಮೆಮೋರಿಯಲ್ ಪದಕ .... ಕೆ. ರಾಮಕೃಷ್ಣರಾವ್.
೧೦. ಸರ್ ಎಂ. ಕಾಂತರಾಜ ಅರಸರವರ
ಪದಕ .... ಹೆಚ್. ನಂಜುಂಡಯ್ಯ.
೧೧. ಪ್ರಧಾನಶಿರೋಮಣಿ, ಟಿ. ಆನಂದರಾವ್,
ಸಿ.ಐ.ಇ. ಅವರ ಪದಕ .... ಎಸ್. ಶ್ರೀನಿವಾಸಾಚಾರ್.
೧೨. ಎಂ. ಹಿರಿಯಣ್ಣನವರ ಪದಕ .... ಎಸ್. ಎಂ. ಶ್ರೀನಿವಾಸಾಚಾರ್.

ಬಿ.ಎ.

೧೩. ಸರ್ ಪಿ. ಎನ್. ಕೃಷ್ಣಮೂರ್ತಿ ಅವರ
ಪದಕ .... (೧) ಟಿ. ಎಸ್. ಸಂಜೀವರಾವ್
(೨) ಎಸ್. ನರಸಿಂಹಮೂರ್ತಿ.
೧೪. ಅಲಮೇಲಮ್ಮ ಹೆಚ್. ರಾಮಾನುಜೈಂಗಾರ್
ಅವರ ಪದಕ .... ಎಸ್. ನರಸಿಂಹಮೂರ್ತಿ.
೧೫. ಸರ್ ಶೇಷಾದ್ರಿಯವರ ಪದಕ .... ಎಂ. ಎ. ವೇದವಲ್ಲಿ.
೧೬. ವಿಯರ್ ಮೆಮೋರಿಯಲ್ ಪದಕ .... ಟಿ. ಎಸ್. ಸಂಜೀವರಾವ್.
೧೭. ಷಾ ಚುಮನ್‌ಮಲ್ ದುಂಗಾಜಿ ಅವರ
ಪದಕ .... ಎಂ. ಎ. ವೇದವಲ್ಲಿ.
೧೮. ಶ್ರೀ ಯುವರಾಜರವರ ಪದಕ .... ರಹ್ಮತುಲ್ಲಾ ಖಾನ್.
೧೯. ಶ್ರೀ ಲಕ್ಷ್ಮಮ್ಮನವರ ಪದಕ .... ಇ. ಎಸ್. ಗೇಬ್ರಿಯಲ್.
೨೦. ಸಕಲೇಶಪುರದ ಷಾಪು ಸಿದ್ದೇಗೌಡರ
ಪದಕ .... ಬಿ. ರುದ್ರಪ್ಪ.

ಎಂ.ಎಸ್‌ಸಿ.

೨೧. ಪೂರ್ಣಕೃಷ್ಣರಾಯರ ಪದಕ .... ಪಿ. ಗೋಪಾಲರಾವ್.
೨೨. ಪೂರ್ಣಕೃಷ್ಣರಾಯರ ಪದಕ .... ಎಂ. ವಿ. ಲಕ್ಷ್ಮೀನಾರಾಯಣ ರಾವ್.

ಬಿ.ಎಸ್‌ಸಿ. (ಆನರ್ಸ್)

೨೩. ಧರ್ಮಪ್ರವರ್ತ ಅಂಬಿಲ್ ಎಸ್. ರಂಗ ಸ್ವಾಮಿ ಅಯ್ಯಂಗಾರ್ಯರ ಪದಕ .... ಕೆ. ಎಚ್. ಶಾಮಶಾಸ್ತ್ರಿ.
೨೪. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಪದಕ .... ಕೆ. ರಾಮರಾವ್.

ಬಿ.ಎಸ್‌ಸಿ.

೨೫. ಹೆಚ್. ರಾಮಾನುಜಯ್ಯಂಗಾರ್ಯರ ಪದಕ.. ಡಿ. ಜೆ. ಬಾಲರಾಜ್.
೨೬. ಶ್ರೀ ಲಕ್ಷ್ಮೀದೇವಮ್ಮನವರ ಪದಕ .... ಡಿ. ಜೆ. ಬಾಲರಾಜ್.
೨೭. ಬಿ. ಕೆ. ಶ್ರೀನಿವಾಸಯ್ಯಂಗಾರ್ ಮೆಮೋರಿಯಲ್ ಪದಕ .... ಡಿ. ಜೆ. ಬಾಲರಾಜ್.

ಬಿ. ಇ.

೨೮. ಬಿ. ವಿ. ಕೃಷ್ಣಯ್ಯಂಗಾರ್ಯರ ಪದಕ .... ವಿ. ಲಕ್ಷ್ಮೀನಾರಾಯಣ.
೨೯. ಬಿ. ಬಿ. ಗರುಡಾಚಾರ್ಯರ ಪದಕ .... ವಿ. ಲಕ್ಷ್ಮೀನಾರಾಯಣ.

ಎಂ.ಬಿ., ಬಿ.ಎಸ್.

೩೦. ಆರ್ಮುಗಂ ಪದಕ .... ಎಸ್. ಕೆ. ರಂಗಯ್ಯ.
೩೧. ಟಿ. ಆರ್. ಎ. ತಂಬೂಚೆಟ್ಟಿ ಪದಕ .... ಎಂ. ಎಸ್. ವೆಂಕಟರಾಮಯ್ಯ.
೩೨. ಬೇಲಿ ವೆಂಕೋಬರಾಯರ ಪದಕ .... ಎಸ್. ಕೆ. ರಂಗಯ್ಯ.
೩೩. ಎ. ಆರ್. ಸೀತಮ್ಮ ಪದಕ .... ಎಂ. ಎಸ್. ವೆಂಕಟರಾಮಯ್ಯ.

ಕನ್ನಡ ಕವಿತೆ

೩೪. ರಜತ ಮಹೋತ್ಸವದ ಕನ್ನಡ ಪದಕ .... ಕೆ. ನರಸಿಂಹಮೂರ್ತಿ.

೨. ಬಹುಮಾನಗಳು

ಬಿ.ಎ. (ಆನರ್ಸ್)

೧. ಎನ್. ಎಸ್. ಸುಬ್ಬರಾಯರ ಬಹುಮಾನ.... ಹೆಚ್. ಸಂಜುಂಡಯ್ಯ.

ಬಿ.ಎ.

೨. ಪಾಲಮಂಡ ಅಕ್ಕಯ್ಯಮ್ಮನವರ ಬಹುಮಾನ .... ಎ. ಸೀತಮ್ಮ.

೩. ಅನ್ನಪೂರ್ಣಮ್ಮನವರ ಬಹುಮಾನ .... ಇ. ಎಸ್. ಗೇಬ್ರಿಯಲ್.

ಬಿ.ಎಸ್‌ಸಿ. (ಆನರ್ಸ್)

೪. ವಾಟರ್ಸ್ ಮೆಮೋರಿಯಲ್ ಬಹುಮಾನ.... ಕೆ. ರಾಮರಾವ್.

೫. ಮೈಸೂರು ಸರ್ಕಾರದ ಭೌತಶಾಸ್ತ್ರ ಬಹುಮಾನ .... ಬಿ. ವಿ. ನಾರಾಯಣರಾವ್.

೬. ಮೈಸೂರು ಸರ್ಕಾರದ ರಸಾಯನಶಾಸ್ತ್ರ ಬಹುಮಾನ .... ಕೆ. ಎನ್. ಶಾಮಶಾಸ್ತ್ರಿ.

೭. ಪ್ರೊಫೆಸರ್ ಎಂ. ಜಿ. ಶ್ರೀನಿವಾಸರಾಯರ ಆರ್ಗ್ಯಾನಿಕ್ ಕೆಮಿಸ್ಟ್ರಿ ಬಹುಮಾನ .... (೧) ಎನ್. ರಂಗಸ್ವಾಮಿ.
(೨) ಕೆ. ಎನ್. ಶಾಮಶಾಸ್ತ್ರಿ.

ಬಿ.ಎಸ್‌ಸಿ.

೮. ಸೆಂಟ್ರಲ್ ಕಾಲೇಜಿನ ವಜ್ರ ಮಹೋತ್ಸವದ ಬಹುಮಾನ .... ಡಿ. ಜಿ. ಬಾಲರಾಜ್.

೯. ಟೇಟ್ ಮೆಮೋರಿಯಲ್ ಫಂಡ್ ಬಹುಮಾನ .... (೧) ಎಂ. ಆರ್. ನರಸಿಂಹಮೂರ್ತಿ.
(೨) ಎ. ಎನ್. ವೆಂಕಟರಾವ್.

ಬಿ.ಟಿ.

೧೦. ಭಾಭಾ ಮೆಮೋರಿಯಲ್ ಬಹುಮಾನ .... ಟಿ. ಕೇರಲವರ್ಮ.

ಬಿ.ಇ.

೧೧. ವಿ. ರಂಗಸ್ವಾಮಿ ಅಯ್ಯಂಗಾರ್ಯರ ಬಹುಮಾನ .... ಎನ್. ಶ್ರೀನಿವಾಸನ್.

ಎಂ.ಬಿ., ಬಿ.ಎಸ್.

೧೨. ಮೈಸೂರು ಫ್ರೀ ಮೇಸನ್ಸ್ ಲಾಡ್ಜ್
ಸುವರ್ಣ ಮಹೋತ್ಸವ ಬಹುಮಾನ....(೧) ಎಸ್. ಕೆ. ರಂಗಯ್ಯ.
(೨)ಎಂ.ಎಸ್.ವೆಂಕಟರಾಮಯ್ಯ.

ಕನ್ನಡ ಪ್ರಬಂಧ

೧೩. ಹೊನ್ನಸೆಟ್ಟಿಯವರ ಬಹುಮಾನ .... ಕೆ. ನರಸಿಂಹಮೂರ್ತಿ.

ಈ ಪದಕ ಬಹುಮಾನಗಳನ್ನು ಪಡೆದ ಮಿತ್ರರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

***

ಈ ವರ್ಷ ನವರಾತ್ರಿ ಮಹೋತ್ಸವ ಕಾಲದಲ್ಲಿ ಶ್ರೀಮನ್ಮಹಾರಾಜರವರು ಅನೇಕ ಮೈಸೂರು ಮಹನೀಯರಿಗೆ, ಅವರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆಗಾಗಿ ಬಿರುದುಗಳನ್ನೂ ಪದಕಗಳನ್ನೂ ಖಿಲ್ಲತ್ತುಗಳೊಡನೆ ದಯಪಾಲಿಸಿದರು. ಇವರೆಲ್ಲರಿಗೂ ನಮ್ಮ ಅಭಿಮಾನಪೂರ್ವಕವಾದ ಅಭಿನಂದನಗಳು. ಇವರಲ್ಲಿ ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರು ನಮ್ಮ ವಿಶೇಷ ಅಭಿನಂದನೆಗಳಿಗೆ ಪಾತ್ರರು. ಅವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರಾಧ್ಯಾಪಕರಾಗಿದ್ದು ವಿಶ್ರಾಂತಿ ಪಡೆದವರು; ಆದರೆ ಸರ್ಕಾರದವರು ವಿಶ್ರಾಂತಿ ಕೊಟ್ಟರೂ ತಾವು ವಿಶ್ರಾಂತಿ ತೆಗೆದುಕೊಳ್ಳದೆ ಹಗಲು ಇರುಳು ವಿಶ್ವವಿದ್ಯಾನಿಲಯದಲ್ಲಿಯೂ ಹೊರಗೂ ಕನ್ನಡಕ್ಕಾಗಿ ದುಡಿಯುತ್ತಿರುವವರು. ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಂದಿನಿಂದ ಇಂದಿನ ವರೆಗೆ ಅದಕ್ಕೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ, ಹಲವು ರೀತಿಯಲ್ಲಿ, ಹಲವು ರೂಪಿನಲ್ಲಿ, ದುಡಿದವರು. ಈಗ ನಾಲ್ಕಾರು ವರ್ಷಗಳಿಂದ ಇಂಗ್ಲಿಷ್-ಕನ್ನಡ ನಿಘಂಟಿನ ಮುಖ್ಯ ಸಂಪಾದಕರಾಗಿದ್ದು ವಯೋದೌರ್ಬಲ್ಯವಿದ್ದರೂ, ದೇಹಶ್ರಮ ಬುದ್ಧಿಶ್ರಮಗಳನ್ನು ಲಕ್ಷಿಸದೆ ಅದರ ಕೆಲಸದಲ್ಲಿ ಉತ್ಸಾಹದಿಂದ ನಿರತರಾಗಿರುವವರು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಮೊದಲನೆಯ ಅಧ್ಯಕ್ಷರಾಗಿದ್ದು, ಅದಕ್ಕೆ ಪ್ರಾಣವನ್ನು ಕೊಟ್ಟವರು. ವೈಜ್ಞಾನಿಕ ವಿಚಾರಗಳು ಕನ್ನಡಿಗರಿಗೆ ಸರಳವಾದ ರೀತಿಯಲ್ಲಿ ಹೇಗೆ ತಿಳಿಯಬೇಕೆಂದು ಚಿಂತಿಸಿ "ವಿಜ್ಞಾನ" ಪತ್ರಿಕೆಯನ್ನು ನಡಸಿದವರು; "ಜೀವವಿಜ್ಞಾನ"ವು ಅವರ ಆ ಆಸ್ಥೆಯ ಈಚಿನ ಫಲ.

"ರಾಜಸೇವಾಸಕ್ತ" ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರಿಗೆ ಅಭಿನಂದನೆ

ಶ್ರೀಮಾರ್ ವೆಂಕಟನಾರಾಯಣಪ್ಪನವರು ವಿಜ್ಞಾನಿಗಳು ಸಾಹಿತಿಗಳು ಮಾತ್ರವಲ್ಲ. ಧಾರ್ಮಿಕ ಸಾಮಾಜಿಕ ಸಾರ್ವಜನಿಕ ವ್ಯಾವಸಾಯಿಕ ಮುಂತಾದ ಹಲವು ಕ್ಷೇತ್ರಗಳಲ್ಲೂ ಶ್ರದ್ಧೆ ಉತ್ಸಾಹಗಳಿಂದ ಕೆಲಸಮಾಡುತ್ತಿರುವವರು. ಬೆಂಗಳೂರು ಬಸವನಗುಡಿ ಒಡಾವಣೆಯ ಸ್ಥಾಪಕ ಪಾಲಕ ಪೋಷಕರಲ್ಲಿ ಅವರು ಒಬ್ಬ ಪ್ರಧಾನವ್ಯಕ್ತಿಗಳೆಂದರೆ ಅದು ಅಲ್ಲಿಯ ಹಿರಿಯರಿಗೆ ಮಾತ್ರ ಅರ್ಥವಾಗುವ ಮಾತು. ಅವರೊಬ್ಬರೇ ಒಂದು ಉನ್ನತ ಸಂಸ್ಥೆ. ಅವರ ಕೆಚ್ಚು ಕಾರ್ಯೋತ್ಸಾಹಗಳು ಯುವಕರಿಗೂ ಇರುವುದಿಲ್ಲ; ಅವರ ಖಂಡಿತತೆಯೂ ಛಲವೂ ಕೆಲವು ಸಮಯದಲ್ಲಿ ನಿಷ್ಠುರವಾಗಿ ಕಾಣುವಷ್ಟು ಗಡುಸಾದವು. ಆದರೆ ಅವು ಗಟ್ಟಿಗತನದ ರೂಪಾಂತರಗಳೆಂದು ನಾವು ಭಾವಿಸುತ್ತೇವೆ. ಮರಕಡಿಯುವ ಕೊಡಲಿಯನ್ನು ಮೇಣದಿಂದ ಮಾಡುವುದಕ್ಕಾದೀತೇ ? ಬಂಗಾರಕ್ಕಾದರೂ ತಾಮ್ರ ಬೆರೆಯದಿದ್ದರೆ ಅದು ನಾಣ್ಯವಾಗುವುದೋ ?

* * *

ಮೈಸೂರು ವಿಶ್ವವಿದ್ಯಾನಿಲಯ ಸಂಘವು ಅಕ್ಷರ ಪ್ರಚಾರಕಾರ್ಯವನ್ನು ಕೈಗೊಂಡು ಸುಮಾರು ಮೂರು ತಿಂಗಳಾಯಿತು. ವಿದ್ಯಾರ್ಥಿ ಸದಸ್ಯರಿಗೆ ಸಮಾಜ ಸೇವೆಯಲ್ಲಿ ಇರುವ ಆಸಕ್ತಿಯೇ ಇದಕ್ಕೆ ಮೂಲಕಾರಣ. ಅದು ಮೈಸೂರುನಗರದಲ್ಲಿ ಅನಕ್ಷರಸ್ಥರಿರುವ ಕೇರಿಗಳಲ್ಲಿ ಶಿಬಿರಗಳನ್ನೇರ್ಪಡಿಸಿ ಸಾವಿರಮಂದಿಯನ್ನಾದರೂ ಅಕ್ಷರಸ್ಥರನ್ನಾಗಿ ಮಾಡಬೇಕೆಂದು ತೀರ್ಮಾನಿಸಿಕೊಂಡಿತು. ಹತ್ತುಮಂದಿಗೆ ಒಬ್ಬ ಸ್ವಯಂ ಸೇವಕನಂತೆ ನೂರು ಸ್ವಯಂ ಸೇವಕರು ಅಗತ್ಯವೆನ್ನಲು ಸುಮಾರು ನೂರು ನೂರೈವತ್ತುಮಂದಿ ಈ ಕೆಲಸ ನಡೆಸಲು ಹೆಸರು ಕೊಟ್ಟರು. ಇವರ ಜೊತೆಗೆ ಕೆಲವು ಮಂದಿ ಹೈಸ್ಕೂಲು ವಿದ್ಯಾರ್ಥಿಗಳೂ ಸೇರಿದರು. ಈ ಕೆಲಸದಲ್ಲಿ ಅನುಭವಪಡೆದವರು ಇವರು ಯಾವ ರೀತಿ ಕೆಲಸಮಾಡಬೇಕೆಂದು ಉಪನ್ಯಾಸಗಳ ಮೂಲಕ ತಿಳಿಸಿದರು. ಈ ಕೆಲಸಕ್ಕೆ ನಿಯಮಿತರಾದ ಸಮಿತಿಯ ಸದಸ್ಯರೂ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀ ನವನೀತಂನಾಯ್ಡು ಅವರೂ ನಗರದ ನಾನಾ ಭಾಗಗಳಲ್ಲಿ ತಿರುಗಿ ಪ್ರಚಾರ ನಡೆಸಿ ಪ್ರತಿಶಿಬಿರಕ್ಕೂ ಆವಶ್ಯಕವಾದಷ್ಟು ವಿದ್ಯಾರ್ಥಿಗಳನ್ನು ಸೇರಿಸಿದರು. ಒಂದೆರಡು ಕಡೆ ಅವರ ಸಾಹಸ ನಿರರ್ಥಕವಾಯಿತು. ಕಾಲೇಜಿಗೆ ಸ್ವಲ್ಪ ದೂರವಾದ ಜಲಪುರಿಯಲ್ಲಿ ಶಿಬಿರವನ್ನೇರ್ಪಡಿಸುವ ಉದ್ದೇಶ್ಯವಿಲ್ಲದಿದ್ದರೂ ಅಲ್ಲಿಯವರ ಬಲಾತ್ಕಾರದ ಮೇಲೆ ಅಲ್ಲಿಯೂ ಕೆಲಸವನ್ನಾರಂಭಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯಸಂಘದ ಅಕ್ಷರ ಪ್ರಚಾರಕಾರ್ಯ

ಸಂಘದವರು ಈ ಕೆಲಸಕ್ಕಾಗಿ ೩೦೦ ರೂಪಾಯಿಗಳನ್ನೂ, ವಿಶ್ವವಿದ್ಯಾನಿಲಯದವರು ೫೦೦ ರೂಪಾಯಿಗಳನ್ನೂ ಕೊಟ್ಟಿರುತ್ತಾರೆ. ಈ ಕೆಲಸದಲ್ಲಿ ಭಾಗಿಗಳಾಗಲು ಅವಕಾಶವಿಲ್ಲದ ಸದಸ್ಯರು ಸುಮಾರು ೧೦೦ ರೂಪಾಯಿ ಚಂದಾ ಕೊಟ್ಟಿರುತ್ತಾರೆ. ಪ್ರತಿ ವಿದ್ಯಾರ್ಥಿಗೂ ಓದುವಪುಸ್ತಕ ನೋಟ್‌ಪುಸ್ತಕ ಸೀಸಕಡ್ಡಿಗಳನ್ನು ಉಚಿತವಾಗಿ ಒದಗಿಸಿದೆ. ಪ್ರತಿ ಶಿಬಿರದಲ್ಲಿಯೂ ದೀಪಕ್ಕೆ ಏರ್ಪಡಿಸಲಾಗಿದೆ. ವಯಸ್ಕರ ಬೋಧನೆಗೆ ಅನುಕೂಲಿಸುವಂತೆ ಒಂದು ಹೊಸ ವರ್ಣಮಾಲೆಯನ್ನೂ ವಾಕ್ಯಮಾಲೆಯನ್ನೂ ಕೆಲವು ಓದುಹಾಳೆಗಳನ್ನೂ ತಯಾರಿಸಲಾಗಿದೆ. ಮೊದಲು ಮೂರು ತಿಂಗಳ ಕಾಲ ಕೆಲಸ ನಡೆಸಬೇಕೆಂದು ಏರ್ಪಡಿಸಲಾಗಿತ್ತು. ಈಗ ಈ ಅವಧಿಯನ್ನು ಇನ್ನೂ ಮೂರು ತಿಂಗಳು ಕಾಲ ಹೆಚ್ಚಿಸಿದೆ.

ಈಗ ೩೫ ಶಿಬಿರಗಳು ಏರ್ಪಾಡಾಗಿ, ೩೫೦ ಮಂದಿ ಕಲಿಯುತ್ತಿದ್ದಾರೆ. ರಾತ್ರಿ ೭-೩೦ ಘಂಟೆಯಿಂದ ೯ರ ವರೆಗೂ ಕೆಲಸ ನಡೆಯುತ್ತದೆ. ನಿತ್ಯವೂ ಓದು ಬರಹದ ಜೊತೆಗೆ ವಿಜ್ಞಾನ, ಆರೋಗ್ಯ ಮತ್ತು ಸಮಾಜ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಮುಖ್ಯ ವಿಷಯಗಳನ್ನೂ ನಿತ್ಯವ್ಯವಹಾರಕ್ಕೆ ಬೇಕಾದ ಗಣಿತವನ್ನೂ ಕಲಿಸುವ ಏರ್ಪಾಡಿದೆ. ಇವರ ಶಿಕ್ಷಣ ಮುಗಿದನಂತರ ಎಂದರೆ ಜನವರಿ ತಿಂಗಳಿನಲ್ಲಿ ಇವರ ಪೈಕಿ ಅರ್ಧ ಮಂದಿಯನ್ನಾದರೂ ಸಾಹಿತ್ಯಪರಿಷತ್ತಿನ ಮೊದಲನೆಯ ಪರೀಕ್ಷೆಗೆ ಕೂರಿಸಲಾಗುತ್ತದೆ.

ಈ ೩೫೦ ಮಂದಿಯ ಪೈಕಿ ಸುಮಾರು ಎಪ್ಪತ್ತು ಜನ ಹಿಂದೆ ಸ್ವಲ್ಪ ಕಲಿತು ಈಗ ಮರೆತಿರುವವರು. ಅವರಿಗೆ ಪ್ರತ್ಯೇಕ ಶಿಕ್ಷಣ ಕೊಡಲಾಗುತ್ತಿದೆ. ಹೊಸದಾಗಿ ಸೇರಿದವರ ಪೈಕಿ ಸೇಕಡ ೮೦ ಮಂದಿ ಈ ಹೊಸ ಪದ್ಧತಿಯ ಪ್ರಕಾರ ಎರಡು ವಾರಗಳಲ್ಲಿ ಅಕ್ಷರಗಳನ್ನು ಕಲಿತು ಈಗ ಸುಲಭ ಕಾಗುಣಿತಗಳನ್ನು ಓದಬಲ್ಲವರಾಗಿದ್ದಾರೆ.

ಮಧ್ಯೆ ಮಧ್ಯೆ ರಜ ಬಂದು ವಿದ್ಯಾರ್ಥಿಗಳು ಕೆಲಸಕ್ಕೆ ಹೋಗಲು ತೊಂದರೆಯಾದುದರಿಂದ, ಆಗಸ್ಟ್ ಒಂದರಲ್ಲಿ ಪ್ರಾರಂಭವಾದ ಕೆಲಸ ಸುಮಾರು ೪೫ ದಿನಗಳು ಮಾತ್ರ ನಡೆದಿದೆ. ಒಂದುವಾರ ಕೆಲಸಮಾಡಿದ ಉಪಾಧ್ಯಾಯರಿಗೆ ಇನ್ನೊಂದು ವಾರ ರಜ ಕೊಡಲಾಗುತ್ತಿದೆ. ಈ ಕಾರಣದಿಂದ ಪ್ರತಿ ತರಗತಿಗೂ ಮೂರು ನಾಲ್ಕು ಮಂದಿ ಬೋಧಕರಾಗುತ್ತಾರೆ. ಹೀಗಿದ್ದರೂ ವಿದ್ಯಾರ್ಥಿಗಳ ಕಲಿಕೆಯ ಅಭಿವೃದ್ಧಿ ಸಮರ್ಪಕವಾಗಿ ಕಂಡು ಬಂದಿದೆ.

ನವೆಂಬರಿನಿಂದ ಉಪಾಧ್ಯಾಯರಿಗೆ ತಿಂಗಳಿಗೆ ಐದು ರೂಪಾಯಿಯಂತೆ ಸಂಬಳ ಕೊಡುವ ಏರ್ಪಾಡಾಗಿದೆ. ಆಗ ಉಪಾಧ್ಯಾಯರ ಬದಲಾವಣೆ ಇರುವುದಿಲ್ಲ.

ಸಮಿತಿಯವರು ವಯಸ್ಕರು ಓದಲು ಅನುಕೂಲವಾಗಿರುವ ಒಂದು ಹೊಸ ಪುಸ್ತಕವನ್ನು ರಚಿಸುತ್ತಿದ್ದಾರೆ. ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರ 'ವಯಸ್ಕರ ಪುಸ್ತಕ'ವಾದ ಮೇಲೆ ವಿದ್ಯಾರ್ಥಿಗಳು ಈ ಹೊಸ ಪುಸ್ತಕವನ್ನು ಓದಬೇಕೆಂದು ನಿರ್ಣಯವಾಗಿದೆ.

ಮಹಮದೀಯ ಸೋದರರ ಅನುಕೂಲಕ್ಕಾಗಿ ಕೆಲವು ಉರ್ದು ಕೇಂದ್ರಗಳನ್ನು ತೆರೆಯಲಾಗಿದೆ. ಇಲ್ಲಿ ಸುಮಾರು ೧೦೦ ವಯಸ್ಕರು ಉರ್ದು ಕಲಿಯುತ್ತಿದ್ದಾರೆ.

ಇದುವರೆಗೂ ಪ್ರತಿ ವಿದ್ಯಾರ್ಥಿಗೂ ಸರಾಸರಿ ಎಂಟಾಣೆಯಂತೆ ಖರ್ಚಾಗಿದೆ. ಮುಂದಲ ಮೂರು ತಿಂಗಳ ಅವಧಿಯಲ್ಲಿ ಒಬ್ಬೊಬ್ಬನಿಗೂ ಸರಾಸರಿ ಎರಡೂಕಾಲು ರೂಪಾಯಿ ಖರ್ಚಾಗಬಹುದು. ಮುಂದೆ ಮಹಾಜನರ ತಿಳಿವಳಿಕೆಗಾಗಿ ಮೇಲೆ ಹೇಳಿದ ವರ್ಣಮಾಲೆಯನ್ನೂ ವಾಕ್ಯಮಾಲೆಯನ್ನೂ ಕೊಟ್ಟಿದೆ.

ಜಿ. ಆರ್. ಆರ್.

ಅಕ್ಷರಪ್ರಚಾರದಲ್ಲಿ ಉಪಯೋಗಿಸುತ್ತಿರುವ ವಾಕ್ಯಮಾಲೆ

೧. ಈಗ ಕರಗ. ಈ ತರಹ ಗರ.
ಈತ ರಂಗ, ಈತ ಈರ.

೨. ಎಂತಹ ಹಠ! ಆಗ ಅಂತಹ ಕರಗ.
ಈತ ಹರ; ಆತ ಈರ.
ಈಗ ಏತರ ಆತಂಕ?

೩. ಈಬಲ ಏತರ ಫಲ?
ಅವರ ಮಗ ರಂಗ ಐಲ.
ಆ ಊರ ಕರಗ ಎಂತಹ ಕರಗ.
ಅವರವರ ಮತ ಅವರವರ ಹಠ.

೪. ಅವರ ಛಲ ಕಲಹದ ಫಲ.
ಗಂಧದ ಉದಕ ಘಮಘಮ.
ಈರ ದಂತದ ಕದ ಕಂಡ.
ಮತದವರ ಷರದ ಫಲ, ಗಂಗ ಐಲ ಆದ.

೫. ಆಗ ಬರದ ಭಯ.
ಊರ ಔಷಧ ತಂದ.
ಈ ಬರಹ ಅವರ ಛಲ.
ಜಂಭದ ಫಲ ಅಪಜಯ.
ಚರಕ ಬಡವರ ಔಷಧ.
ಅಂಗದ ಗಂಧದ ರಥ ತಂದ.

೬. ಬಡವನ ಬಳಗ ಬಹಳ.
ಗಂಡನ ಪಯಣ ಅವಳ ಕಳವಳ.
ಪಠದ ಉರಗ ಎಂತಹ ಅಂದ!
ಬಸವನ ಮಗ ಬಹಳ ಒರಟ.
ಈ ಮಗ ಅವಳ ಆಭರಣ.
ಔಷಧದ ಭಯ, ಕಂದನ ಓಟ,
ಈಗ ಔತಣದ ಸಡಗರ.
ಹರನ ಆಟ, ನಳನ ಸಂಕಟ.
ಈರನ ಸಂಗಡ ಪಯಣ, ಜಗಳ.
ಭಗವಂತನ ದಯ, ಬಡವನ ಧನ.
ಈ ಆಕಳ ತರಹ ಬಹಳ ಚಂದ.
ನಂದನವನ ಚಂದ; ಪಂಪನ ಪದ ಚಂದ.
ಭರತ ಖಂಡ ಬಹಳ ಚಂದ.

ಆಗ ಬರ. ಸಂಜ ಬಡವ. ಅವನ ಬಳಗ ಬಹಳ. ಅದರ ಫಲ ಊಟದ ಭಂಗ. ಅವನ ಮಗ ಜವರ ಒರಟ. ಬಳಗದ ಸಂಗಡ ಜಗಳ ತಂದ. ನಂಜ ಖಿಲ ಆದ. ಆಗ ಅವಳ ಕಳವಳ, ಮಗನ ಭಯ. ಊರ ರಂಗ ಏತರ ಭಯ ಅಂದ; ಔಷಧ ತಂದ. ಶಂಕರನ ದಯ, ಸಂಜನ ಜಯ.

ಸೂಚನೆ.—ಅಕ್ಷರ ಪ್ರಚಾರ ಪಟದಲ್ಲಿ ಕೊಟ್ಟಿರುವ ಪಾಠಗಳೊಂದಿಗೆ ಕಲಿಸಬಹುದಾದ ವಾಕ್ಯಗಳು ಇವು. ಕಲಿಯುವವರ ಅನುಕೂಲವನ್ನನುಸರಿಸಿ ಆಯಾ ಗುಂಪಿನ ಮಾತುಗಳೊಂದಿಗೆ ಇವುಗಳನ್ನು ಓದಿಸಿ ಬರೆಸಬಹುದು.

***

ವಿಶ್ವವಿದ್ಯಾನಿಲಯ ಸಂಘ, ಮೈಸೂರು

ವರ್ಣಮಾಲೆ

ಂ ರ ತ ಹ ಈ ಯ ಕ ತ ಗ

ಹರ ಗರ ಗಯ ಕಂತ ಕರಗ
ಈರ ಈತ ರಂಗ ಹತ ತರಹ
ಈ ಕರ ಈ ಹಯ

ಲ ಉ ಊ ಅ ಆ ಎ ಏ

ಅರ ಆಗ ಏಕ ಎರಕ ಆಲಯ
ಆಲ ಅಂಗ ಏತ ಏತರ ಅಂತಕ
ಆಯ ಊತ ತಲ ಅಗಲ ಆತಂಕ
ಈ ಗಂಗ ಆ ಲಂಗ ಎಂತಹ ಉರಗ

ವ ಮ ಪ ಫ ಛ ಷ ಘ ಐ

ವರ ಮತ ಛಲ ಐಲ ಮರ
ಮಗ ಮತ ಫಲ ಷರ ಪತ
ಮಂಗ ಕಫ ಯಮ ಪಂಪ ಪಂಕ
ಲವಂಗ ವಲಯ ಕಮಲ ಅವರ ಮಗ ಘಮಘಮ

ದ ಧ ಥ ಡ ಢ

ಹದ ಕಂದ ಗಂಧ ಅಂಗದ
ಗಂಡ ರಥ ಎಡ ಪಡವಲ
ದಯ ದಂತ ಪದ ಢಮಢಮ
ಮರದ ಕದ ಅದರ ದರ ರಂಗ ಕಡ ತಂದ

ಒ ಓ ಔ ಬ ಭ ಜ ಚ ಖ

ಭಯ ಓಜ ಜಂಭ ಹಂಜರ ಔಡಲ
ಒರ ಖಗ ಬಂಗರ ಓಲಗ ಚಪಲ
ಖರ ಖಂಡ ಒರತ ಔಷಧ ಒಗತ
ಬಡಗಲ ಅಪಜಯ ಈಗ ಬರಹ ಆಗ ಚರಕ

ನ ಸ ಟ ಣ ಇ ಶ ಳ


ಶಂಕರ ಕವಳ ಒಡವ ಅರಸ
ಗರಗಸ ಒರಟ ಬಸವ ಶಂಖ
ಊಟದ ಸಮಯ ಸಂಜನ ಕಣಜ ಅವಳ ಪದಕ
ಈರನ ಮಗ ಅವರ ಬಳಗ ಇವನ ಪಯಣ

ಸೂಚನೆ:—೧. ಕಲಿಯುವವರ ಕೈಓಟದ ಅನುಕೂಲವನ್ನು ಮುಂದಿಟ್ಟು ಈ ವರ್ಣಮಾಲೆಯಲ್ಲಿ ಅಕ್ಷರಗಳನ್ನು ಗುಂಪುಗಳಾಗಿ ವಿಂಗಡಿಸಿದೆ.

೨. ಪ್ರತಿಯೊಂದು ಗುಂಪಿನ ಅಕ್ಷರಗಳನ್ನೂ, ಮಾತುಗಳನ್ನೂ ಎರಡು ದಿನಗಳಲ್ಲಿ ಕಲಿಯಬಹುದು.

೩. ಈ ಮಾಲೆಯಲ್ಲಿ ೪೩ ಅಕ್ಷರಗಳನ್ನು ಮಾತ್ರ ಕೊಟ್ಟಿದೆ; ಉಳಿದ ಅಕ್ಷರಗಳು ಕಾಗುಣಿತ ಮತ್ತು ಒತ್ತಕ್ಷರಗಳ ಜೊತೆಗೆ ಪಾಠಪುಸ್ತಕದಮೂಲಕ ಪರಿಚಯವಾಗುವುವು.

ಪ್ರಪಂಚದ ದೊಡ್ಡದೇಶಗಳಲ್ಲಿ ಅಕ್ಷರಸ್ಥರು



ಮೈಸೂರು ಸಂಸ್ಥಾನದಲ್ಲಿ

ಪ್ರಜಾ ಸಂಖ್ಯೆ, ೬೬ ಲಕ್ಷ. ಓದು ಬರಹ ಬಲ್ಲವರು, ೬ ಲಕ್ಷ.

ಎಂದರೆ ಸಾವಿರಕ್ಕೆ ೯೧ ಜನ.

ಸುಮಾರು ೧೦ ಜನರಲ್ಲಿ ಒಬ್ಬ ಮಾತ್ರ ಓದುಬರಹ ಬಲ್ಲವನು.

೩೪ ಲಕ್ಷ ಗಂಡಸರಲ್ಲಿ ಓದುಬರಹ ಬಲ್ಲವರು ೫ ಲಕ್ಷ.
ಅಂದರೆ ಸಾವಿರಕ್ಕೆ ೧೫೦ ಜನ

೩೨ ಲಕ್ಷ ಹೆಂಗಸರಲ್ಲಿ ಓದುಬರಹ ಬಲ್ಲವರು ೮೯ ಸಾವಿರ.
ಅಂದರೆ ಸಾವಿರಕ್ಕೆ ೨೮ ಜನ

ಮಾತೃಭಾಷೆ	ಮಾತನಾಡುವವರು	ಒಟ್ಟು ಪ್ರಜಾ ಸಂಖ್ಯೆಯಲ್ಲಿ ೧ ಸಾವಿರಕ್ಕೆ
ಕನ್ನಡ	೪೫,೭೮,೮೦೧	೬೯೮
ತೆಲುಗು	೧೦,೩೦,೯೨೬	೧೫೭
ತಮಿಳು	೩,೧೩,೬೮೫	೪೮
ಹಿಂದುಸ್ತಾನಿ	೩,೮೨,೮೭೯	೫೯
ಮರಾಠಿ	೯೧,೩೨೨	೧೪

ಕನ್ನಡ ಬಲ್ಲವರು ೫೫ ಲಕ್ಷ. ಅಂದರೆ ೧೦ ಸಾವಿರಕ್ಕೆ ೮,೨೭೦ ಜನ.

ಇಂಗ್ಲಿಷ್ ಬಲ್ಲವರು ೧೦ ಸಾವಿರಕ್ಕೆ ಗಂಡಸರಲ್ಲಿ ೨೭೧. ಹೆಂಗಸರಲ್ಲಿ ೫೦.

ಓದುಬರಹ ಅಂದರೇನು

೧. ವೃತ್ತಪತ್ರಿಕೆಯ ಲೇಖನವನ್ನೂ, ನೋಟೀಸನ್ನೂ, ಜಾಹಿರಾತು ಪ್ರಕಟಣೆಯನ್ನೂ ಓದಿ ಅರ್ಥಮಾಡಿಕೊಳ್ಳುವುದು.

೨. ಬಳಕೆಯಲ್ಲಿರುವ ತೂಕ, ಅಳತೆ, ಮತ್ತು ರೂಪಾಯಿ ಆಣೆ ಕಾಸುಗಳ ವ್ಯವಹಾರದ ಸುಲಭ ಲೆಕ್ಕಾಚಾರ. ೧ ರಿಂದ ೧೦, ೧೨, ಮತ್ತು ೧೬ ರ ಮಗ್ಗಿ.

೩. ಬಂಧುವಿಗೆ ಒಂದು ಸಣ್ಣ ಕಾಗದ, ಇಲ್ಲವೇ ಕಛೇರಿಗೆ ಒಂದು ಅರ್ಜಿ ಬರೆಯುವುದು.

೪. ತನ್ನ ದೇಶದ ಚರಿತ್ರೆ. ಭೂಗೋಳ ಮತ್ತು ಮುಖ್ಯ ಸಂಸ್ಥೆಗಳ ಸಾಮಾನ್ಯ ತಿಳಿವಳಿಕೆ.

ಮೇಲೆ, ವಿಶ್ವವಿದ್ಯಾನಿಲಯ ಸಂಘದವರು ಅಕ್ಷರತೆಯ ಸಂಬಂಧದಲ್ಲಿ ಶೇಖರಿಸಿರುವ ಅಂಕಿಗಳನ್ನೂ ಅಂಶಗಳನ್ನೂ ಕೊಡಲಾಗಿದೆ. ಇದನ್ನು ನೋಡಿದರೆ ನಮ್ಮಲ್ಲಿ ಅಜ್ಞಾನವು ಎಷ್ಟರಮಟ್ಟಿಗೆ ಇದೆ ಎಂದು ಗೊತ್ತಾಗುತ್ತದೆ. ಈ ಸ್ಥಿತಿಯು ಮೈಸೂರಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ಇಡೀ ಭರತಖಂಡಕ್ಕೇ ಅನ್ವಯಿಸತಕ್ಕದ್ದು.

ಇದನ್ನೂ ಚಿತ್ರದ ಮೂಲಕ ಸ್ಫುಟವಾಗಿ ತೋರಿಸಿದೆ. ಒಂದು ದೇಶವು ಮುಂದಕ್ಕೆ ಬರಬೇಕಾದರೆ—"ನಹಿ ಜ್ಞಾನೇನ ಸದೃಶಂ". ಇದ್ದಂತೆ ಇರಬೇಕಾದರೆ—ಎಂದರೆ ದಿನದಿನಕ್ಕೆ ಕೀಳಾಗಬೇಕಾದರೆ—ನಹಿ ಅಜ್ಞಾನೇನ ಸದೃಶಂ. ಅಭ್ಯುದಯಕ್ಕೆ ಅಜ್ಞಾನಕ್ಕಿಂತ ದೊಡ್ಡ ಅಡಚಣೆಯಿಲ್ಲ. ಇಂಡಿಯದಲ್ಲಿ ಸಾವಿರಕ್ಕೆ ೯೦೦ ಕ್ಕಿಂತ ಹೆಚ್ಚು ಜನ ಅನಕ್ಷರಸ್ಥರು. ಈ ಶೋಚನೀಯ ಸ್ಥಿತಿ ಪಟ್ಟಣಗಳಿಗಿಂತ ಗ್ರಾಮಾಂತರಗಳಲ್ಲಿ ಹೆಚ್ಚು; ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚು.

ಇದು ಬಹಳ ಕಾಲದಿಂದ ಎಲ್ಲರಿಗೂ ತಿಳಿದಿರುವ ಸಂಗತಿಯೇ; ಆದರೆ ಅದನ್ನು ಸರ್ಕಾರವೊಂದೇ ನಿವಾರಣೆಮಾಡಲು ಸಾಧ್ಯವಾಗಿಲ್ಲ. ಶೇಕಡ ತೊಂಬತ್ತಕ್ಕೆ ಮೇಲ್ಪಟ್ಟ ಅಕ್ಷರಸ್ಥರಿರುವ ಪರದೇಶಗಳಲ್ಲಿ ಸರ್ಕಾರವೂ ಮಹಾಜನರೂ ಸೇರಿ ಬಹು ಧನವ್ಯಯಮಾಡಿ ಜ್ಞಾನದ ಮಟ್ಟವನ್ನು ಆ ಎತ್ತರಕ್ಕೆ ತಂದಿದ್ದಾರೆ. ನಮ್ಮ ದೇಶದಲ್ಲಿ ಆ ಉತ್ಸಾಹವಾಗಲಿ ಐಶ್ವರ್ಯವಾಗಲಿ ಇಲ್ಲ. ಆದ್ದರಿಂದ ಅನಕ್ಷರತೆಯನ್ನು ಎಲ್ಲಿ ಹೇಗೆ ಎಷ್ಟರ ಮಟ್ಟಿಗೆ ಆಕ್ರಮಣ ಮಾಡಿ ಲಗ್ಗೆ ಹತ್ತಬೇಕೆಂದು ಎಲ್ಲರೂ ಯೋಚನೆ ಮಾಡುತ್ತಿರುವಾಗ ಮೈಸೂರು ದೇಶದಲ್ಲಿ ವಿಶ್ವವಿದ್ಯಾನಿಲಯ ಸಂಘವು ಸೇವಾ ಬುದ್ಧಿಯಿಂದ ಇದನ್ನು ಆರಂಭಿಸಿತು. ವಿದ್ಯಾ ಇಲಾಖೆಯಿಂದ ಆಗದ್ದು ವಿದ್ಯಾರ್ಥಿಗಳಿಂದಾಗುತ್ತದೆಯೆ? ಅಕ್ಷರ ಕಲಿಸಿದರೆ ವಿದ್ಯೆ ಬಂದಂತಾಯಿತೇ? ಒಂದು ಪಟ್ಟಣದ ಹತ್ತು ಕಡೆಗಳಲ್ಲಿ ನೂರು ಜನಕ್ಕೆ—ಸಾವಿರ ಜನಕ್ಕೆ—ನಾಲ್ಕಕ್ಷರ ಹೇಳಿಕೊಟ್ಟು ನೂರಾರು ರೂಪಾಯಿ ಖರ್ಚುಮಾಡಿಬಿಟ್ಟರೆ ಯಾವ ದೇವರಿಗೆ ಪ್ರೀತಿ?—ಎಂದು ಹಳಿಯುವವರಿದ್ದಾರೆ. ಇಂಥವರು ಆಡುವ ಮಾತು ನಿರಭಿಮಾನದಿಂದಲ್ಲ; ಕೆಲಸ ಅಸಾಧ್ಯವಾದದ್ದು ಎಂಬ ಭಾವದಿಂದ; ಆದರೆ ಆವಶ್ಯಕವೆಂದು ಕಂಡರೆ ಅಸಾಧ್ಯವಾದದ್ದನ್ನೂ ಸಾಧಿಸಲೇಬೇಕು—ಬೆಟ್ಟವನ್ನು ಒಡೆದು ರೈಲುಹಾಕುವ ಹಾಗೆ. ಕೆಲಸ ಆರಂಭಮಾಡಿ ನಡಸುವವರೆಗೂ ಅದರ ಕಷ್ಟಸುಖಗಳು ಗೊತ್ತಾಗುವುದಿಲ್ಲ. ಹಾಗೆ ಪಡೆಯುವ ಅನುಭವವು ಅಲ್ಲಗಳೆಯುವುದಲ್ಲ. ಅಲ್ಲದೆ, ಇಂದು ಹತ್ತು ಜನ ತರುಣ ಉತ್ಸಾಹಿಗಳು ನಿಸ್ಸ್ವಾರ್ಥ ಬುದ್ಧಿಯಿಂದ, ಸೇವಾಸಕ್ತಿಯಿಂದ, ಕೆಲಸಮಾಡಿದರೆ ಅದು ಕಾಲಕ್ರಮದಲ್ಲಿ ನೂರಾರು ಜನ ಸಂಬಳಗಾರರು ಮಾಡುವ ಕೆಲಸಕ್ಕಿಂತ ಏಕೆ ಹೆಚ್ಚಾಗಬಾರದು? ಪೂರ್ಣಫಲ ಪಡೆಯುವುದಕ್ಕೆ ಏಕೆ ಮಾರ್ಗದರ್ಶಕವಾಗಬಾರದು? ಗುಳಗುಳನೆ ಜೀವಜಲ ಉಕ್ಕಿಬಂದರೆ ಅದೇ ಹೊಳೆಯಾಗಿ ಹರಿದು ಜಲಸಮೃದ್ಧಿ ತರುವುದಿಲ್ಲವೇ? ಈ ದೃಷ್ಟಿಯಿಂದ ವಿಶ್ವವಿದ್ಯಾನಿಲಯ ಸಂಘದ ಉದ್ಯಮವು ಸ್ತುತ್ಯವಾಗಿದೆ. ನಾವು ಅವರನ್ನು ಅಭಿನಂದಿಸಿ, ಅವರ ಪ್ರಯತ್ನದಲ್ಲಿ ಜಯವುಂಟಾಗಲೆಂದು ಹಾರೈಸುತ್ತೇವೆ.

***

ಮೈಸೂರು ವಿಶ್ವವಿದ್ಯಾನಿಲಯ ಸಂಘದವರು ನಡೆಸುತ್ತಿರುವ ಅಕ್ಷರಪ್ರಚಾರ ಕಾರ್ಯಕ್ಕೆ ಜಯವನ್ನು ಕೋರಿ ಮೈಸೂರು ಸಂಸ್ಥಾನದ ದಿವಾನರವರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು ಈ ರೀತಿ ಸಂದೇಶವನ್ನು ಕಳುಹಿಸಿಕೊಟ್ಟಿರುತ್ತಾರೆ:

ಅಕ್ಷರಪ್ರಚಾರ ಕಾರ್ಯಕ್ಕೆ ಸಂದೇಶಗಳು

"ಒಂದು ಜನಾಂಗವು ತನ್ನ ಯೋಧರಿಗಾಗಿ ಹಣ ಖರ್ಚುಮಾಡುವುದು, ಯುದ್ಧಕಾಲದಲ್ಲಿ ಅವರು ತನ್ನ ದೇಶವನ್ನು ಸಂರಕ್ಷಿಸಬಹುದೆಂಬ ನಿರೀಕ್ಷಣೆಯಿಂದ. ಹಾಗಾದರೆ ಸ್ಕೂಲು ಕಾಲೇಜುಗಳಿಗೆ ಹೋಗುವವರಿಂದ ಅದು ಏನನ್ನು ನಿರೀಕ್ಷಿಸುತ್ತದೆ? ಅಪಾರವಾದ ಹಣ ಖರ್ಚುಮಾಡಿ ನಿಮಗೆ ಶಿಕ್ಷಣಕೊಟ್ಟದ್ದರಿಂದ ದೇಶಕ್ಕೆ ಆಗುವ ಪ್ರತ್ಯುಪಕಾರ ವೇನು? ನೀವು ಜ್ಞಾನಜ್ಯೋತಿಯನ್ನು ನಿಮ್ಮ ನೆರೆಹೊರೆಯವರಿಗೆ ತೋರಿಸಿ ಬೆಳಕು ಕೊಡಬೇಕೆಂದು ನಿರೀಕ್ಷಿಸಿದರೆ ಅದು ಹೆಚ್ಚೆನಿಸುತ್ತದೆಯೆ? ಇದು ಪ್ರತಿಯೊಬ್ಬ ವಿದ್ಯಾವಂತನೂ ತಾನು ತನ್ನ ದೇಶಕ್ಕೆ ಹೊತ್ತಸಾಲ. ಮೈಸೂರು ವಿಶ್ವ ವಿದ್ಯಾನಿಲಯ ಸಂಘವು ಇದನ್ನು ನಿಮಗೆ ಜ್ಞಾಪಕಕ್ಕೆ ತಂದುಕೊಡಲಿಚ್ಛಿಸುತ್ತಿದೆ."

ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಾದ ರಾಜಕಾರ್ಯಪ್ರವೀಣ ಎನ್. ಎಸ್. ಸುಬ್ಬರಾಯರವರು ಈ ರೀತಿ ಸಂದೇಶವನ್ನು ಕಳುಹಿಸಿರುತ್ತಾರೆ:

"ಸಮಾಜಾಭಿವೃದ್ಧಿ ಕಾರ್ಯದಲ್ಲಿ, ಅದರಲ್ಲೂ ವಯಸ್ಕರ ಅಕ್ಷರಪ್ರಚಾರ ಕಾರ್ಯದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಇಷ್ಟು ಆಸಕ್ತಿ ತೆಗೆದುಕೊಳ್ಳು ತ್ತಿರುವುದು ನನಗೆ ಬಹಳ ಸಂತೋಷವಾಗಿದೆ. ಅವರು ಮಾಡುತ್ತಿರುವ ಕೆಲಸದಲ್ಲಿ ಗೋಚರವಾದ ಅಂಶಗಳೇನೂ ಇಲ್ಲದಿರಬಹುದು. ಆದರೆ ಪ್ರಜಾಭ್ಯುದಯಕ್ಕೂ ಆದರಿಂದ ಅಂತ್ಯದಲ್ಲಿ ಸಮಾಜ ಐಕ್ಯತೆಗೂ ಅದು ಬಹಳ ಮುಖ್ಯವಾದ ಸಹಾಯವನ್ನು ನೀಡುವುದಾಗಿದೆ. ಈ ಕೆಲಸ ಮಾಡುವುದರಿಂದ ವಿಶ್ವವಿದ್ಯಾನಿಲಯದ ತರುಣರೂ, ತರುಣಿಯರೂ ತಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಳ್ಳುತ್ತಿರುವರು. ಮತ್ತು ಜನ ಸಮೂಹದೊಡನೆ ಸೇರುವುದೂ, ಜನಸಮೂಹವು ಜೀವಿಸುವ ಪರಿಸ್ಥಿತಿಯ ತಿಳಿವಳಿಕೆ ಹೊಂದುವುದೂ ಅವರ ಶಿಕ್ಷಣದಲ್ಲಿಯೇ ಒಂದು ಮುಖ್ಯ ಅಂಶವಾಗಿದೆ."

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು ಈ ರೀತಿ ಸಂದೇಶ ಕಳುಹಿಸಿದ್ದಾರೆ:

"ವಿದ್ಯೆಗೆ ಮರ್ಯಾದೆ ಕೊಡುವುದರಲ್ಲಿ ಯಾವ ಜನಾಂಗಕ್ಕೂ ನಾವು ಹಿಂದಿಲ್ಲ. ಆದರೆ ವಿದ್ಯಾವಂತರು—ಕಡೆಗೆ, ಓದುಬರಹ ಬಲ್ಲವರು, ನಮ್ಮಲ್ಲಿ ಎಷ್ಟು ಕಡಮೆ! ನಮ್ಮ ಜನರ ಬಡತನ ಹಿಂಗಬೇಕಾದರೆ, ತಿಳಿವಳಿಕೆ, ಧೈರ್ಯ, ಆತ್ಮಗೌರವ—ಇವು

ಹೆಚ್ಚಬೇಕಾದರೆ, ಈ ಕೂಡಲೆ ಓದುಬರಹ, ಸ್ವಾರಸ್ಯವಾದ ಸುಲಭ ಪುಸ್ತಕಗಳು, ವಿಮರ್ಶೆಯಿಂದ ಶೋಧನೆಪಟ್ಟ ನಂಬಿಕೆಗಳು ಜನರಲ್ಲಿ ಹರಡಬೇಕು. ವಿದ್ಯಾರ್ಥಿಗಳು, ಉಪಾಧ್ಯಾಯರು, ವಿದ್ಯಾಸಂಸ್ಥೆಗಳು, ಮಠಗಳು, ಗ್ರಾಮಪಂಚಾಯಿತಿಗಳು ಈ ಸಾರ್ವಜನಿಕ ಸೇವೆಯನ್ನು ಶ್ರದ್ಧೆಯಿಂದ ನಡೆಸಬೇಕು. ಮಾತು ಸಾಕು; ಎಲ್ಲರೂ ಹೆಣ್ಣುಮಕ್ಕಳು ಕೂಡ—ತಮ್ಮ ಅಳಿಲುಭಕ್ತಿಯನ್ನು ಕೆಲಸದಲ್ಲಿ ತೋರಿಸಬೇಕು. ದುಡಿಯುವವರಿಗೆ ಸ್ವಲ್ಪವಾದರೂ ವೆಚ್ಚದ ಸಹಾಯ ಮಾಡಬೇಕಾದೀತು. ತನು ಮನ ಧನ ಯಾವುದನ್ನು ಕೊಡಬಲ್ಲಿರಿ, ಕೊಡಿ. ನಾಡು, ನುಡಿ, ಬಾಳನ್ನು ಹಿರಿಯ ತನಕ್ಕೆ ತನ್ನಿ. ಕರ್ನಾಟಕಂ ಗೆಲ್ಗೆ."

***

"ಇಂಡಿಯಾ ಸರ್ಕಾರದ ಎಜುಕೇಷನಲ್ ಕಮಿಷನರವರಾದ ಮಿ|| ಜಾನ್ ಸಾರ್ಜೆಂಟ್ ಅವರು 'ವಿದ್ಯಾಭ್ಯಾಸ ಸಫಲವಾಗುವ ರೀತಿ' ಎಂಬ ವಿಷಯವನ್ನು ಕುರಿತು ಮೈಸೂರಿನಲ್ಲಿ ಘನವಾದ ಭಾಷಣಮಾಡಿದರು. ಉತ್ತಮವಾದ ಶಿಕ್ಷಣ ವ್ಯವಸ್ಥೆಯಲ್ಲಿ ಮೊದಲ ಎಷ್ಟು ಭಾಗ ಎಷ್ಟು ಕಾಲ ಕಡ್ಡಾಯವಾಗಿ ಸಾರ್ವತ್ರಿಕವಾಗಿ ಇರಬೇಕು? ಮುಂದಿನ ಮಜಲು ಗಳಲ್ಲಿ ವಿದ್ಯಾರ್ಥಿಗಳನ್ನು ಹೇಗೆ ಆಯ್ದುಕೊಂಡು ಬಗೆಬಗೆಯ ವಿಶೇಷ ಶಿಕ್ಷಣ, ವೃತ್ತಿ ಶಿಕ್ಷಣ ಏರ್ಪಡಿಸಬೇಕು? ವಿದ್ಯಾರ್ಥಿಗಳ ಶಿಕ್ಷಣಕ್ಕೂ ದೇಶದ ಆರ್ಥಿಕ ಸಂಪನ್ನತೆಗೂ ಹತ್ತಿರ ಸಂಬಂಧವನ್ನು ಹೇಗೆ ರಚಿಸಬೇಕು? ಅವರ ಬುದ್ಧಿಶಕ್ತಿ ಮನಶ್ಶಕ್ತಿ ಬೆಳೆದು ನಾಡಿನ ಜೀವನದಲ್ಲಿ ಹೇಗೆ ಸಫಲವಾಗಬೇಕು ಎಂಬವನ್ನು ವಿವರಿಸಿದರು. ಕಡೆಯಲ್ಲಿ "ಕಾಲ ಮೀರಿಹೋಗುವ ಮುಂಚೆಯೇ, ಭರತಖಂಡದ ಪೂರ್ವ ಸಂಪ್ರದಾಯಗಳಿಗೂ ಇಂದಿನ ಮಹಾಕಾಂಕ್ಷೆಗಳಿಗೂ ನಾಳಿನ ಅದೃಷ್ಟ ಸೌಭಾಗ್ಯಕ್ಕೂ ತಕ್ಕಂತಹ ವಿದ್ಯಾವ್ಯವಸ್ಥೆಯನ್ನು ರಚಿಸುವ ಕರ್ತವ್ಯ ಎಲ್ಲರಿಗೂ ಸೇರಿದುದಾಗಿದೆ. ಬಹುಶಃ ಆ ಸಂದರ್ಭದಲ್ಲಿ ಮಾತ್ರವೇ 'ಅನಂತಕಾಲವೇ ನಗರ ಗಳನ್ನು ಕಟ್ಟತಕ್ಕದ್ದು' ಎಂಬ ಪ್ಲೇಟೋವಿನ ನುಡಿಯನ್ನು ನಾವು ಅಂಗೀಕರಿಸ ಬಹುದು" ಎಂದು ನುಡಿದು ಮುಗಿಸಿದರು.

ಶಿಕ್ಷಣದ ಗುರಿ

ವಿದ್ಯಾವಿಚಾರಗಳನ್ನು ಕುರಿತು ಮೇಧಾವಿಗಳು ಅನೇಕ ರೀತಿಯಲ್ಲಿ ಈವರೆಗೆ ನುಡಿದಿದ್ದಾರೆ. ಭರತಖಂಡದ ಸರ್ವತೋಮುಖವಾದ ಏಳಿಗೆ ಸಂಪತ್ತಿಗಳೇ ಆ ಎಲ್ಲರ ಉದ್ದೇಶ. ನಮ್ಮ ಜೀವನದಲ್ಲಿ ಇಂದು ಯಾವುದೊ ನ್ಯೂನತೆ ಇದೆ. ಇದು ಹೋಗ ಬೇಕು; ಈ ಜನದ ಶಕ್ತಿ ಕುದುರಬೇಕಾದರೆ ಜನದ ದೇಹಶಕ್ತಿಯನ್ನೂ ಮನಶ್ಶಕ್ತಿ

ಯನ್ನೂ ಜಾಗ್ರತೆಗೊಳಿಸಿ ತಕ್ಕ ವಿಚಕ್ಷಣೆಯಿಂದ ಬಲಪಡಿಸಬೇಕು: ಈವೊತ್ತಿನ ಮಕ್ಕಳು ನಾಳಿನ ಜೀವನದ ಆಧಾರಸ್ತಂಭಗಳು, ಆದುದರಿಂದ ಅವರ ವಿದ್ಯಾ ಶಿಕ್ಷಣ ಉತ್ತಮವಾಗಿ ನಡೆಯಬೇಕು ಎಂಬ ಅಂಶಗಳು ನಿರ್ವಿವಾದ. ಆದರೆ ಇತರ ಹಲವು ರಂಗಗಳಲ್ಲಿನಂತೆಯೇ ಈ ವಿಷಯದಲ್ಲಿಯೂ; ನಾಲ್ಕು ಜನ ನುಡಿವಾಗ ಆರು ಅಭಿಪ್ರಾಯಗಳೂ ಮಾರ್ಗಗಳೂ ಸೂಚಿತವಾಗುವುವು ಎಂಬ ನುಡಿಯಂತೆ ವ್ಯಾಧಿ ಯಾವುದೆಂದು ಪರೀಕ್ಷೆ ನಡಸುವಾಗಲೂ ಚಿಕಿತ್ಸಾವಿಧಾನವನ್ನು ಕೈಕೊಳ್ಳುವಾಗಲೂ ಅನೇಕ ಅಭಿಪ್ರಾಯಗಳು ಹುಟ್ಟಿಕೊಂಡು ಹುರುಡುಮಾಡುವುವು. ಹೀಗಾಗಿ ಭರತಖಂಡದ ಯೋಜನೆ ಪ್ರಯತ್ನಗಳು ಒಂದು ಗುರಿಯಲ್ಲಿಯೂ ಮೊನೆಯಲ್ಲಿಯೂ ಸಾಗುವುದು ಶಕ್ಯವಿಲ್ಲವಾಗಿದೆ. ಇದು ಭರತಖಂಡದ ದುರದೃಷ್ಟ.

ನಾವು ನಲವತ್ತು ಕೋಟಿ ಸಂಖ್ಯೆಯುಳ್ಳ ಜನವರ್ಗ; ಅತಿ ಪ್ರಾಚೀನವಾದ ಕಲೆ ಸಂಸ್ಕೃತಿ ಸಾಧನೆ ಸಿದ್ಧಿಗಳ ಚರಿತ್ರೆಯ ಹಿನ್ನೆಲೆ ಇದೆ ನಮಗೆ. ಸುತ್ತಲ ಪ್ರಪಂಚವನ್ನು ನೋಡಿ ನಾವು ಮುಂದುವರಿಯಬೇಕಾಗಿರುವ ಅಂಶ ಎಷ್ಟಿದೆ ಎಂಬುದನ್ನು ಜನ ಅರಿತುಕೊಳ್ಳುತ್ತಿದೆ. ಒಳ ಹೊರ ಕಾರಣಗಳಿಂದ ನಮ್ಮ ಪ್ರಯತ್ನ ಎಷ್ಟು ವಿಫಲವಾಗುತ್ತಿದೆ ಎಂಬುದನ್ನು ನೆನೆಯುತ್ತ ಮನಸ್ಸು ತಲ್ಲಣಗೊಂಡಿದೆ. ನೂರು ವರ್ಷಗಳಿಂದಲೂ ನೂರಾರು ಕೋಟಿ ರೂಪಾಯಿ ಹಣ ವೆಚ್ಚದಿಂದ ಏರ್ಪಟ್ಟು ನಡೆಯುತ್ತಿರುವ ವಿದ್ಯಾವ್ಯಾಸಂಗ ಹೆಚ್ಚಾಗಿ ಫಲಕಾರಿಯಾಗದಿರುವ ವ್ಯಥೆ ಕೊರಗಿಸುತ್ತಿದೆ. ಹೀಗೆಯೆ ನಡೆದರೆ ಅನಂತಕಾಲ ಮುಗಿದರೂ ನಮ್ಮನಾಡು ಕಟ್ಟಲಾರದು; ನಮ್ಮ ನಾಗರಜೀವನ ಮೇಲ್ಪಡಲಾರದು.

ಪ್ರತಿಯೊಬ್ಬ ವ್ಯಕ್ತಿಯೂ ಶಿಕ್ಷಣದಿಂದ ಉತ್ತಮಗೊಂಡ ದೇಹಶಕ್ತಿ ಮನಶ್ಶಕ್ತಿಗಳಿಂದ ನಾಡಿನ ಸೌಭಾಗ್ಯಕ್ಕೆ ತನ್ನದೇ ಆದ ವಿಶೇಷ ಕಾಣಿಕೆಯನ್ನು ಸಲ್ಲಿಸುವಂತಾದ ಹೊರತು ದೇಶದ ಬದುಕು ಪುಷ್ಟಿಗೊಳ್ಳುವುದಿಲ್ಲ ಎಂಬುದು ಎಲ್ಲ ರಿಗೂ ತಿಳಿದ ತತ್ವ. ವ್ಯಕ್ತಿಯ ಸ್ವಂತ ಶಕ್ತಿ ಬಲಿತಂತೆಲ್ಲ ಅವನ ಸುತ್ತಲ ಆವರಣ ಮೇಲಾಗಲು ಸಾಧ್ಯವಾಗುವುದು. ಆವರಣದ ತುಂಬು ಸೌಕರ್ಯಗಳಿಂದ ವ್ಯಕ್ತಿ ಗುಣವೂ ಶಕ್ತಿಗಳೂ ಬಲಪಡುವುವು. ಇವೆರಡರ ಪರಸ್ಪರ ಸಹಾಯಕತೆಯಿಂದ ಒಟ್ಟು ಒಂದು ಕಾಲದ ಬದುಕು ರೂಪುಗೊಳ್ಳುವುದು. ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಆವರಣಸೌಕರ್ಯ ಹೇಳಿಕೊಂಡು ಸಂತೋಷಪಡುವಂತಿಲ್ಲ. ಆವರಣ ಸಂಪತ್ತಿಯನ್ನು ನಿರ್ಮಾಣಮಾಡಿ ಅದರಿಂದ ಜೀವನವನ್ನು ಬೆಳಸತಕ್ಕದ್ದಾಗಿಲ್ಲ ವ್ಯಕ್ತಿಶಕ್ತಿ. ಆದ್ದರಿಂದಲೇ ಇಷ್ಟು ಸತ್ವದಾರಿದ್ರ್ಯ ನಮ್ಮಲ್ಲಿ. ಬದುಕಿನ ಎಲ್ಲ ರಂಗ ಗಳಲ್ಲಿಯೂ ಕೃತಕಾರ್ಯವಾಗಿ ಆಚಂದ್ರಾರ್ಕವಾದ ಸ್ಮಾರಕಗಳನ್ನು ಬಿಟ್ಟುಹೋದ

ಪ್ರಾಚೀನರು ಮಾಡಬಹುದಾದ್ದೇನು? ಬುದ್ಧಿಶಕ್ತಿಯಲ್ಲಾಗಲಿ ಆಶೆ ಆಕಾಂಕ್ಷೆಗಳಲ್ಲಾಗಲಿ ಯಾರಿಗೂ ಯಾವ ಅಂಶಗಳಲ್ಲಿಯೂ ಕಡಮೆಯಲ್ಲದ ಇಂದಿನ ನಮ್ಮ ಜೀವನ ಹೀಗೆ ಬರಡಾಗಬೇಕಾದುದೇನು? ಇಂದಿನ ಪ್ರಯತ್ನಗಳು ಶ್ರಮಕ್ಕೂ ವೆಚ್ಚಕ್ಕೂ ತಕ್ಕಷ್ಟು ಫಲಕಾರಿಯಾಗದೆ—ವಿದ್ಯಾವಂತರೆನಿಸಿಕೊಂಡ ಜನರಲ್ಲಿ ಕೂಡ—ಕ್ರಿಯಾಶಕ್ತಿಯೂ ನಾಡಿನ ಕಲ್ಯಾಣದರ್ಶನವೂ ಬಹುಮಟ್ಟಿಗೆ ಇಲ್ಲದೆ ಇರುವುದನ್ನು ನೋಡಿದರೆ ನಮ್ಮ ಶಿಕ್ಷಣ ಕೃತಕಾರ್ಯವಾಗಿಲ್ಲ ಎನ್ನಿಸುತ್ತದೆ. ಎಲ್ಲ ವಿದ್ಯಾಕಾರ್ಯದ ಫಲ: ಉತ್ತಮರಾದ ಕರ್ತೃತ್ವಶಾಲಿಗಳ ಹುಟ್ಟು; ತಯಾರಿಕೆ. ಅಂಥವರು ಹೆಚ್ಚು ಸಂಖ್ಯೆಯಲ್ಲಿ ಹುಟ್ಟುವಂತೆ ಮಾಡತಕ್ಕ ಆವರಣದ ಬಲವೂ, ಅನುಕೂಲದ ಏರ್ಪಾಡೂ ಸರಕಾರ ಸಮಾಜ ವಿದ್ಯಾಸಂಸ್ಥೆಗಳಿಗೆ ಸೇರಿದ ಕೆಲಸ. ಜನ ಹುಟ್ಟಿ ಬೆಳೆದರೆ ನಾಡಿನ ಜೀವನ ಹತ್ತು ವರ್ಷದಲ್ಲಿ ಮೇಲಾಗುವುದು; ಹೊಸ ಜನದಿಂದ ಹೊಸ ಜಗತ್ತು ನಿರ್ಮಾಣವಾಗುವುದು. ಜೀವನ ಮೇಲಾದಂತೆಲ್ಲ ಮೇಲ್ತರದ ಜನವನ್ನು ನಿರ್ಮಾಣಮಾಡುವ ಅವಕಾಶ ಹೆಚ್ಚಾಗುವುದು. ಒಬ್ಬೊಬ್ಬನ ಸುತ್ತಲೂ ಒಂದೊಂದು ಪ್ರಭಾವಮಂಡಲ ಉಂಟಾಗಿ ಅಲ್ಲಿ ಉತ್ಸಾಹವೂ ಬಗೆಬಗೆಯ ಕಾರ್ಯಪ್ರಪಂಚಗಳೂ ಹುಟ್ಟಿ ಎಲ್ಲ ಸಾಧನ ಸಫಲವಾಗುವುದು. ನಮ್ಮ ಒಂದೊಂದು ಸಂಸ್ಥಾನ ಅಥವಾ ಒಂದೊಂದು ಪ್ರಾಂತದಷ್ಟು ಕೂಡ ದೊಡ್ಡವಲ್ಲದ ವಿದೇಶಗಳಲ್ಲಿ ಆರ್ಥಿಕ ಜೀವನವಾಗಲಿ ರಾಜಕೀಯ ಸಾಮಾಜಿಕ ಜೀವನಗಳಾಗಲಿ, ಜ್ಞಾನ ವಿಜ್ಞಾನ ಸಾಧನೆಯಾಗಲಿ ಪ್ರಪಂಚವನ್ನು ಬೆರಗುಗೊಳಿಸುವಷ್ಟು ಹಿರಿದಾಗಿ ಬೆಳೆಯುತ್ತಿವೆ. ಒಂದೊಂದು ಶಾಸ್ತ್ರವನ್ನು ವರ್ಷವರ್ಷಕ್ಕೆ ಹತ್ತು ಹೆಜ್ಜೆ ನೂರು ಹೆಜ್ಜೆ ನಡಸಿಕೊಂಡು ಹೋಗಬಲ್ಲ ಹಲವಾರು ಮಂದಿಯನ್ನು ಆ ಆವರಣಗಳು ಉಂಟುಮಾಡುತ್ತಿವೆ. ಆ ಆವರಣಗಳ ಶಕ್ತಿ ಏನು? ಆ ವಿದ್ಯಾಪ್ರಭಾವಗಳ ವೀರ್ಯವೇನು? ಇಷ್ಟು ಪ್ರಯತ್ನಪಟ್ಟರೂ ನಮ್ಮ ವಿದ್ಯಾಪದ್ಧತಿ ನಿಷ್ಫಲವಾಗಿ ನಮ್ಮಲ್ಲಿ ವಿದ್ಯಾವಂತರಾದ ಜನರನ್ನು—ಅಲ್ಲಿ ಇಲ್ಲಿ ಒಬ್ಬಿಬ್ಬರು ಮಹಾಸತ್ವರನ್ನು ಳಿದು—ಕೇವಲ ಗುಹಾಧ್ವಸಿಗಳನ್ನಾಗಿ ಜಡರನ್ನಾಗಿ ಮಾಡುತ್ತಿರುವುದೇನು? ಈ ಸಂಗತಿಗಳನ್ನು ಯೋಚಿಸಿದರೆ ಯಾವ ತೇಪೆಯ ಕೆಲಸವಾಗಲಿ ಯಾವ ಸಣ್ಣ ಬೆಸುಗೆಯ ಪ್ರಯತ್ನವಾಗಲಿ ಈ ನಾಡನ್ನು ಈಗ ಬಲಪಡಿಸಲಾರದು ಎಂಬುದು ಖಂಡಿತವಾಗುವುದು. ನಮಗೆ ಈಗ ಬೇಕಾಗಿರುವುದು ನಿಸ್ಸತ್ವವಾದ ಸೊರಗಿದ ಈ ಜೀವನವನ್ನು ಸಂಪೂರ್ಣವಾಗಿ ಸರ್ವತೋಮುಖವಾಗಿ ಅರಳಿಸಬಲ್ಲ ಚೈತನ್ಯ. ಅದಾಗಬೇಕಾದರೆ ಮೇಲೆ ಹೇಳಿದಂತೆ ದೇಹದಾರ್ಢ್ಯ ಧೀಶಕ್ತಿ ಧೈರ್ಯ ದಕ್ಷತೆಗಳುಳ್ಳ ಜನ ಬೇಕು. ಒಂದೊಂದು ವಿದ್ಯಾಸಂಸ್ಥೆಯೂ ಒಂದು ಸೃಷ್ಟಿಚೈತನ್ಯವಾಗಬೇಕು; ಕ್ರಿಯೋತ್ಸಾಹ ಊಡಬಲ್ಲ

ಪ್ರೀತಿಯ ಒಂದು ಸಾಧನವೂ ಗರುಡಿಯೂ ಆವರಣವೂ ಆಗಬೇಕು. ಯಾವ ಉಪಕರಣಗಳನ್ನು ಬೇಕಾದರೆ ಅವುಗಳನ್ನು ಒಡಗಿಸಿಕೊಂಡು ಮುಂದೆ ಮುಂದೆ ಧೈರ್ಯದಿಂದ, ನಂಬಿಕೆ ಸಂತೋಷಗಳಿಂದ ನಡೆಯಬಲ್ಲ ಶಕ್ತಿ ಹೊಮ್ಮಬೇಕು, ಚಿಮ್ಮಬೇಕು. ಇದಕ್ಕೆ ಬೇಕಾದುದು ಈ ಜನರಲ್ಲಿ ಪ್ರೇಮ, ವಿಶ್ವಾಸ, ಅಭಿಮಾನ, ಕಾರ್ಯನಿಷ್ಠೆ, ನಾಳಿನ ಮಂಗಳದ ಕಡೆಗೆ ನಾಡಿನ ಮಕ್ಕಳನ್ನು ಒಂದು ದೃಢದಿಂದ ನಡೆಸಬೇಕೆಂಬ ಚಲಿಸದ ಪ್ರತಿಜ್ಞೆ. ಈ ಭಾಗ್ಯ ಎಲ್ಲೆಲ್ಲಿಯೂ ಬೇಗನೆ ಉಂಟಾಗ ಬೇಕು ಮಾತ್ರ. ಇಲ್ಲವಾದರೆ ನಾವು ಸಿಕ್ಕಿದವರ ಕಾಲ್ತುಳಿತಕ್ಕೆ ಬಿದ್ದು ಅಡಗಿ ಹೋಗಬೇಕಾದೀತು. ತಡೆಯಲಾಗದ ಪ್ರಪಂಚಶಕ್ತಿಗಳ ಹುಚ್ಚುಹೊಳೆಯಲ್ಲಿ ಕೊಚ್ಚಿಹೋಗಬೇಕಾಗುವುದು. ಸಾರ್ಜೆಂಟ್ ಅವರು ಹೇಳಿದ 'ಕಾಲ ಮೀರುವ ಮುಂಚೆಯೇ' ಎಂಬ ನುಡಿಯನ್ನು ಆ ಅರ್ಥದಲ್ಲಿ ಮಾತ್ರವೇ ನಾವು ತೆಗೆದುಕೊಳ್ಳಲು ಬಯಸುತ್ತೇವೆ."—"ಕನ್ನಡ ನುಡಿ", ೪-೧೦-೧೯೪೦.

ಪ್ರಾಚ್ಯ ಲೇಖನಾವಳಿ

I.H.Q.—June, 1940. (*Poussin Memorial Volume*, Part I).

1. 'The Life and Works of Madhwa'—By B. N. Krishnamurthi Sarma.
2. 'Kalidasa'—By S. K. De.

J.O.R., Madras.—Oct.–Dec., 1939.

1. 'Sukthirathnakara of Kalingaraya Surya'—By V. Raghavan.
2. 'Notes on the Ancient Political Geography of South India'—By M. Venkataramanaiya.

   [4 Prēhara: Paru-Viṣaya or Prēhara extended from the Gooty taluq in the north to Hindupur taluq in the south].
3. 'Theories about Ablaut', Part IV—By C. R. Sankaran.

J.I.H.—April, 1940.

1. 'The Intervening Age between Pariksit and Nanda'—By D. S. Triveda.

   [1500 or 1510 years and not 1050 or 2500].
2. 'Beginning of Chandragupta Maurya's Reign'—By H. C. Seth, (325 B.C.)
3. 'Chandraguptha the Great'—By P. T. Telang.

   [Vrshala=the powerful or great monarch].

ಶರಣಸಾಹಿತ್ಯ—ಆಗಸ್ಟ್, ೧೯೪೦.

೧. ಮಾಣಿಕ್ಯ ವಾಚಕರು ವೀರಶೈವರೇ ?—ಶ್ರೀಮಾನ್ ಎಂ. ಕೆ. ಲಿಂಗಯ್ಯನವರು, ಬಿ.ಎಸ್ ಸಿ.

[ಅವರು ಹಾಡಿದ ಕವನಗಳಲ್ಲಿ ವೀರಶೈವ ಮತದ ಅಥವಾ ತತ್ವದ ಹೆಸರೇ ಬಂದಿಲ್ಲ; ಗುರು, ಲಿಂಗ, ಜಂಗಮುಗಳ ಹೆಸರೂ ಇಲ್ಲ. ಶೈವರು ಶಿವನನ್ನು ಆರಾಧಿಸುವ ಸಾಮಾನ್ಯ ನಿಯಮಗಳಿಗನುಗುಣವಾಗಿಯೇ ಮಾಣಿಕ್ಯ ವಾಚಕರೂ ಶಿವನ ಆರಾಧನೆ ಮತ್ತು ಸ್ತೋತ್ರಗಳನ್ನು ಮಾಡಿದ್ದಾರೆ. ತಮಿಳು ಶೈವ ಆಚಾರ್ಯರಲ್ಲಿ ಅನೇಕರಿಗೆ ವೀರಶೈವವೆಂದರೇನು ಎಂಬುದು ತಿಳಿದಿದ್ದಂತೆ ತೋರುತ್ತಿಲ್ಲ. ಕೇವಲ ಶಿವನನ್ನೇ ಅನನ್ಯ ಶರಣಭಾವದಿಂದ ಪೂಜಿಸುತ್ತ ಬಂದನಿಮಿತ್ತ ಅವರಿಗೆ ಕೆಲವು ಕಡೆ ವೀರಶೈವರೆಂಬ ಹೆಸರು ಬಂದಂತೆ ತೋರುತ್ತದೆ; ಆದರೆ ಈ 'ವೀರಶೈವರು, ನಿಜವಾದ ವೀರಶೈವ ಮತದ ಸಿದ್ಧಾಂತಗಳನ್ನು ಅರಿತು, ಆಚರಿಸಿದರೆಂದು ಹೇಳಲು ಆಧಾರಗಳೇ ಸಿಕ್ಕುವುದಿಲ್ಲ. ಇದರ ಜತೆಗೆ ಮಾಣಿಕ್ಯವಾಚಕರು

ಲಿಂಗಧಾರಿಗಳಾಗಿದ್ದರೆನ್ನಲು ಯಾವ ಆಧಾರವೂ ಇಲ್ಲ. ಅಥವಾ ಅವರಿಗೆ ದೀಕ್ಷೆಯಿತ್ತ ಗುರುವು ಯಾರು—ಎಂಬುದನ್ನು ಅರಿಯಲು ಅವಕಾಶವಿಲ್ಲ. ವೀರಶೈವಮತದ ಮುಖ್ಯ ಲಕ್ಷಣವಾದ ಗುರು ಲಿಂಗ ಜಂಗಮ ಇಷ್ಟಲಿಂಗ ಮುಂತಾದುವುಗಳ ವಿಷಯವೇ ಅವರ ಗ್ರಂಥಗಳಲ್ಲಿ ಬರದಿರುವುದು ಮತ್ತು ಅವರು ವೀರಶೈವರ ಮುಖ್ಯ ಲಕ್ಷಣವಾದ ಲಿಂಗ ಧಾರಣೆ ಮಾಡದಿದ್ದುದು—ಇವನ್ನು ಕಂಡರೆ ಅವರು ಕೇವಲ ಶಿವಶರಣರಾಗಿದ್ದರೇ ವಿನಾ, ವೀರಶೈವರಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು.]

೨. ಶ್ರೀ ಚಾಮುಂಡರಾಯ—ವಿದ್ವಾನ್ ಕೆ. ಭುಜಬಲಶಾಸ್ತ್ರಿಗಳು.

೩. ಲಿಂಗಧಾರಣ ಮತ್ತು ಶಿವದೀಕ್ಷೆ—ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳು.

[ಲಿಂಗಧಾರಣವು ವೀರಶೈವರ ಮುಖ್ಯ ಚಿಹ್ನೆಯಾದರೂ ಲಿಂಗಧಾರಿಗಳೆಲ್ಲರೂ ವೀರ ಶೈವರೆನಿಸುವುದಿಲ್ಲ. . . . ಶಿವದೀಕ್ಷಾದಿ ಸಂಸ್ಕಾರಗಳೂ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ, ಲಿಂಗಾಂಗ ಸಾಮರಸ್ಯ ಮೊದಲಾದ ಸಾಧನಸಂಪತ್ತುಗಳೂ ಇಲ್ಲದ ಸಾಧಕನು ವೀರಶೈವನೆನಿಸಲು ಅರ್ಹನೆನಿಸಿಕೊಳ್ಳಲಾರನು. . . . ಲಿಂಗ ಎಂಬ ಈಶ್ವರ ವಾಚಕವಾದ ಈ ಹೆಸರು ಪರಬ್ರಹ್ಮನಿಗೆ ಬಹು ಪ್ರಾಚೀನಕಾಲದಿಂದ ರೂಢಿಯಲ್ಲಿದೆ. . . . ಶಿವದೀಕ್ಷೆ ಯಲ್ಲಿ ವೇಧಾಕ್ರಿಯಾಮನ್ತ್ರ ಎಂಬ ಮೂರು ಭಾಗಗಳಿವೆ. ಗುರುವು ಶಿಷ್ಯನ ತಲೆಯಮೇಲೆ ಹಸ್ತವಿಟ್ಟು ಅನುಗ್ರಹಿಸುವುದು ವೇಧಾದೀಕ್ಷೆಯೆಂದೂ ಶಿಷ್ಯನ ಬಲಗಿವಿಯಲ್ಲಿ ಪ್ರಣವ ಪಂಚಾಕ್ಷರಿಯನ್ನು ಉಪದೇಶಮಾಡುವುದು ಮಂತ್ರದೀಕ್ಷೆಯೆಂದೂ ಶಿಷ್ಯನ ವಾಮಹಸ್ತಕ್ಕೆ ಲಿಂಗವನ್ನು ಅನುಗ್ರಹಿಸುವುದು ಕ್ರಿಯಾದೀಕ್ಷೆಯೆಂದೂ ಹೇಳಲ್ಪಡುತ್ತದೆ. ಈ ಶಿವದೀಕ್ಷೆಯ ಕಾಲದಲ್ಲಿ ಶ್ರೀ ಗುರುವು ತನ್ನ ಮಂತ್ರಶಕ್ತಿಯಿಂದ ಶಿಷ್ಯನನ್ನು ಬಹುಜನ್ಮಗಳಿಂದ ಅನುಸರಿಸಿ ಕೊಂಡು ಬಂದಿರುವ ಮಾತಾಪಿತೃಸುತರೆಂಬ ಭಾವನೆಯ ಆಣವಮಲವನ್ನೂ ಕುಲ ಜಾತಿ ಗೋತ್ರಗಳ ಭ್ರಾಂತಿಯಿಂದ ಕೂಡಿದ ಮಾಯಾಮಲವನ್ನೂ ನಿವೃತ್ತಿಮಾಡುತ್ತಾನೆ. ಹೀಗೆ ಮಲತ್ರಯಗಳು ನಾಶವಾಗುವುದರಿಂದ ಶಿವದೀಕ್ಷಾಬದ್ಧನಾದ ಜೀವನು ಸುಸಂಸ್ಕೃತನಾಗಿ ಪರಿಶುದ್ಧನಾದ ಜೀವ ಎಂಬ ಅರ್ಥವುಳ್ಳ 'ಅಂಗ' ಎಂಬ ಹೆಸರಿನಿಂದ ವ್ಯವಹರಿಸಲ್ಪಡು ತ್ತಾನೆ. ಅವನು ತನ್ನ ಮತಸಂಪ್ರದಾಯದಂತೆ ನಡೆದು ಲಿಂಗರೂಪೀ ಬ್ರಹ್ಮನನ್ನು ಸೇರಲು ತನ್ನ ನಾಮರೂಪಗಳನ್ನು ಕಳೆದುಕೊಂಡು ಲಿಂಗಸ್ವರೂಪನೇ ಆಗುತ್ತಾನೆ.]

೪. ವೀರಶೈವ ವಾಙ್ಮಯಾವತಾರವೂ, ಡಾ|| ನಾರಾಯಣರಾಯರೂ, ಲೇಖಾಂಕ ೨:—ಶ್ರೀಮಾನ್ ಕೀರ್ತನಕೇಸರಿ ಶಿವಮೂರ್ತಿ ಶಾಸ್ತ್ರಿಗಳು.

[ಶ್ರೀಕರಭಾಷ್ಯವು ಬಸವನಿಗಿಂತ ಕೊಂಚ ಹಿಂದಿನದು ; ಸಿದ್ಧಾಂತಶಿಖಾಮಣಿಯು ಅದಕ್ಕೆ ಕೊಂಚ ಹಿಂದಿನದು ಅಥವಾ ಸಮಕಾಲದ್ದು.]

ಶಿವಾನುಭವ—ಆಗಸ್ಟ್—ಸೆಪ್ಟೆಂಬರ್, ೧೯೪೦.

೧. ಸರ್ವಜ್ಞನ ವಚನಗಳ ಸ್ವಾರಸ್ಯ ೩—ಶ್ರೀ ಶಿವಮೂರ್ತಿ.

೨. ವೀರಶೈವನೀತಿ—ಶ್ರೀ. ವೀರಪ್ಪ ಯಗಟಿ.

೩. ತ್ರಿವಿಧದಾಸೋಹ—ಶ್ರೀ. ಬ. ಚ. ಪಟ್ಟೇದ.
೪. ಶೂನ್ಯಸಂಪಾದನೆಯ ರಹಸ್ಯ—ಶ್ರೀ. ಕಲ್ಯಾಣಪ್ಪ ಬ್ಯಾಳಿ.
೫. ಶಿವಾನುಭವ ಶಬ್ದಕೋಶ—ರಾ|| ಸಾ|| ಪಿ. ಜಿ. ಹಳಕಟ್ಟಿ.
೬. ರಾಘವಾಂಕ ಪಂಡಿತನ ಲಿಂಗವಂತಿಕೆಯ ಐತಿಹ್ಯ—ಶ್ರೀ. ಶಿವಮೂರ್ತಿ.
೭. ವೀರಶಂಕರ ದಾಸಿಮಯ್ಯನ ವಚನ, ೧.
೮. ಸಂಕೀರ್ಣ ವಚನಗಳು, ಭಾಗ ೨

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ—ಅಕ್ಟೋಬರ್—ಡಿಸೆಂಬರ್, ೧೯೪೦.

೧. ವೊಡ್ಡಾರಾಧನೆ—(ಸಂಪಾ.) ಶ್ರೀ. ಡಿ. ಎಲ್. ನರಸಿಂಹಾಚಾರ್, ಎಂ.ಎ.
೨. ಧರ್ಮನಾಥಪುರಾಣ ಮತ್ತು ಬಾಹುಬಲಿಪಂಡಿತ—ಶ್ರೀ. ಎನ್. ಅನಂತ ರಂಗಾಚಾರ್, ಎಂ.ಎ.

ವಿಭೂತಿ (ತೆಲುಗು)—ಫೆಬ್ರುವರಿ, ೧೯೪೦.

೧. ಆಚಾರ್ಯ ಪಂಡಿತುಡು—(ಸಂಪಾ.) ಶ್ರೀ. ಬಂಡಾರು ತಮ್ಮಯ್ಯಗಾರು.
೨. ಡಾ. ಚಿ. ನಾರಾಯಣರಾವು, ಎಂ.ಎ. ಗಾರಿ ಪಂಡಿತಾರಾಧ್ಯ ಚರಿತ್ರ ಪೀಠಿಕ—ಪಂ. ಚಿದಿರೆಮಠಮು ವೀರಭದ್ರ ಶರ್ಮಗಾರು.

ವಿಭೂತಿ (ತೆಲುಗು)—ಏಪ್ರಿಲ್, ೧೯೪೦.

೧. ಆಚಾರ್ಯ ಪಂಡಿತುಡು—ಶ್ರೀ. ಬಂಡಾರು ತಮ್ಮಯ್ಯಗಾರು.
೨. ಶಿವತತ್ತ್ವಸಾರ ಕರ್ತ ಪಂಡಿತುಡು ಕಾಡಟ!—ಡಾ. ಚಿ. ನಾರಾಯಣರಾವು ಗಾರಿ ವಿಚಿತ್ರಯುಕ್ತಿ—ಪಂಡಿತ ಚಿದಿರೆಮಠಮು ವೀರಭದ್ರ ಶರ್ಮಗಾರು.

ವಿಭೂತಿ (ತೆಲುಗು)—ಜೂನ್, ೧೯೪೦.

೧. ಪಂಡಿತಾರಾಧ್ಯ ಚರಿತ್ರಮು—ಶ್ರೀ. ವೇಟೂರಿ ಪ್ರಭಾಕರ ಶಾಸ್ತ್ರಿಗಾರು.
೨. ಬಸವೇಶ್ವರುನಿಗೂರ್ಚಿನ ಶಾಸನ ಸಾಮಗ್ರಿ—ಶ್ರೀ. ಬಂಡಾರು ತಮ್ಮಯ್ಯ ಗಾರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧೯೩೮–೩೯ರಲ್ಲಿ ಅಚ್ಚಾಗಿರುವ ಪುಸ್ತಕಗಳು

ಬೆಲೆ: ಸಾಧಾರಣ ಪ್ರತಿಗೆ ೨ ಆಣೆ; ಉತ್ತಮ ಪ್ರತಿಗೆ ೩ ಆಣೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.

೧೯೩೯–೪೦ರಲ್ಲಿ ಅಚ್ಚಾಗಿರುವ ಪುಸ್ತಕಗಳು

೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
೧೩. ಮದುವೆಯ ಇತಿಹಾಸ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕನ್ನಡ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.

೧೯೪೦–೪೧ರಲ್ಲಿ ಅಚ್ಚಾಗಿರುವ ಪುಸ್ತಕಗಳು

೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಾ|| ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.

ವಾರ್ಷಿಕ ಚಂದಾ—ಸಾಧಾರಣ ಪ್ರತಿ ರೂ. ೧—೪—೦
ಉತ್ತಮ ಪ್ರತಿ ರೂ. ೨—೦—೦

ಜಿ. ಹನುಮಂತರಾವ್, ಎಂ.ಎ.,
ಸಂಪಾದಕ, ಪ್ರಚಾರ ಪುಸ್ತಕಮಾಲೆ,
ಮಹಾರಾಜರವರ ಕಾಲೇಜು, ಮೈಸೂರು.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಗಳು

ಇಂಗ್ಲಿಷ್ ಗೀತಗಳು—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ. ಬೆಂಡು ಕಾಗದದ ಪ್ರತಿ, ಬೆಲೆ ರೂ. ೧-೮-೦.

ಉಮರನ ಒಸಗೆ—ಡಿ. ವಿ. ಗುಂಡಪ್ಪನವರಿಂದ. ಬೆಲೆ ರೂ. ೧-೦-೦.

ಮುದ್ದಣ—ನಂದಳಿಕೆ ಲಕ್ಷ್ಮೀನಾರಣಪ್ಪನವರ ಜೀವನಚರಿತ್ರೆ ಮತ್ತು ಗ್ರಂಥಗಳ ವಿಮರ್ಶೆ. (ಪ್ರತಿಗಳು ಮುಗಿದುಹೋಗಿವೆ) ಬೆಲೆ ರೂ. ೨-೦-೦.

ಗದಾಯುದ್ಧ ನಾಟಕಂ (ದ್ವಿತೀಯ ಮುದ್ರಣ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ ಸಂಪಾದಿತವಾದದ್ದು. ಬೆಲೆ ೦-೮-೦.

ಭಕ್ತಿಭಾಂಡಾರಿ ಬಸವಣ್ಣನವರು (ದ್ವಿತೀಯ ಮುದ್ರಣ)—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರಿಂದ. ಬೆಲೆ ರೂ. ೧-೦-೦.

ತಾವರೆ—ಎಂ. ವೆಂಕಟೇಶ ಐಯಂಗಾರ್, ಎಂ.ಎ. ಅವರಿಂದ ರಚಿತವಾದ ಪದ್ಯ ಕಾವ್ಯ (ಸಚಿತ್ರ). ಬೆಲೆ ೦-೧೨-೦.

ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ. ಅವರಿಂದ. ಡಿ. ವಿ. ಗುಂಡಪ್ಪನವರ ಅವತರಣಿಕೆಯೊಡನೆ. ಬೆಲೆ ರೂ. ೧-೦-೦.

ಚೀನಾದೇಶದ ಬೌದ್ಧ ಯಾತ್ರಿಕರು—ಜಿ. ಪಿ. ರಾಜರತ್ನಂ, ಎಂ.ಎ. ಅವರಿಂದ. ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್. ಅವರ ಮುನ್ನುಡಿಯೊಡನೆ. ರೂ. ೧.

ಭಾಸನ ಏಕಾಂಕ ನಾಟಕಗಳು—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಸಾದಾ ಪ್ರತಿ, ಬೆಲೆ ರೂ. ೧-೦-೦; ಕ್ಯಾಲಿಕೋ ಪ್ರತಿ, ಬೆಲೆ ರೂ. ೧-೮-೦.

ಷೇಕ್ಸ್‌ಪಿಯರ್ ನಾಟಕ ಕಥೆಗಳು (ನಾಲ್ಕು)—ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದ. ಎಸ್. ವಿ. ರಂಗಣ್ಣ, ಎಂ.ಎ. ಅವರ ಅವತರಣಿಕೆಯೊಡನೆ. ಬೆಲೆ ೦-೧೨-೦.

ಮಲೆನಾಡಿನ ಚಿತ್ರಗಳು (ಸಚಿತ್ರ)—ಕೆ. ವಿ. ಪುಟ್ಟಪ್ಪ, ಎಂ.ಎ. ಅವರಿಂದ. ಬೆಲೆ ರೂ. ೧-೦-೦.

ಭಾಸಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಂದ. ಬೆಲೆ ರೂ. ೧-೪-೦.

ವಿಗಡ ವಿಕ್ರಮರಾಯ—ಸಂಸ ವಿರಚಿತ (ಎ. ಡಿ. ಎ. ಅವರಿಂದ ಪ್ರಕಾಶಿತವಾದ ದ್ವಿತೀಯ ಮುದ್ರಣ). ಬೆಲೆ ೦-೧೨-೦.

ಮೈಸೂರು ದೇಶದ ವಾಸ್ತುಶಿಲ್ಪ (ಸಚಿತ್ರ), ಭಾಗ ೧—ಬಿ. ವೆಂಕೋಬರಾವ್, ಬಿ.ಎ. ಅವರಿಂದ. ಬೆಲೆ ರೂ. ೫-೦-೦.

ಭಾಸಕವಿಯ ಚಾರುದತ್ತ—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಬೆಲೆ ೦-೮-೦.

ಕುಮಾರವ್ಯಾಸ ಪ್ರಶಸ್ತಿ—(ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಾಶಿತವಾದದ್ದು) ಕ್ಯಾಲಿಕೊ ಪ್ರತಿ ರೂ. ೨-೮-; ಸಾದಾ ರೂ. ೨.

ಪ್ರಥಮ ಕನ್ನಡ–ಕನ್ನಡ ಅರ್ಥಕೋಶ

ಕನ್ನಡದ ಯಾವತ್ತು ಹಳೆ, ಹೊಸ ಸಾಹಿತ್ಯಗಳಲ್ಲಿ ಬಳಸಿರುವ
20,000 ಶಬ್ದಗಳಿಗೆ ಅರ್ಥ.

ಪೌರಾಣಿಕ ಅಂಕಿತನಾಮಗಳ ಚುಟುಕಿನ
ಟಿಪ್ಪಣಿ ಸಹಿತ

ಡೆಮಿ $\frac{1}{8}$

500
ಪುಟಗಳು

ಕೆಲಿಕೋ
ರಟ್ಟು

ಬೆಲೆ: $2\frac{1}{2}$ ರೂ.

102 ಕವಿಚು ... ಕಳಕಳಿ

—ಸಮಯ ಕಾವ್ಯಸಮಯ; ಕವಿಗೆ ವಿಶೇಷವಾದ ರೂಪ; ಕವಿಪದ್ಧತಿ.
ಕವಿಚು (ಕವಚು) ಮೊಗಚು, ಅಡಿಮೇಲಾಗು; ಆವರಿಸು, ಮುತ್ತು; ಮೇಲೆ ಹೋಗುವಂತೆ ಮಾಡು.
ಕವಿಲೆ (ದ್ಭ) ಕಪಿಲೆ, ಹಳದಿ ಕಂದು ಬಣ್ಣ.
ಕವಿಲ್ತುಕಾಸೆ ಕಪಿಲ ಬಣ್ಣದ ವಸ್ತ್ರ.
ಕವುಚು (ನೋಡು: ಕವಿಚು).
ಕವುರು (ಕಮರು) ದುರ್ವಾಸನೆ; ಹೊತ್ತಿದ ನಾತ.
—ಇಡು ದುರ್ವಾಸನೆ ಹೊಡೆ.
—ಏಳು ನಾತ ಹೊರಡು.
ಕವುಳು ಕಪೋಲ, ಕೆನ್ನೆ;
ಕವುಳುಡೆ ತಲೆದಿಂಬು; ಗಾದಿ.
ಕವುಂಗು (ಕೌಂಗು) ಕಂಗು, ಕ್ರಮುಕ (ಸಂ), ಅಡಕೆಯ ಮರ.
ಕವೆ ಕಾರು, ಕವಲು; ರೆಂಬೆ.
ಕವ್ಯ ಪಿತೃಗಳಿಗೆ ಅರ್ಪಿಸುವ ಪಿಂಡ ಮೊದಲಾದುವು.
ಕವ್ವರೆ ಚಾಂಚಲ್ಯ, ಸುಳಿ; ಸಂಭ್ರಮ.
ಕಶೇರುಕ ಬೆನ್ನಿನ ಮುಖ್ಯ ನರ.
ಕಷ ಉಜ್ಜುವ, ತಿಕ್ಕುವ.
—ಣ ಉಜ್ಜುವಿಕೆ.
ಕಷಾಯ ಗಿಡಮೂಲಿಕೆಗಳನ್ನು ಬೇಯಿಸಿ ತೆಗೆದ ಸಾರ; ಭಾವಾತಿರೇಕ; ಕಾವಿ ಬಣ್ಣ.
ಕಷಾಯಾಂಬರ ಕಾವಿಬಟ್ಟೆ.
ಕಷ್ಟ ತೊಡಕು, ತೊಂದರೆ; ಸಂಕಟ.
ಕಸ ಉಪಯೋಗವಿಲ್ಲದ ವಸ್ತು, ಕೆಲಸಕ್ಕೆ ಬಾರದ ದೂಳು ಮೊದಲಾದುದು.
ಕಸರತ್ತು ಚಮತ್ಕಾರ; ಚಮತ್ಕಾರದ ಅಂಗ ಸಾಧನೆ; ವ್ಯಾಯಾಮ.
ಕಸರು ಬೇಸರ; ಕೊರತೆ; ಕೊಸರು; ಕೊಳೆ; ಬಿರುಕು ಬಿಡು; ಗಂಟಲುಕೆರೆ.
—ಇಕೆ ಬೇಸರಿಕೆ; ಕೊರತೆ.
ಕಸವರ (ದ್ಭ) ಕಾರ್ತಸ್ವರ (ಸಂ), ಆರ್ತಧ್ವನಿ; ಚೀರಾಟ; ಚಿನ್ನ, ಬಂಗಾರ, ಹೊನ್ನು; ದ್ರವ್ಯ.
ಕಸವಿಸಿ ಚೌಕಸಿ.
ಕಸಿ ಒಂದು ಗಿಡವನ್ನು ಇನ್ನೊಂದಕ್ಕೆ ಸೇರಿಸುವುದು.
ಕಸಿಕಿಸಿ ಸ್ಪರ್ಧೆ.
ಕಸುಗಾಯಿ ಕಸುರುಗಾಯಿ, ದೋರೆಕಾಯಿ, ಹಣ್ಣಾಗದ ಕಾಯಿ, ಅರೆಗಾಯಿ.
ಕಸುವು ತ್ರಾಣ, ಬಲ, ಶಕ್ತಿ.
ಕಸೂತಿ ಹೂಗೆಲಸ; ಹೊಲಿಗೆಯ ಮೂಲಕ ಚಿತ್ರ ಕೆಲಸ.
ಕಸೆ ಚಾಚು; ಒಂದು ಗಿಡಕ್ಕೆ ಇನ್ನೊಂದನ್ನು ಹೊಂದಿಸಿ ಕೃಷಿಮಾಡುವುದು; ಕಸಿ; ಕವಚ; ಕಟ್ಟುವ ಹಗ್ಗ; ದಾರ; ಹುರಿ.
ಕಸ್ತು ನೋವು; ಕಷ್ಟ.
ಕಸ್ತೂರಿ ಕತ್ತುರಿ, ಒಂದು ಜಾತಿಯ ಪ್ರಾಣಿಯಿಂದ ಹೊರಡುವ ಸುಗಂಧವಸ್ತು.
—ಮೃಗ ಕಸ್ತೂರಿ ಕೊಡುವ ಪ್ರಾಣಿ.
ಕಹಳೆ (ಕಾಳೆ) ತುತ್ತೂರಿ; ಒಂದು ವಾದ್ಯ.
ಕಹಿ ಒಂದು ರೀತಿಯ ರುಚಿ; ಅರುಚಿ.
ಕಹೋದ ಅಷ್ಟಾವಕ್ರನ ತಂದೆಯಾದ ಒಬ್ಬ ಬ್ರಾಹ್ಮಣ.
ಕಳ್ (ಕಳ್ಳು) ಮದ್ಯ, ಹೆಂಡ; ರಸ; ಕಳವು ಮಾಡು.
ಕಳ ಕಲ (ಸಂ), ಮನೋಹರ, ಮಧುರ; ಕಣ; ಯುದ್ಧಭೂಮಿ; ಜೂಜಿನ ರಂಗ.
ಕಳಕಳ ಕಲಕಲ, ಪಕ್ಷಿಗಳ ಧ್ವನಿ; ಗದ್ದಲ; ಜಂಕೆ.
ಕಳಕಳಿ ಮನೋವ್ಯಥೆ; ವ್ಯಾಕುಲತೆ, ಕಳವಳ; ಉತ್ಸಾಹ.

ಚಿಕ್ಕದಾಗಿ ತೋರಿಸಿದ ಮಾದರಿ ಪುಟ.

ಈ ಸಂಸ್ಕರಣದಲ್ಲಿ ಸಹಕರಿಸಿದ ವಿದ್ವಾಂಸರು:—
ಶ್ರೀ. ಬಿ. ಶಂಕರನಾರಾಯಣ; ಶ್ರೀ. ಐ. ಶಿವರಾಮಯ್ಯ; ಶ್ರೀ. ಟಿ. ನಾರಾಯಣ ಭಟ್;
ಶ್ರೀ. ಹು. ಬೆಂಗೇರಿ, ಎಮ್.ಎ., ಬಿ.ಟಿ.; ಶ್ರೀ. ವಿ. ಸೀತಾರಾಮಯ್ಯ, ಎಮ್.ಎ.

ಸಿರಿಗನ್ನಡ

ಅರ್ಥ ಕೋಶ



ಸಂಪಾದಕ:—

ಶಿವರಾಮ ಕಾರಂತ

ಎಲ್ಲ ಕನ್ನಡ ಪ್ರೇಮಿಗಳೂ ಇದಿರು ಕಾದಿರುವ ಈ ಕೋಶವು ಆಕ್ಟೋಬರ ತಿಂಗಳ ಕೊನೆಗೆ ವಿಕ್ರಯಕ್ಕೆ ಬರುವುದು.

ಮುಂಚಿತವಾಗಿ ಹಣ ಸಲಿಸಿದವರಿಗೆ. . ರೂ. 2—8—0. (ಅಂಚೆ ಮುಫತ್ತು).
ಪ್ರಕಟನೆಯ ಬಳಿಕ „ . . ರೂ. 2—8—0. (0—8—0).

ವಿಳಾಸ:— ಶಿವರಾಮ ಕಾರಂತ, ಪುತ್ತೂರು, ದ. ಕ.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Inner Culture*, California; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *United Karnataka*, Dharwar; *Annals of the Venkateswara Oriental Institute*, Tirupathi.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತರುಣಕರ್ನಾಟಕ', ಹುಬ್ಬಳ್ಳಿ; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ರಾಷ್ಟ್ರಬಂಧು', ಮಂಗಳೂರು; 'ವಿಶ್ವಕರ್ಣಾಟಕ', ಬೆಂಗಳೂರು; 'ಸಂಯುಕ್ತ ಕರ್ನಾಟಕ', ಬೆಂಗಳೂರು; 'ಸ್ವತಂತ್ರಕರ್ನಾಟಕ', ಬೆಂಗಳೂರು; 'ಸ್ವದೇಶಾಭಿಮಾನಿ', ಮಂಗಳೂರು.

ಮಾಸಪತ್ರಿಕೆಗಳು

'ಅಧ್ಯಾತ್ಮ ಪ್ರಕಾಶ', ಹೊಳೇನರಸೀಪುರ; 'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಕಾದಂಬರೀ ಸಂಗ್ರಹ', ಚಾಮರಾಜನಗರ; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿಚಾರವಾಹಿನಿ', ತೀರ್ಥಹಳ್ಳಿ; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುದರ್ಶನ', ಮೈಸೂರು; 'ಸುಬೋಧ', ಬೆಂಗಳೂರು; 'ಜೀವನ', ಧಾರವಾಡ; 'ಕಥಾಂಜಲಿ', ಬೆಂಗಳೂರು; ವಿಭೂತಿ (ತೆಲುಗು), ಸಿಕಿಂದ್ರಾಬಾದು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಗರಿಕೆ', ಮೈಸೂರು; 'ದೇಶೀಯ ವಿದ್ಯಾಶಾಲಾ ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮರ್ಕ್ ಮಹಾರಾಜ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ಸಂಕ್ರಾಂತಿಯ ಹಬ್ಬ, ಕಾಮನ ಹಬ್ಬ—ಈ ಹಬ್ಬಗಳ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೨	೦	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೩	೦	೦
ವಿದ್ಯಾರ್ಥಿಗಳಿಗೆ ಮಾತ್ರ	ರೂ.	೧	೮	೦

ಚಂದಾಹಣವನ್ನು ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಮಹಾರಾಜರವರ ಕಾಲೇಜು, ಮೈಸೂರು ಎಂಬ ವಿಳಾಸಕ್ಕೆ ಕಳುಹಿಸಬೇಕು. (ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರವರಿಗೆ ಕಳುಹಿಸಬಾರದು.) ಮೈಸೂರು ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಧ್ಯಕ್ಷರಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಈ ಪತ್ರಿಕೆಯ ಸಂಪಾದಕರಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನೂ ವಿಮರ್ಶೆಗಾಗಿ ಗ್ರಂಥಗಳನ್ನೂ ವಿನಿಮಯಕ್ಕಾಗಿ ಪತ್ರಿಕೆಗಳನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.—

ಸಂಪಾದಕ,
'ಪ್ರಬುದ್ಧ ಕರ್ಣಾಟಕ',
ಮಹಾರಾಜರವರ ಕಾಲೇಜು, ಮೈಸೂರು.

ಪ್ರಕಟನೆ

"ಪ್ರಬುದ್ಧ ಕರ್ಣಾಟಕ"ದ ೧೭ರಿಂದ ೩೦ರ ವರೆಗಿನ ಸಂಪುಟಗಳು, ಪೂರ್ತಿ ಸಂಪುಟ ಒಂದಕ್ಕೆ (ನಾಲ್ಕು ಸಂಚಿಕೆಗಳು) ಎಂಟಾಣೆಯಂತೆಯೂ, ಬಿಡಿ ಸಂಚಿಕೆ ಒಂದಕ್ಕೆ ಮೂರಾಣೆಯಂತೆಯೂ ದೊರೆಯುತ್ತವೆ.

ವಿ.ಪಿ. ಮುಂತಾದ ಅಂಚೆ ವೆಚ್ಚ ಬೇರೆ.

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನ ಕಾರ್ಯ,
ಮಹಾರಾಜರವರ ಕಾಲೇಜು, ಮೈಸೂರು.

PRINTED IN INDIA AT THE WESLEY PRESS AND PUBLISHING HOUSE, MYSORE CITY